prajavani.net prajavani | ಶನಿವಾರ, ನವೆಂಬರ್ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 329 | ಪುಟ 20 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಯುಷ್ ಸಾರಥ್ಯ



ಬ್ಯಾಟರ್ ಆಯುಷ್ ಮ್ಹಾತ್ರೆ ಅವರು ದುಬೈನಲ್ಲಿ ಡಿ.12ರಿಂದ ನಡೆಯುವ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ

ಮಮಕಾರ...



ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಇಟ್ಟಿಗೆ ಕಾರ್ಮಿಕ ಮಹಿಳೆಯು ಕೆಲಸದ ನಡುವೆಯೇ ಮಗುವಿಗಾಗಿ ತುಸು ಬಿಡುವು ಮಾಡಿಕೊಂಡ ಗಳಿಗೆ

ಸೆನ್ಸೆಕ್ಸ್ 85,706 | ನಿಫ್ಟಿ 26,202 | $/₹ 89.45 | ಚಿನ್ನ (Std. 10g) ₹1,32,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,76,100 (ಬೆಂಗಳೂರು)

5 ವರ್ಷ: 42 ಸಾವಿರ ಮಂದಿಗೆ ಹಾವು ಕಡಿತ



ಬೆಂಗಳೂರು: ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ಐದು ವರ್ಷಗಳಲ್ಲಿ 42 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ.

ವಿವರ ಪುಟ 6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಮೋದಿ ಅಲೆಯಲಿ 'ತೇಲಿದ ಉಡುಪಿ'

ರೋಡ್ ಶೋ, ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಿ

• ನವೀನ್‌ಕುಮಾರ್ ಜಿ.

ಉಡುಪಿ: ಪ್ರಧಾನಿ ನರೇಂದ್ರ ಮೋದಿ ಅವರು ಉಡುಪಿಯ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಶ್ರೀಗಳಿಂದ ಗೀತಾ ಲೇಖನ ಯಜ್ಞದ ದೀಕ್ಷೆಯನ್ನು ಶುಕ್ರವಾರ ಪಡೆದರು.

ಪರ್ಯಾಯ ಪುತ್ತಿಗೆ ಮಠದ ವತಿಯಿಂದ ಹಮ್ಮಿಕೊಂಡಿದ್ದ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅವರು, ಭಗವದ್ಗೀತೆಯ 15ನೇ ಅಧ್ಯಾಯದ ಪುರುಷೋತ್ತಮ ಯೋಗದ 20 ಶ್ಲೋಕಗಳನ್ನು ಸಭಿಕರ ಜೊತೆಗೂಡಿ ಪಠಿಸಿದರು.

ಪ್ರಧಾನಿ ರೋಡ್ ಶೋ ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿದ್ದರೂ ಜಿಲ್ಲೆಯ ವಿವಿಧೆಡೆಯಿಂದ ಬಂದ ಜನರು 9 ಗಂಟೆಯಿಂದಲೇ ರಸ್ತೆಯ ಇಕ್ಕೆಲಗಳಲ್ಲಿ ಜಮಾಯಿಸಿದ್ದರು. 11 ಗಂಟೆಗೆ ಆದಿ ಉಡುಪಿಯ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಮೋದಿ, ಬನ್ನಂಜೆಯ ನಾರಾಯಣಗುರು ವೃತ್ತದ ಬಳಿಯಿಂದ ಕಲ್ಸಂಕ ವೃತ್ತದ ವರೆಗೆ 1.8 ಕಿ.ಮೀ ರೋಡ್ ಶೋ ನಡೆಸಿದರು.

ರೋಡ್ ಶೋ ಉದ್ದಕ್ಕೂ ಕರಾವಳಿಯ ಕಲಾರೂಪಗಳನ್ನು ಬಿಂಬಿಸುವ ವೇಷಗಳ ಕುಣಿತ ಇತ್ತು. ಜನರು ಹೂವಿನ ಮಳೆಗರೆಯುತ್ತ ತಮ್ಮ ನೆಚ್ಚಿನ ನಾಯಕನಿಗೆ ಜೈಕಾರ ಹಾಕಿದರು. ಮೊಬೈಲ್ ಹಿಡಿದು ಫೋಟೊ ಕ್ಲಿಕ್ಕಿಸಿದರು. ತಮ್ಮ ಮೇಲೆ ಹೂಮಳೆ ಸುರಿಸಿದ ಜನರತ್ತ, ಪ್ರಧಾನಿಯೂ ಹೂವು ಎರಚಿದರು.

ಬಳಿಕ ಪೂರ್ಣಕುಂಭದೊಂದಿಗೆ ಅವರನ್ನು ಶ್ರೀಕೃಷ್ಣ ಮಠಕ್ಕೆ ಬರಮಾಡಿಕೊಳ್ಳಲಾಯಿತು ನಂತರ ಕನಕದಾಸರ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡಿದರು. ಕನಕನ ಕಿಂಡಿಗೆ ಹೊದಿಸಿರುವ ಚಿನ್ನದ ಕವಚ, ಸುವರ್ಣ ತೀರ್ಥ ಮಂಟಪ ಅನಾವರಣಗೊಳಿಸಿದರು. ಶ್ರೀಕೃಷ್ಣ, ಮುಖ್ಯಪ್ರಾಣ ದೇವರ ಹಾಗೂ ಸುವರ್ಣ ಪಾದುಕೆಯ ದರ್ಶನ ಪಡೆದರು. ಮಠದ ಚಂದ್ರಶಾಲೆಯಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ, ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ಶ್ರೀ, ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ, ಶಿರೂರು ಮಠದ ವೇದವರ್ಧನ ತೀರ್ಥ ಸ್ವಾಮೀಜಿ ಹಾಗೂ ಸುಬ್ರಹ್ಮಣ್ಯ ಮಠಾಧೀಶ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. 'ಅಷ್ಟಮಠಾಧೀಶರೆಲ್ಲರಿಗೂ ಆಹ್ವಾನ ನೀಡಿದ್ದೇವೆ' ಎಂದು ಪುತ್ತಿಗೆ ಶ್ರೀ ತಿಳಿಸಿದ್ದರು. ಆದರೆ, ಉಳಿದವರು ಗೈರಾಗಿದ್ದರು.

9



ಕನಕನ ಕಿಂಡಿಗೆ ಅಳವಡಿಸಿದ್ದ ಸುವರ್ಣ ಕವಚವನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಿದರು ಪಿಟಿಐ ಚಿತ್ರ

'ನವ ಸಂಕಲ್ಪ'ಕ್ಕೆ ಮೋದಿ ಕರೆ

ಪ್ರಧಾನಿ ನರೇಂದ್ರ ಮೋದಿ ಅವರು ನವ ಸಂಕಲ್ಪಗಳನ್ನು ಪಾಲಿಸುವಂತೆ ಜನರಿಗೆ ಕರೆ ನೀಡಿದರು.

- ಜಲ ಸಂಕಲ್ಪದ ಮೂಲಕ ನದಿಗಳ ರಕ್ಷಣೆಗೆ ಮುಂದಾಗಬೇಕು
- ತಾಯಿಯ ಹೆಸರಿನಲ್ಲಿ ಒಂದು ಮರ ನೆಡುವ ಅಭಿಯಾನದ ಮೂಲಕ ಮರಗಳನ್ನು ಬೆಳೆಸಬೇಕು
- ಪ್ರತಿಯೊಬ್ಬರೂ ಒಬ್ಬ ಬಡವನ ಜೀವನ ಸುಧಾರಣೆಗೆ ಅಣಿಯಾಗಿ
- ಸ್ವದೇಶೀಯತೆ ಅಳವಡಿಸಿಕೊಳ್ಳಬೇಕು, ಆ ಮೂಲಕ ವೋಕಲ್ ಫಾರ್ ಲೋಕಲ್ ಅಭಿಯಾನ ಬಲಪಡಿಸಿ
- ನೈಸರ್ಗಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು
- ಆರೋಗ್ಯಪೂರ್ಣ ಜೀವನ ಶೈಲಿ ರೂಢಿಸಿಕೊಳ್ಳುವುದರ ಜೊತೆಗೆ, ಆಹಾರದಲ್ಲಿ ಎಣ್ಣೆಯ ಪ್ರಮಾಣ ಕಡಿಮೆ ಮಾಡಿಕೊಳ್ಳಿ, ಸಿರಿಧಾನ್ಯ ಬಳಸಿ
- ಯೋಗ ನಿತ್ಯದ ರೂಢಿಯಾಗಲಿ
- ಹಸ್ತಪ್ರತಿ ಸಂರಕ್ಷಣೆಗೆ ಸಹಯೋಗ ನೀಡಿ
- ದೇಶದ ಕನಿಷ್ಠ 25 ತೀರ್ಥ ಕ್ಷೇತ್ರಗಳಿಗೆ ಭೇಟಿ ನೀಡುವ ಸಂಕಲ್ಪ ಮಾಡಿ

'ದಿತ್ವಾ' ನಾಳೆ ಚೆನ್ನೈಗೆ ಅಪ್ಪಳಿಸುವ ಸಾಧ್ಯತೆ

ಚೆನ್ನೈ (ಪಿಟಿಐ): ಶ್ರೀಲಂಕಾದಲ್ಲಿ ಭಾರಿ ಮಳೆ ಹಾಗೂ ಪ್ರವಾಹಕ್ಕೆ ಕಾರಣವಾಗಿರುವ 'ದಿತ್ವಾ' ಚಂಡಮಾರುತವು ನವೆಂಬರ್ 30ರಂದು ತಮಿಳುನಾಡು ಮತ್ತು ಪುದುಚೇರಿಗೆ ಅಪ್ಪಳಿಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಶುಕ್ರವಾರ ಪುದುಚೇರಿಯ ಆಗ್ನೇಯಕ್ಕೆ 430 ಕಿ.ಮೀ. ಮತ್ತು ಚೆನ್ನೈನಿಂದ ದಕ್ಷಿಣಕ್ಕೆ 530 ಕಿ.ಮೀ. ದೂರದಲ್ಲಿದ್ದ ಚಂಡಮಾರುತವು ಶ್ರೀಲಂಕಾ ಕರಾವಳಿ ಮತ್ತು ಬಂಗಾಳ ಕೊಲ್ಲಿ ಮೂಲಕ ಚಲಿಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

9



ಶ್ರೀಲಂಕಾದಲ್ಲಿ ಭಾರಿ ಮಳೆಯಾಗುತ್ತಿದ್ದು, ಕೊಲಂಬೊ ನಗರದ ಹೊರವಲಯದ ಜಲಾವೃತ ರಸ್ತೆಯೊಂದರಲ್ಲಿ ಸವಾರರು ದ್ವಿಚಕ್ರ ವಾಹನ ತಳ್ಳಿಕೊಂಡು ಸಾಗಿದ ದೃಶ್ಯ —ಎಎಫ್‌ಪಿ ಚಿತ್ರ

ಭಾರತ ನೆರವಿನ ಹಸ್ತ

ನವದೆಹಲಿ: 'ದಿತ್ವಾ'ದಿಂದ ತತ್ತರಿಸಿರುವ ಶ್ರೀಲಂಕಾಕ್ಕೆ ಭಾರತ ನೆರವಿನ ಹಸ್ತ ಚಾಚಿದ್ದು, ಅಗತ್ಯ ಪರಿಹಾರ ಸಾಮಗ್ರಿಗಳನ್ನು ಶುಕ್ರವಾರ ತಲುಪಿಸಿದೆ. ಪರಿಸ್ಥಿತಿಯನ್ನು ನಿಭಾಯಿಸಲು ಹೆಚ್ಚಿನ ಸಹಾಯ ಒದಗಿಸಲು ಭಾರತ ಸಿದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಶ್ರೀಲಂಕಾಕ್ಕೆ ನೆರವು ನೀಡಲು ಭಾರತವು 'ಆಪರೇಷನ್ ಸಾಗರ ಬಂಧು' ಆರಂಭಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ತಿಳಿಸಿದರು.

9

'ಮಾತು' ಮಾಯ: ಉಪಾಹಾರದ ಸಮಯ

ಇಂದು 'ಉಪಾಹಾರ'ದ ನೆವದಲ್ಲಿ ಒಟ್ಟಿಗೆ ಸೇರಲಿರುವ ಸಿ.ಎಂ ಮತ್ತು ಡಿಸಿಎಂ

ಪ್ರಜಾವಾಣಿ ವಾರ್ತೆ


ಬೆಂಗಳೂರು: ನಾಯಕತ್ವ ಮತ್ತು ಅಧಿಕಾರ ಹಂಚಿಕೆ ವಿಷಯದಲ್ಲಿ ವಿರುದ್ಧ ಧ್ರುವಗಳಂತೆ ಕಾಣಿಸಿಕೊಳ್ಳಲಾರಂಭಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಉಪಾಹಾರ'ದ ನೆವದಲ್ಲಿ ಒಟ್ಟಿಗೆ ಸೇರಲಿದ್ದಾರೆ.

ಶನಿವಾರ ಬೆಳಗಿನ ಉಪಾಹಾರಕ್ಕೆ ತಮ್ಮ ಮನೆಗೆ ಬರುವಂತೆ ಸಿದ್ದರಾಮಯ್ಯ ಅವರು ಶಿವಕುಮಾರ್‌ಗೆ ಆಮಂತ್ರಣ ನೀಡಿದ್ದಾರೆ. ವರಿಷ್ಠರ ಸೂಚನೆ ಅನ್ವಯ ಈ ಉಪಹಾರಕೂಟ ನಿಗದಿಯಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಸರ್ಕಾರ ಎರಡೂವರೆ ವರ್ಷ ಪೂರೈಸಿದ ಬಳಿಕ, ಅಧಿಕಾರ ಹಂಚಿಕೆ ವಿಷಯ ವಿವಾದದ ಸ್ವರೂಪ ಪಡೆದುಕೊಂಡಿತ್ತು. ನಾಯಕರ ಪರ ಆಯಾ ಸಮುದಾಯದ ನಾಯಕರು, ಸ್ವಾಮೀಜಿಗಳು ಬಹಿರಂಗ ಹೇಳಿಕೆ ನೀಡಿದ್ದರಿಂದಾಗಿ, ಕುರ್ಚಿ ಕುಸ್ತಿ ಬೀದಿಗೆ ಬಂದಿತ್ತು.

ಇಬ್ಬರು ನಾಯಕರ ಮಧ್ಯೆ 'ಕೊಟ್ಟ ಮಾತು' ಕುರಿತ 'ಎಕ್ಸ್' ವಾಗ್ವಾದವೂ ಶುರುವಾಗಿತ್ತು. ಏತನ್ಮಧ್ಯೆ, ಶಿವಕುಮಾರ್ ಅವರು ಶುಕ್ರವಾರವೇ ದೆಹಲಿಗೆ ತೆರಳಲಿದ್ದಾರೆ ಎಂಬ ವದಂತಿ ಹರಡಿತ್ತು. ದೆಹಲಿ ಯಾತ್ರೆ ರದ್ದಾಗಿದ್ದು, ಉಪಾಹಾರಕ್ಕೆ ಮುಹೂರ್ತ ನಿಗದಿಯಾಗಿದೆ.

ನಿಲುವು ಬದಲಿಲ್ಲ: ಸಿ.ಎಂ



'ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಪಕ್ಷದ ವರಿಷ್ಠರು ಹೇಳಿದಂತೆ ನಡೆದುಕೊಳ್ಳುವು ದಾಗಿ ಈಗಾಗಲೇ ತಿಳಿಸಿದ್ದೇನೆ. ಈಗಲೂ ಮತ್ತು ನಾಳೆಯೂ ಅದನ್ನೇ ಹೇಳುತ್ತೇನೆ' ಎಂದು ಅವರು ಪುನರುಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷದ ವರಿಷ್ಠರು ನನಗೂ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೂ ಕರೆ ಮಾಡಿ ಭೇಟಿ ಮಾಡುವಂತೆ ಹೇಳಿದ್ದಾರೆ. ಹಾಗಾಗಿ, ಅವರನ್ನು ಉಪಾಹಾರಕ್ಕೆ ಕರೆದಿದ್ದೇನೆ. ಅಲ್ಲಿ ಚರ್ಚೆ ಮಾಡುತ್ತೇವೆ. ಡಿ.ಕೆ ಶಿವಕುಮಾರ್ ಅವರೂ ಹೈಕಮಾಂಡ್ ಹೇಳಿದ್ದನ್ನು ಒಪ್ಪುವುದಾಗಿ ಹೇಳಿದ್ದಾರೆ. ಆಹ್ವಾನ ಬಂದರೆ ದೆಹಲಿಗೂ ತೆರಳುವೆ' ಎಂದರು.

ನನಗೆ ಆತುರವಿಲ್ಲ: ಡಿಸಿಎಂ



'ಮುಖ್ಯಮಂತ್ರಿ ಸ್ಥಾನ ಸೇರಿದಂತೆ ಯಾವ ವಿಚಾರಕ್ಕೂ ನನಗೆ ತರಾತುರಿ ಇಲ್ಲ. ನನಗೆ ಏನೂ ಬೇಡ. ಸರಿಯಾದ ಸಮಯಕ್ಕೆ, ಸೂಕ್ತ ನಿರ್ಧಾರವನ್ನು ಪಕ್ಷ ತೆಗೆದುಕೊಳ್ಳುತ್ತದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಎಐಸಿಸಿ ನಾಯಕರ ಮಾರ್ಗದರ್ಶನ ಪಡೆದು ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದೇವೆ. ನಂಬಿಕೆಗಿಂತ ದೊಡ್ಡ ದೇವರಿಲ್ಲ' ಎಂದರು.

'ಒಕ್ಕಲಿಗ ಸಮುದಾಯ ನಿಮ್ಮ ಪರವಾಗಿ ನಿಂತಿದೆಯಲ್ಲ' ಎಂಬ ಪ್ರಶ್ನೆಗೆ, 'ನಾನು ಜಾತಿ ಆಧಾರದಲ್ಲಿ ಮಾತನಾಡುವುದಿಲ್ಲ. ನಾನು ಒಂದು ಜಾತಿಗೆ ಸೇರಿದ್ದರೂ ಪಕ್ಷ ನನಗೆ ಮುಖ್ಯ. ಕಾಂಗ್ರೆಸ್ ನನ್ನ ಸಮುದಾಯ. ಒಕ್ಕಲಿಗ ಸಮುದಾಯದಿಂದ ಬಂದಿರುವ ಕಾರಣ ಆ ಸಮುದಾಯದ ಜನರು ಪ್ರೀತಿಸುವುದು ಸಹಜ. ಹಿಂದುಳಿದ, ಪರಿಶಿಷ್ಟ, ಅಲ್ಪಸಂಖ್ಯಾತ ಸೇರಿದಂತೆ ಸಮಾಜದ ಎಲ್ಲಾ ಸಮುದಾಯಗಳ ಬಗ್ಗೆ ಬದ್ಧತೆ ಇದೆ. ಒಕ್ಕಲಿಗರೂ ಕೂಡ ಹಿಂದುಳಿದ ವರ್ಗದವರೇ' ಎಂದರು.

ಐಸಿಡಿಎಸ್ ಸುವರ್ಣ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಸೋನಿಯಾ ಗಾಂಧಿ ಅವರು ಅಧಿಕಾರ ತ್ಯಾಗ ಮಾಡಿ, ಮನಮೋಹನ ಸಿಂಗ್ ಅವರಿಗೆ ಪ್ರಧಾನಿ ಸ್ಥಾನ ಬಿಟ್ಟುಕೊಟ್ಟರು. ರಾಷ್ಟ್ರಪತಿ ಎಪಿಜೆ ಕಲಾಂ ಅವರು ಪ್ರಧಾನಿ ಸ್ಥಾನ ಅಲಂಕರಿಸುವಂತೆ ನೀಡಿದ ಆಹ್ವಾನವನ್ನು ಸೋನಿಯಾ ನಯವಾಗಿ ನಿರಾಕರಿಸಿದ್ದರು' ಎಂದು ನೆನಪಿಸಿಕೊಂಡರು.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆ

₹500 ಕೋಟಿ ತೆರಿಗೆ ವಂಚನೆ

ಪ್ರಜಾವಾಣಿ ವಾರ್ತೆ

75 ವಶಕ್ಕೆ ಪಡೆಯಲಾದ ಟ್ರಕ್‌ಗಳ ಸಂಖ್ಯೆ

₹2.50 ಕೋಟಿ ಟ್ರಕ್ ಮಾಲೀಕರಿಂದ ವಸೂಲಿ ಮಾಡಲಾಗಿರುವ ದಂಡ

ಬೆಂಗಳೂರು: ನಗರದ ವಾಣಿಜ್ಯ ಕೇಂದ್ರಗಳಲ್ಲಿ 15 ದಿನಗಳ ರಹಸ್ಯ ಕಾರ್ಯಾಚರಣೆ ನಡೆಸಿರುವ ವಾಣಿಜ್ಯ ತೆರಿಗೆ ಅಧಿಕಾರಿಗಳು ₹500 ಕೋಟಿಗೂ ಹೆಚ್ಚು ಮೊತ್ತದ ತೆರಿಗೆ ವಂಚನೆಯನ್ನು ಪತ್ತೆಮಾಡಿದ್ದಾರೆ.

ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ವಿಭಾಗದ (ದಕ್ಷಿಣ ವಲಯ) ಅಧಿಕಾರಿಗಳು ನಗರದ ಬಿವಿಕೆ ಅಯ್ಯಂಗಾರ್ ರಸ್ತೆ, ಅವೆನ್ಯೂ ರಸ್ತೆ, ಜೆ.ಸಿ.ರಸ್ತೆ, ಎಸ್‌ಪಿ ರಸ್ತೆ, ಚಿಕ್ಕಪೇಟೆ ಪ್ರದೇಶಗಳಲ್ಲಿ ಅಂಗಡಿಗಳಲ್ಲಿ ಗಸ್ತಿನಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ.

'ಬಿವಿಕೆ ಅಯ್ಯಂಗಾರ್ ರಸ್ತೆ, ಎಸ್‌ಪಿ ರಸ್ತೆ, ಚಿಕ್ಕಪೇಟೆ ಪ್ರದೇಶದಲ್ಲಿ ಪ್ರತಿದಿನ ಅಪಾರ ಪ್ರಮಾಣದಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳು, ವಿದ್ಯುತ್ ತಂತಿ, ಸ್ವಿಚ್, ಬಲ್ಬ್‌ಗಳು, ಯಂತ್ರೋಪಕರಣಗಳನ್ನು ಮಾರಾಟ ಮಾಡಲಾಗುತ್ತಿದೆ. ಅವುಗಳಿಗೆ ಜಿಎಸ್‌ಟಿಯ ನಕಲಿ ಬಿಲ್ ನೀಡುತ್ತಿದ್ದಾರೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಈ ಸರಕುಗಳನ್ನು ದೆಹಲಿ ಮತ್ತು ಸುತ್ತಮುತ್ತಲಿನ ವ್ಯಾಪಾರಿಗಳು ಚೀನಾದಿಂದ ಆಮದು ಮಾಡಿಕೊಳ್ಳುತ್ತಾರೆ. ಅವುಗಳನ್ನು ಜಿಎಸ್‌ಟಿ ಇಲ್ಲದೆಯೇ ಇಲ್ಲಿಗೆ ಸರಬರಾಜು ಮಾಡಿದ್ದಾರೆ. ದೆಹಲಿ ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಲ್ಲಿ ತಯಾರಿಸಲಾದ ಸರಕುಗಳನ್ನೂ ಜಿಎಸ್‌ಟಿ ಇಲ್ಲದೆ ಪೂರೈಕೆ ಮಾಡಿದ್ದಾರೆ. ಇ-ವೇ ಬಿಲ್ ಇಲ್ಲದೆ ಹಲವು ರಾಜ್ಯಗಳನ್ನು ದಾಟಿಕೊಂಡು ಈ ಸರಕು ಬೆಂಗಳೂರಿಗೆ ಬಂದಿವೆ ಎಂಬುದು ಪತ್ತೆಯಾಗಿದೆ' ಎಂದರು.

'15 ದಿನಗಳಲ್ಲಿ ಅಂತಹ ಸರಕನ್ನು ಹೊತ್ತ ಸಾವಿರಾರು ಟ್ರಕ್-ಮಿನಿಟ್ರಕ್‌ಗಳು ಈ ಪ್ರದೇಶಕ್ಕೆ ಬಂದಿವೆ. ಆ ಪೈಕಿ ಹಲವು ಟ್ರಕ್‌ಗಳಲ್ಲಿನ ಸರಕುಗಳಿಗೆ ಜಿಎಸ್‌ಟಿ ಬಿಲ್‌ಗಳು ಇರಲಿಲ್ಲ. ಆ ಸರಕುಗಳ ಜಿಎಸ್‌ಟಿ ಮೊತ್ತವೇ ₹500 ಕೋಟಿ ದಾಟುತ್ತದೆ' ಎಂದು ಮಾಹಿತಿ ನೀಡಿದರು.

1,000 ಚೀಲ ಪಾನ್ ಮಸಾಲ ಅಕ್ರಮ ಸಾಗಣೆ: 'ಯಶವಂತಪುರ ರೈಲು ನಿಲ್ದಾಣದಲ್ಲಿ 15 ದಿನ ಕಾರ್ಯಾಚರಣೆ ನಡೆಸಲಾಗಿದ್ದು, ನೂರಾರು ಟ್ರಕ್‌ಗಳು ಜಿಎಸ್‌ಟಿ ಬಿಲ್ ಇಲ್ಲದ ಸರಕುಗಳನ್ನು ಸಾಗಿಸಿವೆ. ಈ ವೇಳೆ ಜಿಎಸ್‌ಟಿ ಇಲ್ಲದ 1,000 ಚೀಲಗಳಷ್ಟು ಪಾನ್ ಮಸಾಲವನ್ನು ದೆಹಲಿಯಿಂದ ಯಶವಂತಪುರಕ್ಕೆ ರೈಲಿನ ಮೂಲಕ ಕಳುಹಿಸಿರುವುದು ಪತ್ತೆಯಾಗಿದೆ' ಎಂದು ವಾಣಿಜ್ಯ ತೆರಿಗೆ ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

'ತಪ್ಪಿತಸ್ಥರ ವಿರುದ್ಧ ಕ್ರಮ'

ಈ ಎಲ್ಲ ಅಕ್ರಮಗಳು ಪತ್ತೆಯಾದ ನಂತರ ಹಲವು ಅಂಗಡಿಗಳ ಮೇಲೆ ದಾಳಿ ನಡೆಸಿ, ತಪಾಸಣೆ ಮಾಡಲಾಗಿದೆ. ಕೆಲವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ₹40 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸುತ್ತಿರುವ ವ್ಯಾಪಾರಿಗಳು ಜಿಎಸ್‌ಟಿ ನೋಂದಣಿ ಮಾಡಿಸಿಕೊಳ್ಳದೇ ಇರುವುದು ಗೊತ್ತಾಗಿದೆ. ಅಂತಹವರನ್ನು ಕರೆದು ಎಚ್ಚರಿಕೆ ನೀಡಲಾಗಿದೆ. ಮುಂದೆಯೂ ಜಿಎಸ್‌ಟಿ ನೋಂದಣಿ ಮಾಡದೇ ಇದ್ದರೆ, ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕನಿಷ್ಕ, ವಾಣಿಜ್ಯ ತೆರಿಗೆ ಹೆಚ್ಚುವರಿ ಆಯುಕ್ತ, ಜಾರಿ ವಿಭಾಗ (ದಕ್ಷಿಣ ವಲಯ)

ಮನಃಸ್ಥಿತಿ ಪ್ರತಿಬಿಂಬಿಸುತ್ತದೆ: 'ಸುಪ್ರೀಂ'



ನವದೆಹಲಿ (ಪಿಟಿಐ): ಹರಿಯಾಣದ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದ ಮಹಿಳಾ ಸ್ವಚ್ಛತಾ ಕಾರ್ಮಿಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ತನಿಖೆಗೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಇತರರ ಪ್ರತಿಕ್ರಿಯೆ ಕೇಳಿ ನೋಟಿಸ್ ಜಾರಿ ಮಾಡಿದೆ.

ವಿವರ ಪುಟ 13

ವಿತ್ತೀಯ ಕೊರತೆ ₹8.25 ಲಕ್ಷ ಕೋಟಿ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗೆ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 52.6ರಷ್ಟಾಗಿದೆ.

ವಿವರ ಪುಟ 12

ಜಿಡಿಪಿ ಪ್ರಗತಿ: ಭಾರತ ದಾಖಲೆ

ಹಣಕಾಸು ವರ್ಷದ ಮೊದಲಾರ್ಧದಲ್ಲೇ ಗುರಿ ಮೀರಿ ಸಾಧನೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕಡಿತದಿಂದ ಆರ್ಥಿಕ ಚಟುವಟಿಕೆಗಳು ಚುರುಕುಗೊಂಡಿದ್ದು, ಇದರಿಂದ ದೇಶದ ಒಟ್ಟಾರೆ ಆಂತರಿಕ ಉತ್ಪನ್ನವು (ಜಿಡಿಪಿ) ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದಲ್ಲಿ (ಜುಲೈ–ಸೆಪ್ಟೆಂಬರ್) ದಾಖಲೆ ಪ್ರಮಾಣದಲ್ಲಿ ಶೇ 8.2ಕ್ಕೆ ಏರಿಕೆಯಾಗಿದೆ.

ಎರಡನೆಯ ತ್ರೈಮಾಸಿಕದ ಜಿಡಿಪಿ ದರವು ಕಳೆದ ಆರು ತ್ರೈಮಾಸಿಕಗಳಲ್ಲೇ ಗರಿಷ್ಠ ಮಟ್ಟದ್ದಾಗಿದೆ. ನಿರೀಕ್ಷೆಗೂ ಮೀರಿದ ಪ್ರಗತಿಯ ಮೂಲಕ ಭಾರತವು, ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಸ್ಥಾನವನ್ನು ಉಳಿಸಿಕೊಂಡಿದೆ. ಚೀನಾವು ಎರಡನೆಯ ತ್ರೈಮಾಸಿಕದಲ್ಲಿ ಶೇ 4.8ರಷ್ಟು ಜಿಡಿಪಿ ಪ್ರಗತಿ ದಾಖಲಿಸಿದೆ.



ರಾಷ್ಟ್ರೀಯ ಅಂಕಿ ಅಂಶಗಳ ಇಲಾಖೆ ಬಿಡುಗಡೆ ಮಾಡಿರುವ ಅಂಕಿ ಅಂಶದಂತೆ, ವಾರ್ಷಿಕ ಗುರಿಯನ್ನು ಮೀರಿ, ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿಯೇ ಜಿಡಿಪಿ ಶೇ 8ರ ಗಡಿ ದಾಟಿದೆ. ಇದಕ್ಕೂ ಮುನ್ನ 2023–24ನೇ ಸಾಲಿನ ನಾಲ್ಕನೆಯ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಭಾರತವು 8.4ರಷ್ಟು ಜಿಡಿಪಿ ಪ್ರಗತಿ ದಾಖಲಾಗಿತ್ತು.

> **ಜಿಎಸ್‌ಟಿ ಕಡಿತವು ಹಬ್ಬದ ಸಂದರ್ಭದಲ್ಲಿ ಖರೀದಿಗೆ ದೊಡ್ಡ ಮಟ್ಟದಲ್ಲಿ ಉತ್ತೇಜನ ನೀಡಿದೆ. ಮೂರನೆಯ ತ್ರೈಮಾಸಿಕದಲ್ಲೂ ಗಣನೀಯ ಪ್ರಗತಿ ನಿರೀಕ್ಷಿಸಬಹುದು**
> **ರುಮ್ಕಿ ಮಜುಂದಾರ್,** ಅರ್ಥಶಾಸ್ತ್ರಜ್ಞೆ, ಡೆಲಾಯ್ಟ್ ಇಂಡಿಯಾ

> **ಸದ್ಯ ಜಿಡಿಪಿ ದಾಖಲೆ ಮಟ್ಟದಲ್ಲಿರುವುದರಿಂದ ಡಿಸೆಂಬರ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ದರ ಕಡಿತದ ಸಾಧ್ಯತೆ ಕಡಿಮೆ**
> **ಅದಿತಿ ನಾಯರ್,** ಮುಖ್ಯ ಅರ್ಥಶಾಸ್ತ್ರಜ್ಞೆ, ಇಕ್ರಾ

ಜಿಡಿಪಿ: ಹೊಸ ದಾಖಲೆ ನಿರೀಕ್ಷೆ

ಜನವರಿಯಲ್ಲಿ ನಡೆದ ಆರ್ಥಿಕ ಸಮೀಕ್ಷೆಯಲ್ಲಿ ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 6.3ರಿಂದ 6.8ರ ನಡುವೆ ಇರಲಿದೆ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಆರ್ಥಿಕ ವರ್ಷದ ಮೊದಲಾರ್ಧದಲ್ಲೇ ಇದು ಶೇ 8ರ ಗಡಿ ದಾಟಿದೆ. ಹೀಗಾಗಿ ಹಣಕಾಸು ವರ್ಷದ ಅಂತ್ಯಕ್ಕೆ ಗುರಿ ಮೀರಿ ಜಿಡಿಪಿ ದಾಖಲಾಗುವ ನಿರೀಕ್ಷೆ ಇದೆ. ಭಾರತೀಯ ರಿಸರ್ವ್ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.8ರಷ್ಟು ಜಿಡಿಪಿ ಅಂದಾಜು ಮಾಡಿದೆ.

ಐಸಿಡಿಎಸ್ ಸುವರ್ಣ ಮಹೋತ್ಸವದಲ್ಲಿ ಸಿದ್ದರಾಮಯ್ಯ

'ಅಂಗನವಾಡಿಯಿಂದ ತಾಯಿ– ಶಿಶು ಮರಣ ಇಳಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಕಾರ್ಯಕ್ರಮಗಳಿಂದ ಶಿಶು, ತಾಯಂದಿರ ಮರಣ ಹಾಗೂ ಅಪೌಷ್ಟಿಕತೆ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿದೆ. 69,922 ಅಂಗನವಾಡಿ ಕೇಂದ್ರಗಳಿಂದ 40 ಲಕ್ಷಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳಿಗೆ ಅನುಕೂಲವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶುಕ್ರವಾರ ನಡೆದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸುವರ್ಣ ಮಹೋತ್ಸವ, ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

70ರ ದಶಕದಲ್ಲಿ ಮಹಿಳೆ ಮತ್ತು ಮಕ್ಕಳಲ್ಲಿ ಅಪೌಷ್ಟಿಕತೆ, ಶಿಶು ಮತ್ತು ತಾಯಿ ಮರಣ ಹೆಚ್ಚಿದ ಸಂದರ್ಭದಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಈ ಕಾರ್ಯಕ್ರಮ ಜಾರಿಗೊಳಿಸಿದರು. ಟಿ.ನರಸೀಪುರ ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ಮೊದಲು ಪ್ರಾರಂಭಗೊಂಡ ಅಂಗನವಾಡಿ ಕೇಂದ್ರ, 33 ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸಿತು. ಪ್ರಸ್ತುತ 69 ಸಾವಿರಕ್ಕೂ ಅಧಿಕ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಮಹಿಳೆಯರಲ್ಲಿ ಶೇಕಡ ನೂರರಷ್ಟು ಸಾಕ್ಷರತೆ, ವೈಚಾರಿಕ ಹಾಗೂ ವೈಜ್ಞಾನಿಕ ಜ್ಞಾನ ಬರಬೇಕಿದೆ. ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸ್ವಾವಲಂಬಿಗಳಾಗದೆ ಹೋದರೆ, ಸಮಾಜ ಮುಂದುವರಿಯುವುದು ಕಷ್ಟ ಎಂದರು.

ರಾಜ್ಯದ ಒಟ್ಟು 5,000 ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಕೇಂದ್ರಗಳಲ್ಲಿ ಪ್ರಾರಂಭಿಸಲಾಗುವುದು ಎಂದರು. ಇದಕ್ಕೂ ಮುನ್ನ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನವನ್ನು ಒಂದು ಸಾವಿರ ರೂಪಾಯಿ ಹೆಚ್ಚಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗೆ ಮನವಿ ಮಾಡಿದರು.

ಇದೇ ವೇಳೆ ಮಕ್ಕಳಿಗೆ ಶೌರ್ಯ ಪ್ರಶಸ್ತಿ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಸಂಸ್ಥೆಗಳಿಗೆ ಹಾಗೂ ವ್ಯಕ್ತಿಗಳಿಗೆ ಹಾಗೂ ಹಿರಿಯ ನಾಗರಿಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಐಸಿಡಿಎಸ್ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮಹಿಳೆಯರು ಪಾಲ್ಗೊಂಡಿದ್ದರು

ಯೋಜನೆಗಳ ಪರಿಚಯ

- **ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರಿ ಸಂಘ:** ಈ ಸಂಘದಲ್ಲಿ ಫಲಾನುಭವಿಗಳು/ಸದಸ್ಯರು ಷೇರುದಾರರಾಗಿರುತ್ತಾರೆ. ಸಹಕಾರಿ ಬ್ಯಾಂಕ್ ಕನಿಷ್ಠ ₹1,000 ಕೋಟಿ ಬಂಡವಾಳ ಹೊಂದುವ ನಿರೀಕ್ಷೆಯಿದ್ದು, ರಾಜ್ಯದ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಹೆಚ್ಚಿಸಲು ಇದರಿಂದ ಅನುಕೂಲವಾಗುತ್ತದೆ.
- **ಅಕ್ಕ ಪಡೆ:** ತರಬೇತಿ ಪಡೆದ 10 ಮಹಿಳೆಯರನ್ನು ಒಳಗೊಂಡಿರುವ ಈ ಪಡೆಯು ಎರಡು ಪಾಳಿಗಳಲ್ಲಿ ದಿನದ 24X7 ಕಾರ್ಯನಿರ್ವಹಿಸುತ್ತದೆ. ಹೆಣ್ಣುಮಕ್ಕಳು, ಕೆಲಸ ಮಾಡುವ ಮಹಿಳೆಯರ ಸುರಕ್ಷತೆಯತ್ತ ಗಮನಹರಿಸಲಿದ್ದು, ಗೃಹ ಇಲಾಖೆಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸಲಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ಭೂಮಿಕಾ, ಸುಧಾ, ಮಯೂರ ಓದಿರಿ

ಕಬ್ಬಿಣ ವ್ಯಾಪಾರ: ಜಿಎಸ್‌ಟಿ ಅಕ್ರಮ

ಮೂರು ಹಂತದ ವಂಚನೆ ಪತ್ತೆ ಮಾಡಿರುವ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಕಾರ್ಯಾಚರಣೆ ನಡೆಸಿರುವ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಸಿಮೆಂಟ್, ನಿರ್ಮಾಣ ಕಾಮಗಾರಿಗಳಲ್ಲಿ ಬಳಸುವ ಕಬ್ಬಿಣ ಮಾರಾಟದ ವೇಳೆ ಮೂರು ಹಂತದಲ್ಲಿ ಜಿಎಸ್‌ಟಿ ವಂಚನೆ ಮಾಡುತ್ತಿರುವುದನ್ನು ಪತ್ತೆ ಮಾಡಿದ್ದಾರೆ.

'ಎಸ್.ಪಿ ರಸ್ತೆ, ಬಿಂಬೂ ಬಜಾರ್, ಜೆ.ಸಿ.ರಸ್ತೆಗಳಲ್ಲಿ ಹಲವು ಕಬ್ಬಿಣದ ಅಂಗಡಿಗಳು ಇದ್ದು, ದೊಡ್ಡ ಮಟ್ಟದ ವ್ಯಾಪಾರ ನಡೆಯುತ್ತದೆ. ಆದರೆ ಇಲ್ಲಿ ಟಿಎಂಟಿ ಬಾರ್‌ಗಳು, ಕಬ್ಬಿಣದ ಕೊಳವೆಗಳು, ತಗಡು ಶೀಟ್‌ಗಳನ್ನು ಖರೀದಿಸುವ ಗ್ರಾಹಕರಿಗೆ ಜಿಎಸ್‌ಟಿ ಬಿಲ್ ನೀಡುವುದಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

'ಇಂತಹ ಸರಕುಗಳಿಗೆ ಶೇ 18ರಷ್ಟು ಜಿಎಸ್‌ಟಿ ಅನ್ವಯವಾಗುತ್ತದೆ. ಶೇ 15 ರಿಂದ ಶೇ 16ರಷ್ಟು ಜಿಎಸ್‌ಟಿ ಸಹಿತ, ಬಿಳಿ ಹಾಳೆಯಲ್ಲಿ ಲೆಕ್ಕ ಬರೆದು ಗ್ರಾಹಕರಿಗೆ ನೀಡುತ್ತಾರೆ. ಬಳಿಕ ಕಬ್ಬಿಣವನ್ನು ಇಲ್ಲಿನ ಗುಜರಿ ಅಂಗಡಿಗಳಿಗೆ ಮಾರಾಟ ಮಾಡಲಾಗುತ್ತಿದ್ದು, ಅವುಗಳೂ ಶೇ 5ರಷ್ಟು ಜಿಎಸ್‌ಟಿ ಪಾವತಿಸುತ್ತಿಲ್ಲ' ಎಂದು ಮಾಹಿತಿ ನೀಡಿದರು.

'ಜಿಎಸ್‌ಟಿ ಬಿಲ್ ನೀಡದೇ ಇರುವುದು ಒಂದು ಹಂತದ ವಂಚನೆಯಾದರೆ, ಈ ಎಲ್ಲ ಸರಕುಗಳಿಗೆ ವರ್ತಕರು 'ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್' ಪಡೆದುಕೊಂಡಿದ್ದಾರೆ. ಇದು ಎರಡನೇ ಹಂತದ ವಂಚನೆ. ಇದರ ಜತೆಯಲ್ಲಿಯೇ, ನಿಜವಾದ ಗ್ರಾಹಕರಿಗೆ ಮಾರಾಟ ಮಾಡಿದ ಸರಕುಗಳಿಗೆ ಕೆಲವೇ ಮಧ್ಯವರ್ತಿಗಳು ಮತ್ತು ಗುತ್ತಿಗೆದಾರರ ಹೆಸರಿನಲ್ಲಿ ಜಿಎಸ್‌ಟಿ ಬಿಲ್ ಸೃಜಿಸಿದ್ದಾರೆ. ಆ ಗುತ್ತಿಗೆದಾರರು ಮತ್ತು ಮಧ್ಯವರ್ತಿಗಳು ಆ ಬಿಲ್‌ಗಳ ಆಧಾರದಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆದುಕೊಂಡಿದ್ದಾರೆ. ಇದು ಮೂರನೇ ಹಂತದ ವಂಚನೆ' ಎಂದು ವಿವರಿಸಿದರು.

'ಇಂತಹ ಪ್ರಕರಣಗಳಲ್ಲಿ ಹೆಚ್ಚಿನ ತನಿಖೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ವರ್ತಕರು, ಮಧ್ಯವರ್ತಿಗಳು, ಗುತ್ತಿಗೆದಾರರ ಬ್ಯಾಂಕ್ ವಹಿವಾಟುಗಳನ್ನು ಪರಿಶೀಲಿಸಲಾಗುತ್ತಿದೆ' ಎಂದು ತಿಳಿಸಿದರು.

ಜೆ.ಸಿ.ರಸ್ತೆಯಲ್ಲಿ ₹100 ಕೋಟಿ ಅಕ್ರಮ

ಆಟೊಮೊಬೈಲ್ ಬಿಡಿಭಾಗಗಳು, ವಾಹನಗಳ ಅಲಂಕಾರಿಕ ವಸ್ತುಗಳಿಗೆ ಹೆಸರುವಾಸಿಯಾಗಿರುವ ಜೆ.ಸಿ.ರಸ್ತೆಯ ಜನರಲ್ ಕಾಲೋನಿಯ ಅಂಗಡಿಗಳಲ್ಲಿ ಹದಿನೈದೇ ದಿನದಲ್ಲಿ ₹100 ಕೋಟಿಯಷ್ಟು ತೆರಿಗೆ ವಂಚನೆ ಮಾಡಿರುವುದನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ.

'ಇಲ್ಲಿನ ಬಹುತೇಕ ಬಿಡಿಭಾಗಗಳು ಚೀನಾದಿಂದ ಆಮದಾಗುತ್ತವೆ. ಆದರೆ ಅವುಗಳಿಗೆ ಯಾವುದೇ ರೀತಿಯ ಬಿಲ್‌ಗಳು ಇಲ್ಲ. ಅವುಗಳನ್ನು ಖರೀದಿಸಿದ ಗ್ರಾಹಕರಿಗೂ ಜಿಎಸ್‌ಟಿ ಬಿಲ್ ನೀಡುವುದಿಲ್ಲ. ಜಿಎಸ್‌ಟಿ ಬಿಲ್ ಕೇಳಿದವರಿಗೂ ಬಿಲ್ ನೀಡುವುದಿಲ್ಲ. ಇಲ್ಲಿ ಪ್ರತಿದಿನ ಹತ್ತಾರು ಕೋಟಿ ರೂಪಾಯಿಗಳಷ್ಟು ವಹಿವಾಟು ನಡೆಯುತ್ತಿದ್ದು, ಆ ಎಲ್ಲ ಸರಕುಗಳಿಗೆ ಪಾವತಿಸಬೇಕಿದ್ದ ತೆರಿಗೆಯನ್ನು ವಂಚಿಸಲಾಗುತ್ತಿದೆ. ಜಿಎಸ್‌ಟಿ ವಂಚಿಸುತ್ತಿರುವ ಇಲ್ಲಿನ ವ್ಯಾಪಾರಿಗಳಿಗೆ ನೋಟಿಸ್ ನೀಡಲಾಗಿದ್ದು, ವಿವರಣೆ ಕೇಳಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಇಲ್ಲಿನ ಪ್ರತಿಷ್ಠಿತ ವ್ಹೀಲ್ ಅಲೈನ್‌ಮೆಂಟ್ ಅಂಗಡಿಯಲ್ಲಿ, ವಾಹನಗಳ ಕೀಗಳನ್ನೂ ತಯಾರಿಸಿಕೊಡಲಾಗುತ್ತದೆ. ಆದರೆ ಈ ಕೀಗಳಿಗೆ ಜಿಎಸ್‌ಟಿ ಬಿಲ್ ನೀಡುವುದಿಲ್ಲ. ಎಲ್ಲ ವಹಿವಾಟುಗಳೂ ನಗದಲ್ಲೇ ನಡೆಯಲಿ ಎಂದು ಒತ್ತಾಯ ಮಾಡಲಾಗುತ್ತದೆ. ನಗದು ನೀಡಿದರೆ ಒಂದು ಕೀಗೆ ₹250 ವಿಧಿಸಲಾಗುತ್ತದೆ. ಯುಪಿಐ ಮೂಲಕ ಪಾವತಿ ಮಾಡಿದರೆ, ಅದೇ ಕೀಗೆ ₹400 ವಿಧಿಸಲಾಗುತ್ತದೆ. ಹೀಗಾಗಿ ಗ್ರಾಹಕರೆಲ್ಲರೂ ನಗದು ನೀಡಿ ಹೋಗುತ್ತಾರೆ' ಎಂದು ಹೇಳಿದರು.

ಶಾರದಾಂಬೆ ಟ್ರಸ್ಟ್ ಉದ್ಘಾಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾರದಾಂಬೆ ಸೇವಾ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ, ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ನ.30ರಂದು ನಗರದ ಮಲ್ಲೇಶ್ವರದಲ್ಲಿರುವ ಶುಕ್ರ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷೆ ವಿ.ಎಚ್.ಗೀತಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಟ್ರಸ್ಟ್ ಉದ್ಘಾಟನೆ ಮಾಡಲಿದ್ದಾರೆ. ಸಚಿವರಾದ ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಕನ್ನಡ ಪರ ಹೋರಾಟಗಾರರಾದ ಸಾ.ರಾ. ಗೋವಿಂದು, ಎಚ್. ಶಿವರಾಮೇಗೌಡ, ನಾ. ಶ್ರೀಧರ್, ಪಾಲಿಕೆ ಸದಸ್ಯರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆ ಅಧ್ಯಕ್ಷ ಸಿ.ಎಂ. ಗಣೇಶ್ ಗೌಡ, ಟ್ರಸ್ಟ್ ಪದಾಧಿಕಾರಿಗಳಾದ ಕೆ. ರಾಜು, ಟಿ.ಎನ್. ಗೋಪಾಲ್, ಕರೀಗೌಡ ಉಪಸ್ಥಿತರಿದ್ದರು.

ಎಲ್‌ಕೆಜಿ–ಯುಕೆಜಿ ಶಾಲೆಗಳಿಗೆ ಚಾಲನೆ

ರಾಮನಗರ: ಸಮಗ್ರ ಶಿಶು ಅಭಿವೃದ್ಧಿ ಯೋಜನೆ ರಾಜ್ಯದಲ್ಲಿ ಪ್ರಾರಂಭವಾಗಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ, ಬೆಂಗಳೂರಿನ ಅರಮನೆ ಮೈದಾನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಗೆ ಮಂಜೂರಾದ 100 ಎಲ್‌ಕೆಜಿ–ಯುಕೆಜಿ ಶಿಕ್ಷಣ ಶಾಲೆಗಳಿಗೆ ಚಾಲನೆ ನೀಡಲಾಯಿತು.

ತಾಲ್ಲೂಕಿನ ಶ್ಯಾನುಮಂಗಲ ಕೇಂದ್ರದಲ್ಲಿ ಕಾರ್ಯಕ್ರಮದ ನೇರ ಪ್ರಸಾರದ ಮೂಲಕ ಚಾಲನೆ ನೀಡಲಾಯಿತು.



ಅಸೆಂಟ್ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯೋತ್ಸವಕ್ಕೆ ಶಾಸಕ ಎಸ್‌. ಮುನಿರಾಜು ಮತ್ತು ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ಚಾಲನೆ ನೀಡಿದರು

ಅಸೆಂಟ್ ಕಾಲೇಜಿನಲ್ಲಿ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕರುನಾಡಲ್ಲಿ ಅರಣ್ಯ ಸಂಪತ್ತು, ಖನಿಜ ಸಂಪತ್ತು, ನದಿಗಳು, ಕಣಿವೆಗಳು, ಬೆಟ್ಟಗುಡ್ಡಗಳು ಸಮೃದ್ಧಿಯಿಂದ ಇದ್ದು, ನಾಡಿನ ಸೊಬಗನ್ನು ಹೆಚ್ಚಿಸಿವೆ' ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು.

ಹಾವನೂರು ಬಡಾವಣೆಯ ಅಸೆಂಟ್ ಪದವಿ ಪೂರ್ವ ಕಾಲೇಜು ವತಿಯಿಂದ 70ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ 'ಅಸೆಂಟ್ ಕನ್ನಡ ಕಲರವ– 2025' ಎಂಬ ಶೀರ್ಷಿಕೆಯಡಿ ಎರಡು ದಿನಗಳ ಕರ್ನಾಟಕ ರಾಜ್ಯೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

'ದಾರ್ಶನಿಕರ, ಸಾಹಿತಿಗಳ, ಚಿಂತಕರ ಮತ್ತು ವಿಜ್ಞಾನಿಗಳನ್ನು ಕಂಡ ಈ ಭೂಮಿ ಪುಣ್ಯಭೂಮಿ' ಎಂದು ಬಣ್ಣಿಸಿದರು.

ಕಾಲೇಜಿನಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ನೂರಾರು ವಿದ್ಯಾರ್ಥಿನಿಯರು ಕಳಸ ಹೊತ್ತು ಹೆಸರಘಟ್ಟ ಮುಖ್ಯ ರಸ್ತೆಯಿಂದ ಬಾಗಲಗುಂಟೆಯ ಆಟದ ಮೈದಾನ, ಮಾರಮ್ಮನ ದೇವಸ್ಥಾನ, ಹಾವನೂರು ಬಡಾವಣೆಯ ಮುಖ್ಯ ರಸ್ತೆಯಲ್ಲಿ ಸಾಗಿದರು. ಡೊಳ್ಳು ಕುಣಿತ, ವೀರಗಾಸೆ, ಪೂಜಾ ಕುಣಿತ ಮೆರವಣಿಗೆಗೆ ಮೆರುಗು ನೀಡಿದವು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ವೇದಿಕೆ ಕಾರ್ಯಕ್ರಮದಲ್ಲಿ ಸಾಹಿತಿ ಕಾಳೇಗೌಡ ನಾಗವಾರ ಮಾತನಾಡಿದರು. ಪ್ರಾಂಶುಪಾಲ ಬಿ.ಎಂ. ವೆಂಕಟೇಶ್, ಚಿತ್ರನಟ ಹೊನ್ನವಳ್ಳಿ ಕೃಷ್ಣ, ಕಿರುತೆರೆ ನಟ ಪುನೀತ ಗೌಡ, ಪ್ರಾಧ್ಯಾಪಕರಾದ ಜಯಶಂಕರ ಹಲಗೂರು, ಶ್ವೇತಾ ವೆಂಕಟೇಶ್, ರಾಘವೇಂದ್ರ ಮಸ್ಕಲ್ ಇದ್ದರು.

ಪಿಂಚಣಿ, ಭತ್ಯೆಗೆ ಆಗ್ರಹಿಸಿ ಪ್ರತಿಭಟನೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ, ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಗುರುವಾರ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಎಂ.ಜಿ. ರಸ್ತೆಯಲ್ಲಿ ನಗರದ ಮೊದಲ ಪಿಎಸ್‌ಡಿ

ಗುಲಾಬಿ ಮಾರ್ಗದಲ್ಲಿ ಯೋಜನೆ ರೂಪಿಸಿದ ಬಿಎಂಆರ್‌ಸಿಎಲ್

• ಮುತೀಉರ್‌ರಹ್ಮಾನ್ ಸಿದ್ದೀಕಿ



ದೆಹಲಿಯ ಮೆಟ್ರೊ ನಿಲ್ದಾಣದಲ್ಲಿ ಇರುವ ಪ್ಲಾಟ್‌ಫಾರಂ ಸ್ಕ್ರೀನ್ ಡೋರ್ ವ್ಯವಸ್ಥೆ

ಬೆಂಗಳೂರು: ಪ್ರಯಾಣಿಕರ ಸುರಕ್ಷತೆಗಾಗಿ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್ (ಪಿಎಸ್‌ಡಿ) ವ್ಯವಸ್ಥೆ ಕಲ್ಪಿಸಲು ಎರಡು ವರ್ಷಗಳ ಹಿಂದೆಯೇ ಬಿಎಂಆರ್‌ಸಿಎಲ್ ಚಿಂತನೆ ನಡೆಸಿದ್ದರೂ ಅನುಷ್ಠಾನಗೊಂಡಿರಲಿಲ್ಲ. ಮುಂದಿನ ವರ್ಷ ಆರಂಭಗೊಳ್ಳಲಿರುವ ಗುಲಾಬಿ ಮಾರ್ಗದಲ್ಲಿ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಮೊದಲ ಪಿಎಸ್‌ಡಿ ನಿರ್ಮಿಸಲು ಯೋಜನೆ ರೂಪಿಸಿದೆ.

ಮೆಟ್ರೊ ನಿಲ್ದಾಣಗಳಲ್ಲಿ ಹಳಿಗಳತ್ತ ಪ್ರಯಾಣಿಕರು ನುಗ್ಗುವುದನ್ನು ತಪ್ಪಿಸಲು ಚೆನ್ನೈ, ದೆಹಲಿ ಮತ್ತು ಮುಂಬೈನಲ್ಲಿ ಈಗಾಗಲೇ ಪಿಎಸ್‌ಡಿ ಅನುಷ್ಠಾನ ಮಾಡಲಾಗಿದೆ. ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಇರುವ ಎಲೆಕ್ಟ್ರಾನಿಕ್ ಸಿಟಿ ಬಳಿಯ ಕೋನಪ್ಪನ ಅಗ್ರಹಾರ ನಿಲ್ದಾಣದಲ್ಲಿ ಪಿಎಸ್‌ಡಿ ಆರಂಭಿಸಲಾಗುವುದು. ಇನ್ಫೊಸಿಸ್ ಫೌಂಡೇಷನ್ ಇದರ ವೆಚ್ಚವನ್ನು ಭರಿಸಲಿದೆ. ಇದು ಬೆಂಗಳೂರಿನ ಮೊದಲ ಪಿಎಸ್‌ಡಿ ಆಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಎರಡು ವರ್ಷಗಳ ಹಿಂದೆ ತಿಳಿಸಿದ್ದರು. ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಿದ್ದರೂ ಪಿಎಸ್‌ಡಿ ಅಳವಡಿಕೆಯಾಗಿಲ್ಲ.

ಕಾಳೇನ ಅಗ್ರಹಾರ–ನಾಗವಾರವನ್ನು ಸಂಪರ್ಕಿಸುವ ಗುಲಾಬಿ ಮಾರ್ಗವು 21.26 ಕಿ.ಮೀ. ಉದ್ದವಿದೆ. ಅದರಲ್ಲಿ 2026ರ ಮೇನಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆಯವರೆಗಿನ 7.5 ಕಿಮೀ ಎತ್ತರಿಸಿದ ಮಾರ್ಗದಲ್ಲಿ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ. ಡೇರಿ ಸರ್ಕಲ್‌ನಿಂದ ನಾಗವಾರವರೆಗೆ ಸುರಂಗ ಮಾರ್ಗವಿದ್ದು, 2026ರ ಡಿಸೆಂಬರ್‌ನಲ್ಲಿ ರೈಲು ಸಂಚಾರ ಆರಂಭಗೊಳ್ಳಲಿದೆ. ಎಂ.ಜಿ. ರಸ್ತೆ ನಿಲ್ದಾಣವು ಸುರಂಗ ಮಾರ್ಗದಲ್ಲಿದ್ದು, ಇಲ್ಲಿ ಮೊದಲ ಮಾದರಿ ಪಿಎಸ್‌ಡಿ ನಿರ್ಮಾಣಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಪಿಎಸ್‌ಡಿ ನಿರ್ಮಾಣದ ಗುತ್ತಿಗೆಯನ್ನು ಚೀನಾದ ಪ್ಯಾನಾಸೋನಿಕ್ ಸಂಸ್ಥೆ ಉಪ ಗುತ್ತಿಗೆ ಪಡೆದಿದ್ದು, ಪ್ರಾಯೋಗಿಕವಾಗಿ ಸ್ಥಾಪಿಸಲಾಗುವುದು. ಪರೀಕ್ಷೆಗಳು ನಡೆದು, ಯಾವುದೇ ತಾಂತ್ರಿಕ ತೊಂದರೆಗಳು ಇಲ್ಲವಾದ ಮೇಲೆ 12 ಭೂಗತ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗುಲಾಬಿ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗದಲ್ಲಿ ಸಂಪೂರ್ಣ ಸ್ವಯಂ ಚಾಲಿತ ಸಂವಹನ ಆಧಾರಿತ ರೈಲು ನಿಯಂತ್ರಣ (ಸಿಬಿಟಿಸಿ) ಸಿಗ್ನಲಿಂಗ್ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲು, ತಯಾರಿಸಲು, ಪೂರೈಸಲು, ಸ್ಥಾಪಿಸಲು, ಪರೀಕ್ಷಿಸಲು ಮತ್ತು ನಿಯೋಜಿಸಲು ವರ್ಷದ ಹಿಂದೆ ಫ್ರೆಂಚ್ ಕಂಪನಿ ಆಲ್ಸ್ಟೋಮ್ ಟ್ರಾನ್ಸ್‌ಪೋರ್ಟ್ ಕಂಪನಿಯೊಂದಿಗೆ ಬಿಎಂಆರ್‌ಸಿಎಲ್ ಒಪ್ಪಂದ ಮಾಡಿಕೊಂಡಿತ್ತು. ಅದರಲ್ಲಿ 12 ಭೂಗತ ನಿಲ್ದಾಣಗಳಲ್ಲಿ ಮತ್ತು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪಿಎಸ್‌ಡಿ, ವಿಮಾನ ನಿಲ್ದಾಣ ನಗರದಲ್ಲಿ ನೆಲಮಟ್ಟದ ನಿಲ್ದಾಣದಲ್ಲಿ ಪಿಎಸ್‌ಜಿ (ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್) ಅಳವಡಿಸುವುದು ಸೇರಿತ್ತು.

ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್ ಮತ್ತು ಸೆಂಟ್ರಲ್ ಕಾಲೇಜಿನಲ್ಲಿರುವ ಭೂಗತ ನಿಲ್ದಾಣಗಳಲ್ಲಿ ಪಿಎಸ್‌ಡಿ ಮತ್ತು ಹಳದಿ ಮಾರ್ಗದಲ್ಲಿ ಕೋನಪ್ಪನ ಅಗ್ರಹಾರ ನಿಲ್ದಾಣದಲ್ಲಿ ಪಿಎಸ್‌ಡಿ ಬರಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅವಘಡ ತಪ್ಪಲಿದೆ

ನಿಲ್ದಾಣಕ್ಕೆ ಮೆಟ್ರೊ ರೈಲು ಬಂದು ನಿಂತ ಮೇಲೆ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್‌ಗಳು ತೆರೆದುಕೊಳ್ಳುತ್ತವೆ. ರೈಲಿನ ಬಾಗಿಲು ಮುಚ್ಚಿದ ಬಳಿಕ ರೈಲು ಹೊರಡುವಾಗ ಪಿಎಸ್‌ಡಿಗಳು ಮುಚ್ಚುತ್ತವೆ. ರೈಲು ಬರುವಾಗ ಉದ್ದೇಶಪೂರ್ವಕವಾಗಿ ಹಳಿಗೆ ಹಾರುವುದು ಇಲ್ಲವೇ ಆಕಸ್ಮಿಕವಾಗಿ ಕೆಳಗೆ ಬೀಳುವುದನ್ನು ಪಿಎಸ್‌ಡಿಗಳು ತಪ್ಪಿಸಲಿವೆ.

ನಮ್ಮ ಮೆಟ್ರೊ ಸಂಚಾರ ಇರುವ ಮೂರು ನೇರಳೆ, ಹಸಿರು ಮತ್ತು ಹಳದಿ ಮಾರ್ಗದಲ್ಲಿ ಒಟ್ಟು 85 ನಿಲ್ದಾಣಗಳಿದ್ದು, ಯಾವುದರಲ್ಲಿಯೂ ಪಿಎಸ್‌ಡಿ ವ್ಯವಸ್ಥೆ ಸದ್ಯಕ್ಕೆ ಇಲ್ಲ.

ಹಳದಿ ಮೆಟ್ರೊ: ಪ್ರತಿ ಸೋಮವಾರ ಬೇಗ ಸಂಚಾರ



ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಪ್ರತಿ ಸೋಮವಾರ ಬೆಳಿಗ್ಗೆ 5.05ಕ್ಕೆ ಮೊದಲ ಮೆಟ್ರೊ ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ಭಾನುವಾರದ ರಜೆ ಮುಗಿಸಿಕೊಂಡು ಸೋಮವಾರ ಬೆಳಿಗ್ಗೆ ಸಂಚರಿಸುವವರ ಸಂಖ್ಯೆ ಹೆಚ್ಚಿರುತ್ತದೆ. ಈ ಕಾರಣಕ್ಕಾಗಿ ರೈಲು ಸಂಚಾರವನ್ನು ಸೋಮವಾರ ಬೇಗ ಆರಂಭಿಸಲಾಗಿದೆ. ಇದು ಪ್ರಾಯೋಗಿಕವಾಗಿದ್ದು, ಈ ಅವಧಿಯಲ್ಲಿ ಸಂಚರಿಸುವವರ ಪ್ರಮಾಣ ಎಷ್ಟಿದೆ ಎಂದು ನೋಡಿಕೊಂಡು ಈ ಸಮಯವನ್ನೇ ಮುಂದುವರಿಸಬೇಕೇ ಬೇಡವೇ ಎಂದು ಮುಂದೆ ತೀರ್ಮಾನಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗದ ಎರಡು ಟರ್ಮಿನಲ್‌ಗಳಾದ ಆರ್.ವಿ. ರಸ್ತೆ ಮತ್ತು ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವೆ ಮಂಗಳವಾರದಿಂದ ಶನಿವಾರದವರೆಗೆ ಎಂದಿನಂತೆ ಬೆಳಿಗ್ಗೆ 6ಕ್ಕೆ ಮೊದಲ ಸಂಚಾರ ಇರಲಿದೆ. ಭಾನುವಾರ ಬೆಳಿಗ್ಗೆ 7ಕ್ಕೆ ಮೊದಲ ಸಂಚಾರ ಶುರುವಾಗುತ್ತದೆ. ಸೋಮವಾರ ಮಾತ್ರ ಬೆಳಿಗ್ಗೆ 5.05ಕ್ಕೆ ಮತ್ತು 5.35ಕ್ಕೆ ಎರಡು ಟ್ರಿಪ್‌ಗಳು ಹೆಚ್ಚುವರಿಯಾಗಿ ಇರಲಿವೆ ಎಂದು ಹೇಳಿದ್ದಾರೆ.

ಹಸಿರು ಮಾರ್ಗದಲ್ಲಿ 4.15ಕ್ಕೆ ಮೆಟ್ರೊ ರೈಲು ಮೊದಲ ಟ್ರಿಪ್ ಆರಂಭವಾಗುತ್ತದೆ. ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಕಡೆಗೆ ತೆರಳುವವರು ಆರ್.ವಿ. ರಸ್ತೆಯಲ್ಲಿ ಇಳಿದು ಹಳದಿ ಮಾರ್ಗದ ರೈಲಿಗಾಗಿ ಅಧಿಕ ಹೊತ್ತು ಕಾಯುತ್ತಾರೆ. ಹಳದಿ ಮಾರ್ಗದಲ್ಲಿಯೂ ಬೆಳಿಗ್ಗೆ ಬೇಗ ರೈಲು ಸಂಚಾರ ಆರಂಭಿಸಿರುವುದರಿಂದ ಸೋಮವಾರ ಈ ಕಾಯುವಿಕೆಯನ್ನು ತಪ್ಪಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಬರಲಿದೆ ಮತ್ತೊಂದು ರೈಲು: ಹಳದಿ ಮಾರ್ಗದಲ್ಲಿ ಸದ್ಯ ಐದು ರೈಲುಗಳು ಸಂಚರಿಸುತ್ತಿವೆ. ಡಿಸೆಂಬರ್ ಮೊದಲ ವಾರದಲ್ಲಿ ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಿಂದ ಆರನೇ ರೈಲು ರವಾನೆಯಾಗಲಿದೆ. ಆ ರೈಲು ಬೋಗಿಗಳು ಹೆಬ್ಬಗೋಡಿ ಡಿಪೊಗೆ ಬಂದ ಬಳಿಕ ಎರಡು ವಾರ ಪರೀಕ್ಷೆಗಳು ನಡೆಯಲಿವೆ. ಡಿಸೆಂಬರ್ ಅಂತ್ಯಕ್ಕೆ ಆರನೇ ರೈಲು ಸಂಚರಿಸಲಿದೆ ಎಂದು ಅಧಿಕಾರಿಗಳು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿಯುಸಿ ಉಪನ್ಯಾಸಕರ ಧರಣಿ: 13 ಬೇಡಿಕೆ ಈಡೇರಿಸುವಂತೆ ಒತ್ತಾಯ

‘ಗುಣಮಟ್ಟ ಜತೆಗೆ ಇಲಾಖೆ ಅಸ್ಮಿತೆ ಉಳಿಸಿ’

ಪ್ರಜಾವಾಣಿ ವಾರ್ತೆ



ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಸದಸ್ಯರು ನಗರದಲ್ಲಿ ಶುಕ್ರವಾರ ಧರಣಿ ಸತ್ಯಾಗ್ರಹ ನಡೆಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಆಡಳಿತಾತ್ಮಕ ಸ್ವಾಯತ್ತತೆ ಹಾಗೂ ಶೈಕ್ಷಣಿಕ ಗುಣಮಟ್ಟ ಜತೆಗೆ ಅಸ್ಮಿತೆ ಉಳಿಸಿ’ ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದಿಂದ ಶುಕ್ರವಾರ ಧರಣಿ ನಡೆಯಿತು.

ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲೂ ಶೈಕ್ಷಣಿಕ ಮಂಡಳಿ ಸ್ಥಾಪನೆ, ಪರೀಕ್ಷಾ ವಿಭಾಗ ಮರು ವರ್ಗಾವಣೆ, ಮೌಲ್ಯಮಾಪನದ ಬಾಕಿ ಬಿಡುಗಡೆ ಸೇರಿ 13 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಮಾತನಾಡಿ, ‘ಪಿಯು ಕಾಲೇಜುಗಳ ಬಲವರ್ಧನೆಗಾಗಿ ಯಾವುದೇ ಹೊಸ ಕಾಲೇಜು ಸ್ಥಾಪನೆಗೆ ಮುಂದಿನ ಮೂರು ವರ್ಷ ಅನುಮತಿ ನೀಡಬಾರದು. 9–10 ಹಾಗೂ 11–12ನೇ ತರಗತಿಗಳ ಬೋಧನಾ ವ್ಯಾಪ್ತಿಯನ್ನು ಒಂದೇ ಶೈಕ್ಷಣಿಕ ವ್ಯಾಪ್ತಿಗೆ ತರಬೇಕೆಂಬ ಕಡತವನ್ನು ತಿರಸ್ಕರಿಸಬೇಕು. ₹13.5 ಕೋಟಿ ಮೌಲ್ಯಮಾಪನ ಸಂಭಾವನೆ ಬಿಡುಗಡೆ ಮಾಡಬೇಕು. ಖಾಲಿ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಬೇಕು. ಉಪನಿರ್ದೇಶಕರ ಕಚೇರಿ ಬಲವರ್ಧನೆಗೆ ಹಿರಿಯ ಪ್ರಾಂಶುಪಾಲರಿಬ್ಬರನ್ನು ಸಹಾಯಕ ನಿರ್ದೇಶಕರಾಗಿ ನೇಮಿಸಬೇಕು’ ಎಂದು ಆಗ್ರಹಿಸಿದರು.

‘ಪಿಯು ಪರೀಕ್ಷಾ ವಿಭಾಗವನ್ನು ಕರ್ನಾಟಕ ಶಾಲಾಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ಇಲಾಖೆಗೆ ಮರು ವರ್ಗಾಯಿಸಬೇಕು. ಉನ್ನತ ಶಿಕ್ಷಣ ಇಲಾಖೆಯಂತೆಯೇ ಶೈಕ್ಷಣಿಕ ಮಂಡಳಿ ಸ್ಥಾಪಿಸಬೇಕು. ವಿದ್ಯಾರ್ಥಿ ಹಾಗೂ ಉಪನ್ಯಾಸಕರ ಅನುಪಾತ ಸುಧಾರಣೆಗೆ ಒತ್ತು ನೀಡಬೇಕು. ನಗದುರಹಿತ ಚಿಕಿತ್ಸಾ ಯೋಜನೆ ವಿಸ್ತರಣೆ ಮಾಡಬೇಕು. ಶೈಕ್ಷಣಿಕ ಅರ್ಹತೆ ಇರುವವರಿಗೆ ಆಂಧ್ರಪ್ರದೇಶ ಮಾದರಿಯಲ್ಲಿ ಪದವಿ ಕಾಲೇಜುಗಳಿಗೆ ಪದೋನ್ನತಿ ನೀಡಬೇಕು. ಕಾರ್ಯಭಾರ ಕೊರತೆ ಸರಿದೂಗಿಸಲು ಕ್ರಮ ಕೈಗೊಳ್ಳಬೇಕು’ ಎಂದರು.

ವಿಧಾನ ಪರಿಷತ್ ಸದಸ್ಯರಾದ ಎಸ್.ಎಲ್. ಭೋಜೇಗೌಡ, ಎಸ್.ವಿ.ಸಂಕನೂರ, ಕೆ. ವಿವೇಕಾನಂದ ಧರಣಿಗೆ ಬೆಂಬಲ ಸೂಚಿಸಿದರು.

ಸಿಗದ ಕಾಡೆಮ್ಮೆ ಸಿಬ್ಬಂದಿ ಪರದಾಟ

ಆನೇಕಲ್: ತಾಲ್ಲೂಕಿನಲ್ಲಿ ಕಾಣಿಸಿಕೊಂಡಿರುವ ಕಾಡೆಮ್ಮೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ಮುಂದುವರಿಸಿದ್ದಾರೆ.

ಕೆಲವು ದಿನಗಳಿಂದ ತಾಲ್ಲೂಕಿನ ಸೊಪ್ಪಹಳ್ಳಿ, ಕಮ್ಮಸಂದ್ರ ಅಗ್ರಹಾರ, ದೊಡ್ಡಹಾಗಡೆ ಸಮೀಪದಲ್ಲಿ ಕಾಣಿಸಿಕೊಂಡು ಜನರಲ್ಲಿ ಭೀತಿ ಹುಟ್ಟಿಸಿದೆ. ಎಸಿಎಫ್ ಗಣೇಶ್ ನೇತೃತ್ವದಲ್ಲಿ ಆರ್‌ಎಫ್‌ಒ ಶ್ರೀಧರ್, ಡಿಆರ್‌ಎಫ್‌ಒ ಶಿವರಾಜ್, ಅರಣ್ಯ ಇಲಾಖೆಯ 20ಕ್ಕೂ ಹೆಚ್ಚು ಸಿಬ್ಬಂದಿ ಕಾಡೆಮ್ಮೆ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ನಿಧನ ವಾರ್ತೆ

ಅ.ಚ.ಶಿವಣ್ಣ



ಬೆಂಗಳೂರು: ಪತ್ರಕರ್ತ ಅ.ಚ. ಶಿವಣ್ಣ (84) ಅವರು ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ ಇಂದಿರಾ ಶಿವಣ್ಣ, ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರಾದ ಪುತ್ರ ಡಾ.ದೀಪಕ್ ಇದ್ದಾರೆ. ಮೃತರ ಅಂತ್ಯಕ್ರಿಯೆ ಬನಶಂಕರಿಯ ಚಿತಾಗಾರದಲ್ಲಿ ಶನಿವಾರ (ನ.29) ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೊಡ್ಡಬಳ್ಳಾಪುರ ಸಮೀಪದ ಅರಳು ಮಲ್ಲಿಗೆಯವರಾದ ಶಿವಣ್ಣ ಅವರು, 1974ರಲ್ಲಿ ಲೋಕವಾಣಿ ಮೂಲಕ ಪತ್ರಕರ್ತರಾದರು. 1984ರಿಂದ 2010ರವರೆಗೆ ಸಂಜೆವಾಣಿ ಪತ್ರಿಕೆಯಲ್ಲಿ ಮುಖ್ಯ ವರದಿಗಾರರಾಗಿದ್ದರು.

ಬೆಂಗಳೂರು ಪ್ರೆಸ್‌ಕ್ಲಬ್ ಹಾಗೂ ಬೆಂಗಳೂರು ವರದಿಗಾರರ ಕೂಟದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. 1992ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1999ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ, 1999ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಿಡಿ ಶೇಷಪ್ಪ ಪ್ರಶಸ್ತಿಗಳು ಸಂದಿವೆ.

ಎರಡು ಗ್ರೇಟರ್ ಬೆಂಗಳೂರಿನಿಂದ ಗೊಂದಲ

ಅಧಿಸೂಚನೆಗಳಲ್ಲಿ ಎರಡೂ ಪ್ರಾಧಿಕಾರಗಳು
• ಸ್ಥಳೀಯ ಯೋಜನಾ ಪ್ರದೇಶಗಳ ಹೆಸರು ಬಳಕೆ

• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿರುವ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ಗೊಂದಲ ಸೃಷ್ಟಿಸುತ್ತಿದ್ದು, ಸರ್ಕಾರದ ಅಧಿಸೂಚನೆಗಳಲ್ಲೂ ಇದು ಪ್ರತಿಬಿಂಬಿಸುತ್ತಿದೆ.

ಬಿಡದಿ ಅಭಿವೃದ್ಧಿ ಪ್ರಾಧಿಕಾರದ ಬದಲು 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ' (ಜಿಬಿಡಿಎ) ಹಾಗೂ ಬಿಬಿಎಂಪಿ ಬದಲಾಗಿ ರಚನೆಯಾಗಿರುವ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ದ (ಜಿಬಿಎ) ನಡುವೆ 'ಅಭಿವೃದ್ಧಿ' ಎಂಬುದಷ್ಟೇ ವ್ಯತ್ಯಾಸವಿರುವುದರಿಂದ ಸರ್ಕಾರದ ಆದೇಶ, ಅಧಿಸೂಚನೆಗಳಲ್ಲಿ ತಪ್ಪಾಗುತ್ತಿದೆ.

ರಾಜ್ಯಪಾಲರ ಆದೇಶದನುಸಾರ ಅವರ ಹೆಸರಿನಲ್ಲೇ ನಗರಾಭಿವೃದ್ಧಿ ಇಲಾಖೆ ನ.24ರಂದು ಪ್ರಕಟಿಸಿರುವ ಅಧಿಸೂಚನೆಯಲ್ಲಿ (ನಇ471 ಬಿಎಂಆರ್ 2025 (ಇ) ಜಿಬಿಡಿಎ ಮತ್ತು ಜಿಬಿಎ ಎರಡನ್ನೂ ಉಲ್ಲೇಖಿಸಿರುವುದು ಸಾಕಷ್ಟು ಗೊಂದಲಕ್ಕೆ ಕಾರಣವಾಗಿದೆ.


ಈ ಅಧಿಸೂಚನೆಯಂತೆ, ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಕನಕಪುರ ತಾಲ್ಲೂಕಿನ ಕಸಬಾ ಹೋಬಳಿಯ ಎಂಟು ಗ್ರಾಮಗಳನ್ನು ಹಿಂಪಡೆಯಲಾಗಿದೆ. ಈ ಗ್ರಾಮಗಳನ್ನು 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ'ದ ವ್ಯಾಪ್ತಿಗೆ ಸೇರಿಸಲಾಗಿದೆ. ಅಂದರೆ, ಜಿಬಿಎಗೆ ಕನಕಪುರ ಸೇರಿಕೊಂಡಿದೆ ಎಂಬರ್ಥ ಬರುತ್ತದೆ.

ಮುಖ್ಯಾಂಶಗಳು


- ಕನಕಪುರದ ಕಸಬಾ ಹೋಬಳಿ ಗ್ರೇಟರ್ ಬೆಂಗಳೂರಿಗೆ ಸೇರ್ಪಡೆ
- ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಜಿಬಿಡಿಎ ವ್ಯಾಪ್ತಿಗೆ
- ಜಿಬಿಜಿ ಕಾಯ್ದೆ ಪ್ರಕಾರ, ದಕ್ಷಿಣ, ಗ್ರಾಮಾಂತರ ಜಿಲ್ಲೆಯ ಪ್ರದೇಶಗಳನ್ನು ಜಿಬಿಎಗೆ ಸೇರಿಸಬಹುದು

ಆದರೆ, ವಾಸ್ತವದಲ್ಲಿ ಇದು, 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸ್ಥಳೀಯ ಯೋಜನಾ ಪ್ರದೇಶ' ಎಂದಾಗಬೇಕಿತ್ತು.

ಇನ್ನು ಇದೇ ಅಧಿಸೂಚನೆಯಲ್ಲಿ, ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಎಂಟು ಗ್ರಾಮಗಳನ್ನು 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸ್ಥಳೀಯ ಯೋಜನಾ ಪ್ರದೇಶ'ಕ್ಕೆ ಸೇರಿಸಲಾಗಿದೆ. ನಗರ ಜಿಲ್ಲೆಯ ಪ್ರದೇಶಗಳು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸಂಬಂಧಿಸಿದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೇಗೆ ಸೇರುತ್ತದೆ ಎಂಬ ಪ್ರಶ್ನೆ ಉದ್ಭವಿಸಿದೆ. ಇದಕ್ಕೆ ನಗರಾಭಿವೃದ್ಧಿ ಇಲಾಖೆಯಲ್ಲಿರುವ ಅಧೀನ ಕಾರ್ಯದರ್ಶಿಗಳ ಕಚೇರಿಯಲ್ಲಿ ಉತ್ತರವಿಲ್ಲ. 'ಜಿಬಿಎ, ಜಿಬಿಡಿಎ ನಡುವೆ ಗೊಂದಲ ಇರುವುದರಿಂದ ಕೆಲವು ಬಾರಿ 'ಟೈಪಿಂಗ್ ಎರರ್' ಆಗುತ್ತದೆ. ಅದನ್ನು ಪರಿಶೀಲಿಸಲಾಗುತ್ತದೆ' ಎಂದು ಸಬೂಬು ಹೇಳುತ್ತಾರೆ.



ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ



ಗ್ರೇಟರ್ ಬೆಂಗಳೂರು ಪ್ರಾಧಿಕಾರ

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024'ರಲ್ಲಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪ್ರದೇಶಕ್ಕೆ' ನಗರ ಜಿಲ್ಲೆಯ ಹೊರತಾಗಿ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲದೆ ಸರ್ಕಾರ ಸೂಚಿಸಿರುವ ಯಾವ ಪ್ರದೇಶಗಳನ್ನಾದರೂ ಸೇರಿಸಿಕೊಳ್ಳಬಹುದು ಎಂದು ನಮೂದಿಸಲಾಗಿದೆ. ಹೀಗಾಗಿ, ಈ ಮೂರು ಜಿಲ್ಲೆಗಳ ವ್ಯಾಪ್ತಿಯ ಪ್ರದೇಶಗಳು ಎಲ್ಲಿಗೆ ಸೇರುತ್ತವೆ ಎಂಬುದು ಅಧಿಸೂಚನೆಗಳಲ್ಲೇ ತಪ್ಪಾದರೆ ಕಾರ್ಯಾಚರಣೆಯಲ್ಲಿ ಗೊಂದಲ ಮೂಡುತ್ತದೆ ಎಂಬುದು ಅಧಿಕಾರಿಗಳ ಅಭಿಪ್ರಾಯ.

'ಭವಿಷ್ಯದಲ್ಲಿ ಜಿಬಿಡಿಎ ಪ್ರದೇಶಗಳು ಜಿಬಿಎ ವ್ಯಾಪ್ತಿಗೆ ಸೇರುವ ಸಂಭವಿರುವುದು ಬಹಿರಂಗ ಸತ್ಯ. ಹೀಗಾಗಿ, ಕೆಲವು ಬಾರಿ ಆದೇಶ ಹಾಗೂ ಅಧಿಸೂಚನೆಯಾಗುವಾಗ ಗೊಂದಲಗಳು ಸೃಷ್ಟಿಯಾಗುತ್ತಿವೆ. ಇಂತಹ ಪ್ರಮಾದಗಳು ಅಧಿಸೂಚನೆಯಲ್ಲಾಗಬಾರದು. ಆದ್ದರಿಂದ ಅವುಗಳ ಹೆಸರನ್ನು ಬದಲಿಸುವುದೇ ಸೂಕ್ತ' ಎಂದು ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಕನಕಪುರ ಸ್ಥಳೀಯ ಯೋಜನಾ ಪ್ರದೇಶದಿಂದ ಹಿಂಪಡೆದು, ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರ್ಪಡೆಗೊಳಿಸಿದ ಗ್ರಾಮಗಳ ವಿವರಗಳು.

60.	ಕನಕಪುರ	ಕಸಬಾ	ಆರಳಾಳು	1790	72.90	ಭಾಗಶಃ ಗ್ರಾಮ
61.			ಬೇಕುಪ್ಪೆ	821	49.74	
62.			ಚೌಕಸಂದ್ರ	1205	196.40	
63.			ಹೊರಳಗಲ್ಲು	2497	35.28	
64.			ಕೂನೂರು	880	98.33	
65.			ಶೀಗೇಕೋಟೆ	1551	153.59	
66.			ಶಿವನಹಳ್ಳಿ	1799	260.67	
67.			ತಿಗಳರ ಹೊಸಹಳ್ಳಿ	1255	315.97	
			ಒಟ್ಟು	104620	24544.78	

ಕನಕಪುರ ಜಿಬಿಎಗೆ ಸೇರುತ್ತದೆ ಎಂಬ ಅಧಿಸೂಚನೆ

ಆರು ಉಪನಗರಕ್ಕೆ ಜಿಬಿಡಿಎ

ಬೆಂಗಳೂರಿನಲ್ಲಿ ಜನದಟ್ಟಣೆಯನ್ನು ಕಡಿಮೆ ಮಾಡಲು, ನಗರದ ಸುತ್ತಲಿರುವ ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ, ಬಿಡದಿ ಉಪನಗರಗಳನ್ನು ಅಭಿವೃದ್ಧಿಪಡಿಸಲು ಬಿಡದಿ ಅಭಿವೃದ್ಧಿ ಪ್ರಾಧಿಕಾರವನ್ನು 'ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ' (ಜಿಬಿಡಿಎ) ಎಂದು ಮರುನಾಮಕರಣ ಮಾಡಲಾಯಿತು. ಜಿಬಿಡಿಎ ಅಡಿ, 'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಅಭಿವೃದ್ಧಿ ಯೋಜನೆ'ಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 197ರ ಸೆಕ್ಷನ್ 15(1)(ಬಿ)ಯಂತೆ ಸಚಿವ ಸಂಪುಟ ಅನುಮತಿ ನೀಡಿತು. ಇದರಂತೆ ಜಿಬಿಡಿಎಗೆ 'ಗ್ರೇಟರ್ ಬೆಂಗಳೂರು ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶ' ಎಂದು ಹೆಸರಿಸಿ ನಗರ ಯೋಜನೆಯ ಅಧಿಕಾರವನ್ನೂ ನೀಡಿರುವುದರಿಂದ ಅದರ ವ್ಯಾಪ್ತಿಯನ್ನು ಆಗಾಗ ವಿಸ್ತರಿಸಲಾಗುತ್ತಿದೆ. ಅದೇ ರೀತಿ, ಬಿಬಿಎಂಪಿಯಿಂದ ಬದಲಾದ ಜಿಬಿಎಗೂ ಬಿಡಿಎಯ ನಗರ ಯೋಜನೆಯ ಎಲ್ಲ ಅಧಿಕಾರಗಳನ್ನೂ ವರ್ಗಾಯಿಸಿ, 'ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶ' ಎಂದು ಹೆಸರಿಸಿ ನಗರ ಯೋಜನೆಯ ಜವಾಬ್ದಾರಿ ವಹಿಸಲಾಗಿದೆ. ಇದರ ವ್ಯಾಪ್ತಿಯೂ ಹಿಗ್ಗುತ್ತಿದೆ. ಮಾಸ್ಟರ್ ಪ್ಲಾನ್ ರಚಿಸುವ ಜವಾಬ್ದಾರಿಯೂ ಇದೆ.

ಅಂತಿಮವಾಗದ ಲೋಗೊ, ಕಟ್ಟಡ

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ– 2024'ಯಂತೆ 2025ರ ಸೆ.2ರಂದು, ಬಿಬಿಎಂಪಿ ಬದಲಾಗಿ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ರಚನೆಯಾಯಿತು. ಇದರ ವ್ಯಾಪ್ತಿಯಲ್ಲೇ ಐದು ನಗರ ಪಾಲಿಕೆಗಳನ್ನು ರಚಿಸಲಾಯಿತು. ಈ ಪಾಲಿಕೆಗಳಿಗೆ ನವೆಂಬರ್ 1ರಂದು ಹೊಸ ಲೋಗೊ ಹಾಗೂ ಕಟ್ಟಡಗಳ ಏಕ ವಿನ್ಯಾಸವನ್ನು ಬಿಡುಗಡೆ ಮಾಡುವುದಾಗಿ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದ್ದರು. ಲೋಗೊ ಹಾಗೂ ಕಟ್ಟಡಗಳ ಏಕ ವಿನ್ಯಾಸಕ್ಕೆ ಸ್ಪರ್ಧೆ ನಡೆಸಿ, ಯುವ ವಾಸ್ತುಶಿಲ್ಪಿಗಳು ಬರುವ ಅತ್ಯುತ್ತಮ ವಿನ್ಯಾಸಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದೂ ಹೇಳಲಾಗಿತ್ತು.

ಐದು ನಗರ ಪಾಲಿಕೆಗಳ ವಾರ್ಡ್‌ಗಳು ಅಂತಿಮಗೊಂಡು, ನವೆಂಬರ್ ಅಂತ್ಯವಾಗುತ್ತಿದ್ದರೂ ಲೋಗೊ– ಕಟ್ಟಡ ವಿನ್ಯಾಸಗಳ ಬಗ್ಗೆ ಯಾವುದೇ ರೀತಿಯ ಅಂತಿಮ ಪ್ರಕ್ರಿಯೆಗಳು ನಡೆದಿಲ್ಲ. ಹೊಸ ಪ್ರದೇಶಗಳನ್ನು ಜಿಬಿಎ ವ್ಯಾಪ್ತಿಗೆ ಸೇರಿಸಿಕೊಳ್ಳುವ ಬಗ್ಗೆ ಬಿ.ಎಸ್. ಪಾಟೀಲ್ ನೇತೃತ್ವದ ಸಮಿತಿ ವರದಿ ಸಲ್ಲಿಸಬೇಕಿದೆ. ಹೀಗಾಗಿ, ಎಲ್ಲ ಪ್ರಕ್ರಿಯೆಗಳೂ ವಿಳಂಬಗತಿವಾಗಿವೆ ಎನ್ನಲಾಗಿದೆ.

ಸುದ್ದಿ 2 ನಿಮಿಷ

ಮಂತ್ರಿಮಾಲ್‌ನಿಂದ ₹6.50 ಕೋಟಿ ಆಸ್ತಿ ತೆರಿಗೆ ಪಾವತಿ

ಬೆಂಗಳೂರು: ಮಂತ್ರಿ ಮಾಲ್ ವತಿಯಿಂದ ₹6.50 ಕೋಟಿ ಆಸ್ತಿ ತೆರಿಗೆಯನ್ನು ಬೆಂಗಳೂರು ಕೇಂದ್ರ ನಗರ ಪಾಲಿಕೆಗೆ ಶುಕ್ರವಾರ ಪಾವತಿಸಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಚಿಕ್ಕಪೇಟೆಯಲ್ಲಿ ಆಸ್ತಿ ತೆರಿಗೆ ಅಭಿಯಾನ ನಡೆಸುತ್ತಿರುವ ಸಂದರ್ಭದಲ್ಲಿ ಅಲ್ಲಿಗೆ ಬಂದ ಮಂತ್ರಿ ಮಾಲ್‌ನವರು, ಬಾಕಿ ಇರುವ ₹30 ಕೋಟಿ ಆಸ್ತಿ ತೆರಿಗೆ ಪೈಕಿ ₹5 ಕೋಟಿಯನ್ನು ಪಾವತಿಸಿದರು. ಸಂಜೆ ₹1.5 ಕೋಟಿ ಮೊತ್ತದ ಚೆಕ್ ನೀಡಿದರು.

ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಸ್ತಿದಾರರ ಪಟ್ಟಿ ಮಾಡಿ ಅವರಿಗೆ ನೋಟಿಸ್ ನೀಡಬೇಕು. ಪಾವತಿ ಮಾಡದಿದ್ದಲ್ಲಿ ಕಟ್ಟಡಗಳಿಗೆ ಬೀಗ ಹಾಕಬೇಕು ಎಂದು ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪಾದಚಾರಿ ಮಾರ್ಗ ತೆರವು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಉತ್ತರಹಳ್ಳಿಯ ಅನಘ ಗ್ರ್ಯಾಂಡ್ ಹೋಟೆಲ್‌ನಿಂದ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದ ರಸ್ತೆವರೆಗೆ ಮತ್ತು ಕೋರಮಂಗಲದ ಫೋರಂ ಮಾಲ್‌ನಿಂದ ವಾಟರ್ ಟ್ಯಾಂಕ್ ವರೆಗೆ ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಶುಕ್ರವಾರ ತೆರವುಗೊಳಿಸಲಾಯಿತು.

'ಶುದ್ಧ ಕುಡಿಯುವ ನೀರು ಪೂರೈಸಿ'



ದಾಬಸ್ ಪೇಟೆ: ಶುದ್ಧ ಕುಡಿಯುವ ನೀರು ಪೂರೈಕೆ ಹಾಗೂ ಕೃಷಿಗೆ ನೀರು ಒದಗಿಸುವುದು ಸರ್ಕಾರದ ಕರ್ತವ್ಯ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲ್ ಗೌಡ ಅಭಿಪ್ರಾಯ ಪಟ್ಟರು.

ಕೊಳಚೆ ನೀರು ತಡೆಯುವ ಜಾಗೃತಿ ಸಮಿತಿ ಹಾಗೂ ಶಾಶ್ವತ ನೀರಾವರಿ ಹೋರಾಟ ಸಮಿತಿ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಬಿದಲೂರು ಕೆರೆ ಆವರಣದಲ್ಲಿ ಏರ್ಪಡಿಸಿದ್ದ ಜಲಾಗ್ರಹ ಜನಜಾಗೃತಿ ಸಮಾವೇಶದಲ್ಲಿ ಮಾತನಾಡಿದರು.

'ನೆಲಮಂಗಲದ 69 ಕೆರೆಗಳಿಗೆ ಬೆಂಗಳೂರಿನ ಕೊಳಚೆ ತುಂಬಿದ ವೃಷಭಾವತಿ ನದಿ ನೀರು ಬಾರದಂತೆ ತಡೆಯಬೇಕು. ಜನಪರ ಇಲ್ಲದ ಸರ್ಕಾರಗಳು ಉರುಳಿ ಹೋಗುತ್ತವೆ' ಎಂದರು.

ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ ಮಾತನಾಡಿ, ಬೆಂಗಳೂರಿನ ಎರಡು ಹಂತದ ಶುದ್ಧೀಕರಣದ ನೀರು ಅನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗೆ ಬಿಟ್ಟಿದ್ದು ಬೆಳೆ ಬೆಳೆಯಲು ಸಾಧ್ಯವಿಲ್ಲ. ಕೊಳವೆಬಾವಿ ನೀರು ವಿಷಯುಕ್ತವಾಗಿದೆ. ಅಂತಹ ಸ್ಥಿತಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಜನರಿಗೆ ಬೇಡ' ಎಂದರು.

ಶಾಶ್ವತ ಹೋರಾಟ ಸಮಿತಿ ಮುಖಂಡರಾದ ಪುಷ್ಪಾ ಶ್ರೀನಿವಾಸ್, ನಟ ವಿನೋದ್ ರಾಜ್, ದಲಿತ ಮುಖಂಡ ಬಿ.ಆರ್. ಭಾಸ್ಕರ್ ಪ್ರಸಾದ್, ಕನ್ನಡ ಹೋರಾಟಗಾರ ಕುಮಾರ್ ಮಾತನಾಡಿದರು.

ಮಾಜಿ ಶಾಸಕರಾದ ಡಾ. ಶ್ರೀನಿವಾಸ ಮೂರ್ತಿ, ಎಂ.ನಾಗರಾಜು, ವಿಧಾನ ಪರಿಷತ್ ಮಾಜಿ ಸದಸ್ಯ ಇ.ಕೃಷ್ಣಪ್ಪ, ಬಮೂಲ್ ನಿರ್ದೇಶಕ ಭೈರೇಗೌಡ, ಶಾಶ್ವತ ನೀರಾವರಿ ಹೋರಾಟ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ಅಂದಾನಪ್ಪ ಇದ್ದರು.



ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿಗಳಾದ ಗೋಪಾಲಕೃಷ್ಣ ಪೈ, ಎಂ. ವೆಂಕಟೇಶ ಶೇಷಾದ್ರಿ, ಬಿ.ಎನ್. ರಮೇಶ್ ಕುಮಾರ್, ಕೆ.ಎಸ್. ರವೀಂದ್ರನಾಥ್ ಮತ್ತು ಕೆ.ಜಿ. ಸಂಪತ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು

ಟೈಕೋ ಎಲೆಕ್ಟ್ರಾನಿಕ್ಸ್ ಎಂಪ್ಲಾಯೀಸ್ ಯೂನಿಯನ್ ಆರೋಪ
'ವೇತನ ಕೊಡದೆ, ಕೆಲಸ ನೀಡದೆ ವಂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುರಾಷ್ಟ್ರೀಯ ಕಂಪನಿ ಟಿ.ಇ. ಕನೆಕ್ಟಿವಿಟಿ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ಕೆಲಸವೂ ನೀಡದೇ ವೇತನವನ್ನೂ ನೀಡದೇ 262 ಕಾರ್ಮಿಕರನ್ನು ಬೀದಿಗೆ ತಳ್ಳಲಾಗಿದೆ. ಇವರಿಗೆ ಕೂಡಲೇ ಕೆಲಸ ಕೊಡಬೇಕು ಎಂದು ಟೈಕೋ ಎಲೆಕ್ಟ್ರಾನಿಕ್ಸ್ ಎಂಪ್ಲಾಯೀಸ್ ಯೂನಿಯನ್ ಆಗ್ರಹಿಸಿದೆ.

ಯೂನಿಯನ್ ಅಧ್ಯಕ್ಷ ನಾಗೇಶ್, ಪ್ರಧಾನ ಕಾರ್ಯದರ್ಶಿ ರಂಗನಾಥ ಬಿ. ಮತ್ತು ಕಾನೂನು ಸಲಹೆಗಾರ ಕೆ.ಎ.ಗಂಗಣ್ಣ ಈ ಬಗ್ಗೆ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿ, 'ಈ ಕಂಪನಿಯಲ್ಲಿ 2011ರಲ್ಲಿ 607 ಜನ ಕಾಯಂ ಕಾರ್ಮಿಕರಿದ್ದು, 1,500ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರು, ಅಷ್ಟೇ ಪ್ರಮಾಣದಲ್ಲಿ ಮೇಲ್ವಿಚಾರಕರು, ಎಂಜಿನಿಯರ್ ಹಾಗೂ ಮೇಲ್ಪಟ್ಟ ಅಧಿಕಾರಿಗಳು ಕೆಲಸ ಮಾಡುತ್ತಿದ್ದರು. ಕಂಪನಿ ನೂರಾರು ಕೋಟಿ ರೂಪಾಯಿ ವಹಿವಾಟು ನಡೆಸುತ್ತಿತ್ತು. ಲಾಭದಾಯಕವಾಗಿರುವಾಗಲೇ ಕಾಯಂ ಕಾರ್ಮಿಕರನ್ನು ಮನೆಗೆ ಕಳುಹಿಸಲು ಆಡಳಿತ ಮಂಡಳಿ ಆರಂಭಿಸಿತು' ಎಂದು ಆರೋಪಿಸಿದರು.

'ಸ್ವಯಂ ನಿವೃತ್ತಿ ಯೋಜನೆಯಡಿ ಮೂರು ಹಂತದಲ್ಲಿ ಕಾರ್ಮಿಕರು ಕೆಲಸ ಕಳೆದುಕೊಂಡರು. ಸ್ವಯಂ ನಿವೃತ್ತಿ ಪಡೆಯಲು ಒಪ್ಪದ 262 ಕಾರ್ಮಿಕರಿಗೆ ಕೆಲಸ ನೀಡದೇ ಮನೆಯಲ್ಲೇ ಇರಿ ವೇತನ ನೀಡುತ್ತೇವೆ ಎಂದು ಕಂಪನಿಯ ಒಳಗೆ ಪ್ರವೇಶ ನಿರಾಕರಿಸಿತು. 2024ರಲ್ಲಿ ಇಲ್ಲಿನ ಕಂಪನಿ ಮುಚ್ಚಿ, ಧಾರವಾಡದಲ್ಲಿ ಆರಂಭಿಸಲಾಗಿದೆ ಎಂದು ಸುಳ್ಳು ಹೇಳಿ ಅಲ್ಲಿಗೆ ಎಲ್ಲರನ್ನೂ ಕಳುಹಿಸಿತು. ಧಾರವಾಡದಲ್ಲಿ ತರಬೇತಿಯ ಹೆಸರಲ್ಲಿ ಸಿನಿಮಾ ತೋರಿಸಿದರೇ ವಿನಃ ಕಂಪನಿಯನ್ನು ತೋರಿಸಲಿಲ್ಲ. ಮತ್ತೆ ಮನೆಯಲ್ಲೇ ಕೂರಿಸಿತು. 2025ರ ಮೇಯಿಂದ ವೇತನ ನೀಡಿಲ್ಲ' ಎಂದು ದೂರಿದರು.

ಈಗಾಗಲೇ ಈ ಬಗ್ಗೆ ಕಾರ್ಮಿಕರ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಕಾರ್ಮಿಕರಿಗೆ ಬಾಕಿ ವೇತನ ನೀಡಬೇಕು. ಕೆಲಸ ಕೊಡಬೇಕು ಎಂದು ಒತ್ತಾಯಿಸಿದರು.

ಕೆನರಾ ಬ್ಯಾಂಕ್‌ನಿಂದ ಸಂಭ್ರಮದ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ತನ್ನ ಪ್ರಧಾನ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಸಾಧಕರಿಗೆ ಸನ್ಮಾನ ಮಾಡಲಾಯಿತು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಂಗೀತ ನಿರ್ದೇಶಕ ಹಂಸಲೇಖ, 'ಕೆನರಾ ಬ್ಯಾಂಕ್ ಕರ್ನಾಟಕದ ಹೃದಯಕ್ಕೆ ಹತ್ತಿರವಾದ ಬ್ಯಾಂಕ್ ಆಗಿದ್ದು, ಲಕ್ಷಾಂತರ ಜನರ ಬದುಕಿನ ಜೀವನಾಡಿಯಾಗಿದೆ. 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ಮೂಲಕ ಈ ಬ್ಯಾಂಕ್ ಸಂಗೀತ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದೆ' ಎಂದು ಅಭಿಪ್ರಾಯಪಟ್ಟರು.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ. ಸತ್ಯನಾರಾಯಣ ರಾಜು ಅವರು ಮಾತನಾಡಿ, 'ಕನ್ನಡ ಭಾಷೆ ನಮ್ಮೆಲ್ಲರ ಹೆಮ್ಮೆಯಾಗಿದೆ' ಎಂದು ಹೇಳಿದರು.

ನಿವೃತ್ತಿಯ ನಂತರವೂ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ತಮ್ಮನ್ನು ಅರ್ಪಿಸಿಕೊಂಡಿರುವ ಕೆನರಾ ಬ್ಯಾಂಕ್‌ನ ನಿವೃತ್ತ ಅಧಿಕಾರಿಗಳಾದ ಗೋಪಾಲಕೃಷ್ಣ ಪೈ, ಎಂ. ವೆಂಕಟೇಶ ಶೇಷಾದ್ರಿ, ಬಿ.ಎನ್. ರಮೇಶ್ ಕುಮಾರ್, ಕೆ.ಎಸ್. ರವೀಂದ್ರನಾಥ್ ಮತ್ತು ಕೆ.ಜಿ. ಸಂಪತ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರಾದ ಹರ್ದೀಪ್ ಸಿಂಗ್ ಅಹ್ಲುವಾಲಿಯಾ, ಸುನಿಲ್ ಕುಮಾರ್ ಚುಘ್, ಮುಖ್ಯ ಜಾಗೃತ ಅಧಿಕಾರಿ ನವೀನ್ ಕುಮಾರ್ ದಾಸ್ ಮತ್ತು ಹಿರಿಯ ಅಧಿಕಾರಿಗಳಾದ ರಾಮ ನಾಯ್ಕ್, ಆರ್. ರಾಜೇಶ್ ಮತ್ತು ಮೋಹನ್ ಕುಮಾರ್ ಉಪಸ್ಥಿತರಿದ್ದರು.


ರೇವಾ: 4679 ಮಂದಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಹತ್ತನೇ ವಾರ್ಷಿಕ ಪದವಿ ಪ್ರದಾನ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಒಟ್ಟು 4679 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಈ ಪೈಕಿ 3409 ಪದವಿ, 1194 ಸ್ನಾತಕೋತ್ತರ ಪದವಿ ಹಾಗೂ 77 ಪಿಎಚ್.ಡಿ ಪದವಿಗಳನ್ನು ಪ್ರದಾನ ಮಾಡಲಾಯಿತು. ಇದರ ಜೊತೆಗೆ 70 ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡಿ ಗೌರವಿಸಲಾಯಿತು.

ಈ ವೇಳೆ ಮಾತನಾಡಿದ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್, 'ವಿದ್ಯಾರ್ಥಿಗಳು ಪ್ರಶ್ನೆ ಕೇಳಿಕೊಳ್ಳುವ ಉತ್ಸಾಹ ಹಾಗೂ ಚೈತನ್ಯ ಉಳಿಸಿಕೊಳ್ಳಬೇಕು. ಮುಂದೇನು? ಬೇರೆ ಏನು ಬಾಕಿ ಇದೆ? ಹಾಗೂ ಹೆಚ್ಚು ಏನು ಬೇಕಿದೆ? ಈ ಮೂರು ಪ್ರಶ್ನೆಗಳನ್ನು ಕೇಳಿಕೊಳ್ಳುವುದರಿಂದ ಕುತೂಹಲ, ನಿರಂತರ ಸುಧಾರಣೆ ನಿಮ್ಮಲ್ಲಿ ರೂಢಿಸುತ್ತದೆ ಎಂದರು.



ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ವಿವಿಧ ವಿಷಯಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಠಿಣ ಪರಿಶ್ರಮ, ಪ್ರಾಮಾಣಿಕತೆ ಹಾಗೂ ಮಾನವೀಯ ಗುಣಗಳು ಬಹಳ ಮುಖ್ಯ. ಈ ಮೌಲ್ಯಗಳು ಉದ್ದೇಶ ಹಾಗೂ ದೈವತ್ವದ ಮಾರ್ಗದರ್ಶನ ಪಡೆದುಕೊಂಡಲ್ಲಿ ನೈತಿಕವಾಗಿ ಗಟ್ಟಿಯಾಗಿ ನಿಲ್ಲುವಂತೆ ವ್ಯಕ್ತಿಗಳನ್ನು ಸಬಲಗೊಳಿಸುತ್ತವೆ ಎಂದು ತಿಳಿಸಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, 'ಶಿಕ್ಷಣವೆಂದರೆ ಕೇವಲ ಪದವಿ ಪಡೆಯುವುದು ಮಾತ್ರವಲ್ಲದೆ ಬದುಕಿಗಾಗಿ ಪಾಠ ಕಲಿಯುವುದಾಗಿದೆ. ಇದರ ಜೊತೆಗೆ ನಾವೀನ್ಯಕಾರರು, ಉದ್ಯಮಿಗಳು ಹಾಗೂ ಭವಿಷ್ಯವನ್ನು ರೂಪಿಸುವ ಸಾಮರ್ಥ್ಯವಿರುವ ವೃತ್ತಿಪರರನ್ನು ಪೋಷಿಸುವುದಕ್ಕೆ ಸಂಸ್ಥೆ ಸದಾ ಬದ್ಧವಾಗಿದೆ' ಎಂದರು.

ಕುಲಪತಿ ಡಾ ಸಂಜಯ್ ಆರ್.ಚಿಟ್ನಿಸ್, ಸಹ ಕುಲಪತಿ ಉಮೇಶ್ ಎಸ್.ರಾಜು, ಕುಲಸಚಿವ ಡಾ.ಎಂ.ಧನಂಜಯ, ಕುಲಸಚಿವೆ (ಮೌಲ್ಯಮಾಪನ) ಡಾ. ಬೀನಾ. ಜಿ ಉಪಸ್ಥಿತರಿದ್ದರು.

ಬ್ಯಾಟರಾಯನಪುರ: ಬಿಜೆಪಿಗೆ ಸೇರ್ಪಡೆ

ಬೆಂಗಳೂರು: 'ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಪ್ರತಿ ಬೂತ್‌ನಲ್ಲಿ ಬಿಜೆಪಿ ಬಲವರ್ಧನೆ ಮಾಡಿ 14 ವಾರ್ಡ್ ಗೆಲ್ಲುವ ನಮ್ಮ ಸಂಕಲ್ಪವನ್ನು ಸಾಕಾರಗೊಳಿಸಲು ಮುಖಂಡರು, ಕಾರ್ಯಕರ್ತರು ಶ್ರಮಿಸಬೇಕು' ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಎಚ್.ಸಿ. ತಮ್ಮೇಶ್‌ಗೌಡ ಹೇಳಿದರು.

ಕೆಂಪಾಪುರ ವಾರ್ಡ್ ವ್ಯಾಪ್ತಿಯ ದಾಸರಹಳ್ಳಿಯಲ್ಲಿ ಶುಕ್ರವಾರ ಆಯೋಜಿಸಿದ್ದ ಪಕ್ಷದ ಪ್ರಮುಖರ ಸಭೆ ಮತ್ತು ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಪ್ರತಿ ಬೂತ್ ಗೆದ್ದರೆ ಇಡೀ ದೇಶವನ್ನೇ ಗೆಲ್ಲಬಹುದು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ನುಡಿಯನ್ನು ಕಾರ್ಯಕರ್ತರು, ಮುಖಂಡರು ಪಾಲಿಸಿದರೆ ಕ್ಷೇತ್ರದ ಎಲ್ಲಾ ವಾರ್ಡ್‌ಗಳಲ್ಲಿ ಬಿಜೆಪಿ ಸುಲಭವಾಗಿ ಗೆಲ್ಲಬಹುದು' ಎಂದರು.

'ರಾಜ್ಯ ಸರ್ಕಾರದ ಜನವಿರೋಧಿ ಆಡಳಿತ, ಅಭಿವೃದ್ಧಿ ಶೂನ್ಯ ಕಾರ್ಯವೈಖರಿಗೆ ಜನತೆ ಬೇಸತ್ತಿದ್ದಾರೆ. ರಸ್ತೆ ಗುಂಡಿ ಮುಚ್ಚಲಾಗದ ಸರ್ಕಾರದಿಂದ ಅಭಿವೃದ್ಧಿ ನಿರೀಕ್ಷಿಸಲಾಗದು. ಸರ್ಕಾರದ ವೈಫಲ್ಯಗಳನ್ನು ಮತದಾರರಿಗೆ ತಿಳಿಸಿ' ಎಂದು ಹೇಳಿದರು.

ವಾರ್ಡ್‌ನ ಜೆಡಿಎಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿದ್ದ ವಿಲ್ಸನ್ ರೆಡ್ಡಿ, ಮೈಕಲ್, ಪರಮೇಶ್ವರಪ್ಪ, ಬಾಹೇಂದ್ರ, ಇಸ್ಮಾಯಿಲ್ ಹಾಗೂ ಬೆಂಬಲಿಗರು ತಮ್ಮೇಶ್‌ಗೌಡರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಬ್ಯಾಟರಾಯನಪುರ ನಗರ ಮಂಡಲ ಬಿಜೆಪಿ ಅಧ್ಯಕ್ಷ ಕೃಷ್ಣಮೂರ್ತಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಹನುಮಂತಗೌಡ, ನಗರ ಮಂಡಲ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಲೋಹಿತ್ ಗೌಡ, ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಅಜಿತ್ ಸುತಾರ್, ಪ್ರಧಾನ ಕಾರ್ಯದರ್ಶಿ ಲುಕಾಸ್, ಬ್ಯಾಟರಾಯನಪುರ ವಿ.ಎಸ್.ಎಸ್.ಎನ್. ಅಧ್ಯಕ್ಷ ಸುರೇಶ್, ಮುಖಂಡರಾದ ಮುನಿಸ್ವಾಮಿಗೌಡ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಹೂಗಳ ಹಬ್ಬ: ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಪುಷ್ಪ ಪ್ರದರ್ಶನ, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 6ರಿಂದ ಸಂಜೆ 7

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಅಸೆಂಟ್ ಕನ್ನಡ ಕಲರವ: ಯುವಕವಿ ಗೋಷ್ಠಿ, ಅಧ್ಯಕ್ಷತೆ: ಲತಾ ಕುಂದರಗಿ, ರಾಜೇಂದ್ರ ಕೊಣ್ಣೂರ, ಅತಿಥಿಗಳು: ಕೃಷ್ಣಮೂರ್ತಿ ಎನ್.ಡಿ., ಟಿ.ಎಸ್. ಶೇಖರ್, ಪ್ರಸನ್ನ ಕುಮಾರ್, ಆಯೋಜನೆ ಹಾಗೂ ಸ್ಥಳ: ಅಸೆಂಟ್ ಪದವಿಪೂರ್ವ ಕಾಲೇಜು, ಹೆಸರುಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 9

'ತಂತ್ರಜ್ಞಾನದ ಮೂಲಕ ಕಾನೂನಿನ ನಿಯಮಗಳನ್ನು ಸುಧಾರಿಸುವುದು: ಸವಾಲು ಮತ್ತು ಅವಕಾಶಗಳು' ವಿಷಯದ ಬಗ್ಗೆ ಪ್ರಾದೇಶಿಕ ಸಮ್ಮೇಳನ: ಉದ್ಘಾಟನೆ: ಅಲೋಕ್ ಅರಾಧೆ, ಉಪಸ್ಥಿತಿ: ವಿಭು ಬಕ್ರು, ಅನಿರುದ್ಧ ಬೋಸ್, ಆಯೋಜನೆ: ಕರ್ನಾಟಕ ಹೈಕೋರ್ಟ್, ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಬೆಳಿಗ್ಗೆ 9


ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಬಿ.ಎ. ಬಸವರಾಜು, ಭಾಷಣ: ಹಿ.ಚಿ. ಬೋರಲಿಂಗಯ್ಯ, ಅತಿಥಿಗಳು: ರಾಮಕೃಷ್ಣ ರೆಡ್ಡಿ, ಬಿ.ಎಸ್. ರಾಜೀವ್, ಸುರೇಶ್ ಎಸ್. ಹೊಸಮನಿ, ಟಿ. ಯಲ್ಲಪ್ಪ, ಅಧ್ಯಕ್ಷತೆ: ನಳಿನಿ ಆರ್., ಆಯೋಜನೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನ್ನಡ ಸಾಹಿತ್ಯ ಪರಿಷತ್ತಿನ ಕೃಷ್ಣರಾಜಪುರ ವಿಧಾನಸಭಾಕ್ಷೇತ್ರ ಘಟಕ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೃಷ್ಣರಾಜಪುರ, ಬೆಳಿಗ್ಗೆ 9.30

ವಂದೇಮಾತರಂ ಜನ್ಮೋತ್ಸವ ಮತ್ತು ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ರುದ್ರಪ್ಪ ಲಮಾಣಿ, ಉದ್ಘಾಟನೆ: ಶಿವರಾಜ ತಂಗಡಗಿ, ಪುಷ್ಪ ನಮನ: ಉಮೇಶ್ ಜಾಧವ್, ಬಿ.ಟಿ. ಲಲಿತಾ ನಾಯಕ್, ಆಯೋಜನೆ: ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಸ್ಥಳ: ಬಂಜಾರ ಭವನ, ವಸಂತನಗರ, ಬೆಳಿಗ್ಗೆ 9.30


ಡಾ.ಎಚ್.ಕೆ. ರಂಗನಾಥ್ ಸ್ಮಾರಕ ಹಾಸ್ಯ ಪ್ರಶಸ್ತಿ ಪ್ರದಾನ: ಕೆ.ಜಿ. ರಾಘವನ್, ಎಂ.ವಿ. ಸತ್ಯನಾರಾಯಣ, ಅತಿಥಿಗಳು: ಶಿವಕುಮಾರ್, ಕೃಷ್ಣೇಗೌಡ, ಬೇಲೂರು ರಾಮಮೂರ್ತಿ, ಉಲ್ಲಾಸ್ ರಾಯಸಂ, ಆಯೋಜನೆ: ಭಾರತೀಯ ವಿದ್ಯಾಭವನ, ವಿದ್ಯಾರಣ್ಯ ಪ್ರತಿಷ್ಠಾನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ ಆಚರಣೆ: ಬೆಳಿಗ್ಗೆ 10.30ಕ್ಕೆ ಧ್ವಜಾರೋಹಣ: ಕೆ. ಕುಮಾರ್, ಮಳಿಗೆ ಉದ್ಘಾಟನೆ: ಗಿರಿರಾಜ ಎಸ್., ಬಹುಮಾನ ವಿತರಣೆ: ತ್ರಿಭುವನ್ ನಾರಾಯಣ ಸಿಂಗ್, ಮಧ್ಯಾಹ್ನ 1.30ಕ್ಕೆ ವೇದಿಕೆ ಕಾರ್ಯಕ್ರಮ, ಉದ್ಘಾಟನೆ: ಮನೋಜ್ ಜೈನ್, ಅಧ್ಯಕ್ಷತೆ: ರಜನೀಶ್ ಶರ್ಮ, ಮುಖ್ಯ ಅತಿಥಿಗಳು: ಪ್ರಹ್ಲಾದ ರಾಮರಾವ್, ಎಸ್.ಎನ್. ಸೇತುರಾಮ್, ಆಯೋಜನೆ ಹಾಗೂ ಸ್ಥಳ: ಭಾರತ್ ಎಲೆಕ್ಟ್ರಾನಿಕ್ಸ್ ಬೆಂಗಳೂರು ಘಟಕ

2025–26ನೇ ಸಾಲಿನ ಬೆಂಗಳೂರು ವಿಭಾಗ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಸೌಮ್ಯನಾಥ ಸ್ವಾಮೀಜಿ, ಅತಿಥಿಗಳು: ಎನ್. ಶಿವರಾಮ್ ರೆಡ್ಡಿ, ಅಧ್ಯಕ್ಷತೆ: ಪಾಲಾಕ್ಷ ಟಿ., ಆಯೋಜನೆ ಹಾಗೂ ಸ್ಥಳ: ಬಿಜಿಎಸ್ ಪದವಿಪೂರ್ವ ಕಾಲೇಜು, ಮಹಾಲಕ್ಷ್ಮಿಪುರ, ಬೆಳಿಗ್ಗೆ 10


ನಿರ್ಮಲಾನಂದನಾಥ ಸ್ವಾಮೀಜಿ

'ಶಿವಶ್ರೀ ಪ್ರಶಸ್ತಿ' ಪ್ರದಾನ: ಉದಯ ಲಲಿತ್, ಪ್ರಶಸ್ತಿ ಪುರಸ್ಕೃತರು: ಸಿ.ಎನ್. ಆರ್. ರಾವ್, ಅಧ್ಯಕ್ಷತೆ: ಶಿವರಾಜ ವಿ. ಪಾಟೀಲ, ಅತಿಥಿ: ಉದಯ ಹೊಳ್ಳ, ಆಯೋಜನೆ: ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಪ್ರತಿಷ್ಠಾನ, ಸ್ಥಳ: ಕಿಂಗ್ಸ್ ಕೋರ್ಟ್ ಮಿನಿ ಹಾಲ್, ಅರಮನೆ ರಸ್ತೆ, ಗೇಟ್ ಸಂಖ್ಯೆ 5, ಬೆಳಿಗ್ಗೆ 10.30


ಸಿ.ಎನ್.ಆರ್. ರಾವ್

ದತ್ತು ಪೋಷಕರ ಸಮಾವೇಶ: ಆಯೋಜನೆ: ಮಕ್ಕಳ ರಕ್ಷಣಾ ನಿರ್ದೇಶನಾಲಯ, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ವೀಣಾ ಕಾಶಪ್ಪನವರ, ಉಪಸ್ಥಿತಿ: ಶಂಕರ ಮಹದೇವ ಬಿದರಿ, ಅತಿಥಿಗಳು: ಎಸ್. ಗುರುಸ್ವಾಮಿ, ಮುಕ್ತಾಂಬ ಬಸವರಾಜ್, ಅಧ್ಯಕ್ಷತೆ: ಪ್ರೇಮಾ ಶಾಂತವೀರಯ್ಯ, ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ಹಾನಗಲ್ ಕುಮಾರಸ್ವಾಮಿ ಸಭಾಂಗಣ, ಅಖಿಲ ಭಾರತ ವೀರಶೈವ ಮಹಾಸಭಾ, ಬೆಳಿಗ್ಗೆ 10.30

'ಔಷಧ ರಹಿತ ಪ್ರಕೃತಿ ಚಿಕಿತ್ಸೆ' ಬಗ್ಗೆ ಉಪನ್ಯಾಸ: ಡಾ.ನಂ. ನಂಜೇಶ್ ಕೊಪ್ಪ, ಆಯೋಜನೆ: ನೇಚರ್ ಕ್ಯೂರ್, ಸ್ಥಳ: ರೇಜೆನ್ಸಿ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್ ಆ್ಯಂಡ್ ಕಲ್ಚರ್, ಅಗ್ರಹಾರ ದಾಸರಹಳ್ಳಿ, ಮಾಗಡಿ ಮುಖ್ಯ ರಸ್ತೆ, ಬೆಳಿಗ್ಗೆ 10.35 ಹಾಗೂ ಸಂಜೆ 6.30

5ನೇ ಕನ್ನಡ ಪುಸ್ತಕ ಹಬ್ಬ: 'ಸುಭದ್ರ ಬದುಕು– ಸದೃಢ ದೇಶಕ್ಕಾಗಿ ಪಂಚ ಪರಿವರ್ತನೆ' ವಿಷಯದ ಬಗ್ಗೆ ಉಪನ್ಯಾಸ: ಎಂ. ಜಯಪ್ರಕಾಶ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಬೆಳಿಗ್ಗೆ 11

36ನೇ ಸರ್ವ ಸದಸ್ಯೆಯರ ಸಭೆ: ಅಧ್ಯಕ್ಷತೆ: ಅಮಿತಾ ಆನಂದ್, ಆಯೋಜನೆ: ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘ, ಸ್ಥಳ: ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘದ ವಿದ್ಯಾರ್ಥಿನಿ ನಿಲಯ, ರಾಜೀವಗಾಂಧಿ ಸರ್ಕಲ್, ಶೇಷಾದ್ರಿಪುರ, ಬೆಳಿಗ್ಗೆ 11

ಅಂತರ ಘಟಕಗಳ ವಾರ್ಷಿಕ ಕ್ರೀಡಾಕೂಟ: ಅತಿಥಿ: ಮಾಲಿನಿ ಕೃಷ್ಣಮೂರ್ತಿ, ಅಧ್ಯಕ್ಷತೆ: ಪ್ರಣವ್ ಮೊಹಾಂತಿ, ಆಯೋಜನೆ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಆಂತರಿಕ ಭದ್ರತಾ ವಿಭಾಗ, ಸ್ಥಳ: ಸಶಸ್ತ್ರ ಪೊಲೀಸ್ ತರಬೇತಿ ಶಾಲೆ, ಯಲಹಂಕ, ಸಂಜೆ 4


ದೇವುಡು ಅವರ ಮಹಾಬ್ರಾಹ್ಮಣದ ಕಾವ್ಯರೂಪ 'ಮಹಾಪ್ರಯಾಣ' ಪುಸ್ತಕ ಬಿಡುಗಡೆ: ಕೊರ್ಗಿ ಶಂಕರಣನಾರಾಯಣ ಉಪಾಧ್ಯಾಯ, ಕವಿ: ಮೃತ್ಯುಂಜಯ ತೇಜಸ್ವಿ, ವಾಚನ: ಜಲಜಾ ರಾಜು, ವ್ಯಾಖ್ಯಾನ: ಭ.ರಾ. ವಿಜಯಕುಮಾರ್, ಅಧ್ಯಕ್ಷತೆ: ಕೆ.ಪಿ. ಪುತ್ತೂರಾಯ, ಆಯೋಜನೆ: ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನ, ಸ್ಥಳ: ಕುಮಾರವ್ಯಾಸ ಮಂಟಪ, ರಾಜಾಜಿನಗರ 4ನೇ ಬ್ಲಾಕ್, ಸಂಜೆ 4.30

'ಲೋಕಾಃ' ಕಥಕ್ ಪ್ರದರ್ಶನ: ಅತಿಥಿಗಳು: ನಿರ್ಮಲಾ ಸಿ. ಎಲಿಗಾರ್, ಹರ್ಷಿತ ಶ್ರೀನಿವಾಸ್, ಸಂಧ್ಯಾ ರಾಜನ್, ಪ್ರದರ್ಶನ: ವರ್ಷಾ ಪ್ರಸಾದ್, ಆಯೋಜನೆ: ಕಲಾಗ್ರಾಮ, ಸ್ಥಳ: ಮೆಡ್ಡೈ ದಿ ಸ್ಟೇಜ್, ಕೋರಮಂಗಲ, ಬೆಳಿಗ್ಗೆ 11.30

ಭಾವ ತರಂಗ: 13ನೇ ವಾರ್ಷಿಕೋತ್ಸವ ಹಾಗೂ ಕಾ.ತ. ಚಿಕ್ಕಣ್ಣ ವಿರಚಿತ ಹಾಗೂ ಎಂ. ಖಾಸೀಮ್ ಮಲ್ಲಿಗೆಮಡುವು ರಾಗಸಂಯೋಜನೆಯ ಗೀತೆಗಳ ಗಾಯನ, ಉದ್ಘಾಟನೆ: ಎಲ್.ಎ. ರವಿಸುಬ್ರಮಣ್ಯ, ಅಧ್ಯಕ್ಷತೆ: ಹಂಪ ನಾಗರಾಜಯ್ಯ, ಉಪಸ್ಥಿತಿ: ಎನ್. ನರೇಂದ್ರಬಾಬು, ಚಂದ್ರಶೇಖರ್, ರುದ್ರೇಶ್ ಅದರಂಗಿ, ಆಯೋಜನೆ: ವಿಶ್ವಮಾನವ ಸಂಗೀತ ಯಾನ, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3

ನಾಟಕಗಳ ಪ್ರದರ್ಶನ: ಸಂಜೆ 4ಕ್ಕೆ 'ಬಾಯ್ ತುಂಬ ನಕ್ಬಿಡಿ' ನಾಟಕ ಪ್ರದರ್ಶನ, ನಿರ್ದೇಶನ: ವನಿತಾ ರಂಗಾಯಣ, ಸಂಜೆ 7ಕ್ಕೆ 'ಬಾಯ್ಬಡ್ಕಿ' ನಾಟಕ ಪ್ರದರ್ಶನ, ನಿರ್ದೇಶನ: ಭೀಷ್ಮ ರಾಮಯ್ಯ, ತಂಡ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ

ಹುಲಿಕುಂಟೆ ಮೂರ್ತಿ ಅವರ 'ನುಡಿ ಕಂಡಾಯ' ಹಾಗೂ 'ಹೂ ಬಿಟ್ಟ ಕಣ್ಣು' ಪುಸ್ತಕ ಬಿಡುಗಡೆ: ಮಣಿಯಮ್ಮ, ಅಧ್ಯಕ್ಷತೆ: ಬಸವರಾಜ್ ಕೌತಾಳ್, ಅತಿಥಿಗಳು: ಎಚ್.ಎಲ್. ಪುಷ್ಪ, ಮಂಜುನಾಥ ಅದ್ದೆ, ಕೆ.ವೈ. ನಾರಾಯಣಸ್ವಾಮಿ, ಶಿವಣ್ಣ ಬಿ., ಆಯೋಜನೆ: ಕೌದಿ ಪ್ರಕಾಶನ, ತಮಟೆ ಮೀಡಿಯಾ, ಬಯಲು ಬಳಗ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 4



ಭರತನಾಟ್ಯ ರಂಗಪ್ರವೇಶ: ಯಶಸ್ವಿನಿ ಕುಮಾರ್, ಉಪಸ್ಥಿತಿ: ಡಾ.ಸಿ.ಎನ್. ಮಂಜುನಾಥ್, ಮೋಹಿನಿ ದಯಾನಂದ ಪೈ, ವೈ.ಕೆ. ಸಂಧ್ಯಾ ಶರ್ಮಾ, ಪ್ರದೀಪ್ ಕುಮಾರ್ ಪಂಜಾ, ಆಯೋಜನೆ: ನಿರ್ಮಲಾ ನೃತ್ಯನಿಕೇತನ, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5.30

ಕನ್ನಡ ಸಂಸ್ಕೃತಿ ಸಂಭ್ರಮ: ಉದ್ಘಾಟನೆ: ಕೆ.ಜೆ. ಜಾರ್ಜ್, ಅತಿಥಿಗಳು: ಪ್ರಥಮ್, ಸುಧಾ ಬರಗೂರು, ಅಪ್ಪು ರಾವ್, ಅಧ್ಯಕ್ಷತೆ: ವಿ.ಜೆ.ಕೆ. ಭಕ್ತವಚ್ಚಲಂ, ಆಯೋಜನೆ: ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟವ ಕರ್ನಾಟಕ, ಸ್ಥಳ: ರಾಷ್ಟ್ರಕವಿ ಕುವೆಂಪು ವೇದಿಕೆ, ಬೈರವೇಶ್ವರ ಬಡಾವಣೆ, ಹೆಣ್ಣೂರು ಬಂಡೆ, ಸಂಜೆ 5.30

ರಾಯಲ್ ಉತ್ಸವ: ಉದ್ಘಾಟನೆ: ಶೋಭಾ ಕರಂದ್ಲಾಜೆ, ರಾಯಲ್ ಜ್ಞಾನಶಾಂತಿ ಪ್ರಶಸ್ತಿ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ದೇವರಾಜ್ ಬಿ.ಕೆ., ಸುಜಾತ ದೇವರಾಜ್, ಲಕ್ಷ್ಮೀಶ್ ಹೆಗಡೆ, ಸಂಗೀತ ರಸಮಂಜರಿ: ಉಷಾ ಕೋಕಿಲ, ಆಯೋಜನೆ ಹಾಗೂ ಸ್ಥಳ: ರಾಯಲ್ ಕಾಲೇಜ್, ಮತ್ತಿಕೆರೆ, ಸಂಜೆ 5

'ಕುಮಾರಸಂಭವ' ಉಪನ್ಯಾಸ: ಜೆ.ಶ್ರೀನಿವಾಸಮೂರ್ತಿ, ಆಯೋಜನೆ ಹಾಗೂ ಸ್ಥಳ: ರಸಧ್ವನಿ ಕಲಾ ಕೇಂದ್ರ, ರಾಜಾಜಿನಗರ 2ನೇ ಹಂತ, ಸಂಜೆ 6

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಬಿ.ಎ. ಬಸವರಾಜ, ಎಲ್.ಎನ್. ಮುಕುಂದರಾಜ್, ಕಲ್ಕೆರೆ ಕೆ. ಕೃಷ್ಣಮೂರ್ತಿ, ಅಧ್ಯಕ್ಷತೆ: ಎಂ. ನಾರಾಯಣಸ್ವಾಮಿ, ಆಯೋಜನೆ ಹಾಗೂ ಸ್ಥಳ: ಆಶಾಕಿರಣ ಕ್ಷೇಮಾಭಿವೃದ್ಧಿ ಸಂಘ, 3ನೇ ಮುಖ್ಯರಸ್ತೆ, 10ನೇ ಅಡ್ಡ ರಸ್ತೆ, ಹೊಸಮಂಜುನಾಥ ಬಡಾವಣೆ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

16 ನೌಕರರ ವಿರುದ್ಧ ಎಫ್‌ಐಆರ್

ಸರ್ಕಾರಿ ಜಮೀನು ಕಬಳಿಕೆಗೆ ನಕಲಿ ದಾಖಲೆ: ವರದಿಗೆ ಜಿಲ್ಲಾಧಿಕಾರಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ: ನಕಲಿ ದಾಖಲೆಗಳ ಮೂಲಕ ಸರ್ಕಾರಿ ಜಮೀನು ಕಬಳಿಸಲು ಸಹಕರಿಸಿದ ಆರೋಪದ ಮೇಲೆ ಆನೇಕಲ್ ತಾಲ್ಲೂಕಿನ ಭೂ ದಾಖಲೆಗಳ ವಿಭಾಗದ 16 ಮಂದಿ ಸರ್ಕಾರಿ ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.



ಉಪ ತಹಸೀಲ್ದಾರ್ ಬಿ.ಕೆ. ಚಂದ್ರಶೇಖರ್, ಶಿರಸ್ತೇದಾರರಾದ ಮಾರುತಿಪ್ರಸಾದ್, ದಿನಕರನ್ ಜಿ, ಲೋಕೇಶ್ ಎಸ್, ಪ್ರಥಮ ದರ್ಜೆ ಸಹಾಯಕರಾದ ಮಹೇಶ್, ಮಂಗಳ, ನಾರಾಯಣ, ದ್ವಿತೀಯ ದರ್ಜೆ ಸಹಾಯಕರಾದ ಕೆ.ರಾಘವೇಂದ್ರ, ಮಂಜುನಾಥ್ ಎಂ.ವಿ, ಡಿ ದರ್ಜೆ ನೌಕರರಾದ ಕಲ್ಪನಾ ಪಿ, ಮಂಜುನಾಥ್, ಶೋಭಾ ಎನ್, ಪ್ರವೀಣ್, ಮುನಿರಾಜು, ಮಂಜುಳಮ್ಮ ಮತ್ತು ಮೀನಾಕ್ಷಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮೂಲ ಮಂಜೂರಾತಿ ಕಡತ, ದರಖಾಸ್ತು ವಹಿ, ಸಾಗುವಳಿ ಚೀಟಿ, ಮಂಜೂರು ನಡಾವಳಿ ವಹಿ, ಇನಾಂ ಡಿಸಿ ಆದೇಶದ ಕಡತ, ಭೂ ಸುಧಾರಣೆ ಮೂಲ ಕಡತ ದಾಖಲೆಗಳೊಂದಿಗೆ ನಕಲಿ ದಾಖಲೆ ಸೇರಿಸಿ ಸರ್ಕಾರಿ ಜಮೀನನ್ನು ಕಬಳಿಸಲು ಸಹಕಾರ ನೀಡಿರುವುದು ಭೂಸುರಕ್ಷಾ ಯೋಜನೆಯಡಿಯಲ್ಲಿ ದಾಖಲೆಗಳನ್ನು ಸ್ಕ್ಯಾನ್ ಮಾಡುವ ವೇಳೆ ಕಂಡುಬಂದಿದೆ ಎಂದು ಆನೇಕಲ್ ತಹಸೀಲ್ದಾರ್ ವರದಿ ನೀಡಿದ್ದರು.



> ದಾಖಲೆ ಸೃಷ್ಟಿಸುವಲ್ಲಿ ಸಹಕರಿಸಿದ ಖಾಸಗಿ ವ್ಯಕ್ತಿಗಳು, ವ್ಯವಸ್ಥಿತ ಗುಂಪುಗಳ ಮೇಲೆಯೂ ವಿಚಾರಣೆ ನಡೆಸಿ ತಪ್ಪಿದ್ದರೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ತಹಸೀಲ್ದಾರ್‌ಗೆ ಸೂಚಿಸಲಾಗಿದೆ
>
> **ಜಿ.ಜಗದೀಶ,** ಜಿಲ್ಲಾಧಿಕಾರಿ, ಬೆಂಗಳೂರು ನಗರ

‘ಈ ಕುರಿತು ಮರು ಪರಿಶೀಲಿಸಿದಾಗ ನಕಲಿ ದಾಖಲೆಗಳೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, 5 ವರ್ಷದಿಂದ ಅಭಿಲೇಖಾಲಯದಲ್ಲಿ ಕೆಲಸ ಮಾಡಿದ 16 ಸರ್ಕಾರಿ ನೌಕರರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಪ್ರಕರಣ ದಾಖಲಿಸಲಾಗಿದೆ’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ತಿಳಿಸಿದ್ದಾರೆ.

‘ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಜಮೀನುಗಳ ಕುರಿತು ಯಾವುದೇ ಆದೇಶ, ಇಲ್ಲವೇ ಖಾತೆ ಮಾಡುವ ಸಮಯದಲ್ಲಿ ತಮ್ಮ ಅನುಮತಿ ಪಡೆದುಕೊಳ್ಳಬೇಕು. ಆನೇಕಲ್ ತಾಲ್ಲೂಕಿನ ಸರ್ಕಾರಿ ಜಮೀನುಗಳ ಖಾತೆ ಬದಲಾವಣೆ ಆಗಿರುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ಸೂಚಿಸಲಾಗಿದೆ’ ಎಂದು ಜಗದೀಶ್ ತಿಳಿಸಿದ್ದಾರೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪರಿಶೀಲನೆ

19 ಮೊಬೈಲ್, 16 ಸಿಮ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಬಂದಿಗಳಿರುವ ವಿವಿಧ ಬ್ಯಾರಕ್‌ಗಳಲ್ಲಿ ಜೈಲಿನ ಸಿಬ್ಬಂದಿ ದಿಢೀರ್ ದಾಳಿ ನಡೆಸಿ ಪರಿಶೀಲಿಸಿದಾಗ ಮತ್ತಷ್ಟು ಮೊಬೈಲ್ ಹಾಗೂ ಸಿಮ್ ಕಾರ್ಡ್‌ಗಳು ಪತ್ತೆಯಾಗಿವೆ.

ಪರಿಶೀಲನೆಯ ವೇಳೆ 19 ಮೊಬೈಲ್ ಫೋನ್‌ಗಳು, 16 ಸಿಮ್ ಕಾರ್ಡ್‌ಗಳು, 4 ಚಾರ್ಜರ್ ವೈರ್‌ಗಳು, ಮೂರು ಇಯರ್ ಬಡ್ಸ್‌ಗಳು ಹಾಗೂ ₹15,800 ನಗದು ಪತ್ತೆಯಾಗಿದ್ದು ಜಪ್ತಿ ಮಾಡಲಾಗಿದೆ ಎಂದು ಜೈಲಿನ ಮೂಲಗಳು ಹೇಳಿವೆ. ಬುಧವಾರ ರಾತ್ರಿ ಹಾಗೂ ಗುರುವಾರ ಮುಂಜಾನೆ ಪರಿಶೀಲನೆ ನಡೆಸಲಾಗಿದೆ.



ಜೈಲಿನ ಸಹಾಯಕ ಸೂಪರಿಂಟೆಂಡೆಂಟ್ ಶಿವಾನಂದ ಶಿವಾಪುರ ಹಾಗೂ ಜೈಲರ್ ಎಚ್.ಎನ್. ಅಭಿಷೇಕ್ ನೇತೃತ್ವದ ತಂಡವು ವಿವಿಧ ಬ್ಯಾರಕ್‌ಗಳ ಮೇಲೆ ದಿಢೀರ್ ದಾಳಿ ನಡೆಸಿ, ಪರಿಶೀಲನೆ ನಡೆಸಿತು.

ಜೈಲಿನಲ್ಲಿ ಅಕ್ರಮ ತಡೆಗಟ್ಟಲು ಹಾಗೂ ಸುಧಾರಣೆ ತರಲು ಮೊದಲ ಬಾರಿಗೆ ರಾಜ್ಯ ಸರ್ಕಾರ ಐಪಿಎಸ್ ಅಧಿಕಾರಿ ಅಂಶು ಕುಮಾರ್ ಅವರನ್ನು ನಿಯೋಜಿಸಿದೆ. ಅವರ ಮಾರ್ಗದರ್ಶನದಲ್ಲಿ ಜೈಲಿನ ಅಧಿಕಾರಿಗಳು ದಾಳಿ ನಡೆಸಿ ತಪಾಸಣೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಸಜಾಬಂದಿಗಳಾದ ಸಾಗರ್ ಅಲಿಯಾಸ್ ರಕೀಬುಲ್ಲಾ ಮುನಿರಾಜು ಸೇರಿ ಇತರೆ ಬಂದಿಗಳ ವಿರುದ್ಧ ಕರ್ನಾಟಕ ಕಾರಾಗೃಹ (ತಿದ್ದುಪಡಿ) ಅಧಿನಿಯಮದ ಕಲಂ 22 ಹಾಗೂ ಇತರೆ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಎರಡು ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಷೇಧಿತ ವಸ್ತುಗಳನ್ನು ಸಾಗಿಸಿದವರು, ಕೃತ್ಯಕ್ಕೆ ಸಹಕಾರ ನೀಡಿದವರು ಹಾಗೂ ನಿಷೇಧಿತ ವಸ್ತುಗಳನ್ನು ಕಾರಾಗೃಹದಲ್ಲಿ ಉಪಯೋಗಿಸಿದವರ ವಿರುದ್ಧ ಕಾರಾಗೃಹ (ತಿದ್ದುಪಡಿ) ಅಧಿನಿಯಮ–2022ರ ಕಲಂ 42ರ ಅನ್ವಯ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಲು ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಲಾಗಿದೆ. ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ತಲೆದಿಂಬು, ಗೋಡೆ ಒಳಗೆ ಮೊಬೈಲ್

ಸಜಾಬಂದಿ ಸಾಗರ್ ಬಳಸುತ್ತಿದ್ದ ಹಾಸಿಗೆಯಲ್ಲಿ ಒನ್ ಪ್ಲಸ್ ಕಂಪನಿಯ ಒಂದು ಮೊಬೈಲ್ ಹಾಗೂ ಸಿಮ್ ಕಾರ್ಡ್ ಹಾಗೂ ಮತ್ತೊಬ್ಬ ಸಜಾಬಂದಿ ಮುನಿರಾಜು ಬಳಸುತ್ತಿದ್ದ ದಿಂಬಿನಲ್ಲಿ ರೆಡ್ ಮಿ ಕಂಪನಿಯ ಒಂದು ಮೊಬೈಲ್, ಸಿಮ್ ಕಾರ್ಡ್ ದೊರೆತಿದೆ. 5ನೇ ಬ್ಯಾರಕ್‌ನ ಶೌಚಾಲಯಕ್ಕೆ ತೆರಳುವ ಗೋಡೆಗಳ ಮೇಲೆ ಎರಡು ಚಾರ್ಜರ್ ವೈರ್ ಹಾಗೂ ಒಂದು ಇಯರ್ ಬಡ್ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಿಸಿಎಲ್ ಸೆಮಿಗೆ ಪಾಟರಿಟೌನ್ ಪ್ರೌಢಶಾಲೆ

ಬೆಂಗಳೂರು: ಪಾಟರಿಟೌನ್‌ನ ಸರ್ಕಾರಿ ಪ್ರೌಢಶಾಲಾ ತಂಡವು ಪರಿಕ್ರಮ ಚಾಂಪಿಯನ್ಸ್ ಲೀಗ್ (ಪಿಸಿಎಲ್) ಫುಟ್‌ಬಾಲ್ ಟೂರ್ನಿಯ ಎಂಟರ ಘಟ್ಟದ ಪಂದ್ಯದಲ್ಲಿ ಶುಕ್ರವಾರ 1–0ಯಿಂದ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲಾ ತಂಡವನ್ನು ಸೋಲಿಸಿ ಸೆಮಿಫೈನಲ್‌ಗೆ ಪ್ರವೇಶಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಾಟರಿಟೌನ್ ತಂಡದ ಮೊಹಮ್ಮದ್ ಆಶಿಫ್ ಅವರು 9ನೇ ನಿಮಿಷ ನಿರ್ಣಾಯಕ ಗೋಲು ಗಳಿಸಿದರು.

ಕ್ವಾರ್ಟರ್‌ಫೈನಲ್ ಸುತ್ತಿನ ಇತರ ಪಂದ್ಯಗಳಲ್ಲಿ ಭುವನೇಶ್ವರದ ಕೆಐಎಸ್‌ಎಸ್ ಶಾಲಾ ತಂಡ 3–0ಯಿಂದ ಗೋವಾದ ಲೊಯೊಲಾ ಪ್ರೌಢಶಾಲೆ ವಿರುದ್ಧ; ದೆಹಲಿ ಪಬ್ಲಿಕ್ ಶಾಲೆ (ಉತ್ತರ) 2–0ಯಿಂದ ಹೆಡ್‌ಸ್ಟಾರ್ಟ್ ಅಕಾಡೆಮಿ ವಿರುದ್ಧ; ಗ್ರೀನ್‌ವುಡ್ ಪ್ರೌಢಶಾಲಾ ತಂಡವು 2–0ಯಿಂದ ಪರಿಕ್ರಮ ತಂಡದ ವಿರುದ್ಧ ಜಯ ಸಾಧಿಸಿದವು.

‘ಈಕ್ವಾಲಿಟಿ ಪ್ಲೇಟ್’ ವಿಭಾಗದಲ್ಲಿ ಲೊಯೊಲಾ ಪ್ರೌಢಶಾಲೆ ಹಾಗೂ ಹೆಡ್‌ಸ್ಟಾರ್ಟ್ ತಂಡಗಳು ಪ್ರಶಸ್ತಿ ಸುತ್ತು ಪ್ರವೇಶಿಸಿದವು. ಸೆಮಿಫೈನಲ್ ಪಂದ್ಯಗಳಲ್ಲಿ ಲೊಯೊಲಾ ಪ್ರೌಢಶಾಲಾ ತಂಡವು 2–1ರಿಂದ ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆ ವಿರುದ್ಧ, ಹೆಡ್‌ಸ್ಟಾರ್ಟ್ ಅಕಾಡೆಮಿ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 4–1ರಿಂದ ಪರಿಕ್ರಮ ತಂಡದ ವಿರುದ್ಧ ಗೆಲುವು ಸಾಧಿಸಿದವು.

ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಕಾರಣ ಪ್ಲಾಟಿನಮ್ ಸಿಟಿ ಉಪಕೇಂದ್ರ ವ್ಯಾಪ್ತಿಯಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ರಿಲಯನ್ಸ್ ಇಂಡಸ್ಟ್ರೀಸ್, ಕರ್ಲೋನ್, ಸಿಕೆಎ, ಅಲಿಸ್ತಾ, ಜೈರ್ತ್ ಇಂಡಸ್ಟ್ರೀಸ್ ಪ್ರದೇಶ, ಟಾಟಾ ಅಕೆವಲ್, ಕರ್ಲೆ, ರಾಘವೇಂದ್ರ ಲೇಔಟ್, ಮುನೇಶ್ವರ ನಗರ, ವೈಷ್ಣವಿ ನಕ್ಷತ್ರ ಅಪಾರ್ಟ್‌ಮೆಂಟ್, ಪ್ಲಾಟಿನಂ ಸಿಟಿ ಅಪಾರ್ಟ್‌ಮೆಂಟ್, ಎನ್‌ಟಿಆರ್‌ಒ, ಜಲ ಸೌಧ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಕಲಿ ಉಂಗುರವಿಟ್ಟು ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನ ಖರೀದಿಯ ಸೋಗಿನಲ್ಲಿ ಚಿನ್ನದ ಮಳಿಗೆಗೆ ತೆರಳಿ ಮಾಲೀಕರ ಗಮನವನ್ನು ಬೇರೆಡೆಗೆ ಸೆಳೆದು ನಕಲಿ ಉಂಗುರವಿಟ್ಟು ಅಸಲಿ ಉಂಗುರ ಕಳವು ಮಾಡಿದ್ದ ಆರೋಪಿಯನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ

ಬಿ.ಜಿ.ರಾಜೇಶ್ (36) ಬಂಧಿತ ಆರೋಪಿ. ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗದ ಬೀಚನಹಳ್ಳಿಯ ನಿವಾಸಿ ರಾಜೇಶ್, ಬೆಂಗಳೂರಿನ ಬ್ಯಾಡರಹಳ್ಳಿಯ ಕೆಂಪೇಗೌಡನಗರದ ಮೂರನೇ ಕ್ರಾಸ್‌ನಲ್ಲಿ ನೆಲಸಿದ್ದ. ಗಾರ್ಮೆಂಟ್ಸ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ.

ಬಂಧಿತ ಆರೋಪಿಯಿಂದ ₹2.30 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಭುವನೇಶ್ವರಿನಗರದ ದೊಡ್ಡಬಸ್ತಿ ಮುಖ್ಯರಸ್ತೆಯ ಗಣೇಶ್ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಬಾಬು ಲಾಲ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಯಿತು ಎಂದು ಮೂಲಗಳು ಹೇಳಿವೆ.



ರಾಜೇಶ್

ಆರೋಪಿಯ ಕೃತ್ಯ ಹೇಗಿತ್ತು?: ನ.3ರಂದು ಚಿನ್ನದ ಅಂಗಡಿಗೆ ಗ್ರಾಹಕನ ಸೋಗಿನಲ್ಲಿ ಆರೋಪಿ ಬಂದಿದ್ದ. ಚಿನ್ನದ ಉಂಗುರ ತೋರಿಸಿ ಎಂದು ಕೇಳಿದ್ದ. ಬೇರೆ ಬೇರೆ ವಿನ್ಯಾಸದ ಐದು ಉಂಗುರಗಳನ್ನು ಸಿಬ್ಬಂದಿ ತೋರಿಸಿದ್ದರು. ಸಿಬ್ಬಂದಿ ಬೇರೆ ಗ್ರಾಹಕರ ಜತೆಗೆ ಮಾತನಾಡುತ್ತಿರುವಾಗ, 15 ಗ್ರಾಂ ತೂಕದ ಚಿನ್ನದ ಉಂಗುರವನ್ನು ತೆಗೆದುಕೊಂಡು ಅದೇ ಟ್ರೇನಲ್ಲಿ ನಕಲಿ ಉಂಗುರ ಇಟ್ಟು ಆರೋಪಿ ಪರಾರಿಯಾಗಿದ್ದ. ಅಂದು ಸಂಜೆ ಚಿನ್ನಾಭರಣ ಪರಿಶೀಲನೆ ವೇಳೆ ನಕಲಿ ಉಂಗುರ ಎಂಬುದು ಪತ್ತೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಈ ಹಿಂದೆಯೂ ಆರೋಪಿ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿ ಕಾರಾಗೃಹಕ್ಕೆ ಹೋಗಿದ್ದ. ಜಾಮೀನಿನ ಮೇಲೆ ಬಿಡುಗಡೆಯಾಗಿ ಮತ್ತೆ ಅದೇ ಕೃತ್ಯದಲ್ಲಿ ತೊಡಗಿದ್ದ ಎಂದು ಪೊಲೀಸರು ಹೇಳಿದರು. ಆರೋಪಿ ಬಂಧನದಿಂದ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಎರಡು ಹಾಗೂ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಒಂದು ಪ್ರಕರಣ ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

ಡಿ.1ರಂದು ಶಾಲಾ, ಕಾಲೇಜುಗಳಿಗೆ ಪೊಲೀಸರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಸುರಕ್ಷತೆ, ಡ್ರಗ್ಸ್ ನಿಯಂತ್ರಣ, ಸೈಬರ್ ಅಪರಾಧಗಳ ತಡೆ ಮತ್ತು ಸಂಚಾರ ನಿರ್ವಹಣೆ ಕುರಿತು ಅರಿವು ಮೂಡಿಸಲು ಡಿ.1ರಂದು ಶಾಲಾ–ಕಾಲೇಜುಗಳಿಗೆ ನಗರ ಪೊಲೀಸರು ಭೇಟಿ ನೀಡಲಿದ್ದಾರೆ.

ಸಾರ್ವಜನಿಕರಿಂದ ದೂರು, ಸಲಹೆ ಪಡೆದುಕೊಂಡು ಪರಿಹಾರ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ನಗರದ 750 ಪೊಲೀಸರು, ಶಾಲಾ – ಕಾಲೇಜಿಗೆ ಭೇಟಿ ನೀಡಲಿದ್ದಾರೆ. ಸುಮಾರು 2.5 ಲಕ್ಷ ವಿದ್ಯಾರ್ಥಿಗಳಿಗೆ ಈ ಕುರಿತು ಜಾಗೃತಿ ಮೂಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಬಸವನಪುರದಲ್ಲಿ ಸುಸಜ್ಜಿತ ಉದ್ಯಾನ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಸವನಪುರದಲ್ಲಿ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾದ ಉದ್ಯಾನ ನಿರ್ಮಾಣಕ್ಕೆ ಶಾಸಕ ಬೈರತಿ ಬಸವರಾಜ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಬೈರತಿ ಬಸವರಾಜ, ಬಸವನಪುರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನೇಕ ಬಡಾವಣೆಗಳಿದ್ದು, ಸರಿಯಾದ ಉದ್ಯಾನ ಇರಲಿಲ್ಲ. ನಡಿಗೆ ಪಥ, ಜಿಮ್, ಮಕ್ಕಳು ಆಟದ ಮೈದಾನ ಇನ್ನಿತರ ಸೌಲಭ್ಯ ಕಲ್ಪಿಸಲಾಗುವುದು. ತಡೆಗೋಡೆ ಸಹ ನಿರ್ಮಿಸಲಾಗುವುದು ಎಂದರು.

ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್ ಮಾತನಾಡಿ, ಉದ್ಯಾನದ ಕಾಮಗಾರಿ ಆದಷ್ಟು ಬೇಗ ಮುಗಿಸಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದರು.



ಉದ್ಯಾನ ನಿರ್ಮಾಣದ ಕಾಮಗಾರಿಗೆ ಶಾಸಕ ಬೈರತಿ ಬಸವರಾಜ ಭೂಮಿ ಪೂಜೆ ನೆರವೇರಿಸಿದರು. ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್ ಇದ್ದರು

ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್, ವಾರ್ಡ್ ಅಧ್ಯಕ್ಷ ಡಿ.ಜಿ.ಶಿವಕುಮಾರ್, ಮುಖಂಡರಾದ ದೇವೇಂದ್ರ, ಡಿ.ಎ.ಶ್ರೀನಿವಾಸ್, ಶ್ರೀರಾಮುಲು, ಮುನಿಸ್ವಾಮಿ, ಕೇಬಲ್ ರಾಜು, ರಾಮಚಂದ್ರ, ಗುತ್ತಿಗೆದಾರ ಶ್ರೀನಿವಾಸ್ ಇದ್ದರು.

ಪತ್ನಿ, ಪ್ರಿಯಕರ, ಸ್ನೇಹಿತನ ಬಂಧನ • ಮಾದನಾಯಕನಹಳ್ಳಿ ಪೊಲೀಸರ ಕಾರ್ಯಾಚರಣೆ

ಪತಿ ಕೊಂದು ಮೃತದೇಹ ಸುಟ್ಟಿದ್ದ ಪತ್ನಿ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪ್ರಿಯಕರನೊಂದಿಗೆ ಸೇರಿಕೊಂಡು ಪತಿಯನ್ನು ಕೊಲೆ ಮಾಡಿದ್ದ ಪತ್ನಿ, ಆಕೆಯ ಪ್ರಿಯಕರ ಹಾಗೂ ಕೃತ್ಯಕ್ಕೆ ಸಹಕಾರ ನೀಡಿದ್ದ ಪ್ರಿಯಕರನ ಸ್ನೇಹಿತನನ್ನು ಮಾದನಾಯಕನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಯಾದಗಿರಿಯ ಬಸವರಾಜು (28) ಕೊಲೆಯಾದವರು. ಪ್ರಕರಣದ ಸಂಬಂಧ ಬಸವರಾಜು ಅವರ ಪತ್ನಿ ಶರಣಮ್ಮ(25), ಪ್ರಿಯಕರ ವೀರಭದ್ರ (19) ಮತ್ತು ಅನಿಲ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ ಎಂಬುದು ಗೊತ್ತಾಗಿದೆ. ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಮೃತದೇಹ ಪ್ರಕರಣ ಬೆನ್ನತ್ತಿದ್ದ ಪೊಲೀಸರು ಕೊಲೆಯ ರಹಸ್ಯ ಭೇದಿಸಿದ್ದಾರೆ.

ವೀರಭದ್ರನ ಜತೆಗೆ ಶರಣಮ್ಮ ಸಲುಗೆಯಿಂದ ಇದ್ದಳು. ತಮ್ಮ ಸಂಬಂಧಕ್ಕೆ ಪತಿ ಅಡ್ಡಿ ಆಗುತ್ತಾರೆ ಎನ್ನುವ ಕಾರಣಕ್ಕೆ ಕೊಲೆ ಮಾಡಿ ಮೃತದೇಹವನ್ನು ಸುಟ್ಟುಹಾಕಿದ್ದರು ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ನಾಲ್ಕು ವರ್ಷಗಳ ಹಿಂದೆ ಮದುವೆ ಆಗಿದ್ದ ಬಸವರಾಜು– ಶರಣಮ್ಮ ದಂಪತಿ, ತಿಗಳರಪಾಳ್ಯದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ವೀರಭದ್ರ ಗಾರೆ ಕೆಲಸ ಮಾಡಿಕೊಂಡಿದ್ದ. ಈ ವೇಳೆ ವೀರಭದ್ರ ಮತ್ತು ಶರಣಮ್ಮ ನಡುವೆ ಸಲುಗೆ ಬೆಳೆದಿತ್ತು ಎಂದು ಮೂಲಗಳು ಹೇಳಿವೆ.

ನ.19ರಂದು ಮದ್ಯ ಸೇವಿಸಿ ಬಸವರಾಜು ಮಲಗಿದ್ದಾಗ ಪ್ರಿಯಕರನನ್ನು ಶರಣಮ್ಮ ಮನೆಗೆ ಕರೆಸಿಕೊಂಡಿದ್ದಳು. ವೀರಭದ್ರನ ಜತೆಗೆ ತನ್ನ ಸ್ನೇಹಿತ ಅನಿಲ್ ಸಹ ಬಂದಿದ್ದ. ಮೂವರು ಸೇರಿಕೊಂಡು ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದರು. ಬಳಿಕ, ಮೃತದೇಹವನ್ನು ಗಂಗೊಂಡಹಳ್ಳಿ ನಿರ್ಜನ ಪ್ರದೇಶಕ್ಕೆ ಆರೋಪಿಗಳು ಸಾಗಿಸಿದ್ದರು. ಅಲ್ಲಿ ಪೆಟ್ರೋಲ್ ಸುರಿದು ಸುಟ್ಟುಹಾಕಿದ್ದರು ಎಂದು ಪೊಲೀಸರು ಹೇಳಿದರು.

ಕೊಲೆ ಬಳಿಕ ನಾಟಕವಾಡಿದ್ದ ಶರಣಮ್ಮ



ಬಸವರಾಜು



ಶರಣಮ್ಮ

ಬಸವರಾಜು ಕೊಲೆಗೆ ಒಂದು ತಿಂಗಳ ಹಿಂದೆಯೇ ಸಂಚು ರೂಪಿಸಲಾಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಕೃತ್ಯದ ಬಳಿಕ ಪತಿ ಕಾಣೆಯಾಗಿರುವ ಬಗ್ಗೆ ಶರಣಮ್ಮ ಬ್ಯಾಡರಹಳ್ಳಿ ಠಾಣೆಗೆ ದೂರು ನೀಡಿದ್ದಳು. ಆದರೆ, ಪೊಲೀಸರು ಪ್ರಕರಣದ ತನಿಖೆ ಆರಂಭಿಸಿದಾಗ ಕೊಲೆಯ ರಹಸ್ಯ ಬಯಲಾಯಿತು.

ಬಿಳಿ ಬಣ್ಣದ ಕಾರ್‌ನಲ್ಲಿ ಮೃತದೇಹ ಸಾಗಿಸಿರುವ ದೃಶ್ಯ ಕೂಡ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ವ್ಯಸನಮುಕ್ತ ಕೇಂದ್ರದಲ್ಲಿ ಯುವಕ ಸಾವು

ಪೊಲೀಸರ ಮೇಲೆ ಪೋಷಕರ ಆರೋಪ, ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಡಕಮಾರನಹಳ್ಳಿಯಲ್ಲಿ ಇರುವ ವ್ಯಸನ ಮುಕ್ತ ಕೇಂದ್ರಕ್ಕೆ ದಾಖಲಾಗಿದ್ದ ಯುವಕ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಸೊಣ್ಣೇನಹಳ್ಳಿಯ ನಿವಾಸಿ ದರ್ಶನ್ (23) ಮೃತ ಯುವಕ.

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಆರಂಭವಾಗಿದೆ.

‘ಪೊಲೀಸರ ಹಲ್ಲೆಯಿಂದ ಯುವಕ ಮೃತಪಟ್ಟಿದ್ದಾನೆ’ ಎಂದು ಪೋಷಕರು ಹಾಗೂ ಕುಟುಂಬದವರು ದೂರಿದ್ದಾರೆ.


ದರ್ಶನ್

‘ದರ್ಶನ್ ಅವರ ತಾಯಿ ಆದಿಲಕ್ಷ್ಮಿ ನೀಡಿದ ದೂರಿನ ಆಧಾರದಲ್ಲಿ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಮೊದಲು ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದರು. ನಂತರ, ಮರಣೋತ್ತರ ಪರೀಕ್ಷೆ ವೇಳೆ ಮೃತದೇಹದಲ್ಲಿ ಗಾಯದ ಗುರುತುಗಳು ಇರುವುದು ಕಂಡುಬಂದಿತ್ತು’ ಎಂದು ಮೂಲಗಳು ಹೇಳಿವೆ.

‘ಕೊಲೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಫ್ಐಆರ್‌ನಲ್ಲಿ ಏನಿದೆ?: ‘ನನ್ನ ಮಗ ದರ್ಶನ್ ಅವರಿಗೆ ಪ್ರತಿನಿತ್ಯ ಮದ್ಯ ಸೇವಿಸುವ ಅಭ್ಯಾಸವಿತ್ತು. ಮದ್ಯ ಸೇವಿಸಿ ಬಂದು ರಸ್ತೆಯಲ್ಲಿ ಗಲಾಟೆ ಮಾಡುತ್ತಿದ್ದ. ಇದೇ ವಿಚಾರವಾಗಿ ವಿವೇಕನಗರ ಠಾಣೆಯ ಪೊಲೀಸರು ದರ್ಶನ್‌ನನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ನ.15ರಂದು ಠಾಣೆಗೆ ತೆರಳಿ ಮಗನನ್ನು ಮನೆಗೆ ಕಳುಹಿಸುವಂತೆ ಕೋರಿಕೊಂಡಿದ್ದೆ. ಅವನು ಎಲ್ಲರ ಬಳಿಯು ಗಲಾಟೆ ಮಾಡಿಕೊಳ್ಳುತ್ತಿದ್ದಾನೆ. ಅವನನ್ನು ಜೈಲಿಗೆ ಕಳುಹಿಸುತ್ತೇವೆ ಎಂದು ಪೊಲೀಸರು ಹೇಳಿದ್ದರು. ಮಗನಿಗೆ ಕುಡಿತದ ಚಟ ಬಿಡಿಸಲು ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸುವಂತೆ ನಾನೇ ಪೊಲೀಸರ ಬಳಿ ಮನವಿ ಮಾಡಿದ್ದೆ. ಅವರು ಕೇಂದ್ರಕ್ಕೆ ಸೇರಿಸಿದ್ದರು’ ಎಂದು ಆದಿಲಕ್ಷ್ಮಿ ನೀಡಿದ ದೂರು ಆಧರಿಸಿ ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ವ್ಯಸನ ಮುಕ್ತ ಕೇಂದ್ರಕ್ಕೆ ಪ್ರತಿನಿತ್ಯ ಕರೆ ಮಾಡಿ ವಿಚಾರಿಸಿಕೊಳ್ಳುತ್ತಿದ್ದೆ. ಮಗ ಚೆನ್ನಾಗಿದ್ದಾನೆ ಎಂದು ಅಲ್ಲಿನ ಸಿಬ್ಬಂದಿ ಹೇಳುತ್ತಿದ್ದರು. ನ.26ರ ಬೆಳಿಗ್ಗೆ 11ರ ಸುಮಾರಿಗೆ ಕೇಂದ್ರದ ಸಿಬ್ಬಂದಿ ಕರೆ ಮಾಡಿ ನಿಮ್ಮ ಮಗ ಮೃತಪಟ್ಟಿದ್ದಾನೆ ಎಂದು ತಿಳಿಸಿದ್ದರು. ಆ ಕೇಂದ್ರಕ್ಕೆ ಹೋಗುವಷ್ಟರಲ್ಲಿ ಮೃತದೇಹವನ್ನು ನೆಲಮಂಗಲ ಆಸ್ಪತ್ರೆಗೆ ರವಾನೆ ಮಾಡಲಾಗಿತ್ತು. ಈ ಸಂಬಂಧ ಯಾವುದೇ ಮಾಹಿತಿ ನೀಡಿರಲಿಲ್ಲ. ಉಸಿರಾಟದ ತೊಂದರೆ ಇತ್ತು ಎಂದು ಹೇಳುತ್ತಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಪುತ್ರನ ಸಾವಿನ ಬಗ್ಗೆ ಅನುಮಾನವಿದೆ. ಯೂನಿಟ್ ಸೋಷಿಯಲ್ ಸರ್ವಿಸ್‌ಗೆ ಸಂಬಂಧಿಸಿದ ವ್ಯಕ್ತಿಗಳನ್ನು ವಿಚಾರಣೆ ನಡೆಸಬೇಕು’ ಎಂದು ಆದಿಲಕ್ಷ್ಮಿ ಕೋರಿದ್ದಾರೆ.

ನಾಲ್ವರ ವಿರುದ್ಧ ಎಫ್ಐಆರ್: ಸಿಐಡಿಗೆ ವರ್ಗ

‘ದರ್ಶನ್ ಅವರನ್ನು ಅಕ್ರಮವಾಗಿ ಮೂರು ದಿನ ವಶದಲ್ಲಿಟ್ಟುಕೊಂಡು ಲಾಠಿ, ಪೈಪ್‌ನಿಂದ ಥಳಿಸಿದ್ದಾರೆ. ಪ್ರಕರಣ ಮರೆಮಾಚಲು ವ್ಯಸನ ಮುಕ್ತ ಕೇಂದ್ರಕ್ಕೆ ಸೇರಿಸಿದ್ದಾರೆ. ಅಲ್ಲೂ ಸರಿಯಾದ ಚಿಕಿತ್ಸೆ ನೀಡಿಲ್ಲ. ಎಂಟು ದಿನಗಳ ಬಳಿಕ ದರ್ಶನ್ ಅವರು ಮೃತಪಟ್ಟಿದ್ದಾರೆ. ಇದೊಂದು ಕೊಲೆ’ ಎಂದು ದರ್ಶನ್ ಪೋಷಕರು ಆರೋಪಿಸಿದ್ದಾರೆ.

‘ವಿವೇಕನಗರ ಠಾಣೆ ಇನ್‌ಸ್ಪೆಕ್ಟರ್ ಶಿವಕುಮಾರ್, ಸಿಬ್ಬಂದಿ ಪವನ್ ಸೇರಿದಂತೆ ನಾಲ್ವರು ಪೊಲೀಸರು ಹಾಗೂ ಯೂನಿಟಿ ಸೋಷಿಯಲ್ ಸರ್ವಿಸ್ ಕೇಂದ್ರದ ಮಾಲೀಕರ ವಿರುದ್ಧ ಕೊಲೆ ಮತ್ತು ಜಾತಿ ನಿಂದನೆ ಪ್ರಕರಣ ದಾಖಲಾಗಿದೆ. ಸಿಐಡಿಗೆ ಪ್ರಕರಣ ವರ್ಗಾವಣೆ ಆಗಿದ್ದು, ತನಿಖೆ ಆರಂಭವಾಗಿದೆ. ದರ್ಶನ್ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಪೋಷಕರಿಗೆ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಾಹಿತಿ ಗೊ.ರು. ಚನ್ನಬಸಪ್ಪ ಅಭಿಮತ

‘ಸದಭಿರುಚಿಯ ಮಕ್ಕಳ ವಚನ ಮೇಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊಬೈಲ್ ಗೀಳಿನಲ್ಲಿ ಮುಳುಗಿರುವ ಮಕ್ಕಳನ್ನು ಸದಭಿರುಚಿಯೆಡೆಗೆ ತರುವಲ್ಲಿ ಮಕ್ಕಳ ವಚನ ಮೇಳ ಯಶಸ್ವಿಯಾಗಿದೆ’ ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

ವಚನಜ್ಯೋತಿ ಬಳಗ ಆಯೋಜಿಸಿದ್ದ ಮಕ್ಕಳ ವಚನ ಮೇಳದ ಸಮಾರೋಪದಲ್ಲಿ ಅವರು ಮಾತನಾಡಿದರು.

‘ಪ್ರಕೃತಿರಮಣೀಯವಾದ ಕಲಾಗ್ರಾಮದಲ್ಲಿ ಏಳು ದಿನ ಸಂಸ್ಕೃತಿಯ ಪ್ರಸರಣ ಬಹು ಅಚ್ಚುಕಟ್ಟಾಗಿ ನಡೆದಿದೆ. ಸಾವಿರಾರು ಮಕ್ಕಳು ವಚನಗಳನ್ನು ಹಾಡುವುದಷ್ಟೇ ಅಲ್ಲ, ನೃತ್ಯ ಮಾಡಿಯೂ ಮೆರೆದಿರುವುದು ಗುಣಾತ್ಮಕ ಹೆಜ್ಜೆ’ ಎಂದು ಬಣ್ಣಿಸಿದರು.

‘ವಚನ ಮೇಳಕ್ಕೆ ತಯಾರಾಗಲು ಮಕ್ಕಳು ಮೂರು ತಿಂಗಳಿಂದ ಸಜ್ಜಾಗಿ ಮೊಬೈಲ್, ಟಿ.ವಿಯಿಂದ ದೂರವಾಗಿರುವುದು ಒಳ್ಳೆಯ ಬೆಳವಣಿಗೆ. ವಚನಗಳ ಕುರಿತ ನಿರಂತರ ಕಾರ್ಯಕ್ರಮಗಳ ಮೂಲಕ ವಚನಜ್ಯೋತಿ ಬಳಗ ಸಾರ್ಥಕ ಕಾರ್ಯ ಮಾಡುತ್ತಿದೆ’ ಎಂದರು.



ಮಕ್ಕಳ ವಚನ ಮೇಳದ ಸಮಾರೋಪದಲ್ಲಿ ಗೊ.ರು. ಚನ್ನಬಸಪ್ಪ ಅವರು ಮಕ್ಕಳೊಂದಿಗೆ ಬಸವಣ್ಣನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು

ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ‘ಮಕ್ಕಳ ವಚನ ಮೇಳ ಅತ್ಯುತ್ತಮ ಗಾಯಕರು, ನೃತ್ಯಗಾರರು, ಅದ್ಭುತ ಮಾತುಗಾರರನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ. ಬಹುಮಾನ ವಿಜೇತರಷ್ಟೇ ಅಲ್ಲದೆ ಮಕ್ಕಳ ವಚನ ಮೇಳದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರಿಗೂ ಅವರದೇ ಭಾವಚಿತ್ರವನ್ನು ಒಳಗೊಂಡ ಪ್ರಶಂಸಾ ಪತ್ರ ನೀಡಲಾಗುತ್ತದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಜನವರಿ 10ರಂದು ಬಹುಮಾನ ನೀಡುವ ಸಮಾರಂಭ ನಡೆಯಲಿದೆ’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ಬಳಗದ ಪದಾಧಿಕಾರಿಗಳಾದ ರುದ್ರಪ್ಪ ದೇಸಾಯಿ, ಪ್ರಭು ಇಸುವನಹಳ್ಳಿ, ರಾಜಾ ಗುರುಪ್ರಸಾದ್, ಮಧು, ಕಾತ್ಯಾಯಿನಿ, ರತ್ನಾ, ಗಾಯಕಿಯರಾದ ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ರಮಾಮಣಿ ಉಪಸ್ಥಿತರಿದ್ದರು.

ಪೊಲೀಸ್ ಬಲೆಗೆ ದರೋಡೆ ಗ್ಯಾಂಗ್

ಬಿಡದಿ (ರಾಮನಗರ): ಪ್ರಯಾಣಿಕರ ಸೋಗಿನಲ್ಲಿ ಕ್ಯಾಬ್ ಚಾಲಕನನ್ನು ದರೋಡೆ ಮಾಡಿ ವಾಹನದೊಂದಿಗೆ ಪರಾರಿಯಾಗಿದ್ದ 8 ಮಂದಿಯ ಗ್ಯಾಂಗ್ ಬಿಡದಿ ಠಾಣೆ ಪೊಲೀಸರ ಬಲೆಗೆ ಬಿದ್ದಿದೆ. ಈ ಗ್ಯಾಂಗ್‌ನಲ್ಲಿ ಇರುವವರ ಪೈಕಿ ನಾಲ್ವರು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕಿಯರು!

ಆರೋಪಿಗಳಿಂದ ₹16 ಲಕ್ಷ ಮೌಲ್ಯದ 3 ಕಾರು, 6 ದ್ವಿಚಕ್ರ ವಾಹನ, 1 ಆಟೊ ಹಾಗೂ ಮಾರಕಾಸ್ತ್ರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಕವಲಂದೆಯ ಸದ್ದಾಂ ಹುಸೇನ್ ಅಲಿಯಾಸ್ ಜಿಶಾನ್ ಅಲಿಯಾಸ್ ಅಭಿ, ಬೆಂಗಳೂರಿನ ಕೆ.ಆರ್. ಮಾರ್ಕೆಟ್‌ನ ಶಿವಪ್ರಸಾದ್ ಅಲಿಯಾಸ್ ಶಿವು, ಆರ್. ಯಶವಂತ್ ಕುಮಾರ್ ಹಾಗೂ ಶಾಮಣ್ಣ ಗಾರ್ಡನ್‌ನ ಕಬೀರ್ ಅಲಿಯಾಸ್ ತೌಸೀಫ್ ಬಂಧಿತರು.ಆರೋಪಿಗಳ ಬಂಧನದಿಂದಾಗಿ ಬಿಡದಿ, ಕನಕಪುರ, ಚನ್ನಪಟ್ಟಣ, ಮಳವಳ್ಳಿ, ಶಿವಮೊಗ್ಗ ಹಾಗೂ ಶ್ರೀರಂಗಪಟ್ಟಣ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ದಾಖಲಾಗಿದ್ದ 10 ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ. ಪ್ರಮುಖ ಆರೋಪಿ ಸದ್ದಾಂ 16 ಪ್ರಕರಣಗಳಲ್ಲಿ, ಶಿವು 5, ಕಬೀರ್ 4 ಹಾಗೂ ಯಶವಂತ್ ಒಂದು ಪ್ರಕರಣದಲ್ಲಿ ಭಾಗಿಯಾಗಿದ್ದಾನೆ

ವಿಶೇಷ ತಹಶೀಲ್ದಾರ್ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಭವನದಲ್ಲಿ ಇರುವ ಬೆಂಗಳೂರು ದಕ್ಷಿಣ ತಾಲ್ಲೂಕು ವಿಶೇಷ ತಹಶೀಲ್ದಾರ್ ವರ್ಷಾ ಒಡೆಯರ್ ಅವರ ಕಚೇರಿಯಲ್ಲಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ‘ಲಭ್ಯವಿಲ್ಲ’ ಎಂದು ಹಿಂಬರಹ ನೀಡಲಾಗಿದ್ದ ಮೂಲ ದಾಖಲೆ ಪತ್ರಗಳನ್ನು ಪತ್ತೆ ಮಾಡಿದ್ದಾರೆ.

‘ರೇಖಾ ಎಂಬುವವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಗ್ರಾಮದ ಸರ್ವೆ ಸಂಖ್ಯೆ 121/8ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಖರೀದಿಸಿದ್ದರು. ಅದರ ಖಾತೆ ವರ್ಗಾವಣೆಗೆ 2023ರಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ಖಾತೆ ವರ್ಗಾವಣೆ ಆಗಿರಲಿಲ್ಲ. ಈ ಹಿಂದಿನ ತಹಶೀಲ್ದಾರರು ಖಾತೆ ವರ್ಗಾವಣೆ ಮಾಡುವಂತೆ ಷರಾ ಬರೆದಿದ್ದರು. ಆದರೆ ಈಗಿನ ವರ್ಷಾ ಅವರು ಖಾತೆ ವರ್ಗಾವಣೆಗೆ ಅನುಮೋದನೆ ನೀಡಿರಲಿಲ್ಲ’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

‘ಖಾತೆ ವರ್ಗಾವಣೆಗೆ ವರ್ಷಾ ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ರೇಖಾ ಅವರು ಅದಕ್ಕೆ ಒಪ್ಪದಿದ್ದಾಗ, ‘ಜಮೀನಿಗೆ ಸಂಬಂಧಿಸಿದ ಮೂಲ ದಾಖಲೆ ಪತ್ರಗಳು ಲಭ್ಯವಿಲ್ಲ’ ಎಂದು ಹಿಂಬರಹ ನೀಡಿದ್ದರು. ಆದರೆ. ಅದೇ ಸರ್ವೆ ನಂಬರ್‌ನ ಇತರ ಜಮೀನುಗಳನ್ನು ಖರೀದಿಸಿದ್ದವರಿಗೆ ಖಾತೆ ವರ್ಗಾವಣೆ ಮಾಡಿಕೊಟ್ಟಿದ್ದರು. ಈ ಬಗ್ಗೆ ರೇಖಾ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು’ ಎಂದು ವಿವರಿಸಿದ್ದಾರೆ.

‘ಲೋಕಾಯುಕ್ತರ ಸೂಚನೆ ಮೇರೆಗೆ ಡಿವೈಎಸ್‌ಪಿ ಗಿರೀಶ್ ಅವರು ವಿಶೇಷ ತಹಶೀಲ್ದಾರ್ ಅವರ ಕಚೇರಿಯಲ್ಲಿ ಶೋಧ ಕಾರ್ಯಾಚರಣೆ ರೂಪಿಸಿದ್ದರು. ಲೋಕಾಯುಕ್ತ ಪೊಲೀಸರು ಕಚೇರಿಗೆ ತೆರಳಿದಾಗ, ಕಚೇರಿಯ ಹೊರಗಿದ್ದ ವರ್ಷಾ ಅವರು ಅಲ್ಲಿಂದಲೇ ಪರಾರಿಯಾದರು. ಜಿಲ್ಲಾಧಿಕಾರಿ ಅವರು ಕರೆ ಮಾಡಿದರೂ ಕಚೇರಿಗೆ ಬರಲಿಲ್ಲ’ ಎಂದು ಮಾಹಿತಿ ನೀಡಿದ್ದಾರೆ.

‘ಮೊದಲಿಗೆ ರೆಕಾರ್ಡ್ ರೂಂನಲ್ಲಿ ಶೋಧ ನಡೆಸಲಾಗಿದ್ದು, ದೂರುದಾರರ ಜಮೀನಿಗೆ ಸಂಬಂಧಿಸಿದ ದಾಖಲೆ ಪತ್ರಗಳು ಸಿಗಲಿಲ್ಲ. ಆದರೆ, ವಿಶೇಷ ತಹಶೀಲ್ದಾರ್ ಅವರ ಟೇಬಲನ್‌ನ ಲಾಕರ್‌ನಲ್ಲಿ ಆ ದಾಖಲೆಗಳು ಇದ್ದವು. ಈಗ ವರ್ಷಾ ಅವರ ಬಂಧನಕ್ಕೆ ಕಾರ್ಯಾಚರಣೆ ರೂಪಿಸಲಾಗಿದೆ’ ಎಂದು ತಿಳಿಸಿದ್ದಾರೆ.

2022ರಲ್ಲಿ ಕನಕಪುರ ತಹಶೀಲ್ದಾರ್ ಆಗಿದ್ದ ವರ್ಷಾ ಅವರು ₹5 ಲಕ್ಷ ಲಂಚ ಪಡೆಯುವ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು.

ಬೈಕ್ ಚಾಲಕನ ಖಾತೆಯಲ್ಲಿ ₹331 ಕೋಟಿ

ನವದೆಹಲಿ (ಪಿಟಿಐ): ಕಾನೂನು ಬಾಹಿರ ಬೆಟ್ಟಿಂಗ್ ಅಪ್ಲಿಕೇಶನ್‌ಗೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬೈಕ್ ಟ್ಯಾಕ್ಸಿ ಚಾಲಕನ ಬ್ಯಾಂಕ್ ಖಾತೆಗೆ ₹331 ಕೋಟಿಗೂ ಹೆಚ್ಚು ಹಣ ಜಮೆಯಾಗಿರುವುದನ್ನು ಪತ್ತೆ ಮಾಡಿದ್ದಾರೆ.

‘1ಎಕ್ಸ್‌ಬೆಟ್ ಆನ್‌ಲೈನ್ ಬೆಟ್ಟಿಂಗ್‌ಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವಾಗ ರ‍್ಯಾಪಿಡೊ ಬೈಕ್ ಚಾಲಕನ ಬ್ಯಾಂಕ್ ಖಾತೆಗೆ 2024ರ ಆಗಸ್ಟ್ 19ರಿಂದ 2025ರ ಏಪ್ರಿಲ್ 16ರ ನಡುವೆ ₹331.36 ಕೋಟಿಗೂ ಹೆಚ್ಚು ಹಣ ಜಮೆಯಾಗಿರುವುದು ಗೊತ್ತಾಗಿದೆ. ಈತ ಜೀವನೋಪಾಯಕ್ಕಾಗಿ ಬೈಕ್ ಓಡಿಸುತ್ತಿದ್ದ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ರಾಜಸ್ಥಾನದ ಉದಯಪುರದ ಐಷಾರಾಮಿ ಹೋಟೆಲ್‌ನಲ್ಲಿ ನಡೆದ ಅದ್ದೂರಿ ಮದುವೆಯ ವೆಚ್ಚ ಭರಿಸಲು ₹331 ಕೋಟಿ ಪೈಕಿ ₹1 ಕೋಟಿಗೂ ಹೆಚ್ಚಿನ ಮೊತ್ತವನ್ನು ಬಳಸಲಾಗಿದೆ. ಈ ವಿವಾಹವು ಗುಜರಾತ್‌ನ ಯುವ ರಾಜಕಾರಣಿಗೆ ಸಂಬಂಧಿಸಿದೆ’ ಎಂದು ತಿಳಿಸಿದ್ದಾರೆ.

‘ಬ್ಯಾಂಕ್ ವಹಿವಾಟುಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಉದಯಪುರದಲ್ಲಿ ನಡೆದ ವಿವಾಹ ಕಾರ್ಯಕ್ರಮಕ್ಕೆ ನನ್ನ ಖಾತೆ ಮೂಲಕ ಹಣ ಪಡೆದ ವಧು–ವರ ಅಥವಾ ಅವರ ಕುಟುಂಬಗಳ ಬಗ್ಗೆ ಮಾಹಿತಿ ಇಲ್ಲ ಎಂದು ಚಾಲಕ ವಿಚಾರಣೆ ವೇಳೆ ತಿಳಿಸಿದ್ದಾನೆ’ ಎಂದು ಹೇಳಿದ್ದಾರೆ.

ಬೆಂಗಳೂರು ರೇಸ್

ಇನ್‌ಸ್ಪೈರ್ ಗೆಲ್ಲುವ ನಿರೀಕ್ಷೆ

ಕೆಂಪೇಗೌಡ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಇನ್‌ಸ್ಪೈರ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:45ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪ್ರೊಲೈಟ್ಸ್ 9, ರಾಕಿಂಗ್ ಸ್ಟಾರ್ 4, ಜೇಡ್ ಮೌಂಟೆನ್ 3
2ನೇ ರೇಸ್: ಅಗ್ರಡಾರ್ 3, ಮ್ಯಾಂಡೇಟ್ 6, ಹೈಪರ್‌ಡ್ರೈವ್ 2
3ನೇ ರೇಸ್: ಥೀವಾ 4, ಫ್ಲೇಮಿಂಗ್ ಸ್ವಾರ್ಡ್ 3, ಮ್ಯೂಚುವಲ್ ಟ್ರಸ್ಟ್ 8
4ನೇ ರೇಸ್: ಇನ್‌ಸ್ಪೈರ್ 5, ಲಕ್ಸ್ ಎಟರ್ನಾ 9, ಎಫಿಕಸಿ 4
5ನೇ ರೇಸ್: ಡಿ ಫ್ರಾಂಕ್ಸ್ 3, ಡೈನಾಮಿಕ್ ಫೋರ್ಸ್ 6, ಡಫಿ 7
6ನೇ ರೇಸ್: ಅಡೆಲಾಂಟೊ 1, ಯಾನಿಕ್ 5, ಆಬ್ಸಲ್ಯೂಟ್ ಕ್ಯಾಟ್ರನ 6

ಉತ್ತಮ ಬೆಟ್: ಥೀವಾ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಹತ್ತು ದಿನಗಳಿಂದ ನಡೆದ ಶಿಬಿರ ಸಂಪನ್ನ: ಭದ್ರತೆ, ರಕ್ಷಣೆ ಕುರಿತು ಪ್ರಾತ್ಯಕ್ಷಿಕೆ

ಎನ್‌ಸಿಸಿ ಶಿಬಿರ: 500 ಕೆಡೆಟ್‌ಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ– ಕಾಲೇಜು ವಿದ್ಯಾರ್ಥಿಗಳಲ್ಲಿ ಶಿಸ್ತು, ನಾಯಕತ್ವದ ಗುಣ, ದೇಶಭಕ್ತಿ ಬೆಳೆಸುವ ಉದ್ದೇಶದಿಂದ ನಗರದಲ್ಲಿ ಆಯೋಜಿಸಿದ್ದ 10 ದಿನಗಳ ಎನ್‌ಸಿಸಿ ಶಿಬಿರ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ 500ಕ್ಕೂ ಹೆಚ್ಚು ಕೆಡೆಟ್‌ಗಳು ಉತ್ಸಾಹದಿಂದ ಶಿಬಿರದಲ್ಲಿ ಭಾಗವಹಿಸಿದ್ದರು. ಕಮಾಂಡೆಂಟ್ ಕರ್ನಲ್ ಪಂಕಜ್ ಸಿನ್ಹಾ ನೇತೃತ್ವದ ತಂಡವು ಶಿಬಿರ ಆಯೋಜಿಸಿತ್ತು. ತರಬೇತಿಯು ಕಠಿಣ ಮಿಲಿಟರಿ ಶಿಸ್ತು ಮತ್ತು ಸಾಮಾಜಿಕ ಜವಾಬ್ದಾರಿ ಎರಡನ್ನೂ ಒಳಗೊಂಡಿತ್ತು.

ಶಿಸ್ತು ಮತ್ತು ಸಮಯ ಪಾಲನೆ, ಶಸ್ತ್ರಾಸ್ತ್ರ ನಿರ್ವಹಣೆಯ ಬಗ್ಗೆ ತಿಳಿವಳಿಕೆ, ತುರ್ತು ಸನ್ನಿವೇಶಗಳಲ್ಲಿ ಸ್ಪಂದನೆ, ಭದ್ರತೆ ಮತ್ತು ಜಾಗರೂಕತೆ, ಕಾವಲು ಮತ್ತು ರಕ್ಷಣೆ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಇಂಡಿಯನ್ ಬ್ಯಾಂಕ್‌ನ ಮಾಜಿ ಅಧಿಕಾರಿ ಕೆ.ಎಲ್. ರಾವ್ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗೆ ಪ್ರೇರಣೆ, ವೃತ್ತಿ ಸಮಾಲೋಚನೆ, ಸಾಮಾಜಿಕ ಸಮಸ್ಯೆ, ಪರಿಹಾರ ಕುರಿತು ಉಪನ್ಯಾಸ ನೀಡಿದರು.


ನಗರದಲ್ಲಿ ನಡೆದ ಎನ್‌ಸಿಸಿ ಶಿಬಿರದಲ್ಲಿ 500ಕ್ಕೂ ಅಧಿಕ ಕೆಡೆಟ್‌ಗಳು ಪಾಲ್ಗೊಂಡಿದ್ದರು



ಕೆಪೆಕ್- ಪಿಎಂಎಫ್ಎಂಇ

ಆಹಾರೋದ್ಯಮದಲ್ಲಿ ಕ್ರಾಂತಿಕಾರಕ ಹೆಜ್ಜೆ



ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ರಾಜ್ಯಾದ್ಯಂತ 14 ಸಾಮಾನ್ಯ ಇಂಕ್ಯುಬೇಶನ್ ಕೇಂದ್ರ(ಸಿಐಸಿ) ಸ್ಥಾಪನೆ : ರಾಜ್ಯದ ಕೃಷಿಕರು, ನವೋದ್ಯಮಿಗಳು, ರೈತ ಉತ್ಪಾದಕ ಸಂಸ್ಥೆಗಳು ಸೇರಿದಂತೆ ಅನೇಕರಿಗೆ ವರದಾನ!

ಕೃಷಿ ನವೋದ್ಯಮಗಳಿಗೆ ಇಂಕ್ಯುಬೇಶನ್ ಕೇಂದ್ರಗಳ ನೆರವು!

ಬೆಂಗಳೂರು : ರಾಜ್ಯಾದ್ಯಂತ ಕೃಷಿಕರೇ ಸ್ವತಃ ತಮ್ಮ ಕೃಷಿ ಉತ್ಪನ್ನಗಳಿಗೆ ಬ್ರ್ಯಾಂಡ್ ಮಾಡಿಕೊಳ್ಳುವ ಹಾದಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಗಮಗೊಳಿಸಿವೆ. ರಾಜ್ಯದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME) ಯೋಜನೆಯನ್ನು ರಾಜ್ಯಾದ್ಯಂತ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ(ಕೆಪೆಕ್) ನೋಡಲ್ ಏಜೆನ್ಸಿಯಾಗಿ ಅನುಷ್ಠಾನಗೊಳಿಸುತ್ತಿದ್ದು, ಒಟ್ಟು ₹32.16ಕೋಟಿ ವೆಚ್ಚದಲ್ಲಿ ರಾಜ್ಯದ ಒಟ್ಟು 14 ಕಡೆ ಸಾಮಾನ್ಯ ಇಂಕ್ಯುಬೇಶನ್ ಕೇಂದ್ರ(ಸಿಐಸಿ)ಗಳನ್ನು ಸ್ಥಾಪಿಸಲಾಗಿದೆ. ಮಂಡ್ಯ, ಮೈಸೂರು, ಹಾಸನ, ಮಂಡ್ಯ ಸೇರಿದಂತೆ ರಾಜ್ಯದ ಒಟ್ಟು 14 ಕಡೆ ವಿವಿಧ ಕೃಷಿ ಉತ್ಪನ್ನಗಳ ಸಂಸ್ಕರಣೆ, ಸಂಗ್ರಹ, ಕೂಲಿಂಗ್, ಫಿಲ್ಲಿಂಗ್, ಪ್ಯಾಕಿಂಗ್ ಸೇರಿದಂತೆ ಮಾರುಕಟ್ಟೆಯ ಅಗತ್ಯಕ್ಕನುಸಾರ ಬ್ರ್ಯಾಂಡಿಂಗ್‌ಗೆ ಬೇಕಿರುವ ಎಲ್ಲಾ ಹಂತಗಳ ಸೌಕರ್ಯ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕೃಷಿ ಉತ್ಪನ್ನಗಳನ್ನು ಆಧರಿಸಿ ಹೊಸ ಸಂಸ್ಕರಣಾ ಉದ್ದಿಮೆ ಆರಂಭಿಸಲು ಉದ್ದೇಶಿಸಿದ ನವೋದ್ಯಮಿಗಳಿಗೆ, ಪ್ರಗತಿಪರ ರೈತರಿಗೆ, ರೈತ ಉತ್ಪಾದಕ ಸಂಸ್ಥೆ(ಎಫ್‌ಪಿಒ)ಗಳಿಗೆ, ಸ್ವಸಹಾಯ ಸಂಘಗಳಿಗೆ ಅಗತ್ಯವಿರುವ ನೆರವು, ಸಹಾಯಹಸ್ತ ನೀಡುವ ಮುಖ್ಯ ಉದ್ದೇಶದೊಂದಿಗೆ ಈ ಯೋಜನೆಯಡಿ ಸಿಐಸಿಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಯಾವುದೇ ಆಹಾರ ಸಂಸ್ಕರಣೆ, ಮೌಲ್ಯವರ್ಧನೆ ಸೇರಿದಂತೆ ಕೃಷಿ ಉತ್ಪನ್ನಗಳಿಗೆ ಬೇಕಾಗುವ ಎಲ್ಲಾ ಮೌಲ್ಯವರ್ಧನಾ ಪ್ರಕ್ರಿಯೆಗಳನ್ನು ಮಾಡಿಕೊಡುವ ಸುಸಜ್ಜಿತ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ರಾಜ್ಯಾದ್ಯಂತ ಸಿರಿಧಾನ್ಯ ಸಂಸ್ಕರಣೆ, ಬೆಲ್ಲ ಉತ್ಪಾದನೆ, ಎಣ್ಣೆ ಗಾಣಗಳು, ಬೇಕರಿ ಉತ್ಪನ್ನ, ಮಸಾಲೆ ಪುಡಿ, ಶುಂಠಿ ಸಂಸ್ಕರಣೆ, ತೆಂಗಿನ ಉತ್ಪನ್ನ, ವಿವಿಧ ತರಕಾರಿ ಉತ್ಪನ್ನಗಳು, ಕುಕ್ಕುಟ ಉತ್ಪನ್ನಗಳು ಸೇರಿದಂತೆ ಸಾಗರೋತ್ಪನ್ನಗಳು ಮಾತ್ರವಲ್ಲದೇ ಆಯಾ ಜಿಲ್ಲೆಗಳ ಸ್ಥಳೀಯ ಉತ್ಪನ್ನಗಳ ಘಟಕ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಪೈಕಿ ರಾಜ್ಯದಲ್ಲಿ 14 ಜಿಲ್ಲೆಗಳ ತೋಟಗಾರಿಕಾ ವಿವಿ ಆವರಣ, ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ವಿವಿಗಳು ಮತ್ತು ಸಂಶೋಧನಾ ಕೇಂದ್ರಗಳ ಆವರಣದಲ್ಲಿ ಕಾಮನ್ ಇಂಕ್ಯುಬೇಶನ್ ಸೆಂಟರ್‌ಗಳನ್ನು ಆರಂಭಿಸಲಾಗಿದೆ. ಆ ಮೂಲಕ ರಾಜ್ಯದ ವಿವಿಧ ಜಿಲ್ಲೆಗಳ ವಿವಿಧ ಪದಾರ್ಥಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ಹಾದಿ ಸುಗಮಗೊಳಿಸಲಾಗಿದೆ.



ಏನಿದರ ಉದ್ದೇಶ?

1. ಉದ್ಯಮಶೀಲತೆಗೆ ಉತ್ತೇಜನೆ
2. ಆಹಾರ ಸಂಸ್ಕರಣೆ ಕ್ಷೇತ್ರದಲ್ಲಿ ಅಗತ್ಯ ತರಬೇತಿ, ಸಾಮರ್ಥ್ಯಾಭಿವೃದ್ಧಿ
3. ನವೋದ್ಯಮಿಗಳಿಗೆ ಉದ್ದಿಮೆ ಪ್ರಾರಂಭಿಸಲು ಮೂಲಭೂತ ಸೌಕರ್ಯಗಳಾದ ತಾಂತ್ರಿಕ ಸಲಕರಣೆಗಳು, ಪ್ರಯೋಗಾಲಯದ ಸೌಲಭ್ಯ, ಕಚೇರಿ ಸೌಲಭ್ಯ ಇತ್ಯಾದಿಗಳನ್ನು ಒದಗಿಸುವುದು.
4. ಹೊಸ ಉತ್ಪನ್ನಗಳ ತಯಾರಿಯಲ್ಲಿ ಪರೀಕ್ಷಾ ಪ್ರಯೋಗಗಳನ್ನು ಕೈಗೊಳ್ಳಲು ನೆರವು ನೀಡುವುದು.

ಏನಿದರ ವಿಶೇಷತೆ?

1. ರಾಜ್ಯದ ನಾನಾ ಉತ್ಪನ್ನಗಳನ್ನು ಸ್ಥಳೀಯ ಬ್ರ್ಯಾಂಡ್‌ಗಳ ಸ್ವರೂಪದಲ್ಲಿ ಜನರನ್ನು ಮುಟ್ಟಲು ಅವಕಾಶ
2. ಕಾಮನ್ ಇಂಕ್ಯುಬೇಶನ್ ಸೆಂಟರ್‌ಗಳನ್ನು ಅನುಭವಿ ಖಾಸಗಿ ಕಂಪನಿಗಳಿಂದ ನಿರ್ವಹಣೆ, ಕಾರ್ಯಾಚರಣೆ
3. ಬಾಡಿಗೆ ಆಧಾರದಲ್ಲಿ ರೈತರಿಗೆ, ರೈತರ ಗುಂಪುಗಳಿಗೆ, ನವೋದ್ಯಮಿಗಳಿಗೆ ಯಂತ್ರೋಪಕರಣಗಳ ಬಳಕೆಗೆ ಅವಕಾಶ
4. ವಿವಿಧ ಹಂತದ ಸಂಸ್ಕರಣೆಗೆ ಅಗತ್ಯ ಯಂತ್ರೋಪಕರಣ ಬಳಕೆಗೆ ಅವಕಾಶ
5. ಕೃಷಿ ಉತ್ಪನ್ನವೊಂದು ಮಾರುಕಟ್ಟೆ ಮುಟ್ಟಲು ಸಜ್ಜುಗೊಳಿಸುವ ಸಂಪೂರ್ಣ ಪ್ರಕ್ರಿಯೆ ವ್ಯವಸ್ಥೆ

ಕಾಮನ್ ಇಂಕ್ಯುಬೇಶನ್ ಸೆಂಟರ್‌ಗಳಲ್ಲಿನ ಸೌಲಭ್ಯಗಳು

- ಉತ್ಪನ್ನಗಳ ಸ್ವಚ್ಛತೆಗೆ ಅಗತ್ಯ ಯಂತ್ರೋಪಕರಣಗಳು
- ವಿವಿಧ ಗುಣಮಟ್ಟದ ಉತ್ಪನ್ನಗಳ ಗ್ರೇಡಿಂಗ್ ಸೌಕರ್ಯ
- ಮಿಲ್ಲಿಂಗ್, ಫ್ಲೇಕಿಂಗ್, ಪೀಲಿಂಗ್, ಪಲ್ಪಿಂಗ್ ಯಂತ್ರೋಪಕರಣಗಳು
- ಒಣಗಿಸಲು ಪ್ರತ್ಯೇಕ ಯಂತ್ರಗಳ ಸಹಕಾರ
- ಲೇಬಲಿಂಗ್ ಮತ್ತು ಪ್ಯಾಕಿಂಗ್‌ಗೆ ಪ್ರತ್ಯೇಕ ಯಂತ್ರಗಳು
- ಪ್ರಯೋಗಾಲಯ
- ಶೀತಲ ಕೇಂದ್ರ










ಮಂಡ್ಯದಲ್ಲಿ ಸಿಐಸಿ ಬೆಲ್ಲದ ಪಾರ್ಕ್


ರಾಜ್ಯದ ಸಕ್ಕರೆ ನಾಡು ಮಂಡ್ಯದಲ್ಲಿ ಕಬ್ಬು ಸಂಸ್ಕರಣೆಯೊಂದಿಗೆ ಬೆಲ್ಲ ತಯಾರಿಕೆಗೆಂದು ಪ್ರತ್ಯೇಕ ಘಟಕವನ್ನು ಆರಂಭಿಸಲಾಗಿದೆ. ಮಂಡ್ಯ ನಗರದ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ ₹1.59ಕೋಟಿ ವೆಚ್ಚದಲ್ಲಿ ಸಿಐಸಿ ಬೆಲ್ಲದ ಪಾರ್ಕ್ ಘಟಕ ಆರಂಭಿಸಲಾಗಿದ್ದು, ಕಬ್ಬಿನ ಉತ್ಪನ್ನಗಳಿಗೆ ಅಗತ್ಯ ಸೌಕರ್ಯಗಳನ್ನಿಲ್ಲಿ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. ಕಬ್ಬು ಸಂಸ್ಕರಣೆ, ಕಬ್ಬಿನ ರಸ, ಬೆಲ್ಲದ ಪುಡಿ, ದ್ರವ ಬೆಲ್ಲ, ಫ್ಲೇವರ್ಡ್ ಬೆಲ್ಲ ಸೇರಿದಂತೆ ಬೆಲ್ಲದ ಮೌಲ್ಯವರ್ಧನೆಗೆ ಅಗತ್ಯ ಯಂತ್ರೋಪಕರಣಗಳ ಸೌಕರ್ಯ ನೀಡುವುದರೊಂದಿಗೆ ಇಲ್ಲಿನ ರೈತರ ಆರ್ಥಿಕ ಅಭಿವೃದ್ಧಿಗೆ ಈ ಘಟಕ ವರದಾನವಾಗಿದೆ. ಜತೆಗೆ, ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಬೆಲ್ಲದ ಅಚ್ಚು, ಹರಳು, ದ್ರವ ರೂಪದಲ್ಲಿ ಉತ್ಪನ್ನ ತಯಾರಿಕೆಗೆ ಅಗತ್ಯ ಯಂತ್ರೋಪಕರಣಗಳನ್ನು ನೀಡಲಾಗಿದೆ.

ಮಂಡ್ಯ ಜಿಲ್ಲೆಯ ವಿವಿಧ ತಾಲೂಕುಗಳ ರೈತರು ತಮ್ಮ ಕಬ್ಬಿನ ಬೆಳೆಗೆ ಅನುಗುಣವಾಗಿ ಅಗತ್ಯ ಉತ್ಪನ್ನ ಪಡೆಯುವ ನಿಟ್ಟಿನಲ್ಲಿ ಇಲ್ಲಿನ ಸೌಕರ್ಯಗಳನ್ನು ಬಳಸಿಕೊಳ್ಳಬಹುದಾಗಿದೆ. ಯಾವುದೇ ರಾಸಾಯನಿಕಗಳಿಲ್ಲದೇ ಉತ್ಪನ್ನಗಳನ್ನು ಅತ್ಯಂತ ಕಡಿಮೆ ಶುಲ್ಕದಲ್ಲಿಯೇ ಪಡೆಯಲು ಅವಕಾಶವಿದೆ. ಸಾವಯವ, ಸಾಂಪ್ರದಾಯಿಕ ಕಬ್ಬು ತಂದು ಇಲ್ಲಿನ ವಿವಿಧ ಮಾದರಿಗಳ ಬೆಲ್ಲ ತಯಾರಿಕೆಯಲ್ಲಿ ಯಾವ ವಿಧಾನಗಳಲ್ಲಿ ಬೇಕೆನ್ನುವ ಆಯ್ಕೆ ಮಾಡಿಕೊಂಡು ಉತ್ಪನ್ನ ಪಡೆಯಬಹುದಾಗಿದೆ. ಜತೆಗೆ, ಉತ್ತಮ ಗುಣಮಟ್ಟದ ಬೆಲ್ಲಕ್ಕೆ ಸೂಕ್ತವಾದ ಕಬ್ಬಿನ ತಳಿ ಮತ್ತು ತಯಾರಿಕಾ ತಂತ್ರಜ್ಞಾನ ಕುರಿತು ವಿಶೇಷ ತರಬೇತಿಯನ್ನು ಸಹ ಕೇಂದ್ರದಲ್ಲಿ ನೀಡಲಾಗುತ್ತದೆ.

ಉತ್ಪಾದಿಸುವ ಉತ್ಪನ್ನಗಳು

- ರಾಸಾಯನಿಕ ಮುಕ್ತ ಬೆಲ್ಲ / ಸಾವಯವ ಬೆಲ್ಲ
- ಪುಡಿ, ಅಚ್ಚು, ಹರಳು, ದ್ರವ ರೂಪದ ಬೆಲ್ಲದ ತಯಾರಿಕೆ
- ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆ





ಹೆಚ್ಚಿನ ಮಾಹಿತಿಗಾಗಿ ಸಿಐಸಿಯ ಹಿರಿಯ ವಿಜ್ಞಾನಿಗಳನ್ನು ಸಂಪರ್ಕಿಸಿ
ಡಾ.ಕೆ.ವಿ.ಕೇಶವಯ್ಯ 9900192322

ಬೆಲ್ಲದ ಪಾರ್ಕ್ ಘಟಕದಲ್ಲಿ ಲಭ್ಯವಿರುವ ಸಂಸ್ಕರಣಾ ಯಂತ್ರೋಪಕರಣಗಳ ವಿವರ

- ಸ್ವಯಂಚಾಲಿತ ಕಬ್ಬಿನ ರಸ ತೆಗೆಯುವ ಯಂತ್ರ
- ಕಬ್ಬಿನ ರಸ ಸೋಸುವ ಯಂತ್ರಗಳು
- ಕಬ್ಬಿನ ರಸ ಶೇಖರಣಾ ಮತ್ತು ಬೆಲ್ಲ ಉತ್ಪಾದನಾ ಘಟಕ
- ಬೆಲ್ಲದ ಪುಡಿ ತಯಾರಿಕಾ ಯಂತ್ರ
- ಬೆಲ್ಲದ ಅಚ್ಚುಗಳು
- ದ್ರವ ರೂಪದ ಬೆಲ್ಲದ ಬಾಟಲಿಂಗ್ ಘಟಕ
- ವ್ಯಾಕ್ಯೂಮ್ ಮತ್ತು ನೈಟ್ರೋಜನ್ ಪ್ಯಾಕಿಂಗ್ ಘಟಕಗಳು
- ಬಗಾಸೆ ಡ್ರೈಯರ್ಸ್
- ಸಂಗ್ರಹಣಾ ಘಟಕಗಳು

ಮೈಸೂರಿಗೆ ಬಾಳೆ, ಕೊಡಗಿಗೆ ಕಾಫಿ ಇಂಕ್ಯುಬೇಶನ್

ಸಾಂಸ್ಕೃತಿಕ ನಗರಿ ಮೈಸೂರಿನ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ(ಸಿಎಫ್‌ಟಿಆರ್‌ಐ) ಆವರಣದಲ್ಲಿ ₹2.2 ಕೋಟಿ ವೆಚ್ಚದಲ್ಲಿ ಸ್ಥಾಪನೆಯಾಗಿರುವ ಕಾಮನ್ ಇಂಕ್ಯುಬೇಶನ್ ಸೆಂಟರ್‌ನಲ್ಲಿ ಬಾಳೆ ಮತ್ತು ಕಾಫಿ ಉತ್ಪನ್ನಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ವಿಶೇಷವಾಗಿ ಮೈಸೂರು ಜಿಲ್ಲೆಗೆಂದು ಬಾಳೆ ಉತ್ಪನ್ನಗಳು, ಕೊಡಗು ಜಿಲ್ಲೆಗೆಂದು ಕಾಫಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಎರಡೂ ಜಿಲ್ಲೆಗಳ ಆಹಾರ ಉದ್ಯಮ ಕ್ಷೇತ್ರವನ್ನು ಕೇಂದ್ರೀಕರಿಸಿ, ಇಲ್ಲಿನ ಕೃಷಿಕರಿಗೆ ನೆರವಾಗಲೆಂದು ಅತ್ಯಾಧುನಿಕ ಯಂತ್ರೋಪಕರಣಗಳನ್ನಿಲ್ಲಿ ಸ್ಥಾಪಿಸಲಾಗಿದೆ. ಆ ಮೂಲಕ ಬಾಳೆ ಮತ್ತು ಕಾಫಿ ಬೆಳೆಗಳಿಗೆ ಅನುಗುಣವಾಗಿ ಉಪ ಉತ್ಪನ್ನಗಳು, ವಿವಿಧ ಸಂಸ್ಕರಣಾ ಪದಾರ್ಥಗಳ ತಯಾರಿಕೆಗೆ ನೆರವು ನೀಡುವ ಸೌಕರ್ಯವನ್ನು ನೀಡಲಾಗಿದೆ.

ಸಿಐಸಿಯಲ್ಲಿ ಅತ್ಯಾಧುನಿಕ ಹಣ್ಣು ತೊಳೆಯುವ ಯಂತ್ರ, ವಿಂಗಡಿಸುವ ಯಂತ್ರ, ಪಲ್ವರೈಸರ್, ಸ್ಲೈಸಿಂಗ್, ಪಲ್ಪರ್ ಮತ್ತು ಫಿನಿಷರ್ ಸೇರಿದಂತೆ ನಾನಾ ಹಂತದ ಸಂಸ್ಕರಣಾ ಯಂತ್ರೋಪಕರಣಗಳನ್ನು ನೀಡಲಾಗಿದೆ. ಜತೆಗೆ, ಕಾಫಿ ಪುಡಿ ತಯಾರಿಕೆ ಮತ್ತು ಮೌಲ್ಯವರ್ಧನೆಗೆ ಪೂರಕ ಪ್ರಕ್ರಿಯೆಗಳನ್ನು ಯಂತ್ರಗಳ ಸಹಾಯದಿಂದಲೇ ಮಾಡಲು ಅನುಕೂಲವಾಗುವ ವ್ಯವಸ್ಥೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.





ಬಾಳೆ, ಕಾಫಿ ಉಪ ಉತ್ಪನ್ನಗಳೇನು?

- **ಬಾಳೆಹಣ್ಣು:** ಪಲ್ಪ್, ಸ್ಲೈಸ್, ಪುಡಿ, ಫ್ರೂಟ್ ಬಾರ್
- **ಕಾಫಿ:** ಗ್ರೀನ್ ಕಾಫಿ ಪುಡಿ, ಹುರಿದ ಬೀನ್, ಕಾನ್ಸಂಟ್ರೇಟ್



ಸಿಐಸಿಯಲ್ಲಿ ಸಂಸ್ಕರಣೆಗೆ ಒದಗಿಸಲಾಗಿರುವ ಯಂತ್ರೋಪಕರಣಗಳು

ಬಾಳೆಹಣ್ಣು:
- ಹಣ್ಣು ತೊಳೆಯುವ ಯಂತ್ರ
- ವಿಂಗಡಿಸುವ ಯಂತ್ರ
- ಪಲ್ವರೈಸರ್
- ಸ್ಲೈಸಿಂಗ್, ಪಲ್ಪರ್ ಮತ್ತು ಫಿನಿಷರ್
- ಸ್ಟೀಮ್ ಜಾಕೆಟ್ ಕೆಟಲ್
- ಪ್ಯಾಕಿಂಗ್ ಯಂತ್ರ
- ಒಣಗಿಸುವ ಯಂತ್ರ

ಕಾಫಿ:
- ಪಲ್ಪರ್, ಹಲ್ಲರ್, ಕಲರ್ ಸಾರ್ಟರ್,
- ಗ್ರೇಡರ್, ರೋಸ್ಟರ್
- ಮಿಲ್ಲಿಂಗ್ ಯಂತ್ರ,
- ಪ್ಯಾಕೇಜಿಂಗ್ ಯಂತ್ರ

ಹೆಚ್ಚಿನ ಮಾಹಿತಿಗಾಗಿ ಸಿಐಸಿಯ ಹಿರಿಯ ವಿಜ್ಞಾನಿಗಳನ್ನು ಸಂಪರ್ಕಿಸಿ
ಡಾ.ಉಮೇಶ್ ಹೆಬ್ಬಾರ್ 94482 67824

ಚಾಮರಾಜನಗರಕ್ಕೆ ಅರಿಶಿನ ಸಂಸ್ಕರಣೆಗೆ ಸಿಐಸಿ ಒತ್ತು!

ರಾಜ್ಯದ ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಅರಿಶಿನ ಬೆಳೆಯಲಾಗುತ್ತಿದ್ದು, ಇಲ್ಲಿನ ಕೃಷಿಕರಿಗೆ ನೆರವಾಗಲೆಂದು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ₹1.43 ಕೋಟಿ ವೆಚ್ಚದಲ್ಲಿ ಸಿಐಸಿಯನ್ನು ಸ್ಥಾಪನೆ ಮಾಡಲಾಗಿದೆ. ಇಲ್ಲಿನ ಘಟಕದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಅಳವಡಿಸಲಾಗಿದ್ದು, ಅರಿಶಿನದ ಕೊಂಬುಗಳನ್ನು ಪಾಲಿಶ್ ಮಾಡುವುದು, ಒಣಗಿಸುವುದು, ಪುಡಿ ಮಾಡುವುದು ಸೇರಿದಂತೆ ನಾನಾ ಹಂತದ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ಯಂತ್ರಗಳ ಸಹಾಯದಲ್ಲಿ ಮಾಡಲು ವ್ಯವಸ್ಥೆ ಕಲ್ಪಿಸಲಾಗಿದೆ. ಹೀಗಾಗಿ, ರೈತರು ಈ ಘಟಕದ ಅನುಕೂಲ ಪಡೆದುಕೊಳ್ಳುವುದು ಮಾತ್ರವಲ್ಲದೇ ಅರಿಶಿನದ ವಿವಿಧ ಉಪ ಉತ್ಪನ್ನಗಳನ್ನು ತಯಾರಿಸಿಕೊಂಡು, ಇದೇ ಘಟಕದಲ್ಲೇ ಪ್ಯಾಕಿಂಗ್ ಸಹ ಮಾಡಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಜತೆಗೆ, ವಿವಿಧ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಅಗತ್ಯ ಸೌಕರ್ಯವನ್ನು ಇಲ್ಲಿ ನೀಡಲಾಗುತ್ತದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ರೈತರು ತಮ್ಮ ಉತ್ಪನ್ನಗಳನ್ನು ಸಿದ್ಧಪಡಿಸಿಕೊಳ್ಳಲು ಅವಕಾಶ ವನ್ನಿಲ್ಲಿ ಕಲ್ಪಿಸಲಾಗಿದೆ.



ಹೆಚ್ಚಿನ ಮಾಹಿತಿಗಾಗಿ ಸಿಐಸಿಯ ಹಿರಿಯ ವಿಜ್ಞಾನಿಗಳನ್ನು ಸಂಪರ್ಕಿಸಿ
ಡಾ.ನರೇಶ್.ಎನ್.ಟಿ 9449866933

ಸಿಐಸಿಯಲ್ಲಿ ಪಡೆಯಬಹುದಾದ ಉತ್ಪನ್ನ
- ಪಾಲಿಷ್ ಮಾಡಿದ ಅರಿಶಿಣದ ಕೊಂಬುಗಳು
- ಪಾಲಿಷ್ ಮಾಡದ ಒಣಗಿಸಿದ ಅರಿಶಿಣದ ಕೊಂಬುಗಳು
- ಒಣಗಿಸಿದ ಅರಿಶಿಣ ತುಂಡುಗಳು, ಅರಿಶಿಣದ ಪುಡಿ

ಸಿಐಸಿಯಲ್ಲಿ ಸಂಸ್ಕರಣೆಗೆಂದು ಲಭ್ಯವಿರುವ ಯಂತ್ರೋಪಕರಣಗಳು
- ಪ್ರಾಥಮಿಕ ಸಂಸ್ಕರಣೆ – ಹಸಿ ಅರಿಶಿಣ ತೊಳೆಯುವ, ಸ್ವಚ್ಛಗೊಳಿಸುವ ಯಂತ್ರ
- ಬೇಯಿಸುವ ಘಟಕ
- ಒಣಗಿಸುವ ಘಟಕ
- ಪಾಲಿಶ್ ಮತ್ತು ಪುಡಿ ಮಾಡುವ ಯಂತ್ರೋಪಕರಣಗಳು
- ಶೇಖರಣಾ ಕೊಠಡಿ

ಹಾಸನದಲ್ಲಿ ತೆಂಗಿನ ಉತ್ಪನ್ನಗಳಿಗೆ ಸಿಐಸಿ!

ತೆಂಗು ಮತ್ತು ಶುಂಠಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯಲಾಗುವ ಹಾಸನ ಜಿಲ್ಲೆಯ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ ₹2.09ಕೋಟಿ ವೆಚ್ಚದಲ್ಲಿ ಸಿಐಸಿ ಸ್ಥಾಪಿಸಲಾಗಿದ್ದು, ಕೃಷಿಕರು, ಉದ್ಯಮಿಗಳು, ರೈತ ಉತ್ಪಾದಕ ಸಂಘಗಳು, ಸ್ವಸಹಾಯ ಸಂಘಗಳ ಸದಸ್ಯರು ಬಳಸಿಕೊಳ್ಳಬಹುದಾಗಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ತೆಂಗಿನ ಉಪ ಉತ್ಪನ್ನಗಳನ್ನು ಸಿದ್ಧಪಡಿಸಲು ಅಗತ್ಯ ಮಾರ್ಗದರ್ಶನದೊಂದಿಗೆ ಇಲ್ಲಿನ ಕೇಂದ್ರವನ್ನು ಬಳಸಿಕೊಂಡು, ಆರ್ಥಿಕ ಲಾಭ ಪಡೆಯಬಹುದು.

ಸಿಐಸಿಯಲ್ಲಿ ಸಂಸ್ಕರಣೆಗೆಂದು ಲಭ್ಯವಿರುವ ಯಂತ್ರೋಪಕರಣಗಳು
- ತೆಂಗು ಡಿಶೆಲ್ಲಿಂಗ್ ಯಂತ್ರ
- ಪಲ್ವರೈಸರ್ ಯಂತ್ರ
- ಸ್ಟೀಮ್ ಬಾಯ್ಲರ್
- ತೆಂಗಿನ ಹಾಲು ಸ್ಕ್ವೀಜರ್
- ಪ್ರಾಥಮಿಕ ಸಂಸ್ಕರಣೆ – ಶುಂಠಿ ಸ್ವಚ್ಛಗೊಳಿಸುವ ಯಂತ್ರ
- ಒಣಗಿಸುವ ಘಟಕ
- ಪಾಲಿಶ್ ಮತ್ತು ಪುಡಿ ಮಾಡುವ ಯಂತ್ರೋಪಕರಣಗಳು
- ಶೇಖರಣಾ ಕೊಠಡಿ
- ಪ್ಯಾಕಿಂಗ್ ಯಂತ್ರೋಪಕರಣಗಳು
- ಪರೀಕ್ಷಾ ಪ್ರಯೋಗಾಲಯ

ಸಿಐಸಿಯಲ್ಲಿ ಉತ್ಪನ್ನಗಳು
ತೆಂಗಿನ ಎಣ್ಣೆ, ಒಣಗಿಸಿದ ತೆಂಗಿನ ಕಾಯಿ ಪುಡಿ, ತೆಂಗಿನ ವಿನೆಗರ್ ಶುಂಠಿ ಫ್ಲೇಕ್ಸ್, ಶುಂಠಿ ಎಣ್ಣೆ



ಹೆಚ್ಚಿನ ಮಾಹಿತಿಗಾಗಿ ಸಿಐಸಿಯ ಹಿರಿಯ ವಿಜ್ಞಾನಿಗಳನ್ನು ಸಂಪರ್ಕಿಸಿ
ಹಾಸನ : ಡಾ.ವಿಶ್ವನಾಥ್ 8310431155



ರಾಜ್ಯದ ರೈತರ ಕೃಷಿ ಉತ್ಪನ್ನಗಳನ್ನು ಸಂಸ್ಕರಿಸಿ ಮಾರುಕಟ್ಟೆಗೆ ಪೂರಕ ಬ್ರ್ಯಾಂಡ್ ಆಗಿ ಹೊರಹೊಮ್ಮಲು ಅಗತ್ಯ ಯಂತ್ರೋಪಕರಣ ಸಹಕಾರ, ತರಬೇತಿ, ಮಾರ್ಗದರ್ಶನವನ್ನು ಒದಗಿಸಲೆಂದೇ ಸಾಮಾನ್ಯ ಇಂಕ್ಯುಬೇಶನ್ ಕೇಂದ್ರಗಳನ್ನು(ಸಿಐಸಿ) ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ರೈತರು ತಮ್ಮ ಉತ್ಪನ್ನಗಳೊಂದಿಗೆ ನೇರ ಮಾರುಕಟ್ಟೆಯನ್ನು ಅವಲಂಬಿಸಿದರೆ ಕಡಿಮೆ ಲಾಭ. ಆದರೆ, ಸಂಸ್ಕರಣೆಗೊಳಪಡಿಸಿ, ಮೌಲ್ಯವರ್ಧನೆ ಪಡೆದರೆ ದುಪ್ಪಟ್ಟು ಲಾಭ ಸ್ಥಳೀಯವಾಗಿ ಸಿಗಲಿದೆ. ಇದಕ್ಕೆ, ನಮ್ಮ ಸಿಐಸಿ ಘಟಕಗಳು ಸಹಕಾರಿಯಾಗಲಿವೆ. ಈ ಕೇಂದ್ರಗಳನ್ನು ಬಳಸಿಕೊಂಡು ರೈತರು ಆರ್ಥಿಕವಾಗಿ ಲಾಭ ಪಡೆಯಬಹುದು. ನಗರ ಪ್ರದೇಶದಲ್ಲಿ ಉದ್ಯೋಗ ನಿರೀಕ್ಷೆಯಲ್ಲಿ ವಿನಾ ಕಾಯುವುದಕ್ಕಿಂತ, ಗ್ರಾಮೀಣ ಭಾಗದಲ್ಲಿ ಕೃಷಿ ಉತ್ಪನ್ನಗಳ ನವೋದ್ಯಮಗಳನ್ನು ಆರಂಭಿಸಲು ಆರ್ಥಿಕ ನೆರವಿಗೂ ನಮ್ಮಲ್ಲಿ ಅವಕಾಶಗಳಿವೆ. ಈ ಅವಕಾಶಗಳನ್ನು ರೈತಾಪಿವರ್ಗ ಸದುಪಯೋಗಪಡಿಸಿಕೊಳ್ಳಬೇಕು.

ಬಿ.ಹೆಚ್.ಹರೀಶ, ಅಧ್ಯಕ್ಷರು, ಕೆಪೆಕ್

ರಾಜ್ಯದಲ್ಲಿ ಪಿಎಂಎಫ್ಎಂಇ ಯೋಜನೆಯಡಿ ರೈತರಿಗೆ ವರವಾಗುತ್ತಿರುವ ಸಿಐಸಿ ಕೇಂದ್ರಗಳು!

1. ಹಾಸನ ಕರೆಕೆರೆ ಸಮೀಪದ ಕೃಷಿ ಮಹಾವಿದ್ಯಾಲಯದ ಆವರಣದಲ್ಲಿ 2.09ಕೋಟಿ ವೆಚ್ಚದಲ್ಲಿ ಸಿಐಸಿ ಘಟಕವನ್ನು ಸ್ಥಾಪಿಸಲಾಗಿದ್ದು, ತೆಂಗು ಉತ್ಪನ್ನಗಳಿಗೆ ಅಗತ್ಯ ಸಂಸ್ಕರಣಾ ನೆರವು ವ್ಯವಸ್ಥೆಯನ್ನು ಒದಗಿಸಲಾಗಿದೆ. ಇಲ್ಲಿನ ಘಟಕದಲ್ಲಿ ರೈತರಿಗೆ ತೆಂಗಿನಕಾಯಿ ಸಂಸ್ಕರಣೆ, ತೆಂಗಿನ ಎಣ್ಣೆ ಉತ್ಪಾದನೆಗೆ ಅಗತ್ಯ ಸೌಕರ್ಯ ಕಲ್ಪಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ವಿಶ್ವನಾಥ ಅಂಗಡಿಯವರನ್ನು (8310431155) ಸಂಪರ್ಕಿಸಿ.
2. ಮಂಡ್ಯ ಜಿಲ್ಲೆಯ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದಲ್ಲಿ 1.59ಕೋಟಿ ವೆಚ್ಚದಲ್ಲಿ ಸಿಐಸಿ ಬೆಲ್ಲದ ಪಾರ್ಕ್ ಘಟಕ ಆರಂಭಿಸಲಾಗಿದ್ದು, ಕಬ್ಬಿನ ಉತ್ಪನ್ನಗಳಿಗೆ ಅಗತ್ಯ ಸೌಕರ್ಯಗಳನ್ನಿಲ್ಲಿ ವ್ಯವಸ್ಥೆ ಮಾಡಿಕೊಡಲಾಗುತ್ತಿದೆ. ಕಬ್ಬು ಸಂಸ್ಕರಣೆ, ಕಬ್ಬಿನ ರಸ, ಬೆಲ್ಲದ ಪುಡಿ, ದ್ರವ ಬೆಲ್ಲ, ಫ್ಲೇವರ್ಡ್ ಬೆಲ್ಲ ಸೇರಿದಂತೆ ಬೆಲ್ಲದ ಮೌಲ್ಯವರ್ಧನೆಗೆ ಅಗತ್ಯ ಯಂತ್ರೋಪಕರಣಗಳ ವ್ಯವಸ್ಥೆ ಇಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಕೆ.ವಿ.ಕೇಶವಯ್ಯ (9900192322) ಸಂಪರ್ಕಿಸಿ.
3. ಬೆಂಗಳೂರು ದಕ್ಷಿಣ(ರಾಮನಗರ) ಜಿಲ್ಲೆಯ ಮಾಗಡಿ ತಾಲೂಕಿನ ಚಂದುರಾಯನಹಳ್ಳಿಯ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ 2.64 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಆರಂಭಿಸಲಾಗಿದ್ದು, ತೆಂಗಿನ ಉತ್ಪನ್ನಗಳ ಸಂಸ್ಕರಣೆಗೆ ಅಗತ್ಯ ಸೌಕರ್ಯ ಸಿಗಲಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಶ್ವೇತ (8867574561) ಸಂಪರ್ಕಿಸಿ.
4. ಚಾಮರಾಜನಗರದ ಹರೇನಹಳ್ಳಿ ಫಾರ್ಮ್ ಸಮೀಪದ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಅರಿಶಿನಕ್ಕೆ ಸಂಬಂಧಿಸಿದ ಉತ್ಪನ್ನಗಳ ಮೌಲ್ಯವರ್ಧನೆಗೆ ಒಟ್ಟು 1.43 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಈ ಘಟಕದಲ್ಲಿ ಅರಿಶಿನದ ಪ್ರಾಥಮಿಕ ಮತ್ತು ಎರಡನೇ ಹಂತದ ಸಂಸ್ಕರಣೆಗೆ ಅಗತ್ಯ ಯಂತ್ರೋಪಕರಣಗಳನ್ನು ಒದಗಿಸಲಾಗಿದೆ. ಅರಿಶಿನವನ್ನು ಸ್ವಚ್ಛಗೊಳಿಸುವುದು, ಕತ್ತರಿಸುವುದು, ಒಣಗಿಸುವುದು, ಅರಿಶಿನ ಪುಡಿ ಸಿದ್ಧಗೊಳಿಸುವುದು ಸೇರಿದಂತೆ ಇನ್ನಿತರೆ ಮೌಲ್ಯವರ್ಧನೆಗೆ ಬೇಕಾದ ಯಂತ್ರೋಪಕರಣಗಳ ನೆರವನ್ನಿಲ್ಲಿ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಮೋಹನ್ ಕುಮಾರ್ (7760846678) ಸಂಪರ್ಕಿಸಿ.
5. ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆಗೆ ಒಟ್ಟು 2.08 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಈ ಘಟಕದಲ್ಲಿ ಹಣ್ಣು, ತರಕಾರಿಗಳ ಸಂಸ್ಕರಣೆ, ಜ್ಯೂಸ್ ಸಂಸ್ಕರಣೆಗೆ ಅಗತ್ಯ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಪಾಪಿರೆಡ್ಡಿ (9449866930) ಸಂಪರ್ಕಿಸಿ.
6. ಮೈಸೂರಿನ ಸಿಎಸ್‌ಐಆರ್ - ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ(ಸಿಎಫ್‌ಟಿಆರ್‌ಐ)ಯ ಆವರಣದಲ್ಲಿ ಬಾಳೆ ಮತ್ತು ಕಾಫಿಗೆ ಸಂಬಂಧಿಸಿದ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಒಟ್ಟು 2.02 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಪೇಸ್ಟ್, ಪಲ್ಪ್ ಸಂಸ್ಕರಣೆ, ಬಾಳೆ ಹಣ್ಣಿನ ಉತ್ಪನ್ನಗಳ ಸಂಸ್ಕರಣಾ ಘಟಕ, ಕಾಫಿ ಆಧಾರಿತ ವಿವಿಧ ಉತ್ಪನ್ನಗಳ ತಯಾರಿಕೆಗೆ ಅಗತ್ಯ ವ್ಯವಸ್ಥೆ ಇಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಉಮೇಶ್ ಹೆಬ್ಬಾರ್ (9448267824) ಸಂಪರ್ಕಿಸಿ.
7. ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಇರುವಕ್ಕಿಯ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿವಿಯ ಆವರಣದಲ್ಲಿ ಹಣ್ಣು ಮತ್ತು ತರಕಾರಿಗಳ ಮೌಲ್ಯವರ್ಧನೆಗೆ ಒಟ್ಟು 2.25ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪನೆಗೊಂಡಿದೆ. ಇಲ್ಲಿನ ಘಟಕದಲ್ಲಿ ಹಣ್ಣು ಮತ್ತು ತರಕಾರಿಗಳ ಪ್ರಾಥಮಿಕ ಸಂಸ್ಕರಣೆ ಸೇರಿ ವಿವಿಧ ಹಂತದ ಮೌಲ್ಯವರ್ಧನೆಗೆ ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಬಸಮ್ಮ.ಎ (9632412490)ಸಂಪರ್ಕಿಸಿ.
8. ಚಿತ್ರದುರ್ಗದ ಹಿರಿಯೂರಿನ ತೋಟಗಾರಿಕಾ ಕಾಲೇಜಿನ ಆವರಣದಲ್ಲಿ ಕಡಲೆಕಾಯಿ ಸಂಸ್ಕರಣೆಗೆ ಒಟ್ಟು 1.46ನ ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಇಲ್ಲಿನ ಘಟಕದಲ್ಲಿ ಶೇಂಗಾದ ಪ್ರಾಥಮಿಕ ಸಂಸ್ಕರಣೆ, ಮೌಲ್ಯವರ್ಧನೆಗೆ ಅಗತ್ಯ ಯಂತ್ರೋಪಕರಣಗಳ ವ್ಯವಸ್ಥೆಯಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಸುರೇಶ್ (9972554919) ಸಂಪರ್ಕಿಸಿ.
9. ಚಿಕ್ಕಮಗಳೂರಿನ ಮೂಡಿಗೆರೆಯ ತೋಟಗಾರಿಕೆ ಕಾಲೇಜಿನಲ್ಲಿ ಮಸಾಲೆಗಳ ಸಂಸ್ಕರಣೆಗೆ ಒಟ್ಟು 1.97ಕೋಟಿ ವೆಚ್ಚದಲ್ಲಿ ಸಿಐಸಿ ಘಟಕವನ್ನು ಸ್ಥಾಪಿಸಲಾಗಿದೆ. ಇಲ್ಲಿನ ಘಟಕದಲ್ಲಿ ಮಸಾಲೆಗಳನ್ನು ವಿಂಗಡಿಸಲು, ಸಂಸ್ಕರಿಸಲು, ಪ್ಯಾಕೇಜ್ ಮಾಡಲು ಅಗತ್ಯ ಸೌಕರ್ಯ ಕಲ್ಪಿಸಲಾಗಿದೆ. ಜತೆಗೆ, ಸೋಲಾರ್ ಟನಲ್ ಮೂಲಕ ಒಣಗಿಸುವ ವ್ಯವಸ್ಥೆಯೊಂದಿಗೆ ಕೋಲ್ಡ್ ಸ್ಟೋರೇಜ್(ಶೀತಲ ಸಂಗ್ರಹ) ಸಹ ವ್ಯವಸ್ಥೆಯಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಕಾಂತರಾಜ್ (9731731842) ಸಂಪರ್ಕಿಸಿ.
10. ಹಾವೇರಿಯ ದೇವಿಹೊಸೂರಿನ ತೋಟಗಾರಿಕೆ ಎಂಜಿನಿಯರಿಂಗ್ ಮತ್ತು ಆಹಾರ ತಂತ್ರಜ್ಞಾನ ಕಾಲೇಜಿನ ಆವರಣದಲ್ಲಿ ಒಟ್ಟು 2.40 ಕೋಟಿ ವೆಚ್ಚದಲ್ಲಿ ಮಾವು ಮತ್ತು ಮಸಾಲೆ ಸಂಸ್ಕರಣಾ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಇಲ್ಲಿನ ಘಟಕದಲ್ಲಿ ಮಾವಿನ ಜ್ಯೂಸ್ ಸಿದ್ಧಪಡಿಸಲು, ಹಣ್ಣುಗಳ ರಸದಿಂದ ಸಿಹಿಗಳನ್ನು ತಯಾರಿಸುವುದು, ಮಸಾಲೆ ಸಂಸ್ಕರಣೆ, ಪ್ಯಾಕಿಂಗ್ ಘಟಕವನ್ನೂ ಇಲ್ಲಿ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ತಿಪ್ಪಣ್ಣ (7975460052) ಸಂಪರ್ಕಿಸಿ.
11. ಧಾರವಾಡದ ಕೃಷಿ ವಿಜ್ಞಾನಗಳ ವಿವಿ ಆವರಣದಲ್ಲಿ ಜ್ಯೂಸ್‌ಗಳನ್ನು ಸಿದ್ಧಪಡಿಸಲು ಅಗತ್ಯ ಸೌಕರ್ಯಗಳನ್ನು ನೀಡಲಾಗಿದೆ. ಒಟ್ಟು 2.36 ಕೋಟಿ ವೆಚ್ಚದ ಸಾಮಾನ್ಯ ಇಂಕ್ಯುಬೇಶನ್ ಘಟಕದಲ್ಲಿ ಜ್ಯೂಸ್ ಸಿದ್ಧಪಡಿಸುವುದು, ಹಣ್ಣುಗಳ ನಿರ್ಜಲೀಕರಣ, ಸೋಯಾಬೀನ್ ಸಂಸ್ಕರಣಾ ಘಟಕದ ವ್ಯವಸ್ಥೆಯಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಹೇಮಲತ (9449534836) ಸಂಪರ್ಕಿಸಿ.
12. ರಾಯಚೂರಿನ ಲಿಂಗಸುಗೂರು ರಸ್ತೆಯ ಕೃಷಿ ವಿಜ್ಞಾನಗಳ ವಿವಿ ಆವರಣದಲ್ಲಿ ಮೆಣಸಿನಕಾಯಿ, ಕಡಲೆಕಾಯಿ ಸಂಸ್ಕರಣೆಗೆ ಒಟ್ಟು 3.07ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಇಲ್ಲಿನ ಘಟಕದಲ್ಲಿ ಮೆಣಸಿನಕಾಯಿಯ ಸಂಸ್ಕರಣೆ, ಮೌಲ್ಯವರ್ಧನೆ, ಸೇರಿದಂತೆ ಕಡಲೆಕಾಯಿ, ಶುಂಠಿಯ ಉತ್ಪನ್ನಗಳ ಪ್ರಕ್ರಿಯೆಗಳಿಗೂ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಉದಯಕುಮಾರ್ (9008688430) ಸಂಪರ್ಕಿಸಿ.
13. ಕೋಲಾರದ ಟಮಕದಲ್ಲಿ ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆಗೆ ಒಟ್ಟು 3.35 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗಿದೆ. ಹಣ್ಣು, ತರಕಾರಿಗಳ ನಿರ್ಜಲೀಕರಣ, ಜ್ಯೂಸ್ ತಯಾರಿಕೆ, ಬೇಕರಿ ಉತ್ಪನ್ನಗಳನ್ನು ಸಿದ್ಧಪಡಿಸುವ ವ್ಯವಸ್ಥೆಯನ್ನು ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಚಿಕ್ಕಣ್ಣ(9148889314)ಸಂಪರ್ಕಿಸಿ.
14. ವಿಜಯಪುರದ ಹಿಟ್ಟಿನಹಳ್ಳಿ ಫಾರ್ಮ್ ಸಮೀಪದ ಐಸಿಎಆರ್- ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಹಣ್ಣಿನ ರಸ, ಸಿರಿಧಾನ್ಯಗಳಿಗೆ ಸಂಬಂಧಿಸಿದಂತೆ 3.41 ಕೋಟಿ ವೆಚ್ಚದಲ್ಲಿ ಸಿಐಸಿ ಘಟಕ ಸ್ಥಾಪಿಸಲಾಗುತ್ತಿದೆ. ಇಲ್ಲಿನ ಘಟಕದಲ್ಲಿ. ಹಣ್ಣು, ತರಕಾರಿಗಳ ನಿರ್ಜಲೀಕರಣ, ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ಸಹಕಾರಿಯಾಗಲಿದೆ. ಹೆಚ್ಚಿನ ಮಾಹಿತಿಗಾಗಿ ಹಿರಿಯ ವಿಜ್ಞಾನಿ ಡಾ.ಕಾಶಿಬಾಯಿ(9448246089) ಸಂಪರ್ಕಿಸಿ.



ರಾಜ್ಯದ ವಿವಿಧ ಜಿಲ್ಲೆಗಳ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು PMFME ಯೋಜನೆಯಡಿಯಲ್ಲಿ 32.16ಕೋಟಿ ಅನುದಾನದಲ್ಲಿ ಒಟ್ಟು 14 ಸಿಐಸಿಗಳನ್ನು ರಾಜ್ಯದ ಕೃಷಿ/ ತೋಟಗಾರಿಕೆ ವಿಶ್ವವಿದ್ಯಾನಿಲಯ ಹಾಗೂ ಇತರೆ ತಾಂತ್ರಿಕ ಸಂಸ್ಥೆಗಳಲ್ಲಿ ಸ್ಥಾಪಿಸಲು ಕೆಪೆಕ್ ಸಂಸ್ಥೆಯು ಕ್ರಮ ಕೈಗೊಂಡಿರುತ್ತದೆ. ಆಯಾ ಭಾಗದ ಪ್ರಗತಿಪರ ರೈತರು/ ರೈತ ಉತ್ಪಾದಕ ಸಂಸ್ಥೆಗಳು/ ನವೋದ್ಯಮಿಗಳಿಗೆ ಈ ಕೇಂದ್ರಗಳು ವರದಾನವಾಗಲಿದೆ. ಈ ಕೇಂದ್ರಗಳಲ್ಲಿ ವಿವಿಧ ಸಂಸ್ಕರಣಾ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತದೆ. ರೈತರನ್ನು ಉದ್ಯಮಿಗಳಾಗಿಸಲು ಅತ್ಯಂತ ಸಹಕಾರಿಯಾಗಲಿವೆ. ತಮ್ಮ ಉತ್ಪನ್ನಗಳಿಗೆ ಉತ್ತಮ ಮೌಲ್ಯ ದೊರಕಿಸಿಕೊಳ್ಳುವ ನಿಟ್ಟಿನಲ್ಲಿ ತನ್ಮೂಲಕ ಆದಾಯವನ್ನು ದ್ವಿಗುಣಗೊಳಿಸುವಲ್ಲಿ ಉಪಯುಕ್ತವಾಗಲಿವೆ.

ಸಿ.ಎನ್.ಶಿವಪ್ರಕಾಶ್, ವ್ಯವಸ್ಥಾಪಕನಿರ್ದೇಶಕರು, ಕೆಪೆಕ್

42 ಸಾವಿರ ಮಂದಿಗೆ ಹಾವು ಕಡಿತ

5 ವರ್ಷದಲ್ಲಿ ಹೆಚ್ಚಿದ ಪ್ರಕರಣ
ಮೃತರ ಸಂಖ್ಯೆ ಪ್ರತೀ ವರ್ಷ ಹೆಚ್ಚಳ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಹಾವು ಕಡಿತ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ಐದು ವರ್ಷಗಳಲ್ಲಿ 42 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ.

ನಾಯಿ ಕಡಿತದ ಜತೆಗೆ ಹಾವು ಕಡಿತ ಪ್ರಕರಣಗಳೂ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿವೆ. ಆರೋಗ್ಯ ಇಲಾಖೆ ಪ್ರಕಾರ, ಈ ವರ್ಷ 18 ಸಾವಿರಕ್ಕೂ ಅಧಿಕ ಮಂದಿ ಹಾವು ಕಡಿತಕ್ಕೆ ಒಳಗಾಗಿದ್ದಾರೆ. ವರ್ಷವೊಂದರಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ದುಪ್ಪಟ್ಟಾಗುತ್ತಿದೆ. ಇದೇ ವೇಳೆ ಕಡಿತದಿಂದ ಮೃತಪಡುವವರ ಸಂಖ್ಯೆಯೂ ಹೆಚ್ಚಳವಾಗುತ್ತಿದ್ದು, ಐದು ವರ್ಷಗಳಲ್ಲಿ 267 ಮಂದಿ ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಹಾವು ಕಡಿತವನ್ನು ‘ಘೋಷಿತ ಕಾಯಿಲೆ’ಯಡಿ ತರಲಾಗಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳ ಜತೆಗೆ ಖಾಸಗಿ ಆಸ್ಪತ್ರೆಗಳೂ ಕಡ್ಡಾಯವಾಗಿ ಈ ಪ್ರಕರಣಗಳ ಮಾಹಿತಿಯನ್ನು ಇಲಾಖೆಗೆ ಒದಗಿಸಬೇಕಿದೆ. ಇದರಿಂದಾಗಿ ರಾಜ್ಯದ ವಿವಿಧೆಡೆ ವರದಿಯಾಗುತ್ತಿರುವ ಪ್ರಕರಣಗಳ ನಿಖರ ಮಾಹಿತಿ ಇಲಾಖೆಗೆ ಲಭ್ಯವಾಗುತ್ತಿದೆ. ಪರಿಣಾಮ, 2021ರಲ್ಲಿ ಸಾವಿರದ ಗಡಿಯ ಆಸುಪಾಸಿನಲ್ಲಿದ್ದ ಹಾವು ಕಡಿತ ಪ್ರಕರಣಗಳ ಸಂಖ್ಯೆ, ಈಗ ಗಣನೀಯ ಏರಿಕೆಯಾಗಿದೆ.

ಚಿಕಿತ್ಸೆಗೆ ವ್ಯವಸ್ಥೆ: 2030ರ ವೇಳೆಗೆ ಹಾವು ಕಡಿತ ಮರಣವನ್ನು ಅರ್ಧದಷ್ಟು ಇಳಿಸುವ ಗುರಿಯನ್ನು ಇಲಾಖೆ ಹಾಕಿಕೊಂಡಿದೆ. ಇದಕ್ಕೆ ಪೂರಕವಾಗಿ ಹಾವು ಕಡಿತಕ್ಕೆ ಒಳಗಾದವರಿಗೆ ಆಂಬುಲೆನ್ಸ್ ಸೇವೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ.

‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಯೋಜನೆಯಡಿ ಹಾವು ಕಡಿತ ಪ್ರಕರಣಗಳ ಚಿಕಿತ್ಸೆಯನ್ನು ಸೇರ್ಪಡೆ ಮಾಡಲಾಗಿದೆ. ಈ ಚಿಕಿತ್ಸೆಗೆ ದರ ನಿಗದಿಪಡಿಸಿರುವ ಇಲಾಖೆ, ಮುಂಗಡ ಹಣಕ್ಕೆ ಬೇಡಿಕೆ ನೀಡದೆ ಚಿಕಿತ್ಸೆ ಒದಗಿಸುವಂತೆ ಆದೇಶ ಹೊರಡಿಸಿದೆ. ಹಾವು ಕಡಿತಕ್ಕೊಳಗಾದ ಸಂತ್ರಸ್ತರಿಗೆ ನೀಡಿದ ಚಿಕಿತ್ಸೆಗಾಗಿ ಆಸ್ಪತ್ರೆಯ ಶುಲ್ಕವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ (ಸಾಸ್ಟ್) ಮೂಲಕ ಸರ್ಕಾರವೇ ನಿಗದಿತ ಆಸ್ಪತ್ರೆಗೆ ಮರುಪಾವತಿ ಮಾಡಲಿದೆ.

ಹಾವು ಕಡಿತ ಪ್ರಕರಣಗಳಲ್ಲಿ ದಿನವೊಂದಕ್ಕೆ ಸಾಮಾನ್ಯ ವಾರ್ಡ್‌ಗೆ ಸರ್ಕಾರಿ ಆಸ್ಪತ್ರೆಗೆ ₹1,350 ನಿಗದಿಪಡಿಸಿದರೆ, ಈ ಶುಲ್ಕ ಖಾಸಗಿ ಆಸ್ಪತ್ರೆಗೆ ₹ 2,300 ಇದೆ. ವೆಂಟಿಲೇಟರ್ ರಹಿತ ಐಸಿಯು ವಾರ್ಡ್‌ಗೆ ಕ್ರಮವಾಗಿ ₹2,700 ಮತ್ತು ₹8,800 ಗೊತ್ತುಪಡಿಸಲಾಗಿದೆ. ವೆಂಟಿಲೇಟರ್ ಸಹಿತ ಐಸಿಯು ವಾರ್ಡ್‌ಗೆ ₹3,375 ಹಾಗೂ ₹10,350 ನಿಗದಿಪಡಿಸಲಾಗಿದೆ.

‘ಹಾವು ಕಡಿತ ಪ್ರಕರಣಗಳಲ್ಲಿ ಮರಣ ತಡೆಗೆ ಎಲ್ಲೆಡೆ ಚಿಕಿತ್ಸೆ ಲಭ್ಯತೆಗೆ ವ್ಯವಸ್ಥೆ ಮಾಡಲಾಗಿದೆ. ಹಾವು ಕಡಿತಕ್ಕೆ ಒಳಗಾದವರು ಚಿಕಿತ್ಸೆ ಪಡೆಯುವುದು ವಿಳಂಬವಾದಲ್ಲಿ ಜೀವಕ್ಕೆ ತೊಂದರೆಯಾಗುತ್ತದೆ. ಘೋಷಿತ ರೋಗವೆಂದು ಗುರುತಿಸಿದ್ದರಿಂದ ಹಾವು ಕಡಿತದಿಂದ ಉಂಟಾಗುತ್ತಿದ್ದ ಪ್ರಾಣ ಹಾನಿ ತಡೆಯಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಒಂದು ವೇಳೆ ಹಾವು ಕಡಿತದಿಂದ ವ್ಯಕ್ತಿ ಮರಣ ಹೊಂದಿದಲ್ಲಿ ‘ಸಾವಿನ ಲೆಕ್ಕಗಳ ವರದಿ’ (ಡೆತ್ ಆಡಿಟ್) ಮಾಡಿಸಲಾಗುತ್ತಿದೆ. ಇದರಿಂದಾಗಿ ಹಾವು ಕಡಿತದ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತಿದೆ’ ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.



ವರ್ಷವಾರು ಹಾವು ಕಡಿತ ಪ್ರಕರಣ

ವರ್ಷ	ಹಾವು ಕಡಿತ	ಮರಣ
2021	950	00
2022	3,439	17
2023	6,596	19
2024	13,235	100
2025	18,611	131

ಉಚಿತವಾಗಿ ‘ಆ್ಯಂಟಿ ಸ್ನೇಕ್ ವೆನಮ್’

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ ‘ಆ್ಯಂಟಿ ಸ್ನೇಕ್ ವೆನಮ್’ ಔಷಧವನ್ನು ಉಚಿತವಾಗಿ ಒದಗಿಸಲಾಗುತ್ತದೆ. ಹಾವಿನ ನಂಜಿನ ಲಕ್ಷಣಗಳು ವ್ಯಕ್ತಿಗೆ ಕಂಡುಬಂದಲ್ಲಿ ತಕ್ಷಣ ರೋಗಿಯ ಅಥವಾ ಸಂಬಂಧಿಕರ ಒಪ್ಪಿಗೆ ಪತ್ರ ಪಡೆದು ಈ ಔಷಧ ನೀಡಲಾಗುತ್ತದೆ.

ಹಾವು ಕಡಿತದ ಚಿಕಿತ್ಸೆ ಬಗ್ಗೆ ರಾಜ್ಯದಲ್ಲಿ ಸರ್ಕಾರಿ ವೈದ್ಯಾಧಿಕಾರಿಗಳು ಹಾಗೂ ಇತರೇ ಆರೋಗ್ಯ ಸಿಬ್ಬಂದಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ.

‘ಹೆದರಬೇಡಿ– ವೈದ್ಯರನ್ನು ಸಂಪರ್ಕಿಸಿ’

‘ಹಾವು ಕಡಿತಕ್ಕೆ ಒಳಗಾದರೆ ಹೆದರಬಾರದು. ಗಾಯವಾದ ಸಂದರ್ಭದಲ್ಲಿ ಬಿಗಿಯಾದ ಬಟ್ಟೆ ಕಟ್ಟುವುದು, ಗಾಯವನ್ನು ಕೊಯ್ಯುವುದು, ಬಾಯಿಯಿಂದ ವಿಷವನ್ನು ಹೀರುವುದು ಮಾಡಬಾರದು. ಹಾವು ಕಚ್ಚಿದ ಭಾಗಕ್ಕೆ ಏನೂ ಮಾಡಬಾರದು. ಹಾವು ಕಚ್ಚಿದ ಭಾಗದಲ್ಲಿ ಪಾದರಕ್ಷೆ, ಆಭರಣಗಳಿದ್ದಲ್ಲಿ ತೆಗೆಯಬೇಕು. ವ್ಯಕ್ತಿಯನ್ನು ಎಡಭಾಗಕ್ಕೆ ಮಲಗಿಸಿ, ಕಚ್ಚಿದ ಭಾಗ ಅಲುಗಾಡದಂತೆ ನೋಡಿಕೊಳ್ಳಬೇಕು. ತಕ್ಷಣ ಆಂಬುಲೆನ್ಸ್ ಅಥವಾ ಇನ್ನಿತರೆ ವಾಹನದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಬೇಕು’ ಎಂದು ವೈದ್ಯಕೀಯ ತಜ್ಞ ಡಾ. ಅನ್ಸರ್ ಅಹಮದ್ ತಿಳಿಸಿದರು.

ಚಿಟಿಕೆ ಸುದ್ದಿ

ಮುನಿಯಪ್ಪ ನಿವಾಸದಲ್ಲಿ ಔತಣಕೂಟ

ಬೆಂಗಳೂರು: ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ಮನೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಔತಣ ಕೂಟದಲ್ಲಿ ವಿಧಾನಪರಿಷತ್ ಸದಸ್ಯ ಬಿ. ಕೆ.ಹರಿಪ್ರಸಾದ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಭಾಗವಹಿಸಿದ್ದರು.

ಅಧಿಕಾರ ಹಂಚಿಕೆ ಕುರಿತು ಕೆಲ ಸಚಿವರು, ಶಾಸಕರು, ಮುಖಂಡರ ಹೇಳಿಕೆಗಳಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ. ಪಕ್ಷದ ಆಂತರಿಕ ಕಲಹ, ಹೇಳಿಕೆಗಳು ಹೀಗೆಯೇ ಮುಂದುವರಿದರೆ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ. ಈ ಕುರಿತು ದೆಹಲಿಗೆ ತೆರಳಿ ರಾಜ್ಯದ ರಾಜಕೀಯ ಬೆಳವಣಿಗೆಗಳ ಮಾಹಿತಿ ನೀಡಲು, ಕೇಂದ್ರ ನಾಯಕತ್ವ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಧ್ಯ ಪ್ರವೇಶಿಸಿ, ಗೊಂದಲಗಳನ್ನು ಶೀಘ್ರ ಬಗೆಹರಿಸಲು ಮಾಜಿ ಸಚಿವ ಎಚ್. ಆಂಜನೇಯ, ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಮಾಜಿ ಶಾಸಕರಾದ ವೆಂಕಟರಮಣಯ್ಯ ಅವರು ಸಭೆಯಲ್ಲಿ ಸಲಹೆ ನೀಡಿದ್ದಾರೆ.

ಔತಣಕೂಟದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಮುನಿಯಪ್ಪ, ಹರಿಪ್ರಸಾದ್, ‘ಪಕ್ಷದಲ್ಲಾಗುತ್ತಿರುವ ಬೆಳವಣಿಗೆಗಳಿಂದ ಪಕ್ಷ ಹಾಗೂ ಸರ್ಕಾರಕ್ಕೆ ಹಾನಿಯಾಗುತ್ತಿದೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರಿಸಿಕೊಂಡು ಗೊಂದಲ ಬಗೆಹರಿಸುವಂತೆ ಕೋರಲು ನಿರ್ಧರಿಸಿದ್ದೇವೆ’ ಎಂದರು.

ಶೇ 50ರ ರಿಯಾಯಿತಿ ₹7 ಕೋಟಿ ಸಂಗ್ರಹ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ರಾಜ್ಯ ಸರ್ಕಾರವು ಕಲ್ಪಿಸಿದ್ದ ಅವಕಾಶವನ್ನು ಬಳಸಿಕೊಂಡು, ಇದುವರೆಗೂ 2,47,777 ವಾಹನಗಳ ಮಾಲೀಕರು ದಂಡ ಪಾವತಿ ಮಾಡಿದ್ದಾರೆ. ಕಳೆದ ಎಂಟು ದಿನಗಳಲ್ಲಿ ₹7.02 ಕೋಟಿ ದಂಡ ಸಂಗ್ರಹವಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಸಾರಿಗೆ ಇಲಾಖೆ ಹಾಗೂ ಸಂಚಾರ ಪೊಲೀಸರು ಸಲ್ಲಿಸಿದ್ದ ಪ್ರಸ್ತಾವಕ್ಕೆ ಅನುಮೋದನೆ ನೀಡಿದ್ದ ರಾಜ್ಯ ಸರ್ಕಾರವು, ನ.21ರಿಂದ ದಂಡ ಪಾವತಿಸಲು ಅವಕಾಶ ನೀಡಿತ್ತು.


ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಡಿ.12ರ ವರೆಗೆ ರಿಯಾಯಿತಿ ಅಡಿ ದಂಡ ಪಾವತಿಗೆ ಅವಕಾಶವಿದೆ. ಕೆಎಸ್‌ಪಿ ಆ್ಯಪ್, ಬಿಟಿಪಿ, ಬೆಂಗಳೂರು ಒನ್, ಕರ್ನಾಟಕ ಒನ್, ಟ್ರಾಫಿಕ್ ಪೊಲೀಸರ ಬಳಿಯೂ ತಮ್ಮ ದಂಡದ ರಿಯಾಯಿತಿ ಮೊತ್ತವನ್ನು ವಾಹನಗಳ ಮಾಲೀಕರು ಪಾವತಿಸಬಹುದು. ಡಿ.12ರ ನಂತರ ಪೂರ್ಣ ಪ್ರಮಾಣದಲ್ಲಿ ದಂಡ ಪಾವತಿಸಬೇಕಾಗುತ್ತದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕೆ.ಎಚ್.ಮುನಿಯಪ್ಪಗೆ ಸಿ.ಎಂ ಸ್ಥಾನ ನೀಡಿ: ಸ್ವಾಮೀಜಿ ಆಗ್ರಹ

ಚಿಕ್ಕಬಳ್ಳಾಪುರ: ಆಹಾರ ಸಚಿವ ಹಾಗೂ ಮಾದಿಗ ಸಮಾಜದ ಮುಖಂಡ ಕೆ.ಎಚ್. ಮುನಿಯಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆದಿ ಜಾಂಬವ ಮಠದ ಷಡಕ್ಷರಮುನಿ ಸ್ವಾಮೀಜಿ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆಯಾ ಸಮುದಾಯದ ಹಿತ ಕಾಪಾಡಬೇಕಾದದ್ದು ಆಯಾ ಸಮಾಜದ ಸ್ವಾಮೀಜಿ ಕರ್ತವ್ಯ. ಆ ದಿಕ್ಕಿನಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂದಿದ್ದಾರೆ. ಅದೇ ರೀತಿಯಲ್ಲಿ ಮಾದಿಗ ಸಮುದಾಯದ ಸ್ವಾಮೀಜಿಯಾಗಿ ಸಮುದಾಯದ ಪರವಾಗಿ ಹಕ್ಕೊತ್ತಾಯ ಮಾಡುತ್ತಿದ್ದೇನೆ’ ಎಂದರು.



ಮುಖ್ಯಮಂತ್ರಿ ಬದಲಾವಣೆ ವಿಚಾರ ಚರ್ಚೆಯಲ್ಲಿದೆ. ದಲಿತ ಮುಖ್ಯಮಂತ್ರಿ ವಿಚಾರ ಬಂದರೆ ಮಾದಿಗ ಸಮುದಾಯಕ್ಕೆ ಅವಕಾಶ ನೀಡಬೇಕು ಎಂದು ಹೇಳಿದರು. ಮುಖ್ಯಮಂತ್ರಿ ಸ್ಥಾನ ನೀಡಲು ಸಾಧ್ಯವಾಗದಿದ್ದರೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ವರಿಷ್ಠರ ಭೇಟಿಗೆ ದೆಹಲಿಗೆ ಬಂದ ಡಿ.ಕೆ. ಸುರೇಶ್


ನವದೆಹಲಿ: ಅಧಿಕಾರ ಹಸ್ತಾಂತರದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನವೊಲಿಸುವಂತೆ ಹೈಕಮಾಂಡ್‌ಗೆ ಒತ್ತಡ ಹೇರಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್ ಶುಕ್ರವಾರ ರಾಷ್ಟ್ರ ರಾಜಧಾನಿಗೆ ಬಂದಿದ್ದಾರೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭೇಟಿಗೆ ಸುರೇಶ್ ಕಾಲಾವಕಾಶ ಕೋರಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಸದ್ಯ ನವದೆಹಲಿಯಲ್ಲಿಲ್ಲ. ಹಾಗಾಗಿ, ಅವರಿಬ್ಬರ ಭೇಟಿ ಸಾಧ್ಯತೆ ಕಡಿಮೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸುರೇಶ್ ಶನಿವಾರ ಭೇಟಿ ಮಾಡುವ ಸಂಭವ ಇದೆ.

ನಾಯಕತ್ವ ಕಿತ್ತಾಟ: ಆಡಳಿತ ಸ್ಥಗಿತ–ಬಿಜೆಪಿ

ಬೆಂಗಳೂರು: ‘ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಸಂಬಂಧ ಕಾಂಗ್ರೆಸ್ ನಾಯಕರು ಹಾದಿ–ಬೀದಿಯಲ್ಲಿ ಕಿತ್ತಾಡಿಕೊಳ್ಳುತ್ತಿದ್ದು, ರಾಜ್ಯದ ಆಡಳಿತವನ್ನು ಕಡೆಗಣಿಸಿದ್ದಾರೆ. ಸರಳ ಬಹುಮತಕ್ಕಿಂತ ಹೆಚ್ಚು ಶಾಸಕರಿದ್ದರೂ, ಆಡಳಿತ ನಡೆಸುವಲ್ಲಿ ವಿಫಲರಾಗಿದ್ದಾರೆ’ ಎಂದು ಬಿಜೆಪಿ ನಾಯಕರು ದೂರಿದ್ದಾರೆ.

‘ಬಹುಮತವಿದ್ದೂ ವಿಫಲ ಸರ್ಕಾರ’



ವಿಜಯೇಂದ್ರ

‘ರಾಜ್ಯ ಎತ್ತ ಹೋಗುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ. 140 ಶಾಸಕರಿದ್ದೂ ಸುಗಮವಾಗಿ ಆಡಳಿತ ನಡೆಸುವಲ್ಲಿ ಕಾಂಗ್ರೆಸ್ ವಿಫಲವಾಗುತ್ತಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕಾಂಗ್ರೆಸ್‌ನ ಒಳಜಗಳದಿಂದ ರಾಜ್ಯದಲ್ಲಿ ಯಾವ ಕೆಲಸವೂ ನಡೆಯುತ್ತಿಲ್ಲ. ಸರ್ಕಾರ ನಡೆಸುವ ಬದಲಿಗೆ, ‘ಎಕ್ಸ್’ನಲ್ಲಿ ಪೋಸ್ಟ್ ಮಾಡುತ್ತಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸರ್ಕಾರ ಮತ್ತು ನಾಯಕರ ಈ ನಡೆಯ ವಿರುದ್ಧ ರಾಜ್ಯದ ಜನರು ರೋಸಿಹೋಗಿದ್ದಾರೆ. ಸಚಿವರು ಏನೇನೂ ಹೇಳಿಕೆ ನೀಡುತ್ತಿದ್ದಾರೆ ಎಂಬುದನ್ನು ಗಮನಿಸಿ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ‘ಮಾತಿನ ಶಕ್ತಿಯೇ ವಿಶ್ವದ ಶಕ್ತಿ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ತಾವು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಎಂಬುದು ಅದರರ್ಥ’ ಎಂದರು.

‘ಆಡಳಿತ ಯಂತ್ರ ಸ್ಥಗಿತ’



ಛಲವಾದಿ ನಾರಾಯಣ ಸ್ವಾಮಿ

‘ರಾಜ್ಯದಲ್ಲಿ ಆಡಳಿತ ಯಂತ್ರ ಸ್ಥಗಿತವಾಗಿದೆ. ರಾಜ್ಯದ ಎಲ್ಲ ಚಟುವಟಿಕೆಗಳೂ ನಿಂತು ಹೋಗಿವೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್‌ನ ರಾಜ್ಯ ನಾಯಕರ ಅಧಿಕಾರ ದಾಹದಿಂದ, ಜನರಿಗೆ ತೊಂದರೆಯಾಗುತ್ತಿದೆ. ಸರ್ಕಾರಿ ಕಚೇರಿಗಳಲ್ಲಿ ಯಾವುದೇ ಕೆಲಸಗಳು ಆಗುತ್ತಿಲ್ಲ. ಜನರ ಗೋಳು ಕೇಳುವವರು ಇಲ್ಲದಂತಾಗಿದೆ’ ಎಂದರು.

‘ಒಂದೆಡೆ ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಿಲ್ಲ. ಇನ್ನೊಂದೆಡೆ ಮೆಕ್ಕೆಜೋಳ ಖರೀದಿ ನಡೆಯುತ್ತಿಲ್ಲ. ರೈತರ ಸಮಸ್ಯೆಗಳನ್ನು ಯಾರೂ ಕೇಳಿಸಿಕೊಳ್ಳುತ್ತಿಲ್ಲ ಮತ್ತು ಬಗೆಹರಿಸುತ್ತಲೂ ಇಲ್ಲ. ಅಂತಹದ್ದೊಂದು ಶೋಚನೀಯ ಸ್ಥಿತಿಗೆ ರಾಜ್ಯವನ್ನು ಕಾಂಗ್ರೆಸ್ ನಾಯಕರು ದೂಡಿದ್ದಾರೆ’ ಎಂದು ಆರೋಪಿಸಿದರು.

‘ಸರ್ಕಾರ ವಿಫಲ’

ಬೆಳಗಾವಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಧ್ಯೆ ನಡೆದಿರುವ ಆಂತರಿಕ ಜಗಳದಿಂದ ರಾಜ್ಯ ಸರ್ಕಾರ ಸಮರ್ಥ ಆಡಳಿತ ನೀಡುವಲ್ಲಿ ವಿಫಲವಾಗಿದೆ’ ಎಂದು ಸಂಸದ ಜಗದೀಶ ಶೆಟ್ಟರ್ ಆರೋಪಿಸಿದರು.




ಜಗದೀಶ ಶೆಟ್ಟರ್

ಬೆಳಗಾವಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಕುಸಿದಿದೆ. ರಾಜ್ಯಪಾಲರು ಮಧ್ಯಪ್ರವೇಶಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲು ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಬೇಕು. ಕಾಂಗ್ರೆಸ್‌ನಲ್ಲಿ ಅಧಿಕಾರಕ್ಕಾಗಿ ನಡೆದಿರುವ ಜಗಳ ಇತ್ಯರ್ಥವಾದ ಬಳಿಕ ಅದನ್ನು ರದ್ದುಗೊಳಿಸಬಹುದು’ ಎಂದರು.

‘ಇವರಿಬ್ಬರ ಮಧ್ಯೆ ಜಗಳ ಆರಂಭವಾಗಿ ಹಲವು ತಿಂಗಳಾಗಿದೆ. ಅತ್ತ ಸಿದ್ದರಾಮಯ್ಯ ರಾಜೀನಾಮೆ ನೀಡಲು ಸಿದ್ಧರಿಲ್ಲ. ಇತ್ತ ಶಿವಕುಮಾರ್ ಪಟ್ಟು ಸಡಿಲಿಸುತ್ತಿಲ್ಲ. ಇದು ಆಡಳಿತದ ಮೇಲೆ ದುಷ್ಪರಿಣಾಮ ಬೀರುತ್ತಿದೆ’ ಎಂದರು.

‘ಅಸಹಾಯಕವಾದ ಕಾಂಗ್ರೆಸ್’

ಹಾವೇರಿಯಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ‘ಮುಖ್ಯಮಂತ್ರಿ ಕುರ್ಚಿಗಾಗಿ ನಡೆದಿರುವ ಹಗ್ಗ ಜಗ್ಗಾಟ ತೀವ್ರ ಸ್ವರೂಪ ಪಡೆದಿದೆ. ಕಾಂಗ್ರೆಸ್ ಹೈಕಮಾಂಡ್ ಅಸಹಾಯಕವಾಗಿದೆ. ಆಡಳಿತ ಸಂಪೂರ್ಣ ಕುಸಿದಿದೆ. ರಾಜ್ಯದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿವೆ’ ಎಂದು ಆರೋಪಿಸಿದರು.



ಬೊಮ್ಮಾಯಿ

‘ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ಅಧಿಕಾರ ವಿಷಯವನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಬೇರೆ ಬೇರೆ ರೀತಿಯಲ್ಲಿ ಈ ಸಮಸ್ಯೆ ಪರಿಹರಿಸಲು ಯತ್ನಿಸಿದರೂ ಇಬ್ಬರು ನಾಯಕರು ಒಪ್ಪುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ, ರಾಜ್ಯದಲ್ಲಿ ಅರಾಜಕತೆ ಪರಿಸ್ಥಿತಿ ನಿರ್ಮಾಣವಾಗಲಿದೆ’ ಎಂದರು.

ಸಿಎಸ್‌ಆರ್ ನಿಧಿ: ರಾಜ್ಯದಲ್ಲೇ ಬಳಕೆಗೆ ಹೊಸ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಪೊರೇಟ್ ಕಂಪನಿಗಳು ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್‌ಆರ್) ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸುವುದನ್ನು ಕಡ್ಡಾಯಗೊಳಿಸಲು ಸರ್ಕಾರ ಮುಂದಾಗಿದೆ.

ಸಿಎಸ್‌ಆರ್ ನಿಧಿ ಬಳಕೆ ಕುರಿತು ರಾಜ್ಯ ಸರ್ಕಾರ ಕರಡು ನೀತಿ ರೂಪಿಸಿದ್ದು, ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಸೇರಿದಂತೆ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ, ಹೊಸ ಸರ್ಕಾರಿ ಶಾಲೆಗಳ ಸ್ಥಾಪನೆ, ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಸಿಎಸ್‌ಆರ್ ನಿಧಿಯನ್ನು ಶಾಲಾ ಶಿಕ್ಷಣದ ಅಭಿವೃದ್ಧಿಗೆ ಬಳಸಿಕೊಳ್ಳುವುದು, ಪ್ರತಿ ಪಂಚಾಯಿತಿ ಮಟ್ಟದಲ್ಲಿ ಕನಿಷ್ಠ ಒಂದು ಕೆಪಿಎಸ್ ಶಾಲೆ ಆರಂಭಿಸುವುದು ನೀತಿಯ ಪ್ರಮುಖ ಉದ್ದೇಶವಾಗಿದೆ.

ರಾಜ್ಯದಲ್ಲಿನ ವಿವಿಧ ಕಾರ್ಪೊರೇಟ್ ಕಂಪನಿಗಳಿಂದ ವಾರ್ಷಿಕವಾಗಿ ₹8,500 ಕೋಟಿ ಸಿಎಸ್‌ಆರ್ ನಿಧಿಯಡಿ ಲಭ್ಯವಿದೆ.

> ಸಿಎಸ್‌ಆರ್ ನಿಧಿಯ ಕರಡು ನೀತಿಗೆ ಸಣ್ಣಪುಟ್ಟ ತಿದ್ದುಪಡಿ ಮಾಡಲು ಗುರುವಾರ ನಡೆದ ಸಂಪುಟ ಸಭೆ ಸೂಚಿಸಿದೆ. ಡಿ.4ರಂದು ನಡೆಯಲಿರುವ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ಆದರೆ, ಬಹುತೇಕ ಕಂಪನಿಗಳು ಈ ಮೊತ್ತವನ್ನು ಬೇರೆ ರಾಜ್ಯಗಳಿಗೂ ಖರ್ಚು ಮಾಡುತ್ತಿವೆ. ರಾಜ್ಯದಲ್ಲೇ ಬಳಕೆ ಮಾಡುವ ಕುರಿತು ಇದುವರೆಗೂ ಯಾವುದೇ ನೀತಿ ಅಸ್ತಿತ್ವದಲ್ಲಿಲ್ಲ. ಹೊಸ ನೀತಿ ಅಂಗೀಕಾರವಾದರೆ ಸಿಎಸ್‌ಆರ್ ನಿಧಿಯನ್ನು ಕಂಪನಿಗಳು ಕಡ್ಡಾಯವಾಗಿ ಕರ್ನಾಟಕಕ್ಕೇ ಖರ್ಚು ಮಾಡಬೇಕಾಗುತ್ತದೆ.

ಸಿಎಸ್‌ಆರ್ ನಿಧಿ ರಾಜ್ಯದಲ್ಲಿನ ಶಿಕ್ಷಣ ಕ್ಷೇತ್ರಕ್ಕೆ ನಿರೀಕ್ಷಿತ ಮಟ್ಟದಲ್ಲಿ ಲಭ್ಯವಾಗದ ಕಾರಣ ಕೆಪಿಎಸ್ ಶಾಲೆಗಳ ಸ್ಥಾಪನೆಗೆ ಶಾಲಾ ಶಿಕ್ಷಣ ಇಲಾಖೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನಿಂದ ಸಾಲ ಪಡೆದಿದೆ.

ನಾರಾಯಣ ಗುರು- ಮಹಾತ್ಮ ಗಾಂಧೀಜಿ ಸಂವಾದದ ಶತಮಾನೋತ್ಸವ ಡಿ.3ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ವೈಕಂ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮಹಾತ್ಮ ಗಾಂಧೀಜಿ ಬಂದಿದ್ದಾಗ ಅವರು ಮತ್ತು ನಾರಾಯಣ ಗುರುಗಳ ನಡುವೆ ಐತಿಹಾಸಿಕ ಸಂವಾದ ನಡೆದಿತ್ತು. ಅದರ ಶತಮಾನೋತ್ಸವವನ್ನು ಡಿ.3ರಂದು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಆಚರಿಸಲಾಗುವುದು ಎಂದು ಶತಮಾನೋತ್ಸವ ಕೇಂದ್ರ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದರು.



ಬಿ.ಕೆ. ಹರಿಪ್ರಸಾದ್

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘ಕೇರಳದ ವೈಕಂನಲ್ಲಿ ದೇವಾಲಯದ ಎದುರಿನ ರಸ್ತೆಯಲ್ಲಿ ಅಸ್ಪೃಶ್ಯರು ಮತ್ತು ಹಿಂದುಳಿದವರಿಗೆ ನಡೆದುಕೊಂಡು ಹೋಗಲು ಅವಕಾಶ ನೀಡಬೇಕು ಎಂದು ಸತ್ಯಾಗ್ರಹ ನಡೆದಿತ್ತು. ಅದರಲ್ಲಿ ಪಾಲ್ಗೊಳ್ಳಲು ಬಂದಿದ್ದ ಗಾಂಧೀಜಿ ಅವರು ಶಿವಗಿರಿಯಲ್ಲಿ ನಾರಾಯಣ ಗುರುಗಳನ್ನು ಭೇಟಿಯಾಗಿ ಸುದೀರ್ಘ ಚರ್ಚೆ ನಡೆಸಿದ್ದರು. ನಾರಾಯಣ ಗುರುಗಳ ಪ್ರಭಾವದಿಂದಾಗಿ ಆನಂತರ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣಾ ಆಂದೋಲನ ಆರಂಭಿಸಿದ್ದರು. ಅಲ್ಲಿವರೆಗೆ ಯಂಗ್ ಇಂಡಿಯಾ ಪತ್ರಿಕೆ ನಡೆಸುತ್ತಿದ್ದ ಗಾಂಧೀಜಿ ಆನಂತರ ಹರಿಜನ ಪತ್ರಿಕೆ ಶುರು ಮಾಡಿದ್ದರು’ ಎಂದು ವಿವರಿಸಿದರು.

ಈ ನೆನಪಿನಲ್ಲಿ ವರ್ಕಲ ಶಿವಗಿರಿ ಮಠ, ಮಂಗಳೂರು ವಿಶ್ವವಿದ್ಯಾಲಯದ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠವು ಹಮ್ಮಿಕೊಂಡಿರುವ ಶತಮಾನೋತ್ಸವವನ್ನು ಬೆಳಿಗ್ಗೆ 9.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಶಿವಗಿರಿ ಮಠದ ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ ನೀಡುವರು. ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಅಧ್ಯಕ್ಷತೆ ವಹಿಸುವರು. ಲೋಕಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಕೆ.ಸಿ. ವೇಣುಗೋಪಾಲ ಪ್ರಧಾನ ಸಂದೇಶ ನೀಡುವರು. ಶಿವಗಿರಿ ಮಠದ ಶುಭಾಂಗಾನಂದ ಸ್ವಾಮೀಜಿ ಪರಿನಿರ್ವಾಣ ಸಂದೇಶ ನೀಡುವರು ಎಂದು ಹೇಳಿದರು.

ಗುರುಗಳ ಮಹಾಸಮಾಧಿ ಶತಾಬ್ದಿ ಕಾರ್ಯಕ್ರಮ, ಗುರುಗಳು ನಡೆಸಿದ ಸರ್ವಮತ ಸಮ್ಮೇಳನದ ಶತಮಾನೋತ್ಸವ ಅಂಗವಾಗಿ ಅಂದು ಮಧ್ಯಾಹ್ನ 2ರ ನಂತರ ಸರ್ವಮತ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದರು. ಸಮಿತಿಯ ಸಂಚಾಲಕ ಪಿ.ವಿ. ಮೋಹನ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರಶಸ್ತಿ ಪ್ರದಾನ...

ಪ್ರಜಾವಾಣಿ ಚಿತ್ರ



ಧಾರವಾಡದಲ್ಲಿ ಶುಕ್ರವಾರ ನಡೆದ ಸಂಶೋಧಕ ಎಂ.ಎಂ.ಕಲಬುರ್ಗಿ ಅವರ 87ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಹುಬ್ಬಳ್ಳಿಯ ಸಂಶೋಧಕ ಬಿ.ವಿ.ಶಿರೂರ ಅವರಿಗೆ ಎಂ.ಎಂ.ಕಲಬುರ್ಗಿ ರಾಷ್ಟ್ರೀಯ ಸಂಶೋಧನ ಪ್ರಶಸ್ತಿ ಹಾಗೂ ಸಂಗೀತ ಕಲಾವಿದೆ ಸುಜಾತಾ ಗುರುವ ಕಮ್ಮಾರ ಅವರಿಗೆ ವಚನ ಸಂಗೀತ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಹಂ.ಪ.ನಾಗರಾಜಯ್ಯ, ಎಂ.ಎಂ. ಕಲಬುರ್ಗಿ ಪ್ರತಿಷ್ಠಾನ ಅಧ್ಯಕ್ಷ ವೀರಣ್ಣ ರಾಜೂರ, ಉಮಾದೇವಿ ಕಲಬುರ್ಗಿ, ನಿವೃತ್ತ ಪ್ರಾಧ್ಯಾಪಕ ಬಸವರಾಜ ಜಗಜಂಪಿ, ಟ್ರಸ್ಟ್ ಸದಸ್ಯ ಕಾರ್ಯದರ್ಶಿ ಕುಮಾರ ಬೆಕ್ಕೇರಿ ಪಾಲ್ಗೊಂಡಿದ್ದರು

ಶ್ರೀಶೈಲದಲ್ಲಿ ರಾಜ್ಯಕ್ಕೆ ಹೆಚ್ಚುವರಿ ಜಮೀನು ಒದಗಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಶೈಲ ದೇವಸ್ಥಾನದ ಆವರಣದಲ್ಲಿ ರಾಜ್ಯಕ್ಕೆ ಎರಡು ಎಕರೆ ಬದಲು ಐದು ಎಕರೆ ಜಾಗ ನೀಡಬೇಕು, ತಿರುಮಲದಲ್ಲಿ ನೀಡಿರುವ ಏಳು ಎಕರೆ ಜಾಗದ ಗುತ್ತಿಗೆ ಅವಧಿಯನ್ನು 30 ವರ್ಷದ ಬದಲು 99 ವರ್ಷಕ್ಕೆ ಹೆಚ್ಚಿಸಬೇಕು ಎಂದು ಆಂಧ್ರಪ್ರದೇಶದ ರಾಜ್ಯಪಾಲರಿಗೆ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಮನವಿ ಮಾಡಿದ್ದಾರೆ.

ಆಂಧ್ರದ ರಾಜ್ಯಪಾಲ ಅಬ್ದುಲ್ ನಜೀರ್ ಅವರ ಕಚೇರಿಯಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯದ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು.

ತಿರುಮಲದಲ್ಲಿ ರಾಜ್ಯ ಮುಜರಾಯಿ ಇಲಾಖೆಯಿಂದ ಮನವಿ ಬಂದಲ್ಲಿ ವಿಶೇಷ ದರ್ಶನಕ್ಕೆ ಅವಕಾಶ ನೀಡಲು ಕ್ರಮ ಕೈಗೊಳ್ಳಬೇಕು. ಮಂತ್ರಾಲಯದಲ್ಲಿ ರಾಜ್ಯ ಸರ್ಕಾರ ಖರೀದಿಸಿರುವ 5 ಎಕರೆ ಜಾಗವನ್ನು ರಾಜ್ಯದ ಹೆಸರಿಗೆ ಹಸ್ತಾಂತರ ಮಾಡುವ ಪ್ರಕ್ರಿಯೆನ್ನು ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕದ ಸಣ್ಣ ನೀರಾವರಿ ಸಚಿವ ಬೋಸರಾಜು, ಕಂದಾಯ ವಿಭಾಗದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಮುಜರಾಯಿ ಆಯುಕ್ತ ಶರತ್ ಉಪಸ್ಥಿತರಿದ್ದರು.

ಬಳ್ಳಾರಿ ಎ.ಸಿ ಆದೇಶ ಎತ್ತಿಹಿಡಿದ ಹೈಕೋರ್ಟ್

ಸೊಸೆಯ ಸಂಚು ಬಯಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತೆಯ ಮನೆಯಲ್ಲಿ ಠಿಕಾಣಿ ಹೂಡಿ ಆಸ್ತಿ ಲಪಟಾಯಿಸಲು ಸಂಚು ಹೂಡಿದ್ದ ಆರೋಪದಡಿ ಸೊಸೆಗೆ ಮನೆ ಖಾಲಿ ಮಾಡುವಂತೆ ನಿರ್ದೇಶಿಸಿದ್ದ ಬಳ್ಳಾರಿ ಉಪವಿಭಾಗಾಧಿಕಾರಿ (ಎಸಿ) ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

‘ಬಳ್ಳಾರಿ ಉಪವಿಭಾಗಾಧಿಕಾರಿ 2025ರ ಜೂನ್ 17ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು’ ಎಂದು ಕೋರಿ ಸೊಸೆ (45) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

‘ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ–2007ರ ಅನುಸಾರ ಅತ್ಯಂತ ಅಪರೂಪದ ಸಂದರ್ಭಗಳಲ್ಲಿ ಮಾತ್ರವೇ ಹಿರಿಯರನ್ನು ಮನೆಯಿಂದ ಹೊರಹಾಕುವ ಆದೇಶವನ್ನು



ಸಮರ್ಥನೀಯ ಎಂದು ನಿರ್ಣಯಿಸಬಹುದು’ ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಪ್ರಕರಣವೇನು?: ಪ್ರಕರಣದಲ್ಲಿ ಪೋಷಕರ ಮಗ ಸುಮಾರು ಎಂಟು ವರ್ಷಗಳ ಹಿಂದೆ ಸಾವನ್ನಪ್ಪಿದ್ದರು. ಸೊಸೆ ಮತ್ತು ಅತ್ತೆಯ (65) ನಡುವಿನ ಸಂಬಂಧ ಹಳಸಿತ್ತು. ಸರ್ಕಾರಿ ಕೆಲಸ ಸಿಗಲಿದೆ ಎಂಬ ಕಾರಣಕ್ಕೆ ಸೊಸೆ ಆಂಧ್ರಪ್ರದೇಶಕ್ಕೆ ವಾಸ ಬದಲಿಸಿದ್ದರು.

ಏತನ್ಮಧ್ಯೆ, ಬಳ್ಳಾರಿಯ ಸಿದ್ಧಾರ್ಥ ನಗರದಲ್ಲಿ ಸ್ವಯಾರ್ಜಿತವಾಗಿ ನಿಮಿಸಿದ ಮನೆಯಲ್ಲಿ ಅತ್ತೆ ವಾಸವಿದ್ದರು. ಹಣಕಾಸಿನ ತೊಂದರೆಯಿಂದ ಮನೆಯನ್ನು ಮಾರಾಟ ಮಾಡಲು ಉದ್ದೇಶಿಸಿ, ಮುಂಗಡ ಹಣ ಪಡೆದಿದ್ದರು. ಈ ವಿಷಯ ತಿಳಿದು ಮನೆಗೆ ಬಂದಿದ್ದ ಸೊಸೆ, ‘ನನಗೂ ಆಸ್ತಿಯಲ್ಲಿ ಪಾಲು ನೀಡಬೇಕು ಇಲ್ಲವೇ ₹60 ಲಕ್ಷ ನೀಡಬೇಕು’ ಎಂದು ಹೇಳಿ ಮನೆಯಲ್ಲಿದ್ದ ಅತ್ತೆಗೆ ಸಂಬಂಧಿಸಿದ ವಸ್ತುಗಳನ್ನು ಹೊರಹಾಕಿ, ಮನೆಯಲ್ಲಿ ಠಿಕಾಣಿ ಹೂಡಿದ್ದರು.

ಪೋಷಕರ ಸಕ್ಷಮ ಪ್ರಾಧಿಕಾರವಾದ ಹಿರಿಯ ನಾಗರಿಕರ ನಿರ್ವಹಣಾ ನ್ಯಾಯಮಂಡಳಿಯ ಅಧ್ಯಕ್ಷರೂ ಆದ ಬಳ್ಳಾರಿ ಉಪವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಿದ್ದ ಅತ್ತೆ, ‘ನಮ್ಮ ಆಸ್ತಿ ರಕ್ಷಣೆ, ಮಾನಸಿಕ ಶಾಂತಿ ಮತ್ತು ಪ್ರಾಣ ರಕ್ಷಣೆ ನೀಡಬೇಕು’ ಎಂದು ಕೋರಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸಕ್ಷಮ ಪ್ರಾಧಿಕಾರ, ‘ಸೊಸೆ ಮನೆಯನ್ನು ಖಾಲಿ ಮಾಡಬೇಕು. ಸದರಿ ಆಸ್ತಿಯನ್ನು ಮನವಿದಾರರ ಹೆಸರಿಗೆ ನೋಂದಾಯಿಸಬೇಕು’ ಎಂದು ಬಳ್ಳಾರಿ ಉಪನೋಂದಣಾಧಿಕಾರಿಗೆ ಆದೇಶಿಸಿದ್ದರು. ಈ ಆದೇಶವನ್ನು ಸೊಸೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿ ‘ರದ್ದುಗೊಳಿಸಬೇಕು’ ಎಂದು ಕೋರಿದ್ದರು.

‘ಹಿರಿಯ ನಾಗರಿಕರ ಗೌರವ ಕಾಪಾಡಬೇಕು’

‘ಹಿರಿಯ ನಾಗರಿಕರು ಎನಿಸಿರುವ ಅತ್ತೆಯನ್ನು ಸೊಸೆ ಔಟ್ ಹೌಸ್‌ನಲ್ಲಿ (ಹೊರಮನೆ) ಇರಿಸಿದ್ದಾರೆ. ಇದರಿಂದ ಅತ್ತೆ ತಮ್ಮ ಸ್ವಂತ ಮನೆಗೆ ಗೌರವಯುತ ಪ್ರವೇಶ ಹೊಂದುವ ಅವಕಾಶ ಕಳೆದುಕೊಳ್ಳುತ್ತಿದ್ದಾರೆ. ಮನೆಯು ಸೊಸೆಯ ವಶದಲ್ಲಿದ್ದು, ಅವರು ಆ ಆವರಣದಲ್ಲಿ ವಾಸಿಸುತ್ತಿಲ್ಲ. ಪತಿಯ ಮರಣದ ನಂತರ ಸೊಸೆ ಆಂಧ್ರಪ್ರದೇಶಕ್ಕೆ ತಮ್ಮ ನಿವಾಸವನ್ನು ಬದಲಾಯಿಸಿದ್ದಾರೆ. ಅತ್ತೆಯೊಂದಿಗೆ ಸೊಸೆಯ ಸಂಬಂಧ ಹಳಸಿದೆ. ಈ ಆಧಾರದಡಿ ಮನೆಯ ಆವರಣವನ್ನು ಉಳಿಸಿಕೊಳ್ಳಲು ಸೊಸೆಗೆ ಒತ್ತಾಯಿಸಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಭೂಕಬಳಿಕೆ ನಿಷೇಧ ನ್ಯಾಯಾಲಯ: ಮಾರ್ಗಸೂಚಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಭೂಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯಗಳಿಗೆ ಅಧ್ಯಕ್ಷರು ಮತ್ತು ಸದಸ್ಯರ ಆಯ್ಕೆ ಮತ್ತು ನೇಮಕಕ್ಕೆ ಸಂಬಂಧಿಸಿದಂತೆ ಮೂರು ತಿಂಗಳಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ನಿವೃತ್ತ ಜಿಲ್ಲಾ ನ್ಯಾಯಾಧೀಶ ದೇವಾನಂದ ಪುಟ್ಟಪ್ಪ ನಾಯಕ್ ಸಲ್ಲಿಸಿದ್ದ ರಿಟ್ ಅರ್ಜಿ ಮಾನ್ಯ ಮಾಡಿರುವ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ನೇಮಕ ಅಥವಾ ಆಯ್ಕೆಗೆ ನಿರ್ದಿಷ್ಟ ಮಾರ್ಗಸೂಚಿಗಳಿಲ್ಲ. ಹಾಗಾಗಿ, ಸರ್ಕಾರ ತುರ್ತಾಗಿ ಮಾರ್ಗಸೂಚಿ ರೂಪಿಸುವ ಅಗತ್ಯವಿದೆ’ ಎಂದು ಆದೇಶದಲ್ಲಿ ವಿವರಿಸಿದೆ.

‘ಯಾವುದೇ ಆಯ್ಕೆ ಮಾನದಂಡ ಅಥವಾ ಪ್ರಕ್ರಿಯೆ ಸೂಚಿಸಲು ವಿಫಲವಾದರೆ ರಾಜ್ಯದ ವತಿಯಿಂದ ಕರ್ತವ್ಯ ಲೋಪ ಎಸಗಿದಂತಾಗಲಿದೆ ಮತ್ತು ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶ ಕಲ್ಪಿಸುವಲ್ಲಿ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಕಾರಣವಾಗುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ–2011ರ ಕಲಂ 7ರ ಅನುಸಾರ ಒಬ್ಬ ಅಧ್ಯಕ್ಷ, ಇಬ್ಬರು ನ್ಯಾಯಾಂಗ ಮತ್ತು ಇಬ್ಬರು ಕಂದಾಯ ಸದಸ್ಯರನ್ನು ಹೊಂದಿರುವ ವಿಶೇಷ ನ್ಯಾಯಾಲಯ ಸ್ಥಾಪಿಸಲಾಗಿದೆ. ಈ ಕಾಯ್ದೆಯು ಕನಿಷ್ಠ ಅರ್ಹತೆಗಳನ್ನು ಮಾತ್ರವೇ ಸೂಚಿಸುತ್ತದೆ. ಅಧ್ಯಕ್ಷರು ಹಾಲಿ ಅಥವಾ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಆಗಿರಬೇಕು. ನ್ಯಾಯಾಂಗ ಸದಸ್ಯರು ಹಾಲಿ ಅಥವಾ ನಿವೃತ್ತ ಜಿಲ್ಲಾ ನ್ಯಾಯಾಧೀಶ ಆಗಿರಬೇಕು ಮತ್ತು ಕಂದಾಯ ಸದಸ್ಯರು ಉಪ ವಿಭಾಗಾಧಿಕಾರಿ ಹುದ್ದೆಗಿಂತ ಕಡಿಮೆಯಿಲ್ಲದ ಹುದ್ದೆಯನ್ನು ಹೊಂದಿರಬೇಕು ಎಂದಷ್ಟೇ ಹೇಳುತ್ತದೆ. ಆದರೆ, ನಿರ್ದಿಷ್ಟ ಮಾರ್ಗಸೂಚಿಗಳಿಲ್ಲ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದರು.

‘ಅರಣ್ಯ ಭೂಮಿ ಕಬಳಿಸಿದರೆ ಅಪರಾಧ ಪ್ರಕರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಅರಣ್ಯ ಭೂಮಿ ಕಬಳಿಸಲು ಯತ್ನಿಸುವವರ ವಿರುದ್ಧ ಪೊಲೀಸ್ ಠಾಣೆಗಳಲ್ಲಿ ಅಪರಾಧ ಪ್ರಕರಣಗಳನ್ನು ದಾಖಲಿಸಿ, ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು. ಇಲ್ಲದೇ ಇದ್ದಲ್ಲಿ ಸಂಬಂಧಿತ ಅರಣ್ಯಾಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಎಚ್ಚರಿಕೆ ನೀಡಿದ್ದಾರೆ.

ಅರಣ್ಯ ಭೂಮಿ ಕಬಳಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳ ಜತೆ ಶುಕ್ರವಾರ ಸಭೆ ನಡೆಸಿದ ಅವರು, ನ್ಯಾಯಾಲಯಗಳಲ್ಲಿ ಅರಣ್ಯ ಇಲಾಖೆಗೆ ಹಿನ್ನಡೆ ಆಗುತ್ತಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

‘ಬೆಂಗಳೂರಿನ ಬಿ.ಎಂ.ಕಾವಲು ಅರಣ್ಯ ಪ್ರದೇಶದ 532 ಎಕರೆಯಷ್ಟು ಭೂಮಿಯನ್ನು ಹಾಸನ ವಿಶೇಷ ಜಿಲ್ಲಾಧಿಕಾರಿ ತಮಗೆ ಮಂಜೂರು ಮಾಡಿದ್ದಾರೆ ಎಂದು ವ್ಯಕ್ತಿಯೊಬ್ಬರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ, ತಮ್ಮ ಪರವಾಗಿ ಆದೇಶ ಪಡೆದಿದ್ದಾರೆ. 2025ರ ಆಗಸ್ಟ್ 13ರಂದು ಎಂ.ಬಿ.ನೇಮಣ್ಣ ಗೌಡ ಎನ್ನುವವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಆಗಸ್ಟ್ 30ರಂದು ಅವರ ಪರವಾಗಿ ತೀರ್ಪು ಬಂದಿದೆ. ಇಷ್ಟು ತ್ವರಿತವಾಗಿ ತೀರ್ಪು ಹೇಗೆ ದೊರೆಯಿತು’ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.



ಈಶ್ವರ ಖಂಡ್ರೆ

‘ಬೆಂಗಳೂರಿನ ಅರಣ್ಯ ಪ್ರದೇಶವನ್ನು ಹಾಸನದ ವಿಶೇಷ ಜಿಲ್ಲಾಧಿಕಾರಿ ಮಂಜೂರು ಮಾಡಲು ಸಾಧ್ಯವಿಲ್ಲ. ಇನಾಂ ರದ್ದತಿ ಕಾನೂನಿನ ಅಡಿ ಒಬ್ಬರೇ ವ್ಯಕ್ತಿಗೆ 532 ಎಕರೆ ಮಂಜೂರು ಮಾಡಲು ಅವಕಾಶವಿಲ್ಲ ಎಂಬ ಸರಳ ತಾಂತ್ರಿಕ ವಿಚಾರವನ್ನೂ ನ್ಯಾಯಾಲಯದ ಗಮನಕ್ಕೆ ತರಲು ಆಗುವುದಿಲ್ಲವೇ’ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಸುಮಾರು ₹25,000 ಕೋಟಿ ಮೌಲ್ಯದ ಈ ಜಮೀನನ್ನು ಉಳಿಸಿಕೊಳ್ಳಲು ನ್ಯಾಯಾಲಯಕ್ಕೆ ತಕ್ಷಣವೇ ಮೇಲ್ಮನವಿ ಸಲ್ಲಿಸಿ. ರಾಜ್ಯದ ಇತರ ಜಿಲ್ಲೆಗಳಲ್ಲಿ ಅರಣ್ಯ ಭೂಮಿ ಕಬಳಿಕೆ ಪ್ರಕರಣಗಳಲ್ಲಿ ಸಮರ್ಥ ವಕೀಲರನ್ನು ನೇಮಿಸಿಕೊಳ್ಳಿ. ಅವರಿಂದ ಪ್ರತಿ ವಾರ ಸ್ಥಿತಿಗತಿ ವರದಿ ಪಡೆದುಕೊಳ್ಳಿ’ ಎಂದು ಸೂಚಿಸಿದ್ದಾರೆ.

‘ಕಬಳಿಕೆ ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿದ್ದರೂ, ಅದನ್ನು ಪಾಲಿಸದೇ ಇರುವ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಿ’ ಎಂದೂ ತಾಕೀತು ಮಾಡಿದ್ದಾರೆ.

‘ಎಸ್‌ಐಆರ್ ಒತ್ತಡ: 40 ಸಾವು’

‘ಸಿಇಸಿ’ ಕೈಗಳಿಗೆ ರಕ್ತದ ಕಲೆಗಳು ಅಂಟಿವೆ ಸಂಸದ ಡೆರಿಕ್ ಒಬ್ರಯಾನ್ ಆರೋಪ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಸಂಬಂಧಿಸಿ, ಕನಿಷ್ಠ 40 ಸಾವುಗಳು ಸಂಭವಿಸಿವೆ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆರೋಪಿಸಿದೆ.

ಶುಕ್ರವಾರ ಇಲ್ಲಿ ಟಿಎಂಸಿ ರಾಜ್ಯಸಭಾ ಮುಖಂಡ ಡೆರಿಕ್ ಒಬ್ರಯಾನ್ ನೇತೃತ್ವದ 10 ಸದಸ್ಯರ ನಿಯೋಗವು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳನ್ನು ಭೇಟಿಯಾಗಿ ‘ಎಸ್‌ಐಆರ್ ಬಗ್ಗೆ ಮಾತುಕತೆ ನಡೆಸಿತು.

‘ಮುಖ್ಯ ಚುನಾವಣಾ ಆಯುಕ್ತರ (ಸಿಇಸಿ) ಕೈಗಳಿಗೆ ರಕ್ತದ ಕಲೆಗಳು ಅಂಟಿವೆ’ ಎಂದು ಟಿಎಂಸಿ ಗಂಭೀರ ಆರೋಪ ಮಾಡಿದೆ.

ಸಂಸದರಾದ ಮಹುವಾ, ಶತಾಬ್ದಿ ರಾಯ್, ಕಲ್ಯಾಣ್ ಬ್ಯಾನರ್ಜಿ, ಪ್ರತಿಮಾ ಮಂಡಲ್, ಸಜ್ದಾ ಅಹಮದ್, ಡೋಲಾ ಸೇನ್, ಮಮತಾ ಠಾಕೂರ್, ಸಾಕೇತ್ ಗೋಖಲೆ ಮತ್ತು ಪ್ರಕಾಶ್ ಚಿಕ್ ಬರಿಕ್ ನಿಯೋಗದಲ್ಲಿದ್ದರು.

ಆಯೋಗದ ಅಧಿಕಾರಿಗಳನ್ನು ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಡೆರಿಕ್ ಒಬ್ರಯಾನ್, ‘ನಾವು ಸಿಇಸಿ ಅವರ ಕೈಗಳಿಗೆ ರಕ್ತದ ಕಲೆ ಅಂಟಿದೆ ಎಂಬ ಆರೋಪದ ಮೂಲಕವೇ ಮಾತುಕತೆ ಆರಂಭಿಸಿದೆವು. ಸಿಇಸಿ ಜ್ಞಾನೇಶ್ ಕುಮಾರ್ ಎದುರು ಐದು ಪ್ರಶ್ನೆಗಳನ್ನು ಇರಿಸಿದೆವು. ಅವರು ನಮ್ಮೊಂದಿಗೆ ಒಂದು ಗಂಟೆ ಮಾತನಾಡಿದರು. ಆದರೆ, ನಮ್ಮ ಯಾವ ಪ್ರಶ್ನೆಗೂ ಅವರು ಉತ್ತರ ನೀಡಲಿಲ್ಲ’ ಎಂದರು.

‘ನಾವು ‘ಎಸ್‌ಐಆರ್’ ವಿರೋಧಿಸುತ್ತಿಲ್ಲ. ಆದರೆ, ಯಾವುದೇ ಸಿದ್ಧತೆ ಇಲ್ಲದೆ ರಾಜ್ಯದಲ್ಲಿ ಇದನ್ನು ಜಾರಿಗೊಳಿಸಲು ಮುಂದಾಗಿರುವ ಆಯೋಗದ ಕಾರ್ಯವನ್ನು ವಿರೋಧಿಸುತ್ತೇವೆ. ಎಸ್‌ಐಆರ್ ವಿಷಯದಲ್ಲಿ ಆಯೋಗ ನಿಷ್ಕರುಣೆಯಾಗಿದೆ’ ಎಂದು ಡೆರಿಕ್ ಒಬ್ರಯಾನ್ ದೂರಿದರು.

‘ದೊಡ್ಡ ಪಿತೂರಿ’

ಲಖನೌ ವರದಿ: ಚುನಾವಣಾ ಆಯೋಗವು ‘ಎಸ್‌ಐಆರ್’ ಮೂಲಕ ದೇಶದ ಜನರ ವಿರುದ್ಧ ದೊಡ್ಡ ಪಿತೂರಿ ನಡೆಸುತ್ತಿದೆ. ಇದು ವಸಾಹತುಶಾಹಿ ಯುಗಕ್ಕಿಂತ ಕೆಟ್ಟದಾದ ವ್ಯವಸ್ಥೆಗೆ ಜನರನ್ನು ನೂಕಲಿದೆ’ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ 20 ಸೆಕೆಂಡ್‌ಗಳ ವಿಡಿಯೊ ತುಣುಕೊಂದನ್ನು ಪೋಸ್ಟ್ ಮಾಡಿರುವ ಅವರು, ‘ವಿರೋಧ ಪಕ್ಷಗಳ ಜತೆಗೆ ಆಡಳಿತಾರೂಢ ಎನ್‌ಡಿಎ ಮಿತ್ರಪಕ್ಷಗಳು ಒಟ್ಟಿಗೆ ಸೇರಿ ಬಿಜೆಪಿ ನಡೆಸುತ್ತಿರುವ ಈ ಮಹಾ ಪಿತೂರಿಯನ್ನು ಬಯಲು ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.



ನವದೆಹಲಿಯಲ್ಲಿ ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ ಟಿಎಂಸಿ ಸಂಸದರಾದ ಮಹುವಾ ಮೊಯಿತ್ರಾ, ಶತಾಬ್ದಿ ರಾಯ್, ಡೆರಿಕ್ ಒಬ್ರಯಾನ್ ಅವರು ನಿರ್ವಾಚನ ಸದನದಿಂದ ಹೊರಬಂದರು ಪಿಟಿಐ ಚಿತ್ರ

ಇಬ್ಬರು ಬಿಎಲ್‌ಒ ಸಾವು

ಕೋಲ್ಕತ್ತ (ಪಿಟಿಐ): ’ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ(ಎಸ್‌ಐಆರ್) ಬೂತ್ ಮಟ್ಟದ ಅಧಿಕಾರಿಗಳಾಗಿ ನೇಮಕಗೊಂಡಿದ್ದ ಇಬ್ಬರು ಪ್ರಾಥಮಿಕ ಶಾಲಾ ಶಿಕ್ಷಕರು ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ. ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಮತ್ತು ಗುಜರಾತ್‌ನ ಮೆಹ್ಸಾನದಲ್ಲಿ ಇವರು ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದರು.

ಪಶ್ಚಿಮ ಬಂಗಾಳದಲ್ಲಿ ನ.4ರಿಂದ ಎಸ್‌ಐಆರ್ ಆರಂಭಗೊಂಡಿದ್ದು, ಆ ನಂತರ ಇದುವರೆಗೆ ನಾಲ್ಕು ಮಂದಿ ಬಿಎಲ್‌ಒಗಳು ಮೃತಪಟ್ಟಿದ್ದಾರೆ.

₹12 ಕೋಟಿ ಮೊತ್ತದ ಮಾದಕ ವಸ್ತು ಜಪ್ತಿ

ನವದೆಹಲಿ (ಪಿಟಿಐ): ದೆಹಲಿಯಿಂದ ತೆಲಂಗಾಣಕ್ಕೆ ಕೊರಿಯರ್ ಮೂಲಕ ಮಾದಕವಸ್ತು ಪೂರೈಸುತ್ತಿದ್ದ ಜಾಲವನ್ನು ಭೇದಿಸಿರುವ ಪೊಲೀಸರು, ಮೂವರು ವಿದೇಶಿ ಪ್ರಜೆಗಳು ಸೇರಿ 10 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ₹12 ಕೋಟಿ ಮೊತ್ತದ ಮಾದಕ ವಸ್ತು ಜಪ್ತಿ ಮಾಡಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 40 ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ಇವರನ್ನು ಗಡಿಪಾರು ಮಾಡುವ ಪ್ರಕ್ರಿಯೆ ನಡೆಯುತ್ತಿವೆ ಎಂದು ದೆಹಲಿ ಪೊಲೀಸ್ ಆಯುಕ್ತ (ಕ್ರೈಂ) ಸುರೇಂದ್ರ ಕುಮಾರ್ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಪಿಲ್ ಶರ್ಮಾ ರೆಸ್ಟೋರೆಂಟ್ ಮೇಲೆ ಗುಂಡಿನ ದಾಳಿ

ದೆಹಲಿ ಪೊಲೀಸರಿಂದ ಶಂಕಿತನ ಬಂಧನ

ನವದೆಹಲಿ (ಪಿಟಿಐ): ಕೆನಡಾದ ಸರ್ರೆಯಲ್ಲಿರುವ ಸ್ಟ್ಯಾಂಡಪ್ ಕಾಮಿಡಿಯನ್ ಕಪಿಲ್ ಶರ್ಮಾ ಅವರ ರೆಸ್ಟೋರೆಂಟ್ ಮೇಲೆ ಆಗಸ್ಟ್ 7ರಂದು ನಡೆದ ಗುಂಡಿನ ದಾಳಿಯಲ್ಲಿ ಭಾಗಿಯಾದ ಶಂಕಿತ ಗ್ಯಾಂಗ್‌ಸ್ಟರ್ ಒಬ್ಬನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಗುಂಡಿನ ದಾಳಿಗೆ ಸಹಕಾರ ನೀಡಿದ ಆರೋಪದ ಮೇಲೆ ಬಂಧು ಮಾನ್ ಸಿಂಗ್ ಎಂಬವನನ್ನು ಬಂಧಿಸಲಾಗಿದೆ. ದಾಳಿ ಬಳಿಕ ಈತ ತಲೆಮರೆಸಿಕೊಂಡಿದ್ದ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಗುಂಡಿನ ದಾಳಿಯ ಬಳಿಕ ದಾಳಿಕೋರರಿಗೆ ಕಾರನ್ನು ಒದಗಿಸಿದ್ದೇ ಅಲ್ಲದೆ ಸುರಕ್ಷಿತವಾದ ಪಾರ್ಕಿಂಗ್ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದ. ಈತ ಕೆನಡಾದ ಗ್ಯಾಂಗ್‌ಸ್ಟರ್ ಗೋಲ್ಡಿ ಧಿಲ್ಲೋನ್‌ನ ನಿಕಟವರ್ತಿಯಾಗಿದ್ದ. ವಿದೇಶದಲ್ಲಿರುವ ಉದ್ಯಮಿಗಳನ್ನು ಸುಲಿಗೆ ಮಾಡಿದ ಪ್ರಕರಣಗಳಲ್ಲಿಯೂ ಈತ ಭಾಗಿಯಾಗಿದ್ದ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಧಿಲ್ಲೋನ್ ಜಾಲದ ಜೊತೆಗೆ ನಿರಂತರ ಸಂಪರ್ಕದಲ್ಲಿದ್ದ ಈತ, ಕಪಿಲ್ ಶರ್ಮಾಗೆ ಬೆದರಿಕೆಯೊಡ್ಡಲು ಸಹಕರಿಸಿದ್ದ. ಗುಂಡಿನ ದಾಳಿಯ ಬಳಿಕ ಕೆನಡಾದಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆಯೇ ಅಲ್ಲಿಂದ ತಲೆಮರೆಸಿಕೊಂಡು ಭಾರತಕ್ಕೆ ಬಂದಿದ್ದ. ಆತ ಲೂಧಿಯಾನದಲ್ಲಿರುವ ಕುರಿತು ಮಾಹಿತಿ ಪಡೆದು ವಶಕ್ಕೆ ಪಡೆದಿದ್ದೇವೆ’ ಎಂದು ಹೇಳಿದ್ದಾರೆ.

ಆರೋಪಿಯಿಂದ ಚೀನಾದಲ್ಲಿ ತಯಾರಾದ ಪಿಸ್ತೂಲ್, ಗುಂಡುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಜನರ ವೀಕ್ಷಣೆಗೆ ಯುದ್ಧನೌಕೆ

‘ನೌಕಾಪಡೆ ವಾರ’ದ ಪ್ರಯುಕ್ತ ನ.30ರವರೆಗೆ ಪ್ರದರ್ಶನ

ಕೋಲ್ಕತ್ತ (ಪಿಟಿಐ): ಭಾರತೀಯ ನೌಕಾಪಡೆಯ ಎರಡು ಕ್ಷಿಪಣಿ ನಿರೋಧಕ ಯುದ್ಧನೌಕೆಗಳು ಇಲ್ಲಿನ ಕಿಡ್ದರ್‌ಪೋರ್ ಡಾಕ್‌ನ ಬರ್ತ್ 11 ತಲುಪಿದ್ದು, ‘ನೌಕಾಪಡೆ ವಾರ’ ಆಚರಣೆ ಪ್ರಯುಕ್ತ ನ.30ರವರೆಗೆ ಸಾರ್ವಜನಿಕ ವೀಕ್ಷಣೆಗೆ ಲಭ್ಯ ಇರಲಿವೆ.

ಬಂಗಾಳಕೊಲ್ಲಿಯಲ್ಲಿ ನಿಯೋಜಿಸಿರುವ ಐಎನ್‌ಎಸ್ ಖಂಜರ್ ಮತ್ತು ಐಎನ್‌ಎಸ್ ಕೋರಾ ಯುದ್ಧ ನೌಕೆಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಹೂಗ್ಲಿ ನದಿಯ ದಡದಲ್ಲಿರುವ ಮಹಾನಗರಕ್ಕೆ ತರಲಾಗಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಗ್ರೇ ಫೆರಾರಿ ಎಂಬ ಅಡ್ಡ ಹೆಸರಿನ ಐಎನ್‌ಎಸ್ ಖಂಜರ್ 1991ರಲ್ಲಿ ನಿಯೋಜಿಸಲಾದ ಪಿ–25 ವರ್ಗದ ಕ್ಷಿಪಣಿ ನಿರೋಧಕ ಯುದ್ಧನೌಕೆಯಾಗಿದೆ. ಗೂರ್ಖಾ ಯೋಧರು ಬಳಸುತ್ತಿದ್ದ ಸಾಂಪ್ರದಾಯಿಕ ಕತ್ತಿಯಾದ ‘ಕೋರಾ’ದ ಹೆಸರನ್ನು ಇಡಲಾದ ಐಎನ್‌ಎಸ್ ಕೋರಾ 1998ರಲ್ಲಿ ನಿಯೋಜಿಸಲಾದ ಪಿ–25ಎ ವರ್ಗದ ಯುದ್ಧನೌಕೆಯಾಗಿದೆ.



ಕೋಲ್ಕತ್ತದ ಕಿಡ್ದರ್‌ಪೋರ್ ಡಾಕ್‌ನ ಬರ್ತ್‌ಗೆ ಬಂದ ಭಾರತೀಯ ನೌಕಾಪಡೆಯ ಯುದ್ಧನೌಕೆಗಳಿಗೆ ಎನ್‌ಸಿಸಿ ಕೆಡೆಟ್‌ಗಳು ಭೇಟಿ ನೀಡಿದರು ಪಿಟಿಐ ಚಿತ್ರ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಜಗದೇಕ ಉಡುಪು ಅತಿಲೋಕ ಸುಂದರಿ!

ಜಗತ್ತಿನ ನಾಲ್ಕು ಪ್ರಮುಖ ಸೌಂದರ್ಯ ಸ್ಪರ್ಧೆಗಳಲ್ಲಿ ಒಂದೆನಿಸಿರುವ 'ಭುವನ ಸುಂದರಿ'ಯ ಆಯ್ಕೆಗಾಗಿ ನಡೆಯುವ ವಿವಿಧ ಸುತ್ತಿನ ಸ್ಪರ್ಧೆಗಳಲ್ಲಿ 'ಉತ್ತಮ ರಾಷ್ಟ್ರೀಯ ಪೋಷಾಕು' ಸ್ಪರ್ಧೆಯೂ ಒಂದು. ಈ ಬಾರಿ 120 ದೇಶಗಳು ಪ್ರತಿನಿಧಿಸಿದ್ದ ಸ್ಪರ್ಧೆಯ ಈ ಸುತ್ತಿನಲ್ಲಿ ಫಿಲಿಪ್ಪೀನ್ಸ್ ಸುಂದರಿ ಜಯಶಾಲಿಯಾದರು. ನಾನಾ ಬಗೆಯ ವೇಷಭೂಷಣಗಳಿಂದ ಗಮನಸೆಳೆದ ಕೆಲವು ಲಲನೆಯರ ವಿವರ ಇಲ್ಲಿದೆ. ಅಂದಹಾಗೆ, ಮೆಕ್ಸಿಕೊದ ಬೆಡಗಿ ಫಾತಿಮಾ ಬಾಷ್ 'ಭುವನ ಸುಂದರಿ' ಕಿರೀಟ ತೊಟ್ಟು ಬೀಗಿದರು.

ಲಿಹಾಶಾ ಲಿಂಡ್ಸೆ ವೈಟ್

ಶ್ರೀಲಂಕಾ

ಹಬೆ ಉಕ್ಕಿಸುತ್ತಿದ್ದ ಹಿತ್ತಾಳೆ ವರ್ಣದ ಬೃಹತ್ ಟೀ ಕೆಟಲ್ ಮಾದರಿಯ ಗಾಡಿಯನ್ನು, ಮುಗುಳ್ನಗುತ್ತಾ ನಾಜೂಕಿನಿಂದ ತಳ್ಳಿಕೊಂಡು ಬಂದವರು ಶ್ರೀಲಂಕಾದ ಬೆಡಗಿ ಲಿಹಾಶಾ ಲಿಂಡ್ಸೆ ವೈಟ್. ತಮ್ಮ ದೇಶದ ಆದರಾತಿಥ್ಯದ ರುಚಿಯನ್ನು ತಮ್ಮ ಹಾವಭಾವಗಳಲ್ಲೇ ಪ್ರೇಕ್ಷಕರಿಗೆ ಉಣಬಡಿಸುವಲ್ಲಿ ಅವರು ಸಫಲರಾದರು.

ಜಗತ್ತಿನ ಅತಿ ದೊಡ್ಡ ಟೀ ಉತ್ಪಾದಕ ರಾಷ್ಟ್ರಗಳಲ್ಲಿ ಒಂದಾಗಿರುವ ಶ್ರೀಲಂಕಾದ 'ಸಿಲೋನ್ ಟೀ' ಜಗತ್ಪ್ರಸಿದ್ಧವಾಗಿದೆ. ಲಿಹಾಶಾ ವೇದಿಕೆಗೆ ತಂದು ನಿಲ್ಲಿಸಿದ ಈ ಕೆಟಲ್, ಮೇಲ್ನೋಟಕ್ಕೆ ಸಾಧಾರಣವಾಗಿ ಕಂಡರೂ ಮಹತ್ವದ ಉದ್ದೇಶಗಳನ್ನೇ ಧ್ವನಿಸುವಂತಿತ್ತು.

ಬಿಸಿ ಬಿಸಿ ಚಹಾ ನೀಡಿ ಪ್ರವಾಸಿಗರನ್ನು ತಮ್ಮ ದೇಶಕ್ಕೆ ಸ್ವಾಗತಿಸುವ ಮತ್ತು ಹಾಗೆ ಬಂದವರಿಗೆ ತಮ್ಮಲ್ಲಿ ಸಿಗುವ ಅತಿಥಿ ಸತ್ಕಾರದ ಸವಿರುಚಿಯನ್ನು ಮನವರಿಕೆ ಮಾಡಿಕೊಡುವ ರಾಯಭಾರಿಯಂತೆ ಲಿಹಾಶಾ ಕಂಡರು. ಅಂದಹಾಗೆ, ಈ ವಸ್ತ್ರ ವಿನ್ಯಾಸವನ್ನು ರೂಪಿಸಿದವರು ರಮೇಶ ಓಶನಿ.

ಇಂಟರ್‌ನ್ಯಾಷನಲ್ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆದಿರುವ 27 ವರ್ಷದ ಲಿಹಾಶಾ, ತಮ್ಮ ಕುಟುಂಬದ ಕಂಪನಿಯಲ್ಲಿ ಆಪರೇಷನ್ಸ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಅಲೀವಿಯಾ ಯಾಸೆ

ಐವರಿ ಕೋಸ್ಟ್

'ಭುವನ ಸುಂದರಿ' ಸ್ಪರ್ಧೆಯ ನಾಲ್ಕನೇ ರನ್ನರ್ ಅಪ್ ಆದ ಶ್ಯಾಮಲ ಸುಂದರಿ ಅಲೀವಿಯಾ ಯಾಸೆ, ಆಫ್ರಿಕಾದ ಶ್ರೀಮಂತ ಪರಂಪರೆಯಾದ 'ಅಕಾನ್' ಬಟ್ಟೆಯನ್ನು ಧರಿಸಿದ್ದರು. ಐವರಿ ಕೋಸ್ಟ್ ಹಾಗೂ ಘಾನಾ ದೇಶಗಳಲ್ಲಿ ಹೆಚ್ಚು ಪ್ರಭಾವ ಹೊಂದಿರುವ ಅಕಾನ್ ಜನಾಂಗವನ್ನು ಈ ದಿರಿಸು ಪ್ರತಿನಿಧಿಸುತ್ತಿತ್ತು. ಕೆಂಪು ಹಾಗೂ ಹೊನ್ನಿನ ವರ್ಣದ ಮಿನಿಸ್ಕರ್ಟ್, ಅದೇ ಬಣ್ಣದ ಹೈ ಹೀಲ್ಸ್ ಬೂಟುಗಳನ್ನು ಧರಿಸಿ ನಡೆದುಬಂದ ಅವರು ಕಪ್ಪು ದೇವತೆಯಂತೆ ಕಂಗೊಳಿಸಿದರು. ರೇಷ್ಮೆ ಹಾಗೂ ಹತ್ತಿ ದಾರಗಳಿಂದ ನೇಯ್ದ ಈ ಬಟ್ಟೆಯನ್ನು ನೂರಾರು ಚಿನ್ನದ ಮಣಿಗಳನ್ನು ಬಳಸಿ ಮಾಡಲಾಗಿತ್ತು. ಇದು ಆಫ್ರಿಕಾ ನೆಲದ ಕರಕುಶಲತೆಯನ್ನು ಬಿಂಬಿಸುವಂತಿತ್ತು.

ಐವರಿ ಕೋಸ್ಟ್ ದೇಶದ ರಾಷ್ಟ್ರೀಯ ಪ್ರಾಣಿ ಆನೆಯ ಮುಖದಾಕೃತಿಯಂತಿದ್ದ ಬಟ್ಟೆಯಿಂದ ಯಾಸೆ ತಮ್ಮ ಎದೆಭಾಗವನ್ನು ಮುಚ್ಚಿದ್ದರು. ಬೃಹತ್ ಕಿರೀಟ ಧರಿಸಿ, ಮಿರುಗುತ್ತಿದ್ದ ರೆಕ್ಕೆಗಳನ್ನು ಕಟ್ಟಿಕೊಂಡು ಬಂದ ಯಾಸೆ, ಬಲು ಹಮ್ಮಿನ ನಡಿಗೆಯ ಮೂಲಕ ನಿಂತ ನಿಲುವಿನಲ್ಲಿಯೇ ಅಪಾರ ಆತ್ಮವಿಶ್ವಾಸವನ್ನು ಪ್ರಕಟಿಸಿದರು. ಮೈಬಣ್ಣದ ಕಾರಣಕ್ಕೆ ನಿರ್ಲಕ್ಷ್ಯಕ್ಕೆ ಒಳಗಾದವರ ನಿಲುವು ಹೇಗಿರಬೇಕು ಎಂಬುದನ್ನು ಇದು ಸಾರಿ ಹೇಳುವಂತಿತ್ತು.

'ಸೆಲ್ಫ್ ಲವ್' ಬೆಳೆಸಿಕೊಳ್ಳುವಂತೆ, ನಂತರ ನಡೆದ ಸಂದರ್ಶನದಲ್ಲಿ ಅವರು ಯುವಜನರಿಗೆ ಕಿವಿಮಾತು ಹೇಳಿದರು.



ಮಣಿಕಾ ವಿಶ್ವಕರ್ಮ

ಭಾರತ

ಭಾರತದಲ್ಲಿ ಬೌದ್ಧಧರ್ಮದ ಉಗಮವನ್ನು ಸಂಕೇತಿಸಿದ ಮಣಿಕಾ ವಿಶ್ವಕರ್ಮ ಅವರ ದಿರಿಸು ಭಾರಿ ಗಮನಸೆಳೆಯಿತು. ಬೌದ್ಧಧರ್ಮದ ಹುಟ್ಟು ಹಾಗೂ ಬುದ್ಧನಿಗೆ ಜ್ಞಾನೋದಯವಾದ ಕ್ಷಣಗಳನ್ನು ಈ ಪೋಷಾಕು ಸೂಚಿಸುತ್ತಿತ್ತು. ದೇಶದ ಪ್ರಾಚೀನ ದೇಗುಲಗಳ ವಾಸ್ತುಶಿಲ್ಪದ ಪ್ರೇರಣೆಯಿಂದ ವಿನ್ಯಾಸಗೊಂಡ ಈ ಉಡುಪಿನಲ್ಲಿನ ಮಿರುಗುವ ಹೊಂಬಣ್ಣ ಮತ್ತು ಕೇಸರಿ ಬಣ್ಣವು ಪರಿಶುದ್ಧತೆ, ದಿವ್ಯತೆ ಹಾಗೂ ಜ್ಞಾನದ ಸೂಚಕದಂತೆ ಕಂಡವು. ಜೊತೆಗೆ, ಬೌದ್ಧರ ಪ್ರಸಿದ್ಧ ಪವಿತ್ರ ಕ್ಷೇತ್ರಗಳಾದ ಸಾಂಚಿ ಮತ್ತು ಬೋಧಗಯಾದ ಸುವರ್ಣ ಶಿಖರಗಳು ಹಾಗೂ ಸ್ತೂಪಗಳನ್ನು ಹೋಲುವ ರೀತಿಯಲ್ಲಿ ಇದನ್ನು ಬಹಳ ಸೂಕ್ಷ್ಮವಾಗಿ ವಿನ್ಯಾಸಗೊಳಿಸಲಾಗಿತ್ತು.

ಬುದ್ಧನು ನಿರ್ವಾಣ ಪಡೆದ ಸ್ಥಳವಾದ ಬೋಧಿವೃಕ್ಷದ ಎಲೆಗಳು, ಪೋಷಾಕಿನ ಮಧ್ಯಭಾಗದಲ್ಲಿದ್ದ ಧರ್ಮಚಕ್ರವು ಹುಟ್ಟು, ನೈತಿಕ ಮೌಲ್ಯಗಳು ಹಾಗೂ ಅಷ್ಟಾಂಗ ಮಾರ್ಗವನ್ನು ಪ್ರತಿನಿಧಿಸಿದವು. ಜೊತೆಗೆ, ಇದು ಬುದ್ಧನ ಬೋಧನೆಗಳು ಭಾರತದಿಂದ ಪ್ರಪಂಚದ ಬೇರೆಡೆಗಳಿಗೆ ಪಸರಿಸಿದ್ದನ್ನು ಸೂಚಿಸಿತು.

ಪೋಷಾಕಿನ ಶಿರೋಧಾರಣೆಯು ದೇವಾಲಯಗಳ ಶಿಖರ ಹಾಗೂ ಅದರ ಶೃಂಗ ಭಾಗದಲ್ಲಿನ ತಾವರೆ ಹೂವಿನ ವಿನ್ಯಾಸವು ಪರಿಶುದ್ಧತೆಯ ಪ್ರತೀಕಗಳಾಗಿದ್ದವು. ಕೊನೆಗೆ, ಅಂಜಲಿ ಮುದ್ರೆಯೊಂದಿಗೆ ಮಣಿಕಾ ಪ್ರಣಾಮಗಳನ್ನು ಸಲ್ಲಿಸಿದ್ದು ಶಾಂತಿ, ಗೌರವ ಹಾಗೂ ಏಕತೆಯ ಸಂಕೇತವಾಗಿತ್ತು.

ಭಾರತವು ಬೌದ್ಧಧರ್ಮ ಉಗಮಿಸಿದ ನಾಡು ಮಾತ್ರವಲ್ಲ, ಪ್ರಪಂಚದೆಲ್ಲೆಡೆಗೆ ಆಧ್ಯಾತ್ಮಿಕ ಚಿಂತನೆಯನ್ನು ಪ್ರೇರೇಪಿಸಿದ ನಾಡು ಎಂಬುದನ್ನೂ ಸೂಚಿಸಿತು.

ರಾಜಸ್ಥಾನ ಮೂಲದ ಮಣಿಕಾ, ಪ್ರಸ್ತುತ ದೆಹಲಿಯಲ್ಲಿ ಪದವಿ ಅಂತಿಮ ವರ್ಷದಲ್ಲಿ ಓದುತ್ತಿದ್ದು, ನೃತ್ಯಪಟು ಆಗಿಯೂ ಗಮನ ಸೆಳೆದಿದ್ದಾರೆ.



ಅಥೀಸಾ ಮನಾಲೊ

ಫಿಲಿಪ್ಪೀನ್ಸ್

ವೇದಿಕೆಯಲ್ಲಿ ನವಿಲೊಂದು ಬಣ್ಣದ ಬಟ್ಟೆ ತೊಟ್ಟು ನರ್ತಿಸುತ್ತಿರುವಂತೆ ಬೆರಗು ಹುಟ್ಟಿಸಿದ್ದು, 'ಭುವನ ಸುಂದರಿ' ಸ್ಪರ್ಧೆಯಲ್ಲಿ ಮೂರನೇ ರನ್ನರ್ ಅಪ್ ಆಗುವಲ್ಲಿ ಯಶಸ್ವಿಯಾದ ಅಥೀಸಾ ಮನಾಲೊ ಅವರ ವೇಷಭೂಷಣ. ಅಥೀಸಾ ಅವರೇ ಖುದ್ದು ಕರೆ ಮಾಡಿ, ಸ್ಪರ್ಧೆಗಾಗಿ ರಾಷ್ಟ್ರೀಯ ವೇಷಭೂಷಣ ರೂಪಿಸಿಕೊಡುವಂತೆ ಕೋರಿದಾಗ, ವಸ್ತ್ರ ವಿನ್ಯಾಸಕ ಮಾಕ್ ತುಮಾಂಗ್ ಅವರಿಗೆ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಯಿತು. ಗೌನ್‌ಗಳು ಮತ್ತು ಸಂಜೆ ಪಾರ್ಟಿಯ ಉಡುಗೆಗಳನ್ನು ತಯಾರಿಸುವುದರಲ್ಲಿ ಸಿದ್ಧಹಸ್ತರಾಗಿದ್ದ ಮಾಕ್‌ಗೆ ಇಂಥದ್ದೊಂದು ಹೊಸ ಬೇಡಿಕೆ ಇಟ್ಟ ಅಥೀಸಾ ಆಗ ಹೇಳಿದ್ದು ಒಂದೇ ಮಾತು 'ನಾನು ಹಬ್ಬಗಳ ರಾಣಿಯಂತೆ ಕಂಗೊಳಿಸಬೇಕು'.

ಫಿಲಿಪ್ಪೀನ್ಸ್ ಹೇಳಿಕೇಳಿ ಧಾರ್ಮಿಕ–ಸಾಂಸ್ಕೃತಿಕ ಹಬ್ಬಗಳ ನೆಲೆವೀಡು. ದೇಶದ ಸಾಂಪ್ರದಾಯಿಕ ಉಡುಪನ್ನು ಮೂಲವಾಗಿಟ್ಟು, ಖ್ಯಾತ ಚಿತ್ರನಟಿ ಮರಿಯಾ ಕ್ಲಾರಾ ಅವರ ಪಾತ್ರವೊಂದರಿಂದ ಸ್ಫೂರ್ತಿ ಪಡೆದು, ಕಣ್ತಣಿಸುವ ದಿರಿಸನ್ನು ಸಿದ್ಧಪಡಿಸಿಯೇಬಿಟ್ಟರು ಮಾಕ್. ದೀಪಗಳ ವೈಭವ, ಸಮೃದ್ಧ ಫಸಲು ಹಾಗೂ ಹೂವುಗಳ ನವೋಲ್ಲಾಸವನ್ನು ಸಂಭ್ರಮಿಸುವ ಫಿಲಿಪ್ಪೀನ್ಸ್‌ನ ಮೂರು ಪ್ರಮುಖ ಹಬ್ಬಗಳನ್ನು ಪ್ರತಿನಿಧಿಸುವ ಈ ಸುಂದರ ದಿರಿಸು, ಅಥೀಸಾ ಅವರ ಅಂದದ ಕಾಯವನ್ನು ಅಲಂಕರಿಸಿಯೇಬಿಟ್ಟಿತು.

ಮಿನುಗುವ ವಸ್ತ್ರದಿಂದ ಹೊಲಿದಿರುವ 65,000 ಹೂವಿನ ಪಕಳೆಗಳು ಈ ದಿರಿಸಿಗೆ ವಿಶೇಷ ಶೋಭೆ ತಂದಿವೆ. ದೇಶದ ಪ್ರಮುಖ ಆಹಾರ ಮೂಲವಾದ ಅಕ್ಕಿಯನ್ನು ಬಳಸಿ ಮಾಡಿದ ಕುಸುರಿ ಕಲೆಯ ತೋಳಿನ ಬಟ್ಟೆ, ಹೂವು, ಎಲೆಗಳಿಂದ ಅಲಂಕರಿಸಿದ ಅರೆ ವೃತ್ತಾಕಾರದ ಹೊನ್ನಿನ ಬಣ್ಣದ ಬಾಚಣಿಗೆಯನ್ನು ನಾಜೂಕಾಗಿ ತಲೆಗೆ ಸಿಕ್ಕಿಸಿ 'ಹಬ್ಬಗಳ ರಾಣಿ'ಯ ಅಲಂಕಾರವನ್ನು ಸಂಪನ್ನಗೊಳಿಸಿದ ಮಾಕ್ ಅವರ ಶ್ರಮ ಕಡೆಗೂ ವ್ಯರ್ಥವಾಗಲಿಲ್ಲ. 'ಉತ್ತಮ ರಾಷ್ಟ್ರೀಯ ಪೋಷಾಕು' ಪ್ರಶಸ್ತಿಯನ್ನು ಅಥೀಸಾ ಅವರಿಗೆ ಅದು ತಂದುಕೊಟ್ಟಿತು.

ಅಷ್ಟೇ ಅಲ್ಲ, ಇದು ಭುವನ ಸುಂದರಿ ಸ್ಪರ್ಧೆಯಲ್ಲಿ ಫಿಲಿಪ್ಪೀನ್ಸ್ ನಿರಂತರವಾಗಿ ಪಡೆಯುತ್ತಿರುವ ಮೂರನೇ ಉತ್ತಮ ರಾಷ್ಟ್ರೀಯ ಪೋಷಾಕು ಎನ್ನಿಸಿಕೊಂಡು, ದೇಶಕ್ಕೆ ಹ್ಯಾಟ್ರಿಕ್ ಗರಿ ಸಿಕ್ಕಿಸಿತು.

28 ವರ್ಷದ ಅಥೀಸಾ ಕಡುಬಡತನದಿಂದ ಬಂದವರು. ತಮ್ಮ ಶಾಲಾ ಶುಲ್ಕ ಕಟ್ಟಲು 10 ವರ್ಷದವರಿದ್ದಾಗಲೇ ಮಕ್ಕಳಿಗಾಗಿ ಏರ್ಪಡಿಸಿದ್ದ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದು ಬೀಗಿದ್ದವರು. ಆಕೆಯಲ್ಲಿ ಭುವನ ಸುಂದರಿ ಪಟ್ಟದ ಕನಸು ಬಿತ್ತಿದವರು ಆಕೆಯ ಅಜ್ಜಿ. ಆದರೆ ಅಥೀಸಾ ಆ ವೇದಿಕೆ ಹತ್ತುವ ಮುನ್ನವೇ ಆಕೆ ಇಹಲೋಕ ತ್ಯಜಿಸಿದ್ದರಿಂದ, ತಮಗೆ ಸಿಕ್ಕಿದ ಆ ಅವಕಾಶವನ್ನು ಅಥೀಸಾ ತಮ್ಮ ಅಜ್ಜಿಗೇ ಅರ್ಪಿಸಿದ್ದಾರೆ.



ಅಲ್ದಾನಾ ಮಸೆಟ್

ಅರ್ಜೆಂಟಿನಾ



20ನೇ ಶತಮಾನದ ಅತ್ಯಂತ ಪ್ರಮುಖ ಜನಪದ ಗಾಯಕರಲ್ಲಿ ಒಬ್ಬರಾದ, ಅರ್ಜೆಂಟಿನಾದ ದಿ. ಅತವಲ್ಪ ಯುಪಾಂಖಿ ಅವರ ಗೌರವಾರ್ಥವಾಗಿ ಈ ವೇಷಭೂಷಣವನ್ನು ಸಿದ್ಧಪಡಿಸಲಾಗಿತ್ತು.

ಬೆನ್ನಿನ ಮೇಲೆ ಬಿಗಿಯಾಗಿ ನಿಲ್ಲಿಸಲಾಗಿದ್ದ ಎರಡು ಗಿಟಾರ್‌ಗಳು, ಈಜುಡುಗೆ ಮಾದರಿಯ ಚಿನ್ನದ ಬಣ್ಣದ ಉಡುಪು, ಶಿಖೆಯನ್ನು ಅಲಂಕರಿಸಿದ್ದ ಕೆಂಪು, ಕೇಸರಿ ವರ್ಣದ ಗರಿಗಳ ತುರಾಯಿ, ಮಂಡಿಯವರೆಗೆ ಲಕಲಕಿಸುತ್ತಿದ್ದ ಬೂಟ್ಸುಗಳು, ಇಳಿಬಿದ್ದಿದ್ದ ಉದ್ದನೆಯ ಮೇಲಂಗಿಯನ್ನು ಕೈಯಲ್ಲಿ ಹಿಡಿದು ಹಾಡುತ್ತಾ ಬಂದ ಅಲ್ದಾನಾ ಧರೆಗಿಳಿದ ಅಪ್ಸರೆಯಂತೆ ಕಂಗೊಳಿಸಿದರು. ಸ್ವತಃ ಮೂರು ವಾದ್ಯಗಳನ್ನು ನುಡಿಸಬಲ್ಲ 25 ವರ್ಷದ ಅಲ್ದಾನಾ, ಅರ್ಜೆಂಟಿನಾ ಸಂಸ್ಕೃತಿಯ ಪ್ರತೀಕದಂತಿದ್ದ ಗೀತರಚನೆಕಾರ, ಗಿಟಾರ್ ವಾದಕ ಯುಪಾಂಖಿ ಅವರ ಕಲೆಗೆ ನಮನ ಸಲ್ಲಿಸಿದ ಪರಿ ಹೀಗಿತ್ತು.

ತಾಂಗಿಯಾ ಜಮಾನ್ ಮೆಥಿಲಾ

ಬಾಂಗ್ಲಾದೇಶ



ಮಿರಿಮಿರಿ ಮಿರುಗುತ್ತಿದ್ದ ರತ್ನವರ್ಣದ ಜರಿಯ ಬೃಹತ್ ತಾವರೆಯನ್ನು ಬೆನ್ನಿಗಾನಿಸಿಕೊಂಡು, ಶ್ವೇತವಸ್ತ್ರಧಾರಿಯೊಬ್ಬಳು ಸೊಂಟ ಬಳುಕಿಸುತ್ತಾ ಬಂದು ತಮ್ಮೆದುರು ನಿಂತಾಗ, ಪ್ರೇಕ್ಷಕರು ಅದರಲ್ಲೂ ಭಾರತೀಯರು ನಿಬ್ಬೆರಗಾದರು. ಮನಮೋಹಕ ತಾವರೆಯ ಹೂವೊಂದು ಸದ್ದಿಲ್ಲದೇ ಅರಳಿ ನಿಂತಂತೆ, ಅದರೊಳಗಿಂದ ಸಾಕ್ಷಾತ್ ಸರಸ್ವತಿಯೇ ಎದ್ದು ಬಂದಂತೆ ಭಾಸವಾಗುತ್ತಿದ್ದರೂ ಆಕೆ ಪ್ರತಿನಿಧಿಸುತ್ತಿದ್ದುದು ಬಾಂಗ್ಲಾದೇಶವನ್ನು ಎಂಬುದು ತಿಳಿದಾಗ ಅಚ್ಚರಿಗೆ ಒಳಗಾದರು.

ತಾಂಗಿಯಾ ಜಮಾನ್ ಮೆಥಿಲಾ ತೊಟ್ಟಿದ್ದುದು ಬಾಂಗ್ಲಾದೇಶದ ಜಗತ್ಪ್ರಸಿದ್ಧ ಜಾಮದಾನಿ ಸೀರೆಯನ್ನು, ಜೊತೆಗೆ ಆಕೆಯ ಬೆನ್ನಿಗಿದ್ದುದು ಆ ದೇಶದ ರಾಷ್ಟ್ರೀಯ ಪುಷ್ಪವಾದ ವಾಟರ್‌ಲಿಲ್ಲಿ. ಆದರೆ ನೋಡಿದ ಕೂಡಲೇ ಕಮಲದಂತೆ ತೋರುವ ವಾಟರ್‌ಲಿಲ್ಲಿ ಮತ್ತು ಹಿಂದೂ ದೇವತೆಯನ್ನು ಹೋಲುವ ವಸ್ತ್ರಾಭರಣ ನಂತರ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ಸದ್ದು ಮಾಡಿದವು. ಈ ಸೀರೆಯನ್ನು ನೇಯಲು ನಿಪುಣ ನೇಕಾರರಿಗೆ 120 ದಿನಗಳೇ ಬೇಕಾಗಿದ್ದವು. '17ನೇ ಶತಮಾನದ ಮೊಘಲರ ಸಾಮ್ರಾಜ್ಯದಲ್ಲಿ ರಾಣಿಯರು ಮತ್ತು ರಾಜಮನೆತನಕ್ಕೆ ಸೇರಿದವರು ಧರಿಸುತ್ತಿದ್ದ ರೀತಿಯ ದಿರಿಸಿದು ಎನ್ನುತ್ತೀರಿ, ಆದರೆ ನಿಮ್ಮ ಈ ಸೀರೆ, ಕಮಲ, ಒಡವೆ ಎಲ್ಲವೂ ನಮ್ಮ ಹಿಂದೂ ದೇವತೆ ಸರಸ್ವತಿಯ ಪ್ರತಿರೂಪದಂತಿವೆ' ಎಂದು ಭಾರತೀಯ ನೆಟ್ಟಿಗರು ಅವರ ಕಾಲೆಳೆಯದೇ ಬಿಡಲಿಲ್ಲ.

2020ರಲ್ಲಿ 'ಮಿಸ್ ಯೂನಿವರ್ಸ್ ಬಾಂಗ್ಲಾದೇಶ್' ಆಗುವ ಮೂಲಕ ಭುವನ ಸುಂದರಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಮೆಥಿಲಾ ಆಯ್ಕೆಯಾಗಿದ್ದರು. ಆದರೆ ಕೋವಿಡ್‌ನಿಂದಾಗಿ ದೇಶದ ಮೇಲೆ ಹೇರಿದ್ದ ಹಲವು ನಿರ್ಬಂಧಗಳ ಕಾರಣದಿಂದ ಪಾಲ್ಗೊಳ್ಳಲು ಅವರಿಗೆ ಸಾಧ್ಯವಾಗಿರಲಿಲ್ಲ. 5 ವರ್ಷಗಳ ಬಳಿಕ ಮತ್ತೆ ಆಕೆಗೆ ಕಿರೀಟ ತೊಡಿಸಿ ಸ್ಪರ್ಧೆಗೆ ಕಳುಹಿಸಲಾಗಿತ್ತು. ಬಾಲಿವುಡ್ ಚಿತ್ರ 'ರೋಹಿಂಗ್ಯಾ'ದಲ್ಲಿ 33 ವರ್ಷದ ಮೆಥಿಲಾ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಎಣ್ಣೆಯಲ್ಲಿ ಮುಳುಗೇಳುವ ಎಣ್‌ಮುಳುಕ

• ಸುನಾದ

ರಸಾಸ್ವಾದ

ಕಟ್ಟಿಗೆ ಒಲೆ ಮೇಲೆ ದೊಡ್ಡದೊಂದು ಬಾಣಲೆ ಅರ್ಧದಷ್ಟು ಎಣ್ಣೆ ತುಂಬಿಸಿಕೊಂಡು ಕೆಂಪಗೆ ಕಾಯುತ್ತಿತ್ತು. ಕಾದ ಎಣ್ಣೆಗೆ ಇನ್ನೇನು ಅಜ್ಜಿಯು ಬಳ್ಳೆಯಲ್ಲಿ ಕಲೆಸಿಟ್ಟ ಹಿಟ್ಟನ್ನು ಬಿಡಬೇಕು; ಅಷ್ಟರಲ್ಲೇ ಮೊಮ್ಮಕ್ಕಳೆಲ್ಲ ಸಾಲುಗಟ್ಟಿದೆವು. ಆ ಹಿಟ್ಟಿನ ಉಂಡೆಗಳು ಜಾಲರಿಯ ಸಾಂಗತ್ಯ ಬೆಳೆಸಿ, ಅತ್ತಿಂದಿತ್ತ ಇತ್ತಿಂದತ್ತ ಓಲಾಡುತ್ತ, ಕೆಂಪಗಾದಾಗ ಅವುಗಳನ್ನು ಹೊರತೆಗೆದ ಅಜ್ಜಿ, ಅಗಲ ಪಾತ್ರೆಗೆ ಧುಮುಕಿಸಿದರು. ಅದನ್ನೇ ಕಾಯುತ್ತಿದ್ದ ನಾವು ಆ ಪಾತ್ರೆಗೆ ಕೈಹಾಕಿ ಸಿಕ್ಕಷ್ಟನ್ನು ಬಾಚಿಕೊಂಡು, ಪಾತ್ರೆ ಬರಿದು ಮಾಡಿ ಓಡಿದೆವು...

ಬೇಸಿಗೆ ರಜಾ ದಿನಗಳಲ್ಲಿ ಅಜ್ಜಿಯ ಮನೆಗೆ ದಾಂಗುಡಿ ಇಡುತ್ತಿದ್ದ ನಮಗೆ, ಅಜ್ಜಿ ಮಾಡಿ ಕೊಡುತ್ತಿದ್ದ ಈ ಸಿಹಿ ಖಾದ್ಯವೆಂದರೆ ಅಚ್ಚುಮೆಚ್ಚು. ಅದನ್ನು ಸವಿದರೇನೇ ಬೇಸಿಗೆ ರಜೆ ಸಂಪನ್ನವಾಗುತ್ತಿದ್ದುದು. ಅದೇನೆಂದಿರಾ? ಮಲೆನಾಡಿನ ಭಾಗದ 'ಎಣ್‌ಮುಳುಕ', 'ಎಣ್‌ಗುಡುಕ'. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಭಾಗದಲ್ಲಿ 'ಗಾರಿಗೆ', 'ಸಿಹಿ ವಡಾ' ಎಂದೇ ಜನಜನಿತವಾಗಿರುವ ಇದು ಅತಿ ಸುಲಭದಲ್ಲಿ ಮಾಡಬಹುದಾದ ಖಾದ್ಯ. ಬಹುಶಃ ಎಣ್ಣೆಯಲ್ಲಿ ಮುಳುಗಿ ಏಳುವ ಕಾರಣಕ್ಕೆ ಈ ಹೆಸರು ಅನ್ವರ್ಥವಾಗಿ ಬಂದಿರಬಹುದೇನೊ.

ಮಲೆನಾಡು, ಅರೆಮಲೆನಾಡಿನ ಮನೆಗಳಲ್ಲಿ ಸಾಮಾನ್ಯವಾಗಿ ವಿವಿಧ ಹಬ್ಬದ ದಿನಗಳಲ್ಲಿ ಈ ಖಾದ್ಯ ತಯಾರಾಗುತ್ತದೆ. ದೀಪಾವಳಿ ಹಬ್ಬದ ವರ್ಷದ ತೊಡಕಿನ ದಿನ ಮಾಡುವ ಕೆರೆ ಗಂಗವ್ವನ ಪೂಜೆಗೆ 'ಎಣ್‌ಮುಳುಕ'ದ ನೈವೇದ್ಯವೇ ಆಗಬೇಕು. ಅಲ್ಲದೆ, ದಿಢೀರನೆ ನೆಂಟರಿಷ್ಟರು ಬಂದರೆ, ಮಕ್ಕಳಿಗೆ ಸಿಹಿತಿಂಡಿ ತಿನ್ನಬೇಕೆನ್ನಿಸಿದಾಗ, ಬಯಕೆ ಬುತ್ತಿ (ಗರ್ಭಿಣಿಯರಿಗೆ ಉಣಬಡಿಸುವ ಅಡುಗೆ) ಸಮಯದಲ್ಲಿ ಎಣ್‌ಮುಳುಕ ಜೊತೆಯಾಗುತ್ತದೆ.

ಉತ್ತರ ಕರ್ನಾಟಕ ಭಾಗದಲ್ಲಿ ಕಾರಹುಣ್ಣಿಮೆ, ಮಣ್ಣೆತ್ತಿನ ಅಮಾವಾಸ್ಯೆಯ ದಿನಗಳಲ್ಲಿ ಗಾರಿಗೆ ಮಾಡಿ ಎತ್ತುಗಳಿಗೆ ಹೂವು ಹಾಗೂ ಗಾರಿಗೆಗಳಿಂದ ಅಲಂಕಾರ ಮಾಡಲಾಗುತ್ತದೆ. ರೈತರ ಮನೆಮನೆಗಳಲ್ಲಿ ಅಂದು ಗಾರಿಗೆಯ ಘಮ ಪಸರಿಸಿರುತ್ತದೆ. ಇನ್ನು ಕೆಲವೆಡೆ ಶಿವರಾತ್ರಿ ಹಬ್ಬಕ್ಕೆ ಗಾರಿಗೆ ಹಾಜರಿ ಹಾಕುತ್ತದೆ.

ಮೈಸೂರು ಭಾಗದಲ್ಲಿ ಮಾಡುವ ಕಜ್ಜಾಯದ ಪ್ರತಿರೂಪದಂತಿರುವ ಗಾರಿಗೆಗೆ ಕಜ್ಜಾಯ ತಯಾರಿಸಲು ಬೇಕಾಗುವಷ್ಟು ಶ್ರಮ ಬೇಡ. ಸುಲಭದಲ್ಲಿ, ಕಡಿಮೆ ಪದಾರ್ಥ ಬಳಸಿ ಸಿದ್ಧಗೊಳ್ಳುವ ಖಾದ್ಯವಿದು. ಅಂತೆಯೇ ಕಾಲ, ಸ್ಥಳಕ್ಕೆ ತಕ್ಕಂತೆ 'ಗಾರಿಗೆ' ತಯಾರಿಯಲ್ಲೂ ವೈವಿಧ್ಯವಿದೆ. ಮಲೆನಾಡಿನಲ್ಲಿ ಎಣ್‌ಮುಳುಕ ತಯಾರಿಗೆ ಅನ್ನ ಬಳಸಿದರೆ, ಮಧ್ಯ ಕರ್ನಾಟಕ ಭಾಗದಲ್ಲಿ ಬಾಳೆಹಣ್ಣು ಜೊತೆಯಾಗುತ್ತದೆ. ಹಲಸಿನ ಹಣ್ಣಿನ ಕಾಲದಲ್ಲಿ ಆ ಹಣ್ಣಿನ ಸಾಂಗತ್ಯ ಬೆಳೆಸಿ ಇನ್ನಷ್ಟು ಘಮಗುಡುತ್ತದೆ. ಕೆಲವೆಡೆ ಅಕ್ಕಿಹಿಟ್ಟಿನಿಂದ ಗಾರಿಗೆ ತಯಾರಾದರೆ, ಇನ್ನು ಕೆಲವರು ಗೋಧಿಹಿಟ್ಟು ಬಳಸುತ್ತಾರೆ. ಗಾರಿಗೆಗೆ ಮೈದಾಹಿಟ್ಟಿನ ನಂಟೂ ಇದೆ. ಹೋಳಿಗೆ ಅಥವಾ ಒಬ್ಬಟ್ಟು ಮಾಡುವಾಗ ಕಣಕ ಉಳಿದರೆ ಅದಕ್ಕೆ ಬೆಲ್ಲ ಹಾಗೂ ಬಾಳೆಹಣ್ಣನ್ನು ಸೇರಿಸಿ, ಒಂದೆರಡು ಗಂಟೆ ಬಿಟ್ಟು ಬಳಿಕ ಗಾರಿಗೆ ಮಾಡುವ ರೂಢಿ ಕೆಲಭಾಗಗಳಲ್ಲಿದೆ.

ನಾಲ್ಕು ಗಂಟೆ ಕಾಲ ನೆನೆಸಿಟ್ಟ ಅಕ್ಕಿ, ಹಲಸಿನಹಣ್ಣು ರುಬ್ಬಿಕೊಂಡು ಅದಕ್ಕೆ ಬೆಲ್ಲ, ಏಲಕ್ಕಿ, ಶುಂಠಿ ಪುಡಿ ಬೆರೆಸಿ ಎಣ್ಣೆಯಲ್ಲಿ ಕರಿದರೆ 'ಹಲಸಿನ ಗಾರಿಗೆ'ಯ ಘಮ ನೆರೆಮನೆಯವರೆಗೂ ಆವರಿಸುತ್ತದೆ. ಬೆಲ್ಲ ಕರಗಿಸಿ ಅದಕ್ಕೆ ಗೋಧಿಹಿಟ್ಟು ಬೆರೆಸಿ ವಡಾ ಹಿಟ್ಟಿನ ಹದಕ್ಕೆ ಕಲೆಸಿ ಎಣ್ಣೆಯಲ್ಲಿ ಕರಿದರೆ ಮೃದುವಾದ ಗಾರಿಗೆ ಬಾಯಲ್ಲಿ ನೀರೂರಿಸುತ್ತದೆ. ಬಯಲುಸೀಮೆಯ ಮನೆಗಳಲ್ಲಿ ಸಿಹಿ ಗಾರಿಗೆ ಜೊತೆಗೆ ಉಪ್ ಗಾರಿಗೆ ಅಥವಾ ಖಾರದ ಗಾರಿಗೆಯೂ ಮೈದಳೆಯುತ್ತದೆ. ಇವೆರಡರ ಸಂಯೋಜನೆಯು ತಿನಿಸುಪ್ರಿಯರಿಗೆ ಅಚ್ಚುಮೆಚ್ಚು.



ಅನ್ನಕ್ಕೆ ಮರುಜನ್ಮ!

ಎಣ್‌ಮುಳುಕವನ್ನು ಬಿಸಿ ಅನ್ನದಿಂದ ತಯಾರಿಸಬಹುದು, ತಂಗಳನ್ನಕ್ಕೆ ಎಣ್‌ಮುಳುಕದ ಮೂಲಕ ಮರುಜನ್ಮವನ್ನೂ ನೀಡಬಹುದು.

ಏನೇನು ಬೇಕು?: ಮೂರು ಕಪ್ ಅನ್ನ, ಒಂದು ಕಪ್ ಗೋಧಿಹಿಟ್ಟು, 2 ಕಪ್ ಬೆಲ್ಲ, 2 ಚಮಚ ಅಕ್ಕಿಹಿಟ್ಟು, ಒಂದು ಚಮಚ ಏಲಕ್ಕಿ– ಶುಂಠಿ ಪುಡಿ, ಚಿಟಿಕೆ ಉಪ್ಪು, ಕರಿಯಲು ಎಣ್ಣೆ.

ತಣ್ಣಗಿನ ಅನ್ನಕ್ಕೆ ಬೆಲ್ಲ ಸೇರಿಸಿ ರುಬ್ಬಿಕೊಳ್ಳಿ. ಅದಕ್ಕೆ ಗೋಧಿಹಿಟ್ಟು, ಏಲಕ್ಕಿ– ಶುಂಠಿ ಪುಡಿ, ಉಪ್ಪು ಸೇರಿಸಿ ಸ್ವಲ್ಪವೇ ನೀರು ಹಾಕಿ ಮತ್ತೊಮ್ಮೆ ರುಬ್ಬಿಕೊಳ್ಳಿ. ಈ ಮಿಶ್ರಣ ದೋಸೆ ಹಿಟ್ಟಿಗಿಂತ ಸ್ವಲ್ಪ ಗಟ್ಟಿಯಾಗಿರಬೇಕು. ಅದನ್ನು ಪಾತ್ರೆಗೆ ಹಾಕಿ ಕೈಯಲ್ಲಿ ಚೆನ್ನಾಗಿ ಮತ್ತೊಮ್ಮೆ ಮಿಕ್ಸ್ ಮಾಡಿ, ಕಾದ ಎಣ್ಣೆಯಲ್ಲಿ ಬಜ್ಜಿ ಬಿಡುವ ಹಾಗೆ ಬಿಡಬೇಕು. ಕಂದು ಬಣ್ಣ ಬಂದ ಬಳಿಕ ಎಣ್ಣೆಯಿಂದ ತೆಗೆದರೆ ಎಣ್‌ಮುಳುಕ ಸವಿಯಲು ಸಿದ್ಧ. ಇದನ್ನು ಬಿಸಿ ಇರುವಾಗಲೂ ತಣ್ಣಗಾದ ಬಳಿಕವೂ ಸವಿಯಬಹುದು. ಎರಡು–ಮೂರು ದಿನಗಳವರೆಗೆ ಕೆಡದಂತೆ ಇರುತ್ತದೆ.



ಅಂತರಂಗ

ನಕಾರಾತ್ಮಕ ಆಲೋಚನೆ ಬರುವುದೇಕೆ ಸುಮ್ಮನೆ?

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• **ನಮಸ್ತೆ ಸರ್, ವಿಪರೀತ ಎನ್ನುವಷ್ಟು ನಕಾರಾತ್ಮಕ ಆಲೋಚನೆಗಳು ಬಂದು, ಯಾವುದರಲ್ಲಿಯೂ ಗೆಲುವು ಇಲ್ಲದ ಹಾಗೆ ಆಗಿದೆ. ಅದಕ್ಕೆ ತಕ್ಕಂತೆ, ಹಲವು ಬಾರಿ ನನ್ನ ಆಲೋಚನೆಯಂತೆಯೇ ಘಟನೆಗಳು ಸಂಭವಿಸಿಬಿಡುತ್ತವೆ. ಇದರಿಂದ ಹೊರಬರುವುದು ಹೇಗೆ?**

ನಕಾರಾತ್ಮಕ ಆಲೋಚನೆಗಳು ಸಹಜವಾಗಿ ಬರುವಂತಹವು. ಅವುಗಳಿಗೆ ಹಲವು ಕಾರಣಗಳೂ ಇರಬಹುದು. ನಮ್ಮದೇ ಜೀವನದಲ್ಲಿ ಹಿಂದೆ ನಡೆದಂತಹ ಘಟನೆಗಳಿರಬಹುದು ಅಥವಾ ನಾವು ಬೇರೆಯವರನ್ನು ನೋಡಿ ನಮಗೂ ಹಾಗೆಯೇ ಆದರೆ ಎಂದು ಆತಂಕ ಪಡುವುದು ಸ್ವಾಭಾವಿಕ! ಆದರೆ, ಅವುಗಳ ಮೇಲೆಯೇ ನಾವು ನಮ್ಮ ಜೀವನದ ನಿರ್ಧಾರಗಳನ್ನು ತೆಗೆದುಕೊಂಡರೆ ಅದು ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ನಾವು ಇಂದು ಏನಾಗಿದ್ದೇವೆಯೋ ಅದು ನಮ್ಮ ಭೂತಕಾಲದ ಅನುಭವಗಳಿಂದ ಎನ್ನುವುದು ಎಷ್ಟು ನಿಜವೋ ಹಾಗೆಯೇ ನಮ್ಮ ಭವಿಷ್ಯವು ನಮ್ಮ ಈಗಿನ ವರ್ತಮಾನದ ಮೇಲೆ ಅವಲಂಬಿತವಾಗಿದೆ ಎನ್ನುವುದೂ ಅಷ್ಟೇ ನಿಜ. ಹಾಗಿರುವಾಗ, ನಾವು ಭೂತಕಾಲದ ಭಾರಕ್ಕೆ ಭವಿಷ್ಯವನ್ನು ಬಲಿಕೊಡಬೇಕೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಯಾಕೆಂದರೆ, ನೀವೇ ಹೇಳಿದಂತೆ, ನಿಮ್ಮ ಜೀವನದಲ್ಲಿ ನಕಾರಾತ್ಮಕ ಯೋಚನೆಗಳಿಂದಾಗಿ ಗೆಲುವು ಇಲ್ಲದಂತಾಗಿದೆ. ಹಾಗಾಗಿ, ಮೊದಲಿಗೆ ಸರಿಪಡಿಸಿಕೊಳ್ಳಬೇಕಿರುವುದು ನಮ್ಮ ಭಾವನೆಗಳ ಭಾರವನ್ನು. ಯಾಕೆಂದರೆ, ನಮ್ಮ ನಕಾರಾತ್ಮಕ ಯೋಚನೆಗಳಿಗೆ ಹೆಚ್ಚಾಗಿ ನಮ್ಮ ನಕಾರಾತ್ಮಕ ಭಾವನೆಗಳೇ ಕಾರಣವಾಗಿರುತ್ತವೆ. ಆದ್ದರಿಂದ ಅದರ ಮೂಲವನ್ನು ಹುಡುಕುವುದು ಪ್ರಮುಖವಾದ ಅಂಶ.

ಇನ್ನೀಗ ನಿಮ್ಮ ಆಲೋಚನೆಯಂತೆಯೇ ಘಟನೆಗಳು ಸಂಭವಿಸುತ್ತಿವೆ ಅನ್ನುವುದನ್ನು ನೋಡಿ, ನೀವು ಬಹುಶಃ ನಿಮಗೆ ಮೊದಲೇ ತಿಳಿಯುತ್ತಿದೆ ಅಂತ ಅಂದುಕೊಂಡಿದ್ದರೆ ಅದು ಒಂದು ದೃಷ್ಟಿಕೋನ. ಆದರೆ, ಅದನ್ನು ನೀವು ನಿಮ್ಮ ಮನಸ್ಸಿನಿಂದಲೇ ಸೃಷ್ಟಿಸುತ್ತಿದ್ದೀರಾ ಎಂಬುದನ್ನು ಕೂಡಾ ಪರೀಕ್ಷಿಸುವ ಅಗತ್ಯವಿದೆ. ಗೌತಮ ಬುದ್ಧ ಒಂದು ಬಹಳ ಸುಂದರವಾದ ಮಾತನ್ನು ಹೇಳಿದ್ದಾನೆ. 'ವಾಟ್ ಯೂ ಥಿಂಕ್, ಯೂ ಬಿಕಂ. ವಾಟ್ ಯೂ ಫೀಲ್, ಯೂ ಅಟ್ರ್ಯಾಕ್ಟ್. ವಾಟ್ ಯೂ ಇಮ್ಯಾಜಿನ್, ಯೂ ಕ್ರಿಯೇಟ್'. ಅಂದರೆ, 'ನೀವು ಏನನ್ನು ಯೋಚಿಸುತ್ತೀರೋ ಅದೇ ಆಗುತ್ತೀರಿ. ನೀವು ಏನನ್ನು ಭಾವಿಸುತ್ತೀರೋ ಅದನ್ನೇ ಆಕರ್ಷಿಸುತ್ತೀರಿ. ನೀವು ಏನನ್ನು ಚಿತ್ರಿಸುತ್ತೀರೋ ಅದನ್ನೇ ಸೃಷ್ಟಿಸುತ್ತೀರಿ'.

ಈಗ ಈ ಮಾತಿನ ಚೌಕಟ್ಟಿನ ಆಧಾರದ ಮೇಲೆ ನಿಮ್ಮ ಮಾತನ್ನು ಗಮನಿಸಿದರೆ, ನಿಮ್ಮ ಜೀವನದಲ್ಲಿ ಆಗುತ್ತಿರುವ ನಕಾರಾತ್ಮಕ ವಿಷಯಗಳ ಕುರಿತು ನಿಮಗೆ ಮುನ್ಸೂಚನೆ ಸಿಗುತ್ತಿದೆಯೋ ಅಥವಾ ನೀವೇ ಅದನ್ನು ಸೃಷ್ಟಿ ಮಾಡುತ್ತಿದ್ದೀರೋ ಎಂಬುದನ್ನು ನೀವೇ ವಿಮರ್ಶಿಸಿ. ಯಾಕೆಂದರೆ ನನಗನ್ನಿಸುವ ಪ್ರಕಾರ, ನಿಮ್ಮ ಜೀವನದಲ್ಲಿ ನಡೆಯುತ್ತಿರುವ ಘಟನೆಗಳ ಮೂಲ ಕಾರಣ ನಿಮ್ಮ ಮನಸ್ಸಿನಲ್ಲಿ ಮೂಡುವ ಚಿತ್ರಣಗಳು ಅಥವಾ ಕಲ್ಪನೆಗಳೇ ಆಗಿರಬಹುದು. ಹಾಗಾಗಿ, ಮೊದಲಿಗೆ ಆ ಮೂಲವನ್ನು ಸರಿಪಡಿಸಿಕೊಳ್ಳಿ. ಸುಲಭವಾದ ಉದಾಹರಣೆ ಕೊಡುವುದಾದರೆ, ರಸ್ತೆಯ ಮೇಲೆ ವಾಹನ ತೆಗೆದುಕೊಂಡು ಹೋಗುವಾಗ, ಅಪಘಾತವಾದರೆ ಅಂತಲೇ ಆಲೋಚನೆ ಮಾಡಿಕೊಂಡು ಹೋದರೆ ಅಪಘಾತವಾಗುವ ಸಾಧ್ಯತೆ ಜಾಸ್ತಿ ಇರುತ್ತದೆ. ಎಷ್ಟೋ ಬಾರಿ ಬಲವಾದ ಕಾರಣ ಇಲ್ಲದೆಯೂ ಅಪಘಾತ ಸಂಭವಿಸಬಹುದು. ಆಗ, ನನಗೆ ಮೊದಲೇ ಅನಿಸಿತ್ತು ಅಂತ ಹೇಳುವವರು ಅನೇಕರಿದ್ದಾರೆ. ಆದರೆ, ಬಹುಶಃ ನಾನೇ ಈ ಪರಿಸ್ಥಿತಿಯನ್ನು ಸೃಷ್ಟಿಸಿದೆ ಎಂದು ಯಾರೂ ಅಂದುಕೊಳ್ಳುವುದಿಲ್ಲ. ಹಾಗಾಗಿ, ಇಲ್ಲಿ ನಮ್ಮ ಪರಿಕಲ್ಪನೆಯನ್ನು ಬದಲಾಯಿಸಿಕೊಳ್ಳುವ ಅಗತ್ಯವಿದೆ. ಮಾತ್ರವಲ್ಲ, ಒಂದು ವೇಳೆ ನಕಾರಾತ್ಮಕ ಆಲೋಚನೆಗಳನ್ನು ಸೃಷ್ಟಿಸುವ ಸಾಮರ್ಥ್ಯ ನಿಮಗಿದೆ ಅಂತಾದರೆ, ಸಕಾರಾತ್ಮಕ ಆಲೋಚನೆಗಳನ್ನೂ ಸೃಷ್ಟಿಸುವ ಸಾಮರ್ಥ್ಯ ಇದ್ದೇ ಇರುತ್ತದೆ. ಅದನ್ನು ಟ್ಯಾಪ್ ಮಾಡಿ. ಆಗ, ತನ್ನಿಂತಾನೇ ಪರಿಸ್ಥಿತಿಗಳು ಬದಲಾಗುತ್ತಾ ಹೋಗುತ್ತವೆ.

ಚಿಟಿಕೆ ಸುದ್ದಿ

ಪ್ರಮೋದ್ ಮಧ್ವರಾಜ್ ಗೈರು

ಉಡುಪಿ: ಪ್ರಧಾನಿ ಭಾಗವಹಿಸಿದ್ದ ಕೃಷ್ಣ ಮಠದ ಕಾರ್ಯಕ್ರಮಕ್ಕೆ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರು ಗೈರು ಹಾಜರಾಗಿದ್ದರು.

ಶ್ರೀಕೃಷ್ಣ ಮಠದ ಕನಕನ ಕಿಂಡಿಗೆ ಸ್ವರ್ಣ ಕವಚವನ್ನು ಅವರು ಸೇವಾ ರೂಪದಲ್ಲಿ ನೀಡಿದ್ದರು.

'ಕನಕನ ಕಿಂಡಿಯ ಸ್ವರ್ಣ ಕವಚದ ಅನಾವರಣ ಕಾರ್ಯಕ್ರಮದ ಪಟ್ಟಿಯಲ್ಲಿ ನನ್ನ ಹೆಸರು ಇರಬಹುದೆಂದು ಭಾವಿಸಿದ್ದೆ. ಆದರೆ ಪ್ರಧಾನಿ ಕಾರ್ಯಾಲಯದಿಂದ ಅನುಮೋದನೆಗೊಂಡ ಪಟ್ಟಿಯಲ್ಲಿ ನನ್ನ ಹೆಸರು ಇರಲಿಲ್ಲ. ಆ ಕಾರಣಕ್ಕೆ ಬಂದಿರಲಿಲ್ಲ' ಎಂದು ಪ್ರಮೋದ್ ಮಧ್ವರಾಜ್ ಪ್ರತಿಕ್ರಿಯಿಸಿದರು. 'ಕನಕನ ಕಿಂಡಿಗೆ ಸ್ವರ್ಣ ಕವಚವನ್ನು ಪ್ರಧಾನಿಯವರೇ ಅನಾವರಣ ಗೊಳಿಸಿದ್ದು, ನನಗೆ ಸಂತೋಷ ತಂದಿದೆ' ಎಂದರು.

ಪೊಲೀಸರಿಗೆ ವಸತಿಗಾಗಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರಜೆ

ಚಿಕ್ಕಮಗಳೂರು: ದತ್ತ ಜಯಂತಿ ಅಂಗವಾಗಿ ಪೊಲೀಸ್ ಸಿಬ್ಬಂದಿಗೆ ವಸತಿ ಸೌಕರ್ಯ ಕಲ್ಪಿಸಲು ವಸತಿ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಿಗೆ ರಜೆ ನೀಡಲಾಗಿದೆ.

ನ.30ರಿಂದ ಡಿ.6ರವರೆಗೆ ರಜೆ ನೀಡಲಾಗಿದೆ. ಎಸ್ಎಸ್ಎಲ್‌ಸಿ ಮತ್ತು ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ರಜೆ ನೀಡದೆ ತರಗತಿ ನಡೆಸಬೇಕು. ಉಳಿದವರಿಗೆ ರಜೆ ನೀಡಬೇಕು ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ದತ್ತ ಜಯಂತಿ ಭದ್ರತೆಗೆ 5 ಸಾವಿರ ಪೊಲೀಸರು ಬರಲಿದ್ದು, ಅವರು ತಂಗಲು ಅಗತ್ಯ ಕಟ್ಟಡಗಳನ್ನು ಒದಗಿಸಲು ಪೊಲೀಸ್ ಇಲಾಖೆ ಜಿಲ್ಲಾಡಳಿತಕ್ಕೆ ಮನವಿ ಮಾಡಿತ್ತು. 60 ವಿದ್ಯಾರ್ಥಿ ನಿಲಯ, ವಸತಿ ಶಾಲೆಗಳು, 26 ಶಾಲಾ ಕಾಲೇಜುಗಳನ್ನು ಪಟ್ಟಿ ಮಾಡಲಾಗಿದೆ.

ಲಲಿತಾ ನಾಯಕ್ ವಿರುದ್ಧ ಎಫ್‌ಐಆರ್



ದಾವಣಗೆರೆ: ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟು ಮಾಡಿದ ಆರೋಪದಡಿ ಮಾಜಿ ಸಚಿವೆ, ಬಂಡಾಯ ಸಾಹಿತಿ ಬಿ.ಟಿ. ಲಲಿತಾ ನಾಯಕ್ ವಿರುದ್ಧ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರಾಮಾಯಣದಲ್ಲಿನ ಶ್ರೀರಾಮ, ಲಕ್ಷ್ಮಣ ಮತ್ತು ರಾವಣರು ಆದರ್ಶರಲ್ಲ. ಅವರು ಕ್ರೂರಿಗಳು' ಎಂದು ಇಲ್ಲಿ ಈಚೆಗೆ ನಡೆದ ವಿಚಾರ ಸಂಕಿರಣದಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್– 299 (ಧಾರ್ಮಿಕ ಭಾವನೆಗೆ ಧಕ್ಕೆ), ಸೆಕ್ಷನ್0– 353 (ಸಾರ್ವಜನಿಕವಾಗಿ ಅವಹೇಳನ) ಹಾಗೂ ಸೆಕ್ಷನ್– 352 (ಶಾಂತಿ ಕದಡಲು ಉದ್ದೇಶಪೂರ್ವ ಯತ್ನ) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.





ಉಡುಪಿಯಲ್ಲಿ ಶುಕ್ರವಾರ ನಡೆದ ರೋಡ್ ಶೋನಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಜನರತ್ತ ಕೈಬೀಸಿದರು. ಜನರು ಮೋದಿಯವರ ಮೇಲೆ ಹೂಮಳೆ ಸುರಿಸಿದರು (ಎಡ) ಉಡುಪಿಯ ಶ್ರೀಕೃಷ್ಣಮಠದಲ್ಲಿ ಶುಕ್ರವಾರ ನಡೆದ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸ್ತೋಮ ಪಿಟಿಐ ಚಿತ್ರ

'ನವ ಭಾರತ ಯಾರಿಗೂ ತಲೆತಗ್ಗಿಸದು'

ಉಡುಪಿಯ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ

• ಪ್ರಜಾವಾಣಿ ವಾರ್ತೆ

ಉಡುಪಿ: 'ದೇಶದಲ್ಲಿ ಹಿಂದೆ ಭಯೋತ್ಪಾದಕರ ದಾಳಿ ಆದಾಗ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳುತ್ತಿತ್ತು. ಆದರೆ, ಇದು ಹೊಸ ಭಾರತ. ಯಾರ ಮುಂದೆಯೂ ತಲೆ ತಗ್ಗಿಸಲ್ಲ. ನಾಗರಿಕರ ರಕ್ಷಣೆಯ ಜವಾಬ್ದಾರಿಯಿಂದ ಹಿಂದೆ ಸರಿಯುವುದೂ ಇಲ್ಲ. ನಮಗೆ ಶಾಂತಿ ಸ್ಥಾಪನೆಯೂ ಗೊತ್ತು, ಶಾಂತಿಯ ರಕ್ಷಣೆಯೂ ಗೊತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಉಡುಪಿಯ ಶ್ರೀಕೃಷ್ಣ ಮಠದ ಆವರಣದಲ್ಲಿ ನಡೆದ ಲಕ್ಷ ಕಂಠ ಗೀತಾ ಪಾರಾಯಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಶ್ರೀಕೃಷ್ಣನು ಗೀತಾ ಸಂದೇಶವನ್ನು ಯುದ್ಧಭೂಮಿಯಲ್ಲಿ ನೀಡಿದ್ದಾನೆ. ಶಾಂತಿ, ಸತ್ಯ ಸ್ಥಾಪನೆಗಾಗಿ ದುಷ್ಟರ ಅಂತ್ಯ ಅಗತ್ಯ ಎಂಬುದನ್ನು ಗೀತೆ ನಮಗೆ ಹೇಳಿದೆ. ರಾಷ್ಟ್ರದ ಸುರಕ್ಷತಾ ನೀತಿಗೆ ಮೂಲವೂ ಭಗವದ್ಗೀತೆಯೇ ಆಗಿದೆ' ಎಂದರು.

'ನಾವು ವಸುಧೈವ ಕುಟುಂಬಕಂ, ಧರ್ಮೋ ರಕ್ಷತಿ ರಕ್ಷಿತಃ ಮಂತ್ರವನ್ನೂ ಪಠಿಸುತ್ತೇವೆ. ಕೆಂಪು ಕೋಟೆಯಲ್ಲಿ ಶ್ರೀಕೃಷ್ಣನ ಕರುಣಾ ಸಂದೇಶವನ್ನು ನೀಡುತ್ತೇವೆ. ಅಲ್ಲಿಯೇ ಮಿಷನ್ ಸುದರ್ಶನ್ ಚಕ್ರದ ಘೋಷಣೆಯನ್ನೂ ಮಾಡುತ್ತೇವೆ' ಎಂದು ಹೇಳಿದರು.

'ಸುದರ್ಶನ ಚಕ್ರವು ನಮ್ಮ ದೇಶದ ಔದ್ಯೋಗಿಕ, ಸಾರ್ವಜನಿಕ ಕ್ಷೇತ್ರದ ಸುರಕ್ಷತೆಯ ಗೋಡೆಯಾಗಿ ಕಾರ್ಯ ನಿರ್ವಹಿಸುತ್ತದೆ. ಅದನ್ನು ಭೇದಿಸಲು ಶತ್ರುಗಳಿಗೆ ಸಾಧ್ಯವಿಲ್ಲ. ಅಂತಹ ದುಸ್ಸಾಹಸ ಮಾಡಿದರೆ ಅವರನ್ನು ಸಂಹಾರ ಮಾಡುತ್ತದೆ' ಎಂದರು.

'ಕೃಷ್ಣನ ಉಪದೇಶ ಎಲ್ಲಾ ಯುಗಗಳಿಗೂ ಪ್ರಸ್ತುತ. ಗೀತೆಯಲ್ಲಿ ನೀಡಿರುವ ಸಂದೇಶ ವ್ಯಕ್ತಿಗೆ ಮಾತ್ರವಲ್ಲ, ರಾಷ್ಟ್ರದ ನೀತಿಗೂ ದಾರಿ ತೋರಿಸುತ್ತದೆ. ಕೇಂದ್ರ ಸರ್ಕಾರದ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್', 'ಸರ್ವ ಜನ ಹಿತಾಯ, ಸರ್ವ ಜನ ಸುಖಾಯ' ನೀತಿಗಳಿಗೆ ಶ್ರೀಕೃಷ್ಣ ಹೇಳಿರುವ ಶ್ಲೋಕಗಳ ಪ್ರೇರಣೆ ಇದೆ' ಎಂದರು. 'ಭಗವದ್ಗೀತೆಯಲ್ಲಿ ಕೃಷ್ಣನು ಲೋಕ ಕಲ್ಯಾಣಕ್ಕಾಗಿ ಕೆಲಸ ಮಾಡು ಎಂದು ಹೇಳಿದ್ದಾನೆ. ಅದೇ ಆಶಯದಿಂದ ಮಧ್ವಾಚಾರ್ಯರು ದೇಶದ ಏಕತೆಯನ್ನು ಸಶಕ್ತಗೊಳಿಸುವಲ್ಲಿ ಶ್ರಮಿಸಿದ್ದರು' ಎಂದು ಹೇಳಿ ದಾಸ ಪರಂಪರೆಯನ್ನೂ ಉಲ್ಲೇಖಿಸಿದರು.

ಉಡುಪಿಯ ಜನಸಂಘ ಮತ್ತು ಬಿಜೆಪಿಯ ಉತ್ತಮ ಆಡಳಿತದ ಮಾದರಿಯನ್ನು ನೀಡಿದೆ ಎಂದು ಹೇಳಿ, ದಿ.ವಿ.ಎಸ್. ಆಚಾರ್ಯ ಅವರನ್ನು ಸ್ಮರಿಸಿದರು.

ಮೋದಿ ಅಲೆಯಲ್ಲಿ 'ತೇಲಿದ ಉಡುಪಿ'

ಒಂದನೇ ಪುಟದಿಂದ...

ಪರ್ಯಾಯ ಪುತ್ತಿಗೆ ಮಠಾಧೀಶರು ಮೋದಿ ಅವರಿಗೆ 'ಭಾರತ ಭಾಗ್ಯ ವಿಧಾತ' ಎಂಬ ಬಿರುದು ನೀಡಿ ಗೌರವಿಸಿದರು. ನವಿಲು ಗರಿ ಅಳವಡಿಸಿದ್ದ ಮುತ್ತಿನ ಪೇಟ, ತುಳಸಿ ಮಣಿ ಮಾಲೆ, ತುಳಸಿ ಮಣಿ ಸಹಿತ ಬ್ರಾಸ್ಲೆಟ್, ಬೆಳ್ಳಿಯ ಕಡೆಗೋಲು ನೀಡಿ ಸನ್ಮಾನಿಸಿದರು. ಕಾಶಿ ಕಾರಿಡಾರ್ ಮಾದರಿಯಲ್ಲಿ ಉಡುಪಿ ಅಭಿವೃದ್ಧಿಗೂ ಯೋಜನೆ ರೂಪಿಸಬೇಕು ಎಂದು ಕೋರಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ವೈ. ರಾಘವೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕರಾದ ಯಶ್‌ಪಾಲ್ ಸುವರ್ಣ, ಸುನಿಲ್ ಕುಮಾರ್, ಗುರ್ಮೆ ಸುರೇಶ್ ಶೆಟ್ಟಿ, ಗುರುರಾಜ್ ಗಂಟಿಹೊಳೆ, ಕಿರಣ್‌ಕುಮಾರ್ ಕೊಡ್ಗಿ ಉಪಸ್ಥಿತರಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಿ. ವೀರೇಂದ್ರ ಹೆಗ್ಗಡೆ ಸ್ವಾಗತಿಸಿದರು.

ಮಧ್ಯಾಹ್ನ 1.30ಕ್ಕೆ ಉಡುಪಿಯಿಂದ ನಿರ್ಗಮಿಸಿ, ಮಂಗಳೂರು ಮೂಲಕ ಗೋವಾಕ್ಕೆ ತೆರಳಿದರು.

'ವಿಕಸಿತ ಭಾರತಕ್ಕೆ ಏಕತೆ ಮಾರ್ಗ'

ಪಣಜಿ (ಪಿಟಿಐ): 'ಸಮಾಜವು ಒಗ್ಗಟ್ಟಿನಿಂದ ಇದ್ದಾಗ, ಒಬ್ಬರಿಗಾಗಿ ಇನ್ನೊಬ್ಬರು ನಿಂತಾಗ ವಿಕಸಿತ ಭಾರತ ನಿರ್ಮಾಣ ಸಾಧ್ಯ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟರು.

ಗೋವಾದ ಶ್ರೀ ಸಂಸ್ಥಾನ ಗೋಕರ್ಣ ಜೀವೋತ್ತಮ ಮಠದ 550ನೇ ವಾರ್ಷಿಕೋತ್ಸವ ಅಂಗವಾಗಿ ನಿರ್ಮಿಸಲಾದ ಶ್ರೀ ರಾಮನ 77 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಅವರು, 'ಭಾರತವು ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಸಾಕ್ಷಿಯಾಗುತ್ತಿದೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ಕಾಶಿ ವಿಶ್ವನಾಥ ದೇಗುಲದ ನವೀಕರಣ, ಉಜ್ಜಯಿನಿಯ ಮಹಾಕಾಳ ಮಹಾಲೋಕ ದೇಗುಲದ ಅಭಿವೃದ್ಧಿ– ಇವೆಲ್ಲವೂ ಆಧ್ಯಾತ್ಮಿಕ ಪರಂಪರೆಯ ಪುನರುಜ್ಜೀವನ ಮತ್ತು ರಾಷ್ಟ್ರದ ಜಾಗೃತಿಯು ಎಚ್ಚರ ಗೊಂಡಿರುವುದಕ್ಕೆ ಉದಾಹರಣೆ ಎಂದು ಹೇಳಿದರು.

'ಹಲವು ಕಠಿಣ ಸನ್ನಿವೇಶಗಳ ನಡುವೆಯೂ ಕಾಲಕ್ಕೆ ಅನುಗುಣವಾದ ಬದಲಾವಣೆಗಳೊಂದಿಗೆ ಗೋವಾ ತನ್ನ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡಿದೆ. ಒಂದು ಕಾಲದಲ್ಲಿ ಗೋವಾದ ದೇಗುಲಗಳು ಮತ್ತು ಸಂಪ್ರದಾಯಗಳು ಬಿಕ್ಕಟ್ಟನ್ನು ಎದುರಿಸಿದ್ದವು. ಭಾಷೆ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಮೇಲೆ ಒತ್ತಡ ಹೇರಲಾಗಿತ್ತು. ಆದರೆ ಅಂಥ ಸಂದಿಗ್ಧ ಸನ್ನಿವೇಶಗಳಿಗೆ ಸಮಾಜದ ಆತ್ಮವನ್ನು ದುರ್ಬಲಗೊಳಿಸಲು ಸಾಧ್ಯವಾಗಲಿಲ್ಲ. ಬದಲಾಗಿ ಗೋವಾ ಇನ್ನಷ್ಟು ದೃಢವಾಗಿ ನಿಂತಿತು' ಎಂದರು.



ಶ್ರೀ ರಾಮನ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಅನಾವರಣ ಗೊಳಿಸಿದರು –ಪಿಟಿಐ ಚಿತ್ರ

'ಜಗತ್ತಿನ ಅತಿ ಎತ್ತರದ ರಾಮನ ಪ್ರತಿಮೆ'

ಗುಜರಾತ್‌ನ ಏಕತಾ ಪ್ರತಿಮೆಯ ಶಿಲ್ಪಿ ರಾಮ್ ಸುತಾರ್ ಅವರೇ ರಾಮನ ಕಂಚಿನ ಪ್ರತಿಮೆಯನ್ನೂ ನಿರ್ಮಿಸಿದ್ದಾರೆ ಎಂದು ಗೋವಾ ಲೋಕೋಪಯೋಗಿ ಸಚಿವ ದಿಗಂಬರ ಕಾಮತ್ ತಿಳಿಸಿದರು. ಇದು ಜಗತ್ತಿನ ಅತಿ ಎತ್ತರ ರಾಮನ ಪ್ರತಿಮೆ ಎಂದು ಅವರು ಹೇಳಿದರು.

'ದಿತ್ವಾ' ನಾಳೆ ಚೆನ್ನೈಗೆ ಅಪ್ಪಳಿಸುವ ಸಾಧ್ಯತೆ

ಒಂದನೇ ಪುಟದಿಂದ...

ಅಲ್ಲದೇ ಭಾನುವಾರ ಬೆಳಿಗ್ಗೆ ಉತ್ತರ ತಮಿಳುನಾಡು, ಪುದುಚೇರಿ ಹಾಗೂ ಆಂಧ್ರ ಪ್ರದೇಶದ ಕರಾವಳಿಗೆ ಅಪ್ಪಳಿಸಬಹುದು ಎಂದಿದೆ.

ತಮಿಳುನಾಡು ಮತ್ತು ಆಂಧ್ರ ಪ್ರದೇಶದ ಕರಾವಳಿ ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಮುನ್ನೆಚ್ಚರಿಕೆ ವಹಿಸುವಂತೆ ಸರ್ಕಾರ ಎಚ್ಚರಿಸಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಶೀಲಿಸಿದರು. 'ನ.29 ಮತ್ತು 30ರಂದು ಕೆಲವು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದೆ. ರೆಡ್ ಅಲರ್ಟ್ ಘೋಷಿಸಲಾದ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ್ದೇನೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಶ್ರೀಲಂಕಾದಲ್ಲಿ 80 ಸಾವು (ಕೊಲಂಬೊ ವರದಿ): ಶ್ರೀಲಂಕಾದಲ್ಲಿ ಕಳೆದ ಕೆಲ ದಿನಗಳಿಂದ ಭಾರಿ ಮಳೆಯಾಗುತ್ತಿದ್ದು, ಪ್ರವಾಹ ಹಾಗೂ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 80ಕ್ಕೆ ಏರಿಕೆಯಾಗಿದೆ. 34 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ (ಡಿಎಂಸಿ) ತಿಳಿಸಿದೆ.

'ದಿತ್ವಾ' ಚಂಡಮಾರುತವು ಶ್ರೀಲಂಕಾದ ಪೂರ್ವ ಭಾಗದ ಟ್ರಿಂಕೊಮಲಿ ಜಿಲ್ಲೆಯತ್ತ ಚಲಿಸಿದೆ ಎಂದು ಹವಾಮಾನ ಇಲಾಖೆ ಶುಕ್ರವಾರ ಬೆಳಿಗ್ಗೆ ಪ್ರಕಟಿಸಿದೆ. ದೇಶದ ಬಹುತೇಕ ಭಾಗಗಳಲ್ಲಿ ಗಂಟೆಗೆ 80ರಿಂದ 90 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ನೀಡಿದೆ. ಕೆಲವು ಪ್ರಾಂತ್ಯಗಳಲ್ಲಿ 200 ಮಿ.ಮೀ. ಮಳೆಯಾಗುವ ಸಾಧ್ಯತೆಯಿದೆ ಎಂದಿದೆ. ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ತನ್ನ ಕೆಲವು ವಿಮಾನಗಳನ್ನು ಕೇರಳದ ಕೊಚ್ಚಿ ಮತ್ತು ತಿರುವನಂತಪುರದ ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದೆ ಎಂದು ಶ್ರೀಲಂಕಾ ಏರ್‌ಲೈನ್ಸ್ ತಿಳಿಸಿದೆ.

ಶುಕ್ರವಾರ ಎಲ್ಲ ರೈಲುಗಳ ಸಂಚಾರವನ್ನು ಸ್ಥಗಿತ ಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ಗಂಪೋಲಾ ಪ್ರಾಂತ್ಯದ ರೈಲು ನಿಲ್ದಾಣ ಜಲಾವೃತಗೊಂಡಿದ್ದು, ಹಲವು ರೈಲುಗಳು ನೀರಿನಲ್ಲಿ ಮುಳುಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ ನೆರವಿನ ಹಸ್ತ

ಒಂದನೇ ಪುಟದಿಂದ...

ಭಾರತೀಯ ನೌಕಾಪಡೆಯ ಐಎನ್‌ಎಸ್ ವಿಕ್ರಾಂತ್ ಮತ್ತು ಐಎನ್‌ಎಸ್ ಉದಯಗಿರಿ ನೌಕೆಗಳ ಮೂಲಕ ಮೊದಲ ಹಂತದ ಪರಿಹಾರ ಸಾಮಗ್ರಿಗಳನ್ನು ಶ್ರೀಲಂಕಾಕ್ಕೆ ಕಳುಹಿಸಲಾಗಿದೆ ಎಂದರು. ಐಎನ್‌ಎಸ್ ವಿಕ್ರಾಂತ್ ನೌಕೆ ಯನ್ನು ಪೂರ್ವ ಕರಾವಳಿಯ ಟ್ರಿಂಕೊಮಲಿ ಪ್ರದೇಶದಲ್ಲಿ ಪ್ರವಾಹ ರಕ್ಷಣಾ ಕಾರ್ಯಾಚರಣೆಗೆ ಬಳಸಿಕೊಳ್ಳಲಾಗುವುದು ಎಂದು ಶ್ರೀಲಂಕಾದ ನೌಕಾಪಡೆ ತಿಳಿಸಿದೆ.

ಬೆಲೆ ಕುಸಿತ: ಮಧ್ಯ ಪ್ರವೇಶಕ್ಕೆ ಮೊರೆ

ಸಿಎಂ ಬರೆದ ಪತ್ರವನ್ನು ಪ್ರಧಾನಿಗೆ ತಲುಪಿಸಿದ ಸಚಿವ ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದಲ್ಲಿ ಮೆಕ್ಕೆಜೋಳ ಮತ್ತು ಹೆಸರುಕಾಳು ಬೆಲೆ ತೀವ್ರ ಕುಸಿತದಿಂದ ರೈತರು ಕಂಗಾಲಾಗಿದ್ದಾರೆ. ಬೆಂಬಲ ಬೆಲೆಯಡಿ ಖರೀದಿಸುವ ವ್ಯವಸ್ಥೆ ಮಾಡಿ ಕೇಂದ್ರ ಸರ್ಕಾರ ಇಚ್ಛಾಶಕ್ತಿ ತೋರಬೇಕು ಎಂದು ರಾಜ್ಯ ಸರ್ಕಾರವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದೆ.

ಉಡುಪಿಯಲ್ಲಿ ನಡೆದ ಕೋಟಿ ಕಂಠ ಗೀತಾ ಗಾಯನ ಕಾರ್ಯಕ್ರಮದಲ್ಲಿ ಭಾಗವಹಿಸಲು ಶುಕ್ರವಾರ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಪ್ರಧಾನಿ ಬಂದ ವೇಳೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದ ಪತ್ರವನ್ನು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಲ್ಲಿಸಿದರು.

> **50:50ರ ಅನುಪಾತದಲ್ಲಾದರೂ ಬೆಂಬಲ ಬೆಲೆ ನಿಗದಿ ಮಾಡಲು ರಾಜ್ಯ ಸರ್ಕಾರ ಸಿದ್ಧವಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕ್ಷೇತ್ರ ಸೇರಿದಂತೆ ಅವರ ಭಾಗದಲ್ಲೇ ಹೆಚ್ಚು ಸಮಸ್ಯೆ ಇದೆ. ಆದರೂ ಗಮನ ನೀಡುತ್ತಿಲ್ಲ**
> **ದಿನೇಶ್ ಗುಂಡೂರಾವ್,** ಸಚಿವ

ಇವೆರಡು ಬೆಳೆಗಳ ಮಾರುಕಟ್ಟೆಯಲ್ಲಿನ ಖರೀದಿ ಬೆಲೆಯು ಕೇಂದ್ರ ಸರ್ಕಾರ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಕಡಿಮೆ ಇದೆ. ಈ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ 54.74 ಲಕ್ಷ ಟನ್ ಮೆಕ್ಕೆಜೋಳ, 1,983 ಲಕ್ಷ ಟನ್ ಹೆಸರುಕಾಳು ಉತ್ಪಾದನೆ ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರವು ಮೆಕ್ಕೆಜೋಳಕ್ಕೆ ಪ್ರತಿ ಟನ್‌ಗೆ ₹2,400 ಮತ್ತು ಹೆಸರುಕಾಳಿಗೆ ಪ್ರತಿ ಟನ್‌ಗೆ ₹8,768ರಂತೆ ಎಂಎಸ್‌ಪಿ ಘೋಷಿಸಿದ್ದರೂ, ರಾಜ್ಯದಲ್ಲಿ ಪ್ರಸ್ತುತ ಮೆಕ್ಕೆಜೋಳಕ್ಕೆ ಟನ್‌ವೊಂದಕ್ಕೆ ₹1,600ರಿಂದ ₹1,800 ಮತ್ತು ಹೆಸರುಕಾಳು ಟನ್‌ಗೆ ₹5,400 ದರ ಇದೆ. ಪ್ರಸ್ತುತ 32 ಲಕ್ಷ ಟನ್ ಮೆಕ್ಕೆಜೋಳ ಮಾರಾಟಕ್ಕೆ ಲಭ್ಯವಿದೆ. ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ದರ ನಿಗದಿ ಮಾಡಬೇಕು ಎಂದು ಮುಖ್ಯಮಂತ್ರಿ ಒತ್ತಾಯಿಸಿದ್ದಾರೆ.



ವಿಳಂಬವಿಲ್ಲದೆ ಕನಿಷ್ಠ ಬೆಂಬಲ ಬೆಲೆಯಲ್ಲಿ ಸಂಗ್ರಹಣೆ ಪ್ರಾರಂಭಿಸಲು ಎನ್‌ಎಎಫ್ಇಡಿ, ಎಫ್‌ಸಿಐ ಮತ್ತು ಎನ್‌ಸಿಸಿಎಫ್‌ಗಳಿಗೆ ನಿರ್ದೇಶಿಸಬೇಕು. ಆಮದು ತಡೆಗೆ ಕ್ರಮವಹಿಸಬೇಕು. ಅಕಾಲಿಕ ಮಳೆಯ ಕಾರಣಕ್ಕೆ, ಹೆಸರು ಕಾಳು ಬೆಳೆಗೆ ಕೊಂಚ ಹಾನಿಯಾಗಿದ್ದು, ಸಂಗ್ರಹಣೆ ಗುಣಮಟ್ಟದ ಮಾನದಂಡ ಸಡಿಲಿಸಬೇಕು ಎಂದು ತಿಳಿಸಿದ್ದಾರೆ.

ಕರ್ನಾಟಕಕ್ಕೆ ಅನುಕೂಲ: ಮೆಕ್ಕೆಜೋಳದಿಂದ ಉತ್ಪಾದಿಸುವ ಎಥನಾಲ್‌ಗೆ ಮೂಲ ದರ ಲೀಟರ್‌ಗೆ ₹66.07 ಆಗಿದ್ದು, ಹೆಚ್ಚುವರಿ ₹5.79 (ಜಿಎಸ್‌ಟಿ ಹೊರತುಪಡಿಸಿ) ಪ್ರೋತ್ಸಾಹಧನ ಪಾವತಿಸಬೇಕು.

2025-26ರ ಎಥನಾಲ್ ಟೆಂಡರ್ ಹಂಚಿಕೆಯ ಪ್ರಕಾರ, ಒಎಂಸಿಗಳು 1,050 ಕೋಟಿ ಲೀಟರ್‌ಗಳ ಎಥನಾಲ್‌ಗೆ ಟೆಂಡರ್ ಕರೆದಿದ್ದು, ಅದರಲ್ಲಿ 758.6 ಕೋಟಿ ಲೀಟರ್‌ಗಳನ್ನು ಧಾನ್ಯ ಆಧಾರಿತ ಎಥನಾಲ್‌ಗೆ ಹಂಚಿಕೆ ಮಾಡಲಾಗಿದೆ. ಕರ್ನಾಟಕವು, 49 ಘಟಕಗಳಲ್ಲಿ 272 ಕೋಟಿ ಲೀಟರ್‌ಗಳ ಸ್ಥಾಪಿತ ಎಥನಾಲ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದರೂ, ಸಣ್ಣ ಭಾಗವನ್ನು ಮಾತ್ರ ಹಂಚಿಕೆ ಮಾಡಿದ್ದು, ಹೆಚ್ಚುವರಿ ಸಂಗ್ರಹ ಇರುವ ನಮ್ಮ ರಾಜ್ಯಕ್ಕೆ ಇದರಿಂದ ಅನನುಕೂಲವಾಗಿದೆ ಎಂದು ಪತ್ರದಲ್ಲಿ ಸಿ.ಎಂ ತಿಳಿಸಿದ್ದಾರೆ.

ಕನ್ನಡ ಧ್ವಜ...

ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ



ದಾವಣಗೆರೆಯ ಜಯದೇವ ವೃತ್ತದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು 7 ಕಿ.ಮೀ ಉದ್ದದ ಕನ್ನಡ ಧ್ವಜವನ್ನು ಹಿಡಿದು ಸಾಗಿದರು

ಕರ್ನಾಟಕ ಪತ್ರಕರ್ತೆಯರ ಸಂಘದಿಂದ 'ಶ್ರೀ ಸಿದ್ದರಾಮಯ್ಯ ದತ್ತಿ' ಪ್ರಶಸ್ತಿ ಪ್ರದಾನ ಸಮಾರಂಭ

'ಪತ್ರಕರ್ತರು ಸಂವಿಧಾನದ ಸಾಕ್ಷರತೆ ಹೆಚ್ಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮಲ್ಲಿ ಸಂವಿಧಾನದ ಕುರಿತು ಇನ್ನೂ ತಿಳಿವಳಿಕೆಯ ಕೊರತೆ ಇದೆ. ಪ್ರಜ್ಞಾವಂತರು ಹಾಗೂ ಪತ್ರಕರ್ತರು ಸಂವಿಧಾನ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಬೇಕು' ಎಂದು ನಿವೃತ್ತ ನ್ಯಾ. ನಾಗಮೋಹನದಾಸ್ ಸಲಹೆ ನೀಡಿದರು.

ಕರ್ನಾಟಕ ಪತ್ರಕರ್ತೆಯರ ಸಂಘ ಗಾಂಧಿ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ 'ಶ್ರೀ ಸಿದ್ದರಾಮಯ್ಯ ದತ್ತಿ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೋದ್ಯಮ ಪ್ರವೇಶಿಸು ತ್ತಿರುವುದು ಒಳ್ಳೆಯ ಬೆಳವಣಿಗೆ. ಪ್ರತಿಭಾವಂತರ ಪ್ರಮಾಣ ಈ ಕ್ಷೇತ್ರದಲ್ಲಿ ಹೆಚ್ಚುತ್ತಿದ್ದು, ಹೊಸದಾಗಿ ಬರುವವರಿಗೆ ವೃತ್ತಿಪರತೆ, ನೈತಿಕತೆಯನ್ನು ಹಿರಿಯರು ಹೇಳಿಕೊಡಬೇಕಿದೆ. ಪತ್ರಿಕೋದ್ಯಮ ಎದುರಿಸುತ್ತಿರುವ ಬಿಕ್ಕಟ್ಟುಗಳ ಕುರಿತೂ ಚರ್ಚಿಸಿ ಪರಿಹಾರ ಕಂಡುಕೊಳ್ಳುವುದು ಒಳ್ಳೆಯದು' ಎಂದರು.

'ದೇಶದಲ್ಲಿ ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುತ್ತಿದ್ದು, ಪ್ರಶ್ನಿಸಿದರೆ ದೇಶದ್ರೋಹಿ ಎಂದು ಬಿಂಬಿಸಿ ಮೊಕದ್ದಮೆ ದಾಖಲಿಸಿ ಜೈಲಿಗೆ ಕಳುಹಿಸುವ ಇಲ್ಲವೇ ಎನ್‌ಕೌಂಟರ್ ಮಾಡುವ ಹಂತಕ್ಕೂ ತಲುಪಿರುವುದು ಆತಂಕಕಾರಿ. ನಮ್ಮಲ್ಲಿ ವಾಕ್ ಸ್ವಾತಂತ್ರ್ಯದ ಸ್ವರೂಪ ಹೇಗಿರಬೇಕು ಎನ್ನುವ ಬಗ್ಗೆ ಚರ್ಚಿಸಬೇಕಾಗಿದೆ' ಎಂದು ಹೇಳಿದರು.

'ದೇಶದಲ್ಲಿ ನ್ಯಾಯಾಂಗ ಕ್ಷೇತ್ರದಲ್ಲಿನ ಕೆಲಸ, ತೀರ್ಪುಗಳನ್ನು ಪ್ರಶ್ನಿಸುವ, ವಿಮರ್ಶೆ ಮಾಡುವ ಕೆಲಸ ಪರಿಣಾಮಕಾರಿಯಾಗಿ ಆಗಬೇಕಿದೆ. ವ್ಯವಸ್ಥೆಯನ್ನೇ ಧ್ವಂಸ ಮಾಡುವಂತ ಟೀಕೆ ಬೇಡ' ಎಂದು ಸಲಹೆ ನೀಡಿದರು.

> **ಪತ್ರಕರ್ತೆಯರ ಪ್ರಮಾಣ ಹೆಚ್ಚಾದಷ್ಟೂ ಆತ್ಮವಂಚನೆಯ ಪ್ರಮಾಣ ತಗ್ಗಿ ಅಂತಃಕರಣದಿಂದ ವಿದ್ಯಮಾನ ನೋಡುವ ಪ್ರಮಾಣ ಹೆಚ್ಚಾಗಲಿದೆ**
> **ಕೆ.ವಿ. ಪ್ರಭಾಕರ್**
> ಸಿ.ಎಂ ಮಾಧ್ಯಮ ಸಲಹೆಗಾರ

ವಿಶೇಷ ಉಪನ್ಯಾಸ ನೀಡಿದ ಪತ್ರಕರ್ತೆ ಪುಷ್ಪಾ ಗಿರಿಮಾಜಿ, 'ಎಐ ತಂತ್ರಜ್ಞಾನ ಈಗ ಮಾಧ್ಯಮ ವಲಯವನ್ನು ಆವರಿಸುತ್ತಿದೆ. ಡಿಜಿಟಲ್ ತಂತ್ರಜ್ಞಾನದಿಂದಲೂ ಸಾಕಷ್ಟು ಬದಲಾವಣೆಗಳು ಆಗಿವೆ. ಸುಳ್ಳು ಸುದ್ದಿಗಳು ವಿಜೃಂಭಿಸುತ್ತಿವೆ. ಇದರ ನಡುವೆಯೂ ನಿಜವಾದ ಪತ್ರಕರ್ತರು ತಮ್ಮತನವನ್ನು ಉಳಿಸಿಕೊಂಡು ವಸ್ತುಸ್ಥಿತಿಯ ಬಗ್ಗೆ ಬರೆಯಬೇಕು' ಎಂದು ಕಿವಿಮಾತು ಹೇಳಿದರು.



ಶ್ರೀ ಸಿದ್ದರಾಮಯ್ಯ ದತ್ತಿ ಪ್ರಶಸ್ತಿಯನ್ನು 'ಪ್ರಜಾವಾಣಿ'ಯ ಮುಖ್ಯ ಉಪ ಸಂಪಾದಕಿ ನೀಲಾ ಎಂ.ಎಚ್ ಹಾಗೂ ದ ಸದರ್ನ್ ಎಕನಾಮಿಕ್ಸ್ ಪತ್ರಿಕೆ ಸಂಪಾದಕಿ ಸುಶೀಲಾ ಸುಬ್ರಹ್ಮಣ್ಯ ಅವರಿಗೆ ನೀಡಿ ಗೌರವಿಸಲಾಯಿತು. ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, ಪತ್ರಕರ್ತೆಯರಾದ ಪುಷ್ಪಾ ಗಿರಿಮಾಜಿ, ಆರ್. ಪೂರ್ಣಿಮಾ , ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅತಿ ತೇವದಿಂದ ಸಂಗ್ರಹವೂ ಸವಾಲು • ಮಾರಾಟಕ್ಕೂ ತೊಂದರೆ

ಹಾಳಾದ ಮೆಕ್ಕೆಜೋಳ, ರೈತರಲ್ಲಿ ಆತಂಕ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಬೆಂಬಲ ಬೆಲೆ ಯೋಜನೆಯಡಿ ಮಾರಾಟ ಮಾಡಲು ಒಂದೂವರೆ ತಿಂಗಳ ಹಿಂದೆಯೇ ಕೊಯ್ಲು ಮಾಡಿ ಸಂಗ್ರಹಿಸಿ ಇಟ್ಟುಕೊಂಡಿದ್ದ ಮೆಕ್ಕೆಜೋಳ ಅತಿಯಾದ ತೇವಾಂಶದಿಂದ ಹಾಳಾಗು ತ್ತಿದೆ. ಅತ್ತ ಖರೀದಿ ಕೇಂದ್ರವೂ ಆರಂಭ ಗೊಳ್ಳದೇ, ಇತ್ತ ಹೆಚ್ಚಿನ ಬೆಲೆಗೂ ಮಾರಲಾಗದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಪ್ರತಿ ವರ್ಷದಂತೆ ಈ ಸಲವೂ ರೈತರು ಮೆಕ್ಕೆಜೋಳವನ್ನು ಮುಂಚಿತವಾಗಿಯೇ ಕೊಯ್ಲು ಮಾಡಿ, ಆ ಜಮೀನಿನಲ್ಲಿ ಕಡಲೆ, ಕುಸುಬಿ ಬಿತ್ತನೆ ಮಾಡಿದ್ದಾರೆ. ಆದರೆ, ಸೂಕ್ತ ಬೆಲೆ ಸಿಗದ ಕಾರಣ ಮೆಕ್ಕೆಜೋಳವನ್ನು ಇನ್ನೂ ಮಾರಿಲ್ಲ. ಮೆಕ್ಕೆಜೋಳವನ್ನು ತೆಳುವಾಗಿ ಹರಡಿ ಒಣಗಿಸಲು ರೈತರಿಗೆ ಕಣದ ವ್ಯವಸ್ಥೆ ಇಲ್ಲ. ರಸ್ತೆಯಲ್ಲೇ ಕಣ ಮಾಡಿಕೊಂಡು ಒಣಗಿಸುತ್ತಾ, ಗುಣಮಟ್ಟ ಕಾಪಾಡಿಕೊಳ್ಳಲು ಹೆಣಗುತ್ತಿದ್ದಾರೆ.



ತೇವಾಂಶದಿಂದ ಹಾಳಾಗಿರುವ ಮೆಕ್ಕೆಜೋಳ

'ಜೋಳ, ಹೆಸರು, ಕಡಲೆ ಬೆಳೆಯಂತೆ ಮೆಕ್ಕೆಜೋಳವನ್ನು ಹೆಚ್ಚು ದಿನ ಸಂಗ್ರಹಿಸಿಡುವುದು ಕಷ್ಟ. ಸೂಕ್ಷ್ಮ ಬೆಳೆಯಾದ್ದರಿಂದ ಕೊಯ್ಲು ಪ್ರಕ್ರಿಯೆಯಲ್ಲಿ ತಡ ಮಾಡಬಹುದು. ಆದರೆ, ಕೊಯ್ಲು ಮಾಡಿದ ಬಳಿಕ ಅದರ ಗುಣಮಟ್ಟ ಕಾಯ್ದುಕೊಳ್ಳುವುದು ಕಠಿಣ. ಹೀಗಾಗಿ ರೈತರು ಬೆಂಬಲ ಬೆಲೆ ಖರೀದಿ ಕೇಂದ್ರಕ್ಕಾಗಿ ಒತ್ತಾಯಿಸು ತ್ತಿದ್ದಾರೆ' ಎಂದು ರೈತ ಮುಖಂಡ ಚನ್ನಪ್ಪ ಷಣ್ಮುಖಿ 'ಪ್ರಜಾವಾಣಿ'ಗೆ ಹೇಳಿದರು.

'ಸರ್ಕಾರ ಇನ್ನೂ ಖರೀದಿ ಕೇಂದ್ರ ತೆರೆದಿಲ್ಲ. ಇದರ ನಡುವೆ ಖಾಸಗಿ ಖರೀದಿದಾರರು ಮನಸ್ಸಿಗೆ ಬಂದಷ್ಟು ಬೆಲೆಗೆ ಕೇಳುತ್ತಿದ್ದಾರೆ.

ಈ ಪರಿಸ್ಥಿತಿಯಿಂದ ಬೇಸತ್ತ ಕೆಲ ರೈತರು ಇದರ ಉಸಾಬರಿಯೇ ಬೇಡವೆಂದು ಸಿಕ್ಕಷ್ಟು ಬೆಲೆಗೆ ಮಾರುತ್ತಿದ್ದಾರೆ.

'ಸರ್ಕಾರವು ತ್ವರಿತವಾಗಿ ಖರೀದಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತೆರೆಯಬೇಕು. ಇದರಿಂದ ರೈತರಿಗೆ ಸಾರಿಗೆ ವೆಚ್ಚ ಮತ್ತು ಸಮಯದ ಉಳಿತಾಯ ಆಗುತ್ತದೆ. ನೋಂದಣಿ ಮತ್ತು ಖರೀದಿ ಪ್ರಕ್ರಿಯೆ ಏಕಕಾಲಕ್ಕೆ ಆಗುವಂತೆ ವ್ಯವಸ್ಥೆ ಮಾಡಬೇಕು. ಖರೀದಿಸಿದ 5 ದಿನಗಳ ಒಳಗೆ ರೈತರ ಖಾತೆಗೆ ಹಣ ಜಮೆ ಮಾಡಬೇಕು' ಎಂದು ರೈತರು ಒತ್ತಾಯಿಸಿದ್ದಾರೆ.

> **ಮೆಕ್ಕೆಜೋಳ ಬೆಳೆಯಲು ಎಕರೆಗೆ ₹15 ಸಾವಿರದವರೆಗೆ ಖರ್ಚಾಗುತ್ತದೆ. ಬೆಳೆಗೆ ಸೂಕ್ತ ಬೆಲೆ ಸಿಗುತ್ತಿಲ್ಲ. 14 ದಿನಗಳಿಂದ ಜಿಲ್ಲೆಯಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆದಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ.**
> **ಚನ್ನಪ್ಪ ಷಣ್ಮುಖಿ,** ರೈತ ಮುಖಂಡ

> **ರಾಜ್ಯ ಸರ್ಕಾರ ಮೆಕ್ಕೆಜೋಳ ಖರೀದಿಗೆ ಅನುಮತಿ ಕೊಟ್ಟಿದೆ. ಮುಂಚಿತವಾಗಿಯೇ ಖರೀದಿ ಕೇಂದ್ರ ತೆರೆಯಲು ಅನುಮತಿ ಕೋರಿ ಕೇಂದ್ರಕ್ಕೆ ಪತ್ರ ಬರೆಯಲಾಗಿದ್ದು, ಇನ್ನೆರಡು ದಿನಗಳಲ್ಲಿ ಒಪ್ಪಿಗೆ ಸಿಗಬಹುದು**
> **ಸಿ.ಎನ್.ಶ್ರೀಧರ್,** ಜಿಲ್ಲಾಧಿಕಾರಿ, ಗದಗ

ಬೆಳಗಾವಿ: ಸಚಿವರ ಟಿಪ್ಪಣಿ– ಪ್ಲೀಡರ್ ಪಲ್ಲಟ– ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಆಗಿ ನೇಮಕಗೊಂಡಿದ್ದ ವಕೀಲರೊಬ್ಬರನ್ನು 24 ಗಂಟೆಗಳಲ್ಲೇ ಆ ಸ್ಥಾನದಿಂದ ತೆಗೆದುಹಾಕಿದ ಸರ್ಕಾರದ ನಡೆಗೆ ಕಿಡಿ ಕಾರಿರುವ ಹೈಕೋರ್ಟ್ ನೇಮಕಾತಿ ಆದೇಶವನ್ನು ಪುನರ್‌ಸ್ಥಾಪಿಸಿದೆ.

ಈ ಸಂಬಂಧ ಅಥಣಿಯ ವಕೀಲ ಸುನಿಲ್ ಅಣ್ಣಪ್ಪ ಸಂಕ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) 'ಸರ್ಕಾರದ ಈ ನಿರ್ಧಾರ ಏಕಪಕ್ಷೀಯ' ಎಂದು ತರಾಟೆಗೆ ತೆಗೆದುಕೊಂಡಿದೆ.

'ನಿಯುಕ್ತಿಗೊಂಡ ಪ್ಲೀಡರ್ ಅನ್ನು ಸಕಾರಣವಿಲ್ಲದೆ ತೆಗೆದುಹಾಕಲಾಗಿದೆ. ಇದಕ್ಕೆ ಮುಖ್ಯ ಕಾರಣ ಸಚಿವರೊಬ್ಬರ ಟಿಪ್ಪಣಿ. ಸರ್ಕಾರದ ವಿವೇಚನಾ ಅಧಿಕಾರವನ್ನು ಹೀಗೆ ದುರ್ಬಳಕೆ ಮಾಡಿದರೆ ಯಾರಿಗೂ ಸಂವಿಧಾನಾತ್ಮಕ ರಕ್ಷಣೆ ಸಿಗುವುದಿಲ್ಲ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

'ಕಾರ್ಯಾಂಗ ಮನಸ್ಸಿಗೆ ಬಂದಂತೆಲ್ಲಾ ನಡೆದುಕೊಳ್ಳುವುದನ್ನು ನೋಡಿಕೊಂಡು ನ್ಯಾಯಾಲಯ ಮೂಕ ಪ್ರೇಕ್ಷಕನಂತೆ ಕುಳಿತಿರಲಾಗದು. ಇಂತಹ ಪ್ರಕರಣಗಳಲ್ಲಿ ನ್ಯಾಯಾಂಗ ಮಧ್ಯಪ್ರವೇಶ ಸೂಕ್ತವಷ್ಟೇ ಅಲ್ಲ, ಅನಿವಾರ್ಯವೂ ಆಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಸಂವಿಧಾನದ 14ನೇ ವಿಧಿಯಡಿ ಪ್ರತಿಯೊಬ್ಬ ವ್ಯಕ್ತಿಗೂ ಕೊಡಮಾಡಿರುವ ಕಾನೂನಾತ್ಮಕ ರಕ್ಷಣೆಯನ್ನು ರಾಜ್ಯ ಸರ್ಕಾರ ಮರೆಯಬಾರದು. ರಾಜ್ಯದ ಪ್ರತಿಯೊಂದು ಕ್ರಮವೂ ಅತ್ಯಂತ ವಿವೇಚನೆಯಿಂದ ಕೂಡಿರಬೇಕಾಗುತ್ತದೆ ಮತ್ತು ಯಾವುದೇ ಕ್ರಮವನ್ನು ಸರ್ಕಾರ ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗದು' ಎಂದು ಸರ್ಕಾರದ ನಡೆಯನ್ನು ನ್ಯಾಯಪೀಠ ಕಟು ಶಬ್ದಗಳಲ್ಲಿ ಟೀಕಿಸಿದೆ.

ಸುನಿಲ್ ಅವರನ್ನು ಅಕ್ಟೋಬರ್ 28ರಂದು ಬೆಳಗಾವಿಯ 11ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಆಗಿ ನೇಮಕ ಮಾಡಲಾಗಿತ್ತು. ಆ ನೇಮಕ ಆದೇಶ ಹೊರಬಿದ್ದ 24 ಗಂಟೆಗಳಲ್ಲಿ ಕಾನೂನು ಮತ್ತು ನ್ಯಾಯ ಇಲಾಖೆ ಅವರ ನೇಮಕಾತಿ ಆದೇಶವನ್ನು ರದ್ದುಗೊಳಿಸಿ ಆ ಸ್ಥಾನಕ್ಕೆ ಡಿ.ಬಿ.ತಕ್ಕಣವರ್ ಅವರನ್ನು ನೇಮಕ ಮಾಡಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅನ್ಯರನು ಆಳು ಮಾಡದೆ, ತನ್ನ ತಾನಾಳಿದರೆ ಅದೇ ಬಿಡುಗಡೆ.
-ದ.ರಾ. ಬೇಂದ್ರೆ

ಸಂಪಾದಕೀಯ

ಪೊಲೀಸ್ ವಿಶ್ವಾಸಾರ್ಹತೆ ಬಿಕ್ಕಟ್ಟು ನಿರ್ಲಕ್ಷ್ಯದಿಂದ ಹೆಚ್ಚಾಗುವ ಆಪತ್ತು

ಕಳೆದ ಹತ್ತು ತಿಂಗಳ ಅವಧಿಯಲ್ಲಿ, ಬೆಂಗಳೂರು ಮಹಾನಗರದ ವ್ಯಾಪ್ತಿಯ 124 ಪೊಲೀಸ್ ಅಧಿಕಾರಿಗಳು ಅಮಾನತುಗೊಂಡಿದ್ದಾರೆ. ಶಿಸ್ತುಕ್ರಮಕ್ಕೆ ಒಳಗಾದವರಲ್ಲಿ, ಕಾನ್‌ಸ್ಟೆಬಲ್‌ಗಳಿಂದ ಹಿಡಿದು ಹಿರಿಯ ಐಪಿಎಸ್ ಅಧಿಕಾರಿಗಳೂ ಇದ್ದಾರೆ. ಭ್ರಷ್ಟಾಚಾರ, ಕರ್ತವ್ಯಲೋಪ ಸೇರಿದಂತೆ ಗಂಭೀರ ಆರೋಪಗಳನ್ನು ಈ ಅಧಿಕಾರಿಗಳು ಎದುರಿಸುತ್ತಿದ್ದಾರೆ. ಆದರೆ, ಇವರಲ್ಲಿ ಒಬ್ಬರ ಮೇಲೂ ಕರ್ತವ್ಯದಿಂದ ವಜಾಗೊಳಿಸುವ ರೀತಿಯ ಕಠಿಣ ಕ್ರಮವನ್ನು ಈವರೆಗೂ ಜರುಗಿಸಿಲ್ಲ. ಬಹುತೇಕ ಅಧಿಕಾರಿಗಳು ಇಲಾಖಾ ವಿಚಾರಣೆಯ ನಂತರ ತಮ್ಮ ಕರ್ತವ್ಯಕ್ಕೆ ಮರಳಿದ್ದಾರೆ, ಆ ಮೂಲಕ ದುರ್ವರ್ತನೆಯ ವರ್ತುಲ ಮುಂದುವರಿದಿದೆ. ಈ ಸಮಸ್ಯೆಯ ಆಳ ಅಗಲಕ್ಕೆ ನಿದರ್ಶನವಾಗಿ ಇತ್ತೀಚಿನ ಕೆಲವು ಘಟನೆಗಳನ್ನು ಗಮನಿಸಬಹುದು. ವಿಮಾ ಸಲಹೆಗಾರ ಮತ್ತು ಆತನ ಕ್ಲೈಂಟ್‌ನ ಬಳಿ ಇಬ್ಬರು ಕಾನ್‌ಸ್ಟೆಬಲ್‌ಗಳು ಹಣಕ್ಕೆ ಬೇಡಿಕೆಯಿಟ್ಟಿದ್ದರು. ಎಟಿಎಂ ಯಂತ್ರಗಳಿಗೆ ತುಂಬಿಸಲು ಹಣ ಸಾಗಿಸುತ್ತಿದ್ದ ವಾಹನದಿಂದ ₹7.11 ಕೋಟಿ ನಗದು ದರೋಡೆ ಮಾಡಿದ ಕೃತ್ಯದಲ್ಲಿ ಒಬ್ಬ ಕಾನ್‌ಸ್ಟೆಬಲ್ ಭಾಗಿಯಾಗಿರುವ ಆರೋಪವಿದೆ. ಓರ್ವ ಕಾನ್‌ಸ್ಟೆಬಲ್ ಒಳಗೊಂಡ ತಂಡವೊಂದು ಸೈಬರ್ ಅಪರಾಧಗಳ ತನಿಖಾ ಅಧಿಕಾರಿಗಳಂತೆ ಬಿಂಬಿಸಿಕೊಂಡು, ಬಿಪಿಓ ಅಧಿಕಾರಿಗಳನ್ನು ಅಪಹರಿಸಿ ಹಣ ವರ್ಗಾಯಿಸುವಂತೆ ಒತ್ತಾಯಿಸಿದೆ. 2022ರಲ್ಲಿ ಆಗಿನ ಮುಖ್ಯಮಂತ್ರಿಗಳ ಭದ್ರತಾ ತಂಡದಲ್ಲಿ ಇದ್ದವರೇ ಮಾದಕವಸ್ತುಗಳನ್ನು ಮಾರುತ್ತಿದ್ದ ಪ್ರಕರಣ ವರದಿಯಾಗಿತ್ತು.



ಭ್ರಷ್ಟಾಚಾರದ ಸುಳಿಯೊಳಗೆ ಸಿಲುಕಿರುವ ಪೊಲೀಸ್ ಇಲಾಖೆ ತನ್ನ ವರ್ಚಸ್ಸಿಗೆ ತಾನೇ ಮಸಿ ಬಳಿದುಕೊಂಡಿದೆ. ಇಲಾಖೆಯ ವಿಶ್ವಾಸಾರ್ಹತೆ ರಕ್ಷಿಸುವುದು ಸರ್ಕಾರಕ್ಕೆ ಆದ್ಯತೆ ಆಗಬೇಕು.

ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಸಮಸ್ಯೆ ಕೆಳಹಂತದ ಸಿಬ್ಬಂದಿಗೆ ಸೀಮಿತವಾದುದಲ್ಲ. ಡ್ರಗ್ ಪೆಡ್ಲರ್, ಕೊಲೆ ಪ್ರಕರಣದ ಆರೋಪಿ ಸೇರಿದಂತೆ ವಿವಿಧ ಅಪರಾಧಿಗಳನ್ನು ದೋಷಮುಕ್ತಗೊಳಿಸಲು ಲಂಚ ಪಡೆದ ಆರೋಪ ಓರ್ವ ಇನ್‌ಸ್ಪೆಕ್ಟರ್ ಹಾಗೂ ಐವರು ಪೊಲೀಸ್ ಸಿಬ್ಬಂದಿಯ ಮೇಲಿದೆ. ಬಿಟ್ ಕಾಯಿನ್ ಹಗರಣದಲ್ಲಿ ಸಾಕ್ಷ್ಯನಾಶಗೊಳಿಸಲು ಪ್ರಯತ್ನಿಸಿದ ಆರೋಪದಲ್ಲಿ ಡಿಎಸ್‌ಪಿ ಬಂಧನಕ್ಕೊಳಗಾಗಿದ್ದರು. ಎಡಿಜಿಪಿ ಅಧಿಕಾರಿಯೊಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಹಗರಣದಲ್ಲಿ ಬಂಧನಕ್ಕೊಳಗಾಗಿದ್ದರು. ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿವಿಐಪಿ ಸವಲತ್ತು ಹಾಗೂ ಮೊಬೈಲ್ ಫೋನ್‌ಗಳನ್ನು ಒದಗಿಸಿದ ಆರೋಪದಲ್ಲಿ ಕಾರಾಗೃಹದ ಅಧೀಕ್ಷಕರು ಅಮಾನತುಗೊಂಡಿದ್ದಾರೆ. ಇತ್ತೀಚೆಗಷ್ಟೇ 11 ಅಧಿಕಾರಿಗಳು, ಅಮಲು ಬರಿಸುವ ಮಾತ್ರೆಗಳ ಮಾರಾಟ ಜಾಲದೊಂದಿಗೆ ಶಾಮೀಲಾದ ಆರೋಪದಲ್ಲಿ ಅಮಾನತುಗೊಂಡಿದ್ದಾರೆ. ಇಂಥ ಪ್ರಕರಣಗಳು ಬೆಂಗಳೂರಿನಾಚೆಗೂ ನಡೆದಿವೆ. ಆಭರಣಗಳ ವರ್ತಕನಿಂದ ₹7.5 ಲಕ್ಷ ಮೌಲ್ಯದ ಒಡವೆಗಳನ್ನು ದೋಚಿದ ಪ್ರಕರಣದಲ್ಲಿ ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳ ಬಂಧನ ದಾವಣಗೆರೆಯಲ್ಲಿ ನಡೆದಿದೆ. ಪೊಲೀಸ್ ಇಲಾಖೆಯಲ್ಲಿನ ಕಳಂಕಿತರ ಈ ಪಟ್ಟಿಗೆ ಕೊನೆಯಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಅವರು ದುಷ್ಕೃತ್ಯಗಳಲ್ಲಿ ತೊಡಗಿದ ಪೊಲೀಸರನ್ನು ಮತ್ತೆ ಮತ್ತೆ ತರಾಟೆಗೆ ತೆಗೆದುಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಕೈಕುಲುಕುವ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ. ಕೆಲವು ಪೊಲೀಸ್ ಠಾಣೆಗಳು 'ರಿಯಲ್ ಎಸ್ಟೇಟ್ ಅಡ್ಡಾ'ಗಳಾಗುತ್ತಿರುವ ಬಗ್ಗೆ ಗೃಹ ಸಚಿವರು ಸಾರ್ವಜನಿಕವಾಗಿಯೇ ಟೀಕಿಸಿದ್ದಾರೆ. ಇದೆಲ್ಲ ಭ್ರಷ್ಟಾಚಾರದ ಬೇರುಗಳು, ಹಣ ನೀಡಿ ನೌಕರಿ ಮತ್ತು ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವ ಸಂಸ್ಕೃತಿಯಲ್ಲಿದೆ. ಲಾಭದಾಯಕ ಸ್ಥಳಗಳಿಗೆ ನಿಯೋಜನೆಗೊಳ್ಳಲು ಅಧಿಕಾರಿಗಳು ದೊಡ್ಡ ಮೊತ್ತದ ಹಣ ನೀಡುವುದಿದೆ. ಹೀಗೆ ಹೂಡಿಕೆಯ ರೀತಿಯಲ್ಲಿ ಸಂದಾಯ ಮಾಡಿದ ಹಣವನ್ನು ಗಳಿಸಲಿಕ್ಕಾಗಿ ಅಧಿಕಾರಿಗಳು ಮಾಫಿಯಾದೊಂದಿಗೆ ಶಾಮೀಲಾಗುತ್ತಾರೆ ಅಥವಾ ಅಪರಾಧ ಕೃತ್ಯಗಳಿಗೆ ಕುರುಡಾಗುತ್ತಾರೆ. ವಾಮಮಾರ್ಗಗಳು, ಕಾನೂನು ಮತ್ತು ಸುವ್ಯವಸ್ಥೆಯ ಬುನಾದಿಯನ್ನೇ ಶಿಥಿಲಗೊಳಿಸುತ್ತಿವೆ. ಸೂಕ್ಷ್ಮ ಹಾಗೂ ಮಹತ್ವದ ಹಲವು ಪ್ರಕರಣಗಳನ್ನು ಭೇದಿಸಿದ ಕಾರಣದಿಂದಾಗಿ ಬೆಂಗಳೂರು ಪೊಲೀಸ್ ಮೆಚ್ಚುಗೆಗೆ ಪಾತ್ರವಾಗಿದೆಯಾದರೂ, ಕಾಂಡಕೊರಕ ಹುಳುಗಳಂಥ ಒಳಗಿನ ಭ್ರಷ್ಟರಿಂದಲೇ ಇಲಾಖೆಯ ವರ್ಚಸ್ಸಿಗೆ ಮಸಿ ಅಂಟಿದೆ. ಸಮವಸ್ತ್ರದಲ್ಲಿರುವ ಅಪರಾಧಿಗಳ ರೂಪದಲ್ಲಿ ಪೊಲೀಸರನ್ನು ನೋಡುವ ಸ್ಥಿತಿ ಸೃಷ್ಟಿಯಾಗಬಾರದು. ಭ್ರಷ್ಟರನ್ನು ಸೇವೆಯಿಂದ ವಜಾಗೊಳಿಸುವ ಮೂಲಕ ಪೊಲೀಸ್ ಇಲಾಖೆಗೆ ಕಾಯಕಲ್ಪ ನೀಡಲು ಸರ್ಕಾರ ಮುಂದಾಗಬೇಕು. ಹುದ್ದೆ ಹಾಗೂ ಸ್ಥಾನಕ್ಕಾಗಿ ಹಣ ಪಡೆಯುವ ಪ್ರವೃತ್ತಿ ಕೊನೆಗೊಂಡು, ಕಳಂಕಿತರನ್ನು ತ್ವರಿತ ಶಿಕ್ಷೆಗೆ ಒಳಪಡಿಸುವ ವ್ಯವಸ್ಥೆ ರೂಪುಗೊಳ್ಳಬೇಕು. ಇದಾಗದೆ ಹೋದರೆ, ಭ್ರಷ್ಟ ಪೊಲೀಸರು ಶಿಕ್ಷೆಯ ಭಯವಿಲ್ಲದೆ ತಮ್ಮ ಕುಕೃತ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ.

ಚುಟುಕು (ಚಾಟಿ)

ಹೈಕಮಾಂಡುಗಳು!



ಮತ ಹಾಕುವುದಷ್ಟೇ ಜನರ ಕೆಲಸ. ಧರ್ಮಗುರುಗಳು, ಜಾತಿ ಮಠಗಳು ಹಾಗೂ ಉದ್ಯಮಿಗಳು– ಇವರೇ ಹೈಕಮಾಂಡುಗಳು.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಸಿದ್ದರಾಮಯ್ಯ ಕಾಂಗ್ರೆಸ್ಸಿಗನೂ ಅಲ್ಲ, ಜೆಡಿಎಸ್ ಅಲ್ಲ, ಅಹಿಂದ ನಾಯಕನೂ ಅಲ್ಲ. ಸ್ವಾರ್ಥಕ್ಕಾಗಿ ಯಾರೊಂದಿಗೆ ಬೇಕಾದರೂ ಹೊಂದಾಣಿಕೆ ಮಾಡಿಕೊಳ್ಳುವುದೇ ಅವರ ಗುಣ.

ಎಚ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಬುಧವಾರ, 29-11-2000

● **ಕಾಶ್ಮೀರ: ಕದನ ವಿರಾಮದ ಮೊದಲ ದಿನವೇ 16 ಸಾವು**

ಶ್ರೀನಗರ, ನ. 28 (ಪಿಟಿಐ)– ಜಮ್ಮು ಮತ್ತು ಕಾಶ್ಮೀರದಲ್ಲಿ ಕೇಂದ್ರ ಸರ್ಕಾರ ಘೋಷಿಸಿರುವ ಒಂದು ತಿಂಗಳ ಕದನ ವಿರಾಮದ ಮೊದಲ ದಿನವಾದ ಇಂದು, ವಿವಿಧ ಕಡೆ ನಡೆದ ಹಿಂಸಾಚಾರಗಳಲ್ಲಿ ರಕ್ಷಣಾ ಪಡೆಯ ಐವರು, ಎಂಟು ಉಗ್ರರು ಸೇರಿದಂತೆ ಒಟ್ಟು 16 ಮಂದಿ ಮೃತಪಟ್ಟಿದ್ದಾರೆ.

ಇದರಿಂದಾಗಿ ಕೇಂದ್ರ ಸರ್ಕಾರವು ರಂಜಾನ್ ಅವಧಿಯಲ್ಲಿ ಏಕಪಕ್ಷೀಯವಾಗಿ ಘೋಷಣೆ ಮಾಡಿದ ಕದನ ವಿರಾಮಕ್ಕೆ ಉಗ್ರ ಸಂಘಟನೆಗಳು ಯಾವುದೇ ಅನುಕೂಲಕರ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ ಎಂಬುದು ಇಂದಿನ ಘಟನಾವಳಿಗಳಿಂದ ಸ್ಪಷ್ಟಪಟ್ಟಂತಾಗಿದೆ.

● **ಮೆಕ್ಕೆಜೋಳ ಖರೀದಿ ಷರತ್ತು ಸಡಿಲಿಸಲು ಕೇಂದ್ರ ಅಸ್ತು**

ನವದೆಹಲಿ, ನ. 28– ಕರ್ನಾಟಕದಲ್ಲಿ ಮೆಕ್ಕೆಜೋಳ ಮತ್ತು ಭತ್ತದ ಖರೀದಿಗೆ ಭಾರತೀಯ ಆಹಾರ ನಿಗಮ ನಿಗದಿಪಡಿಸಿರುವ ಗುಣಮಟ್ಟದ ಷರತ್ತುಗಳನ್ನು ಸಡಿಲಿಸಲು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ನೇತೃತ್ವದಲ್ಲಿ ರಾಜ್ಯದ ಸರ್ವಪಕ್ಷಗಳ ನಿಯೋಗ, ಕೇಂದ್ರ ಸಚಿವರನ್ನು ಭೇಟಿ ಮಾಡಿ ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ರೈತರು ಎದುರಿಸುತ್ತಿರುವ ಸಮಸ್ಯೆ ವಿವರಿಸಿ ಸೂಕ್ತ ಪರಿಹಾರಕ್ಕೆ ಒತ್ತಾಯಿಸಿದಾಗ ಸಚಿವರು ಈ ಆಶ್ವಾಸನೆ ನೀಡಿದರು.

75 ವರ್ಷಗಳ ಹಿಂದೆ

ಬುಧವಾರ, 29-11-1950

● **ಗಲೀಜು ಪ್ರದೇಶಗಳನ್ನು ಉತ್ತಮಗೊಳಿಸುವುದು ಅಗತ್ಯ**

ಬೆಂಗಳೂರು, ನ. 28– 'ಸುಮಾರು 1 ಲಕ್ಷ 25 ಸಾವಿರ ಜನರು ವಾಸ ಮಾಡುತ್ತಿರುವ ನಗರದ 36 ಗಲೀಜು ಪ್ರದೇಶಗಳನ್ನು ಚೊಕ್ಕಟಗೊಳಿಸಿ ಉತ್ತಮಪಡಿಸಲು ಕಡೆಯ ಪಕ್ಷ ಪ್ರತಿವರ್ಷವೂ 10 ಲಕ್ಷ ರೂ. ಖರ್ಚು ಮಾಡಬೇಕಾದುದು ಅಗತ್ಯವಾಗಿದೆ. ಕಾರ್ಪೊರೇಷನ್ ಈಗಿರುವ ಚಿಂತಾಜನಕ ಪರಿಸ್ಥಿತಿಗೆ ಗಮನ ಕೊಟ್ಟು ಈ ಕಾರ್ಯ ನಡೆಸುವುದೆಂದು ನಂಬುತ್ತೇನೆ' ಎಂದು ಮೇಯರ್ ಎನ್. ಕೇಶವಯ್ಯಂಗಾರರು ಇಂದು ಬೆಳಿಗ್ಗೆ ಅಲಸೂರು ಕೆರೆಯ ದೀಪವೊಂದರಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ತಿಳಿಸಿದರು.

ತಾವು ಮೇಯರ್ ಆಗಿ ಬಂದಂದಿನಿಂದ ಇಲ್ಲಿಯವರೆಗಿನ ಕಾರ್ಪೊರೇಷನ್ ನಡೆಸಿರುವ ಕಾರ್ಯಗಳ ಬಗ್ಗೆ ಮೇಯರ್‌ರವರು ವಿವರವನ್ನಿತ್ತು, ಕೆಲವು ವಿಷಯಗಳ ಬಗ್ಗೆ ವೈಯಕ್ತಿಕವಾಗಿ ಸಲಹೆಗಳನ್ನೂ ಇತ್ತರು.

ಇತಿಹಾಸಚಕ್ರ ಮತ್ತು ಹಾವನೂರು



ವಿಶ್ಲೇಷಣೆ

ನಟರಾಜ್ ಹುಳಿಯಾರ್

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಅಂದಿನ ಮುಖ್ಯಮಂತ್ರಿ ದೇವರಾಜ ಅರಸರಿಗೆ ಸಲ್ಲಿಸಿದ ದಿನ (ನವೆಂಬರ್ 19, 1975) ಆಯೋಗದ ಅಧ್ಯಕ್ಷ ಲಕ್ಷ್ಮಣ ಜಿ. ಹಾವನೂರು ಭಾವುಕರಾದರು. ಆ ಗಳಿಗೆ ಕುರಿತ 'ಪ್ರಜಾವಾಣಿ' ವರದಿಯ ಭಾಗಗಳು:

'ಹಾವನೂರ್ ಅವರ ಕಂಠ ಬಿಗಿದು ಬಂತು. ತುಂಬಿದ ಸಭೆಯಲ್ಲಿ ಉಕ್ಕಿದ ಭಾವೋದ್ರೇಕವನ್ನು ಮುಚ್ಚಿಡಲು ಪ್ರಯತ್ನಿಸಿದರು. 'ನಮ್ಮ ಶಿಫಾರಸುಗಳನ್ನು ನಿಮ್ಮ ಸರ್ಕಾರ ಕಾರ್ಯಗತ ಮಾಡಿದಾಗ ನನ್ನ ಜೀವನಯಾತ್ರೆ ಸಾರ್ಥಕವಾಯಿತೆಂದು ಭಾವಿಸುತ್ತೇನೆ' ಎಂದರು. 'ಹಿಂದುಳಿದವರ ಕಲ್ಯಾಣಕ್ಕಾಗಿ ರಾಜಕೀಯ ಸಮರ ಎದುರಿಸಲೂ ಸಿದ್ಧ' ಎಂದ ಮುಖ್ಯಮಂತ್ರಿಯ ಮಾತಿನಲ್ಲಿ ಹಾವನೂರು ಅವರು ತಮ್ಮ ಬದುಕಿನ ಸಾರ್ಥಕತೆಯ ಮುನ್ನೋಟ ಪಡೆದಿರಬೇಕು.

ಹಾವನೂರರ ಸಾರ್ಥಕ ಯಾತ್ರೆ ಹಾಗೂ ಅರಸು ಸಮರ ಸೃಷ್ಟಿಸಿದ ಹೊಸ ಕರ್ನಾಟಕ ನಮ್ಮೆದುರಿಗೇ ಇದೆ. 1972ರಲ್ಲಿ ಸ್ಥಾಪನೆಯಾದ ಹಾವನೂರು ಆಯೋಗದ ಮೂರು ವರ್ಷಗಳ ಪರಿಶ್ರಮದ, ನಾಲ್ಕು ನೂರು ಪುಟಗಳ, ವರದಿಯನ್ನು ಸ್ವೀಕರಿಸಿದ ಅರಸು, 'ಗಾತ್ರ ಮತ್ತು ಹುರುಳು ಎರಡೂ ದೃಷ್ಟಿಯಿಂದಲೂ ಇದು ಬಲವಾದ ವರದಿ; ಈ ಹಿಂದಿನ ಯಾವ ವರದಿಯೂ ಈ ವರದಿಗೆ ಸರಿಸಮನಾಗಿ ನಿಲ್ಲಲಾರದು' ಎಂದಿದ್ದು, ಭಾರತದ ಸಾಮಾಜಿಕ ಬದಲಾವಣೆಯ ಚರಿತ್ರೆಯ ಶಾಶ್ವತ ಸತ್ಯವಾಗಿ ದಾಖಲಾಗಿದೆ.

ಅಂಬೇಡ್ಕರ್ ಚಿಂತನೆಗಳನ್ನು ಗ್ರಹಿಸಿದ್ದ ರಾಣೆಬೆನ್ನೂರಿನ ಲಾಯರ್ ಹಾವನೂರು, 1956ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾದ ಕಾಲೇಲ್ಕರ್ ವರದಿ ಹಿಂದುಳಿದ ವರ್ಗಗಳನ್ನು ಗುರುತಿಸಿದ್ದ ರೀತಿಯಲ್ಲಿದ್ದ ಗಂಭೀರ ಅಪಾಯಗಳನ್ನು ಅರಿತರು. ಈ ಕುರಿತು ಚರ್ಚಿಸಲು ರಾಣೆಬೆನ್ನೂರಿನಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಸಮಾವೇಶ ಮಾಡಿದರು. ಆ ಸಭೆಯಲ್ಲಿ ಮಾತಾಡಿದ್ದ ಬಿ. ಬಸವಲಿಂಗಪ್ಪ, ಅರಸು ಆಡಳಿತಕಾಲದಲ್ಲಿ ಹಿಂದುಳಿದ ವರ್ಗಗಳ ಆಯೋಗ ಸ್ಥಾಪಿಸಲು ಒತ್ತಾಯಿಸಿದ್ದು ಸಹಜವಾಗಿತ್ತು.

ಹಿಂದುಳಿದ ಜಾತಿಗಳ ಸ್ಥಿತಿಗತಿಗಳನ್ನು ಹತ್ತಿರದಿಂದ ಕಂಡಿದ್ದ ಹಾವನೂರ್‌ಗೆ ಸಮಾನಾವಕಾಶ ಸೃಷ್ಟಿಸುವುದೇ ಜಾತಿ ಸಮಾನತೆಯ ಮುಖ್ಯ ತಳಹದಿ ಎಂಬುದು ಸ್ಪಷ್ಟವಾಗಿತ್ತು. ಪ್ರಬಲ ಜಾತಿಗಳ ರಾಜಕಾರಣ ಹಾಗೂ ಸಾಮಾಜಿಕ–ಆರ್ಥಿಕ ಯಜಮಾನಿಕೆ ಎರಡನ್ನೂ ಮುರಿಯುವ ಛಲವುಳ್ಳ ಅರಸು, 1972ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಹಾವನೂರು ಆಯೋಗ ರಚನೆಯಾಯಿತು. ನಂತರ ಭೂಸುಧಾರಣೆಯ ಮಹಾಮಂಥನವೂ ಸೃಷ್ಟಿಯಾಯಿತು.

ಹೊಟ್ಟೆ ತುಂಬಿದ ಜಾತಿ ವಿಶ್ಲೇಷಕರ ವಾಗ್ವಾದಗಳನ್ನು ಹಾಗೂ ಕೋರ್ಟುಗಳಲ್ಲಿ ಇದೇ ವರ್ಗಗಳ ಸಂವಿಧಾನದ ತಿರುಚು ವ್ಯಾಖ್ಯಾನಗಳನ್ನು ಹಾವನೂರು ಪಕ್ಕಕ್ಕಿಟ್ಟರು. ಜಾತಿಪದ್ಧತಿಯಿಂದ ದಮನಗೊಂಡಿದ್ದವರ ನಿಜಾನುಭವಗಳನ್ನೇ ಹೆಚ್ಚು ಆಧರಿಸಿ ಈ ಜಾತಿಗಳನ್ನು ಮೇಲೆತ್ತುವ ಗುರಿಯಿಂದ ಸರ್ವೇಕ್ಷಣೆ ಆರಂಭಿಸಿದರು. ಈ ಹಾದಿಯಲ್ಲಿ ಹಾವನೂರು ಎದುರಿಸಿದ ಸಂಕಷ್ಟಗಳನ್ನು ರವಿವರ್ಮ ಕುಮಾರ್ ದಾಖಲಿಸುತ್ತಾರೆ: ಆಯೋಗಕ್ಕೆ ಬೇಕಾದ ಅಂಕಿಅಂಶಗಳನ್ನು ಕೊಡದೆ ಕಳ್ಳಾಟವಾಡಿದ ಸರ್ಕಾರಿ ಅಧಿಕಾರಿಗಳಿದ್ದರು. ಆಯೋಗ ಸಂಗ್ರಹಿಸಿದ್ದ ದತ್ತಾಂಶಗಳನ್ನು ಕದ್ದು, ಬಯಲು ಮಾಡಿದ ಖಳರಿದ್ದರು. ಹಾವನೂರ್ ಮೇಲೆ ಹಲ್ಲೆಯ ಪ್ರಯತ್ನಗಳಾದವು. ಕೊನೆಗೆ ಹಾವನೂರ್– ಫೈಲುಗಳು, ಪುಸ್ತಕಗಳನ್ನೆಲ್ಲ ಲಾರಿಯಲ್ಲಿ ತುಂಬಿಕೊಂಡು ತಿಪ್ಪಗೊಂಡನಹಳ್ಳಿ ಜಲಾಶಯದ ಬಳಿಯ ಸರ್ಕಾರಿ ಗೆಸ್ಟ್ ಹೌಸ್ ಸೇರಿದರು. ತಾವೇ ಬರೆದ ಇಡೀ ವರದಿಯನ್ನು ಮೂರು ತಿಂಗಳ ಕಾಲ ನಂಬಿಕಸ್ಥ ಟೈಪಿಸ್ಟುಗಳಿಂದ ಬೆರಳಚ್ಚು ಮಾಡಿಸಿ, ತಿದ್ದಿ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು. ಅಂಬೇಡ್ಕರ್, ಲೋಹಿಯಾ ನಂತರ ಜಾತಿ ಚಲನೆಗಳನ್ನು ಅರಿಯುವ, ಬದಲಿಸುವ ಹೊಸ ಮಾರ್ಗಗಳನ್ನೂ ಹಾವನೂರು ವರದಿ ತೆರೆದಿತ್ತು.

ವರದಿಯ ವಿರುದ್ಧ ಎದ್ದ ಆಸಕ್ತಹಿತಗಳ ಅಪಸ್ವರಗಳಿಗೆ ಕರ್ನಾಟಕದ ಚಿಂತಕ ವಲಯವೂ ತಾತ್ವಿಕ ಉತ್ತರ ಕೊಡತೊಡಗಿತು. ಎಲ್ಲರಿಗೂ, ಅದರಲ್ಲೂ ಪ್ರಬಲ ಜಾತಿಗಳಿಗೆ, ಮನವರಿಕೆಯಾಗಬಲ್ಲ ನಿಖರ ಅಂಕಿಅಂಶ, ತಾತ್ವಿಕತೆ, ತರ್ಕಗಳ ಮೂಲಕ ಎಂ.ಡಿ. ನಂಜುಂಡಸ್ವಾಮಿ 'ಹಾವನೂರು ವರದಿ'ಗೆ ಮಹತ್ವದ ವೈಜ್ಞಾನಿಕ ಸಮರ್ಥನೆ ಕೊಟ್ಟರು. ಕೋರ್ಟಿನಲ್ಲಿ ಎದುರಾದ ಪ್ರಶ್ನೆಗಳಿಗೆ ಉತ್ತರಿಸಲು ಹಾವನೂರ್ ಜೊತೆಗೆ ಲಾಯರುಗಳ ಕಮಿಟೆಡ್ ತಂಡವೂ ತಯಾರಾಯಿತು. ದಲಿತ ಚಳವಳಿ ಬಿತ್ತಿದ್ದ ಸಾಮಾಜಿಕ ನ್ಯಾಯದ ಎಚ್ಚರ ಹಿಂದುಳಿದ ವರ್ಗಗಳನ್ನೂ ಜಾಗೃತಗೊಳಿಸತೊಡಗಿತು.

> ಸಂವಿಧಾನದ ಆಶಯಗಳು ಜೀವ ಪಡೆದುಕೊಂಡ ವಿರಳ ಉದಾಹರಣೆಗಳಲ್ಲಿ 'ಹಾವನೂರು ವರದಿ' ಮುಖ್ಯವಾದುದು. ಈ ವರದಿ, ಹಿಂದುಳಿದ ವರ್ಗಗಳ ತರುಣ, ತರುಣಿಯರಿಗೆ ಆತ್ಮವಿಶ್ವಾಸವನ್ನೂ, ಹೊಸ ಭರವಸೆಗಳನ್ನೂ ತುಂಬಿದ್ದು ದೇಶದ ಇತಿಹಾಸದಲ್ಲಿನ ಸುವರ್ಣ ಅಧ್ಯಾಯಗಳಲ್ಲೊಂದು.

ಸಮಾಜವಾದಿ ಯುವಜನಸಭಾ, ಬರಹಗಾರ–ಕಲಾವಿದರ ಒಕ್ಕೂಟ, ದಲಿತ ಚಳವಳಿಗಳ ಮೂಲಕ ಸೈದ್ಧಾಂತಿಕ ಸ್ಪಷ್ಟತೆ ಪಡೆದ ಚಿಂತಕರು; ರಾಜಕಾರಣಿಗಳು, ವಡ್ಡರ್ಸೆ ರಘುರಾಮಶೆಟ್ಟಿ, ಕಲ್ಲೆ ಶಿವೋತ್ತಮರಾವ್ ಥರದ ಹತ್ತಾರು ಪತ್ರಕರ್ತರು ಹಿಂದುಳಿದ ಜನಾಂಗಗಳ ಹಕ್ಕುಗಳ ಪ್ರತಿಪಾದನೆಯ ಕರ್ತವ್ಯ ನಿರ್ವಹಿಸತೊಡಗಿದರು. 'ಪ್ರಜಾವಾಣಿ'ಯಂಥ ದಿನಪತ್ರಿಕೆಗಳು, 'ಜನಪ್ರಗತಿ', 'ಶೂದ್ರ', 'ಸಂಕ್ರಮಣ'ದಂಥ ಕಿರುಪತ್ರಿಕೆಗಳು ಹಾವನೂರು ವರದಿಯ ನ್ಯಾಯಬದ್ಧತೆಯನ್ನು ಬೆಂಬಲಿಸಿದವು. ಬಂಡಾಯ ಸಾಹಿತ್ಯ, ದಲಿತ ಸಾಹಿತ್ಯಗಳ ಮೂಲಕವೂ ಕರ್ನಾಟಕದ ಸಾಹಿತ್ಯ, ಸಂಸ್ಕೃತಿಗಳ ಸಂಸ್ಥೆಗಳ ಚಹರೆಗಳು ಬದಲಾಗತೊಡಗಿದವು. ಲೋಹಿಯಾ ಐವತ್ತರ ದಶಕದಲ್ಲಿ ಪ್ರತಿಪಾದಿಸಿದ್ದ 'ಸಮಾನಾವಕಾಶಗಳ ಸಿದ್ಧಾಂತ' ಹಾವನೂರು ವರದಿಯ ನಂತರ ಕರ್ನಾಟಕದ ಜಾತ್ಯತೀತ ವರ್ಗದ ಸ್ವೀಕೃತ ತಾತ್ವಿಕತೆಯಾಯಿತು.

ಕಳೆದ ನಲವತ್ತೈದು ವರ್ಷಗಳಲ್ಲಿ ಹಾವನೂರು ವರದಿಯ ಫಲಶ್ರುತಿ, ಫಲಿತಾಂಶ ಹಾಗೂ ನಿರ್ಣಾಯಕ ಪರಿಣಾಮಗಳು ಕರ್ನಾಟಕದ ಊರೂರುಗಳಲ್ಲಿ ಕಾಣುತ್ತವೆ. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳು, ಸ್ಕಾಲರ್‌ಶಿಪ್ಪುಗಳು, ಶಿಕ್ಷಣಾವಕಾಶಗಳು ಈ ಹುಡುಗ, ಹುಡುಗಿಯರಲ್ಲಿ ಹುದುಗಿದ್ದ ಪ್ರತಿಭಾ ಸ್ಫೋಟಕ್ಕೆ ನೆರವಾದವು. ಕಂಬಳಿ ನೇಯುವವರ ಮನೆಗಳಿಂದ, ನೇಕಾರರ ಹಟ್ಟಿಗಳಿಂದ, ಬೆಸ್ತರು, ಅಗಸರು, ಗೊಲ್ಲರು, ಬಡಗಿಗಳೇ ಮುಂತಾದ ಶ್ರಮಜೀವಿಗಳ ಮನೆಗಳಿಂದ, ಬಡ ಮುಸ್ಲಿಂ, ಕ್ರೈಸ್ತ ಸಮುದಾಯಗಳಿಂದ ಬಂದ ಹುಡುಗ, ಹುಡುಗಿಯರು ಕರ್ನಾಟಕದ ಆಡಳಿತಾಂಗಕ್ಕೆ ಪ್ರವೇಶಿಸಿದರು. ಹಿಂದುಳಿದ ಜಾತಿ–ವರ್ಗಗಳ ಪ್ರತಿನಿಧಿಗಳು ರಾಜಕೀಯ, ವಿಶ್ವವಿದ್ಯಾಲಯಗಳಿಗೆ ಬರಲಾರಂಭಿಸಿದರು. ಅರಸು ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರದ ಹತ್ತಿರ ಬಂದಿದ್ದ ಹಿಂದುಳಿದ ವರ್ಗಗಳ ಶಾಸಕರು, ಮಂತ್ರಿಗಳ ಸಂಖ್ಯೆ ಹೆಚ್ಚತೊಡಗಿತು; ಹಿಂದುಳಿದ ವರ್ಗಗಳಿಂದ ನಾಲ್ವರು ಮುಖ್ಯಮಂತ್ರಿಗಳಾದ ಚಾರಿತ್ರಿಕ ವಿದ್ಯಮಾನಕ್ಕೂ ಕರ್ನಾಟಕ ಸಾಕ್ಷಿಯಾಯಿತು.


ಹಾವನೂರು ವರದಿ ಮಂಡಲ್ ವರದಿಗೂ ಮೂಲ ಪ್ರೇರಣೆಯಾದದ್ದರ ಪುರಾವೆಯನ್ನು ಅರಸು ಪ್ರಭಾವದಿಂದ ರಾಜಕಾರಣಕ್ಕೆ ಬಂದು, 2018–20ರ ನಡುವೆ ಬಸವಕಲ್ಯಾಣದ ಕಾಂಗ್ರೆಸ್ ಶಾಸಕರಾಗಿದ್ದ ಬಿ. ನಾರಾಯಣರಾವ್ ಕೊಡುತ್ತಾರೆ: 1978ರಲ್ಲಿ ಅರಸು ಮತ್ತೆ ಮುಖ್ಯಮಂತ್ರಿಯಾದರು. ಆಗ ಕೇಂದ್ರದ ಜನತಾ ಸರ್ಕಾರದಲ್ಲಿ ಗೃಹಮಂತ್ರಿಯಾಗಿದ್ದ ಚರಣ್‌ಸಿಂಗ್ ಬಿಹಾರದ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರನ್ನು ಕರೆದು, 'ಇಡೀ ದೇಶದಲ್ಲಿ ಜನತಾ ಪಕ್ಷದ ಅಲೆಯಿದ್ದರೂ ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದಿರುವುದಕ್ಕೆ ಕಾರಣ ಕಂಡುಕೊಂಡು ಒಂದು ವರದಿ ತಯಾರಿಸಿ' ಎಂದು ಕರ್ನಾಟಕಕ್ಕೆ ಕಳಿಸಿದರು. ಸಮಾಜವಾದಿ ಕರ್ಪೂರಿ ಠಾಕೂರ್ ಬೆಂಗಳೂರಿಗೆ ಬಂದು ಅರಸು ಅವರನ್ನು ಭೇಟಿ ಆದರು. ಅರಸು ಕರ್ನಾಟಕದಲ್ಲಿ ನಡೆದ ಭೂ ಸುಧಾರಣೆ, ಮಲಹೊರುವ ಪದ್ಧತಿ ನಿಷೇಧ, ಹಾವನೂರು ಆಯೋಗ, ಜೀತವಿಮುಕ್ತಿ ಮುಂತಾದ ಕಾಯ್ದೆ ಜಾರಿಗೆ ತಂದಿದ್ದನ್ನು, ಇದನ್ನೆಲ್ಲ ಮಾಡುವಾಗ ಎಲ್ಲ ಜಾತಿ ಜನಾಂಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದನ್ನು ಕರ್ಪೂರಿ ಠಾಕೂರ್ ಜೊತೆ ಚರ್ಚಿಸಿದರು.

ಇದಾದ ನಂತರ, 1979ರ ಜನವರಿಯಲ್ಲಿ ಜನತಾ ಸರ್ಕಾರ ಬಿ.ಪಿ. ಮಂಡಲ್ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ರಚಿಸಿತು. 1980ರ ಡಿಸೆಂಬರ್‌ನಲ್ಲಿ ಮಂಡಲ್ ಆಯೋಗ ಸಲ್ಲಿಸಿದ ವರದಿ ಜಾರಿಗೊಳಿಸುವ ಮೊದಲೇ ಸರ್ಕಾರ ಬಿದ್ದು ಹೋಯಿತು. 1990ರಲ್ಲಿ ವಿ.ಪಿ. ಸಿಂಗ್ ಸರ್ಕಾರ ಮಂಡಲ್ ವರದಿ ಜಾರಿಗೊಳಿಸಿತು. ವರದಿ ವಿರುದ್ಧ ಯಥಾಸ್ಥಿತಿವಾದಿಗಳ ಪ್ರತಿಭಟನೆ, ಕೋರ್ಟ್ ಕೇಸು ಶುರುವಾದವು. ಮಂಡಲ್ ವರದಿ ತಮ್ಮ ಏಳಿಗೆಗಾಗೇ ಇರುವುದನ್ನು ಅರಿಯದೆಯೇ ಅದರ ವಿರುದ್ಧವೇ ಪ್ರತಿಭಟಿಸಲು ಹೊರಟಿದ್ದ ಹಿಂದುಳಿದ ವರ್ಗಗಳ ಹುಡುಗರನ್ನು ಕರ್ನಾಟಕದ ದಲಿತ ಚಳವಳಿ ತಿದ್ದಿತು.

ಪಿ.ವಿ. ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಂಡಲ್ ವರದಿ ಜಾರಿಗೊಳಿಸಿದ ಮೇಲೆ, ದೇಶದ ರಾಜಕಾರಣ, ಆಡಳಿತ, ಅಧಿಕಾರಶಾಹಿಯ ಚಹರೆಗಳು ತೀವ್ರವಾಗಿ ಬದಲಾಗತೊಡಗಿದವು. ಕರ್ನಾಟಕದಲ್ಲಿ ಹಾಗೂ ದೇಶದಾದ್ಯಂತ ಪಂಚಾಯಿತಿ ವ್ಯವಸ್ಥೆಯವರೆಗೂ ಹಿಂದುಳಿದ ವರ್ಗಗಳ ಲಕ್ಷಾಂತರ ಪುರುಷರು, ಮಹಿಳೆಯರು ಅಧಿಕಾರದ ಚುಕ್ಕಾಣಿ ಹಿಡಿದರು. ಫಲವಾಗಿ, 'ಅಹಿಂದ', 'ಬಹುಜನ ಸಮಾಜ' ವರ್ಗಗಳು ಸೃಷ್ಟಿಯಾದವು.

ಹಾವನೂರು ಆಯೋಗ, ಮಂಡಲ್ ಆಯೋಗಗಳ ಫಲಾನುಭವಿಗಳ ಎರಡನೇ ತಲೆಮಾರಿನ ಪ್ರತಿಭಾ ವಿಕಾಸ ಹಾಗೂ ಹಿಂದುಳಿದ ವರ್ಗಗಳ ಒಟ್ಟು ಆರ್ಥಿಕ–ಸಾಮಾಜಿಕ ಸುಧಾರಣೆಗಳ ಸರಿಯಾದ ಅಂದಾಜು ಇನ್ನೂ ಸಿಕ್ಕಬೇಕಾಗಿದೆ. ಜೊತೆಗೆ, ಹಾವನೂರು ವರದಿಯ ಹಿಂದಿರುವ ಸಾಮಾಜಿಕ ನ್ಯಾಯದ ವಿಮೋಚನಾ ಸಿದ್ಧಾಂತ ಹಿಂದುಳಿದ ಜಾತಿಗಳ ವರ್ಗಪ್ರಜ್ಞೆಯನ್ನು ಗಟ್ಟಿಗೊಳಿಸಬೇಕಾಗಿದೆ. ಭಾರತದ ಮಹತ್ವದ ಸಮಾಜವಿಜ್ಞಾನ ಪಠ್ಯವೂ ಆಗಿರುವ ಹಾವನೂರು ವರದಿಯ ಮರುಅಧ್ಯಯನ, ಸೈದ್ಧಾಂತಿಕ ಗ್ರಹಿಕೆ ಹಾಗೂ ಜನಪ್ರಿಯ ಪ್ರಸಾರಗಳ ಮೂಲಕ ಕೋಮುವಾದದ ಕಾಲಾಳುಗಳಾಗಲು ಹೊರಟಿರುವ ಹಿಂದುಳಿದ ವರ್ಗಗಳ ತರುಣರನ್ನು ತಿದ್ದಬೇಕಾಗಿದೆ.

ಸಂವಿಧಾನದ ಅವಕಾಶಗಳು ಹಾಗೂ ನಿರ್ದೇಶನಾ ತತ್ತ್ವಗಳನ್ನು ಅವಕಾಶವಂಚಿತ ಜಾತಿಗಳ ದೃಷ್ಟಿಯಿಂದ ವ್ಯಾಖ್ಯಾನಿಸಿದ ಹಾವನೂರು ವರದಿ ಉದ್ಘಾಟಿಸಿದ ಐತಿಹಾಸಿಕ ಚಲನೆಗಳು ಬಹುದೂರ ಸಾಗಬಲ್ಲವು. ಸಾಮಾಜಿಕ ನ್ಯಾಯ ವಿರೋಧಿ ಸರ್ಕಾರಗಳು ಸಮಾನಾವಕಾಶಗಳ ಸಾಧ್ಯತೆಗಳನ್ನು ಎಷ್ಟೇ ತೆಳುಗೊಳಿಸಿದರೂ, ಹಿಂದುಳಿದ ಜಾತಿ–ವರ್ಗಗಳಿಗೆ ತಕ್ಕ ಪ್ರಾತಿನಿಧ್ಯ ಕೊಡಲು ಬದ್ಧರಾಗಿರಲೇಬೇಕಾದ ವ್ಯವಸ್ಥೆಯಂತೂ ಹಾವನೂರು, ಮಂಡಲ್ ವರದಿಗಳ ಜಾರಿಯಿಂದ ಸೃಷ್ಟಿಯಾಗಿದೆ.



ವಾಚಕರ ವಾಣಿ

ಬಡ್ಡಿ ಮನ್ನಾ: ತಪ್ಪು ಸಂದೇಶ ರವಾನೆ

ಬೆಂಗಳೂರಿನಲ್ಲಿ ಸಾರಿಗೆ ನಿಯಮ ಉಲ್ಲಂಘಿಸಿ ದಂಡ ಪಾವತಿಸದವರಿಗೆ ಶೇ 50ರಷ್ಟು ವಿನಾಯಿತಿ ನೀಡಲಾಗಿತ್ತು. ಈಗ ನೀರಿನ ತೆರಿಗೆ ಬಾಕಿದಾರರು ಮೂರು ತಿಂಗಳೊಳಗೆ ಅಸಲು ಮೊತ್ತ ಪಾವತಿಸಿದರೆ ದಂಡ ಮತ್ತು ಬಡ್ಡಿ ಮನ್ನಾದ ನಿರ್ಧಾರ ಪ್ರಕಟವಾಗಿದೆ. ಈ ನಿರ್ಧಾರ ಕೆಲವರ ತಾತ್ಕಾಲಿಕ ಬಾಧೆಯನ್ನು ನಿವಾರಿಸಬಹುದು. ಸಾರ್ವಜನಿಕ ಹಣದ ಶಿಸ್ತಿನ ಬಳಕೆಗೆ ನಾಗರಿಕರನ್ನು ಪ್ರೋತ್ಸಾಹಿಸಬೇಕಾದ ಸಂದರ್ಭದಲ್ಲಿ ಇಂತಹ ಮನ್ನಾಗಳು ತಪ್ಪು ಸಂದೇಶ ನೀಡುತ್ತವೆ. ಸಮಯಕ್ಕೆ ಸರಿಯಾಗಿ ಪಾವತಿಸುವ ಪ್ರಾಮಾಣಿಕ ನಾಗರಿಕರ ನ್ಯಾಯಬದ್ಧತೆ ಮಸುಕಾಗುತ್ತದೆ. ನಿಯಮ ಪಾಲಕರಿಗೆ ಉತ್ತೇಜನ, ಉಲ್ಲಂಘನೆ ಮಾಡುವವರಿಗೆ ಕಟ್ಟುನಿಟ್ಟಿನ ಕ್ರಮದ ಮೂಲಕವೇ ಉತ್ತಮ ಆಡಳಿತ ಸಾಧ್ಯ. ಸರ್ಕಾರ ಈ ವಿಚಾರದಲ್ಲಿ ಗಂಭೀರವಾಗಿ ಚಿಂತಿಸಬೇಕಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ಖಾದಿ ಮೇಲೆ ಕಾವಿ ಸವಾರಿ ಏಕೆ?

ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗೆ ನಡೆಯುತ್ತಿರುವ ಗುದ್ದಾಟದಲ್ಲಿ ಮಠಾಧೀಶರ ಪ್ರವೇಶ ಸರಿ ಎನಿಸದು. ಈಗಾಗಲೇ, ಕಲುಷಿತಗೊಂಡಿರುವ ರಾಜಕೀಯ ಕ್ಷೇತ್ರಕ್ಕೆ ಮಠಗಳು ಪ್ರವೇಶಿಸಿದರೆ ಅವು ಕೂಡ ಕಲುಷಿತಗೊಳ್ಳುತ್ತವೆ. ಅವುಗಳ ಮೇಲೆ ಜನರ ನಂಬಿಕೆಯೂ ಕ್ಷೀಣಿಸಿ ಸ್ವಾಮೀಜಿಗಳು ಗೌರವ ಕಳೆದುಕೊಳ್ಳಬೇಕಾಗುತ್ತದೆ. ಮಠಗಳು ಸಮಾಜವನ್ನು ಒಗ್ಗೂಡಿಸುವ ಕೆಲಸ ಮಾಡಬೇಕೆ ಹೊರತು ಬೇರ್ಪಡಿಸುವ ಸಾಹಸಕ್ಕೆ ಕೈಹಾಕುವುದು ಸರ್ವಥಾ ನ್ಯಾಯವಲ್ಲ. ರಾಜಕಾರಣದಲ್ಲಿ ಮಾತಿಗೆ ಬದ್ಧತೆ ಇರುವುದಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಮೋಸ, ವಂಚನೆ ಸ್ವಾಭಾವಿಕ. ಅದು ರಾಜಕೀಯ ನಾಯಕರ ಸ್ವಭಾವವೂ ಹೌದು. ಮಠಾಧೀಶರಿಗೆ ಈ ಸತ್ಯ ಅರಿವಾಗದಿರುವುದು ಸೋಜಿಗ.

ವಿ.ಜಿ. ಇನಾಮದಾರ, ಸಾರವಾಡ

'ಕೈ' ಕಿತ್ತಾಟ: ಜನರಿಗೆ ಭ್ರಮನಿರಸನ

ಮುಖ್ಯಮಂತ್ರಿ ಗದ್ದುಗೆಗಾಗಿ ಕಾಂಗ್ರೆಸ್‌ನಲ್ಲಿ ಸೃಷ್ಟಿಯಾಗಿರುವ ತಳಮಳವು ಮತದಾರರಲ್ಲೂ ಗೊಂದಲ ಮೂಡಿಸಿದೆ. ಹಿಂದಿನ ಬಿಜೆಪಿ ಸರ್ಕಾರದ ಜನವಿರೋಧಿ ನೀತಿಗಳನ್ನು ಚುನಾವಣೆಯಲ್ಲಿ ತಿರಸ್ಕರಿಸಿದ್ದ ಮತದಾರರು, ಕಾಂಗ್ರೆಸ್‌ಗೆ ಅಧಿಕಾರ ನೀಡಿದ್ದು ತಪ್ಪಾಯಿತೇನೋ ಎಂದು ಪರಿತಪಿಸುವಂತಾಗಿದೆ. ಅದನ್ನು ಅರ್ಥಮಾಡಿಕೊಳ್ಳದ ಕಾಂಗ್ರೆಸ್ ಮುಖಂಡರು, ಅಧಿಕಾರ ಹಂಚಿಕೆಯ ಒಳಜಗಳದಲ್ಲಿ ಮುಳುಗಿದ್ದಾರೆ. ಜನರ ನಂಬಿಕೆಗೆ ನಿರಾಶೆ ಉಂಟು ಮಾಡುತ್ತಿದ್ದಾರೆ. ಅಧಿಕಾರ ದಾಹದ ಹಪಹಪಿಯಲ್ಲಿ ಮತದಾರರ ಮತಮೌಲ್ಯವನ್ನೇ ಕಡೆಗಣಿಸುತ್ತಿರುವುದು ದುರಂತ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ರಾಜ್ಯದ ರಾಜಕೀಯ ಪರಿಸ್ಥಿತಿ ಹಾಸ್ಯಾಸ್ಪದ

ಈಗಲೂ ಶಾಲೆಗಳಲ್ಲಿ ಬೆಳಗಿನ ಪ್ರಾರ್ಥನೆ ನಂತರ ಮಕ್ಕಳಿಂದ ದಿನಪತ್ರಿಕೆಗಳಲ್ಲಿನ ಮುಖ್ಯ ಸುದ್ದಿ ಓದಿಸುವ ಸಂಪ್ರದಾಯವಿದೆ. ಆದರೆ, ಇಂದು ಆ ಮಕ್ಕಳು ಓದುವ ಸುದ್ದಿಯಾದರೂ ಏನು? 'ಬೀದಿಗೆ ಬಂದ ಕುರ್ಚಿ ಕುಸ್ತಿ'. ಇದು ಇಂದಿನ ರಾಜಕೀಯ ಪರಿಸ್ಥಿತಿ; ಹಾಸ್ಯಾಸ್ಪದವಲ್ಲದೆ ಮತ್ತೇನು? ಸಮಾಜದ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆಗಳಿಲ್ಲ. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ಕುರಿತಂತಾಗಲೀ, ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆಯಾಗಲೀ ಚರ್ಚೆಗಳಿಲ್ಲ. ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಹಣದ ಸೋರಿಕೆ ತಡೆಯಲಾಗುತ್ತಿಲ್ಲ. ರಾಜಕೀಯ ಮುಖಂಡರು ಜನರಿಗೆ ಮಾರ್ಗದರ್ಶಕರಾಗುವ ಬದಲು ಅವರ ದಾರಿ ತಪ್ಪಿಸುತ್ತಿದ್ದಾರೆ. ಮಠಾಧೀಶರು ಧಾರ್ಮಿಕ ಚೌಕಟ್ಟಿನಲ್ಲಿ ಸಮಾಜ ಸುಧಾರಣೆಗೆ ಶ್ರಮಿಸುವುದನ್ನು ಬಿಟ್ಟು ತಮ್ಮ ಜಾತಿಯವರಿಗೆ ಮುಖ್ಯಮಂತ್ರಿ ಪಟ್ಟ ಕೊಡಿಸುವ ಪ್ರಯತ್ನದಲ್ಲಿ ಮುಳುಗಿದ್ದಾರೆ. ಸಿದ್ದರಾಮಯ್ಯನವರು ತಮ್ಮ ಎಂದಿನ ಸದಾಚಾರದ ನಡವಳಿಕೆಯ ಕಾರಣದಿಂದ ಜನರ ಅಭಿಮಾನ ಉಳಿಸಿಕೊಂಡಿದ್ದಾರೆ. ಚುನಾವಣೆಯಾಗಿ ಎರಡೂವರೆ ವರ್ಷಗಳ ಮೇಲಾದರೂ ಈ ಕುರ್ಚಿಯ ಕಿತ್ತಾಟದಿಂದಾಗಿ ಎಲ್ಲ ಗ್ಯಾರಂಟಿಗಳ ನಡುವೆಯೂ ಜನರ ಜೀವನದಲ್ಲಿ ನಿರೀಕ್ಷಿತ ಬದಲಾವಣೆಯೇನೂ ಆಗಿಲ್ಲ.

ಲಕ್ಷ್ಮಿ ಚಂದ್ರಶೇಖರ್, ಪ್ರೊ. ಬಿ.ಕೆ. ಚಂದ್ರಶೇಖರ್, ಬೆಂಗಳೂರು

ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಅಗತ್ಯ

ಇತ್ತೀಚೆಗೆ ಕುಟುಂಬ ಸಮೇತ ಅಸ್ಸಾಂನಿಂದ ಭುವನೇಶ್ವರಕ್ಕೆ ರೈಲಿನಲ್ಲಿ ಒಂದು ದಿನದ ಪ್ರವಾಸ ಮಾಡಿದೆ. ಈ ವೇಳೆ ನಾವೆಲ್ಲ ಕನ್ನಡದ ಹಾಡುಗಳ ಅಂತ್ಯಾಕ್ಷರಿ ಹಾಡುತ್ತಿದ್ದೆವು. ಇದನ್ನು ಪಕ್ಕದ ಬೋಗಿಯಲ್ಲಿದ್ದ ಕೋಲ್ಕತ್ತದ 11 ವರ್ಷದ ಬಾಲಕಿ ಕುತೂಹಲದಿಂದ ಬಂದು ನೋಡುತ್ತಿದ್ದಳು. ನೀನು ಯಾವುದಾದರೂ ಬೆಂಗಾಳಿ ಭಾಷೆಯ ಹಾಡು ಹೇಳು ಎಂದು ಕೇಳಿಕೊಂಡೆ. ಮಧುರವಾಗಿ ಹಾಡೊಂದನ್ನು ಹೇಳಿದಳು. ಮತ್ತೊಂದು ಹಾಡು ಹೇಳಲು ಕೇಳಿಕೊಂಡಾಗ ಎದ್ದು ನಿಂತು, 'ವಂದೇ ಮಾತರಂ' ಗೀತೆ ಹಾಡಿದಳು. ಆ ಬಾಲಕಿಗೆ ಪೋಷಕರು ಕಲಿಸಿರುವ ಸಂಸ್ಕಾರವು ನೆನಪಲ್ಲಿ ಉಳಿಯಿತು. ಇತ್ತೀಚೆಗೆ ಪೋಷಕರು ಮಕ್ಕಳಿಗೆ ಬರೀ ಅಂಕಗಳಿಕೆಯ ಬಗೆಗೆ ತಲೆಗೆ ತುಂಬುತ್ತಾರೆ. ಸಂಸ್ಕಾರಯುತ ನಡವಳಿಕೆ ಬಗ್ಗೆಯೂ ತಿಳಿಹೇಳಬೇಕಿದೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಶಾಲಾ ಮಕ್ಕಳ ಕೈಗೆ ಲೇಖನಿ ಕೊಡಿ...

ಒಂದನೇ ತರಗತಿಯಿಂದಲೇ ಕಂಪ್ಯೂಟರ್ ಶಿಕ್ಷಣ ಆರಂಭಿಸುವುದಾಗಿ ಶಿಕ್ಷಣ ಸಚಿವರು ಹೇಳಿದ್ದಾರೆ. ಮೊದಲು ಮಕ್ಕಳಿಗೆ ಕನ್ನಡ ಅಕ್ಷರ ಕಲಿಸಿ, ಭಾಷೆ ಕಲಿಸಿ, ಮಾತು ಕಲಿಸಬೇಕು. ಇದ್ಯಾವುದನ್ನೂ ಕಲಿಸದೆ ಒಮ್ಮೆಲೇ ಕಂಪ್ಯೂಟರ್ ಶಿಕ್ಷಣ ನೀಡುತ್ತೇವೆಂದರೆ ಅದು ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಗುತ್ತದೆ. ಆಗ ಉಸಿರು ಕಟ್ಟುವುದು ಖಚಿತ. ಮಕ್ಕಳ ಕೈಗೆ ಮೊದಲು ಲೇಖನಿ ಕೊಡಿ; ಯಂತ್ರಗಳನ್ನಲ್ಲ.

ಅ.ನಾ. ರಾವ್ ಜಾದವ್, ಬೆಂಗಳೂರು

ಚುರುಮುರಿ



ನೋವಿನ ಹಾಡು!

● ತುರುವೇಕೆರೆ ಪ್ರಸಾದ್

ಹಬ್ಬಿದಾ ಹೊಗೆ ಮಧ್ಯದೊಳಗೆ, ಅಧಿಕಾರಕ್ಕೆ ಹಾತೊರೆಯುತಿಹ ಕೈಪಾಳೆಯದಲಿ, ಟಗರು– ಬಂಡೆಯ ಪರಿಯನೆಂತು ಪೇಳ್ವೆನು ಎಂದು ಮೀಡಿಯಾಗಳು ಮೊರೆಯುತ್ತಿರುವಾಗ...

ಟಗರು ಬಾರೋ, ಬಂಡೆ ಬಾರೋ ಎಂದಾರೂ ಕರೆಯದೆ, ಅಧಿಕಾರಕ್ಕೆ ಮೊಂಡು ಹಿಡಿದು ಹೈಕಮಾಂಡ್ ಬಾಲ ಹಿಡಿದು ಇಂದ್ರಪ್ರಸ್ಥಕೆ(ದೆಹಲಿ) ಹೋದ ಪುಟ್ಟ ಬಂದ

ಬಂಡೆಯೆಂಬುದದು ಅಧಿಕಾರವುಂಡವರ ಪ್ರವರ ಹೇಳುತಾ ಹಳೆಯ ವಚನವ ನೆನೆನೆಯುತ ಸ್ವಾಮಿಪಾದಕೆ ನಮಿಸುತಾ ಬರುತಿರೆ... ಟಗರದು ಹೀಗಂದಿತು:

ಒಂದು ಭಿನ್ನಹ ಬಂಡೆ ಕೇಳು, ಕುದುರೆಗಳಿಹವು ನನ್ನ ಲಾಯದಿ, ಹಗಲುಗನಸು ಕಾಣದೆ ಕೊಟ್ಟ ಒಂಟೆಯ ಹತ್ತಿ ನಡೆ, ವರ್ಷವೈದದು ನಾ ಪೂರೈಪೆನು...

ಬಹುಮತವೇಕೋ, ಸಹಿ ಸಂಗ್ರಹವೇಕೋ ಗಾಳಿಗೆ ಗುದ್ದಿ ಮೈನೋಯಿಸಿಕೊಳ್ಳುವ ವ್ಯರ್ಥ ಕಸರತ್ತೇಕೋ, ಸುಮ್ಮನೆ ಹೇಳಿದಾಗೆ ಕೇಳಿ ಏನೇನು ಬೇಕೋ ಕೇಳಿಕೋ!

ಹೈಕಮಾಂಡೇ ನಮ್ ತಾಯಿ ತಂದೆ, ಕೊಟ್ಟ ವಚನಕ್ಕೆ ತಪ್ಪಿ ನಡೆದರೆ ಮೆಚ್ಚನಾ ಮತದಾರನು...

ಗ್ಯಾರಂಟಿ ಮೇಲೆ ಗ್ಯಾರಂಟಿ ಕೊಟ್ಟಿಹೆನು, ಮುಂದಿನ ಯುದ್ಧದಲ್ಲೂ ನನಗೇ ಗೆಲುವು ಎಂದಬ್ಬರಿಸಿತು ಟಗರದು

ಪಚನವಾಗದಷ್ಟಿದ್ದರೂ ವಚನ ಬಿಡೆನು, ಕಳ್ಳಾಟಕೆ ಸೊಪ್ಪು ಹಾಕೆನು, ತ್ರಿಮೂರ್ತಿಗಳೇ ನನ್ನ ಪೊರೆವರು...

ಬಂಡೆ ಕಟ್ಟುನಿಟ್ಟಿನ ದನಿಯ ಕೇಳಿ, ಇನ್ಯಾವ ಆಟ ಹೂಡ್ವುದೆಂದು ಯೋಚಿಸುತಲಿ ಟಗರು ಕುಳಿತಿರೆ ಲಾಯದ ಅಶ್ವಗಳೆಲ್ಲಾ ಬಂದು ನಿಂತವು ಅಲ್ಲಿಗೆ...

ಯಾವ ಖಾತೆ ಹಿಡಿಯಲಪ್ಪ, ನಿಗಮ, ಮಂಡಳಿಯೂ ದಕ್ಕದೆ ಕ್ಷೇತ್ರಕ್ಕೆ ಮರಳಿ ಜನಕೆ ಮುಖವ ಹೇಗೆ ತೋರಿಸಲಪ್ಪ?

ತಬ್ಬಲಿಯು ನೀವಲ್ಲ (ಹಿಂ)ಬಾಲಕರೇ, ಹೆಬ್ಬುಲಿ ನಾನಿರುವೆನಲ್ಲ, ಹೈಕಮಾಂಡ್ ಕಾಡಿ ಬೇಡಿ ಖಾತೆ ಕೊಡಿಸಿ ರಕ್ಷಿಪೆ ತಿಳಿಯಿರಿ.

ಬಂಡೆ ಬಂದರೂ ಅದೇ ಕೊಸರು, ಟಗರು ಇದ್ದರೆ ಹಳೇ ಎಸರು... ನಮ್ಮ ಗಂಟಿಗೆ ನಮ್ಮದೇ ಕೈ, ಗಾಳಿ ಬಂದೆಡೆ ತೂರ್ಕೊಳೋದೇ ಸೈ ಎಂದವು ಲಾಯದ ಕುದುರೆಗಳು.

ಸಂಗತ

ಜನಮನದ ರಾಮನ ಮಸುಕಾಗಿಸಬಹುದೆ?

ಜನರ ಮನಸ್ಸಿನಲ್ಲಿ ನೆಲೆಗೊಂಡ ವ್ಯಕ್ತಿತ್ವದ ಮಾದರಿಗಳನ್ನು ಗಾಸಿಗೊಳಿಸುವ ಪ್ರಯತ್ನಗಳು ಸರಿಯಲ್ಲ; ಅವು ಪೂರ್ಣದೃಷ್ಟಿಯ ಅಭಿಪ್ರಾಯಗಳೂ ಆಗಿರುವುದಿಲ್ಲ.

● ಆರ್. ಲಕ್ಷ್ಮೀನಾರಾಯಣ

ಸಹಸ್ರಾರು ವರ್ಷಗಳಿಂದ ರಾಮಾಯಣವನ್ನು ಆದಿಕಾವ್ಯ ಎಂದೂ ಮತ್ತು ಅದನ್ನು ರಚಿಸಿದ ಕವಿ ವಾಲ್ಮೀಕಿಯನ್ನು ಆದಿಕವಿ ಎಂದೂ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಪರಿಗಣಿಸುತ್ತಾ ಬರಲಾಗಿದೆ ಹಾಗೂ ಗೌರವಿಸಲಾಗುತ್ತಿದೆ. ಹಾಗೆಯೇ, ರಾಮಾಯಣ ಮತ್ತು ಮಹಾಭಾರತವನ್ನು ವಿಮರ್ಶಾತ್ಮಕವಾಗಿಯೂ ನೋಡಲಾಗುತ್ತಿದೆ.

ಒಂದು ಸಾಹಿತ್ಯ ಕೃತಿಯನ್ನು, ಅದರಲ್ಲಿ ಚಿತ್ರಿತವಾಗಿರುವ ಪಾತ್ರಗಳನ್ನು ವಿಮರ್ಶಿಸುವ, ಟೀಕಿಸುವ ಹಕ್ಕು ಪ್ರಪಂಚದಾದ್ಯಂತ ಎಲ್ಲ ಓದುಗರಿಗೂ ಇದೆ. ಆ ಕಾರಣದಿಂದಲೇ, ರಾಮಾಯಣ ಕುರಿತ ಅಧ್ಯಯನಗಳು, ವಿಮರ್ಶೆಗಳು, ವ್ಯಾಖ್ಯಾನಗಳು ಅದು ಹುಟ್ಟಿದಾಗಿನಿಂದ ಈ ದಿನದವರೆಗೆ ಅಸಂಖ್ಯಾತವಾಗಿ ರೂಪುಗೊಳ್ಳುತ್ತಲೇ ಇವೆ. ಈಗಲೂ ಟೀಕೆ–ಟಿಪ್ಪಣಿಗಳು ನಡೆಯುತ್ತಿವೆ.

ವಾಲ್ಮೀಕಿಯ ಕಥೆಯನ್ನೇ ಮುಖ್ಯವಾಗಿ ಆಧರಿಸಿದ್ದರೂ, ಮೂಲ ಕೃತಿಯಿಂದ ಬೇಕಾದಷ್ಟು ಬದಲಾವಣೆಗಳನ್ನು ತಮಗೆ ತೋಚಿದಂತೆ ಮಾಡಿಕೊಂಡು ಸಂಸ್ಕೃತವನ್ನೂ ಒಳಗೊಂಡಂತೆ ಎಲ್ಲ ಭಾರತೀಯ ಭಾಷೆಗಳಲ್ಲಿ ರಾಮಾಯಣ ಕಾವ್ಯಗಳು, ನಾಟಕಗಳು, ಕಥೆಗಳು ಲಿಖಿತ ಪಠ್ಯಗಳಿವೆ. ಬೌದ್ಧ, ಜೈನ, ಜನಪದ ರಾಮಾಯಣಗಳೂ ಬಂದಿವೆ. ಕನ್ನಡದಲ್ಲಿ ಮೊದಲಿಗೆ ರಾಮಾಯಣ ರಚಿಸಿದ ನಾಗಚಂದ್ರ, ತನ್ನ ಕಾವ್ಯ ನಾಯಕನನ್ನಾಗಿ ರಾಮನನ್ನು ಏಕೆ ಆಯ್ಕೆ ಮಾಡಿಕೊಂಡೆ ಎಂಬುದಕ್ಕೆ 'ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು, ಉದಾತ್ತ ರಾಘವಂ ನಾಯಕನಾಗೆ ವಿಶ್ರುತಮಪ್ಪುದು' ಎಂಬ ಕಾರಣ ನೀಡಿ, ರಾಮನನ್ನು ಆದರ್ಶ ಮಾಡಿಕೊಂಡು ಚಂಪೂಕಾವ್ಯ ರಚಿಸಿರುವುದು ಕನ್ನಡಿಗರಿಗೆಲ್ಲ ತಿಳಿದೇ ಇದೆ.



ವಾಲ್ಮೀಕಿ ರಾಮಾಯಣವನ್ನು ಒಂದು ಸಾಹಿತ್ಯ ಕೃತಿಯಾಗಿ, ಕಾವ್ಯವಾಗಿ ನೋಡಿದಾಗ ರಾಮನ ವ್ಯಕ್ತಿತ್ವದಲ್ಲಿ ಅರೆಕೊರೆಗಳನ್ನು ತೋರಿಸಬಹುದು. ಆದರೆ, ಒಟ್ಟಾರೆ ಕಾವ್ಯದಿಂದ ತೇಲಿನಿಲ್ಲುವ ಬಿಂಬ ಒಬ್ಬ ಆದರ್ಶ ವ್ಯಕ್ತಿಯದು ಎಂದೇ ರಾಮಾಯಣವನ್ನು ಒಂದು ಆದರ್ಶ ಕಾವ್ಯವೆಂದು ಸುಮ್ಮನೆ ಬಾಯಿಮಾತಿಗೆ ಹೇಳಿದ್ದಲ್ಲ. ಕುವೆಂಪು ಹೇಳುವಂತೆ ಪೂರ್ಣದೃಷ್ಟಿಯಿಂದ ಯಾವುದೇ ಒಂದು ಕೃತಿಯನ್ನು ಹಾಗೂ ಅಲ್ಲಿಯ ಪಾತ್ರಗಳನ್ನು, ಕೃತಿಯ ಸಂದರ್ಭದ ಹಿನ್ನೆಲೆಯಲ್ಲಿ ವಿಮರ್ಶಿಸಬೇಕಾಗುತ್ತದೆ. ಆ ಪೂರ್ಣದೃಷ್ಟಿಯಿಂದ ಹೊರತಾದ ಅಭಿಪ್ರಾಯಗಳು ಬರೀ ಬೀಸುಹೇಳಿಕೆಗಳಾಗಿಯೇ ಉಳಿಯುತ್ತವೆ. ಈ ಹಿನ್ನೆಲೆಯಲ್ಲಿಯೇ, ಸೀತೆಯ ಮೇಲೆ ಸಂಶಯ ವ್ಯಕ್ತಪಡಿಸಿ ಕಾಡಿಗೆ ಅಟ್ಟಿದ ಶ್ರೀರಾಮ ಹಾಗೂ ಶೂರ್ಪನಖಿಯ ಮೂಗು ಕತ್ತರಿಸಿದ ಲಕ್ಷ್ಮಣ ಮತ್ತು ರಾವಣ ಎಂದಿಗೂ ಆದರ್ಶನಾಗಲು ಸಾಧ್ಯವಿಲ್ಲ ಎಂದು ಹೇಳಿರುವ ಹಿರಿಯ ಲೇಖಕಿ ಬಿ.ಟಿ. ಲಲಿತಾ ನಾಯಕ್ ಅವರ ಮಾತುಗಳನ್ನು (ಪ್ರ.ವಾ., ನ. 24) ಗಮನಿಸಬೇಕಾಗಿದೆ.

ರಾಮನ ಯಾವುದೋ ಒಂದು ನಡೆಯನ್ನು ಗಮನದಲ್ಲಿ ಇಟ್ಟುಕೊಂಡು ವ್ಯಕ್ತಿತ್ವವನ್ನು ನಿರ್ಣಯಿಸುವುದು ಕಾವ್ಯಕ್ಕೆ ಮತ್ತು ರಾಮನ ಪಾತ್ರಕ್ಕೆ ನ್ಯಾಯ ಸಲ್ಲಿಸಿದಂತೆ ಆಗುವುದಿಲ್ಲ. ಅದೂ, ಸೀತೆಯನ್ನು ಕಾಡಿಗೆ ಕಳಿಸುವ ಆ ಪ್ರಸಂಗ ಬರುವ 'ಉತ್ತರಕಾಂಡ' ವಾಲ್ಮೀಕಿ ಕೃತವಲ್ಲವೆಂದು ಬಹಳಷ್ಟು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇಂಥ 'ಉತ್ತರಕಾಂಡ'ವನ್ನು ಅನುಲಕ್ಷಿಸಿ ರಾಮನನ್ನು ವಿಮರ್ಶಿಸುವುದು ಸರಿಯೆ?

ಉತ್ತರಕಾಂಡವನ್ನು ವಾಲ್ಮೀಕಿ ಕೃತವೆಂದು ಪರಿಗಣಿಸಿದಾಗಲೂ, ತನ್ನ ಹೆಂಡತಿಯ ಪಾತಿವ್ರತ್ಯದ ಬಗ್ಗೆ ಸಂಶಯವಿಲ್ಲದಿದ್ದರೂ, ಲೋಕಾಭಿಪ್ರಾಯವನ್ನು ಆಳುವ ಪ್ರಭುವಾದವನು ಕಡೆಗಣಿಸಬಾರದು ಎಂಬ ಮೌಲ್ಯಕ್ಕೆ ಬೆಲೆ ಕೊಡಬೇಕು ಎನ್ನುವುದಕ್ಕಾಗಿ ರಾಮನು ಹಾಗೆ ಮಾಡಬೇಕಾಯಿತೆಂದು ಸಮರ್ಥಿಸುವ ವ್ಯಾಖ್ಯಾನ, ವಿಮರ್ಶೆಗಳು ಕೂಡ ದೊಡ್ಡ ಸಂಖ್ಯೆಯಲ್ಲಿ ಬಂದಿವೆ. ಪ್ರಜಾಪ್ರಭುತ್ವದ ಬಹುದೊಡ್ಡ ಮಾದರಿಯಾಗಿ ನೋಡಬಹುದಾದ ನಿಲುವನ್ನು ಪ್ರಜಾಪ್ರಭುತ್ವವಾದಿಗಳೇ ಟೀಕಿಸಿದರೆ ಅದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಇನ್ನು ಈ ಪ್ರಸಂಗವನ್ನೇ ಆಧರಿಸಿ, ಸಂಸ್ಕೃತದ ಭವಭೂತಿ 'ಉತ್ತರರಾಮಚರಿತೆ' ಎಂಬ ಕರುಣಾರಸಪೂರ್ಣವಾದ ಅನನ್ಯ ನಾಟಕವನ್ನು ರಚಿಸಿದ್ದಾನೆ. ಆ ನಾಟಕದಲ್ಲಿ ಸೀತಾರಾಮರ ದಾಂಪತ್ಯ ಎಷ್ಟು ಆದರ್ಶಪೂರ್ಣವಾದುದು ಎಂಬುದನ್ನು ಕವಿ ಚಿತ್ರಿಸಿರುವುದು ಸಾಹಿತ್ಯದ ಓದುಗರಿಗೆ ತಿಳಿದಿದೆ.

ಬಹುಶಃ, ವಾಲ್ಮೀಕಿ ಕಾವ್ಯ ರಚಿಸುವುದಕ್ಕಿಂತ ಮುಂಚೆಯೇ ಜನಪದದಲ್ಲಿ ಪ್ರಚಲಿತವಿದ್ದ ರಾಮಾಯಣದ ಕಥೆ ಮತ್ತು ವಾಲ್ಮೀಕಿಯ ರಾಮಾಯಣ– ಇವುಗಳ ಪ್ರಭಾವದಿಂದ ಕಾಲಾಂತರದಲ್ಲಿ ರಾಮನನ್ನು ತಮ್ಮ ಆರಾಧ್ಯದೈವವೆಂದು ಪರಿಗಣಿಸಿ, ಅಥವಾ ರಾಮನ ವ್ಯಕ್ತಿತ್ವಕ್ಕೆ ದೈವತ್ವವನ್ನು ಆರೋಪಿಸಿ ಭಾರತದ ಜನಕೋಟಿ ಆರಾಧಿಸುತ್ತಾ ಬಂದಿದೆ. ಭಕ್ತರು ಯಾರನ್ನೇ ಆದರೂ ಆರಾಧ್ಯವೆಂದು ಪರಿಗಣಿಸಿ ಪೂಜಿಸತೊಡಗಿದಾಗ, ಮೂಲ ವ್ಯಕ್ತಿತ್ವಕ್ಕೆ ಇನ್ನಷ್ಟು ಗುಣಗಳನ್ನು ಸಹಜವಾಗಿಯೇ ಆರೋಪಿಸುತ್ತಾರೆ. ಹಾಗೆಯೇ ರಾಮನ ವ್ಯಕ್ತಿತ್ವಕ್ಕೂ ಅತ್ಯುನ್ನತವಾದ ಗುಣಗಳನ್ನು ಭಕ್ತ ಜಗತ್ತು ಆರೋಪಿಸುತ್ತಾ ಬಂದಿದೆ. ಹಾಗೆ ಆರಾಧಿಸುತ್ತಾ ಬಂದವರಿಗೆ ರಾಮನನ್ನು ವಾಲ್ಮೀಕಿ ಹೇಗೆ ಚಿತ್ರಿಸಿದ್ದಾನೆಂಬುದಾಗಲೀ, ಅಥವಾ ಬೇರೆ ಯಾರೇ ಎಷ್ಟೇ ಲೋಪದೋಷಗಳನ್ನು ರಾಮನಲ್ಲಿ ತೋರಿಸಿಕೊಟ್ಟರೂ ಮುಖ್ಯವೆಂದು ಭಾವಿಸುವುದಿಲ್ಲ. ಟೀಕೆಗಳು ಬಂದವೆಂದು ಇಷ್ಟದೈವದ ಆರಾಧನೆಯಿಂದ ವಿಮುಖವಾಗುವುದೂ ಇಲ್ಲ. ಹಾಗೆ ನಂಬಿದವರ ದೈವವನ್ನು ಟೀಕಿಸಿ ಅವರಿಗೆ ನೋವುಂಟುಮಾಡುವ ಹಕ್ಕು ಯಾರಿಗೂ ಇಲ್ಲ. ಹಾಗಾಗಿ, ಲಲಿತಾನಾಯಕ್ ಅವರ ಟೀಕೆ, ಕಾವ್ಯ ಚಿತ್ರಿಸಿರುವ ರಾಮನ ವ್ಯಕ್ತಿತ್ವಕ್ಕೆ ಸೀಮಿತವಾದುದು; ಜನರ ಮನಸ್ಸಿನಲ್ಲಿನ ರಾಮನಿಗೆ ಸಂಬಂಧಿಸಿದ್ದಲ್ಲ ಎಂದು ಭಾವಿಸಬಹುದು. ಹಾಗೆಯೇ ಆ ಅಭಿಪ್ರಾಯ ಪೂರ್ಣದೃಷ್ಟಿಯದೆಂದು ಹೇಳಲು ಸಾಧ್ಯವಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಿಜೆಐ ಸೂರ್ಯಕಾಂತ್: ಹಳ್ಳಿ ಹುಡುಗನ 'ಸುಪ್ರೀಂ' ಸಾಧನೆ

ಮೂಲಸೌಕರ್ಯಗಳಿಲ್ಲದ ಹಳ್ಳಿಯಲ್ಲಿ ಜನಿಸಿ, ಸರ್ಕಾರಿ ಶಾಲೆಯಲ್ಲಿ ನೆಲದ ಮೇಲೆ ಕೂತು ವಿದ್ಯಾಭ್ಯಾಸ ಮಾಡಿದ ಸೂರ್ಯಕಾಂತ್ ಅವರು ಇಂದು ಭಾರತದ ಮುಖ್ಯ ನ್ಯಾಯಮೂರ್ತಿ ಹುದ್ದೆಗೇರಿದ್ದಾರೆ. ಅಪ್ಪನ ಮಾತಿಗೆ ಓಗೊಟ್ಟು ಚಂಡೀಗಢಕ್ಕೆ ಬಂದಿದ್ದು ಅವರ ಬದುಕಿನಲ್ಲಿ ಪ್ರಮುಖ ತಿರುವಾಯಿತು. ಸುದೀರ್ಘ ಕಾಲ ಹೈಕೋರ್ಟ್ ನ್ಯಾಯಮೂರ್ತಿಯಾಗಿ ಅನುಭವ ಗಳಿಸಿದ ಅವರು, ನಂತರ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ, ಇದೀಗ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ

• ಬಿ.ವಿ.ಶ್ರೀನಾಥ್

ವ್ಯಕ್ತಿ ವಿಶೇಷ

ಪೆಟ್ವಾರ್, ಹಿಸ್ಸಾರ್–ಚಂಡೀಗಢ ಹೆದ್ದಾರಿಯ ಸನಿಹದಲ್ಲಿರುವ ಒಂದು ಪುಟ್ಟ ಗ್ರಾಮ; ರಸ್ತೆ, ನೀರು, ವಿದ್ಯುತ್ ಕೊರತೆ. ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಬೆಂಚುಗಳೂ ಇರಲಿಲ್ಲ. ಆ ಗ್ರಾಮದಲ್ಲಿ ಹುಟ್ಟಿದ, ಸೌಲಭ್ಯಗಳಿಲ್ಲದ ಶಾಲೆಯಲ್ಲಿ ಓದಿದ ವಿದ್ಯಾರ್ಥಿಯೊಬ್ಬರು ಇಂದು ದೇಶದ ಅತ್ಯುನ್ನತ ನ್ಯಾಯಾಲಯದ ಅತ್ಯುನ್ನತ ಪದವಿಗೆ ಏರಿದ್ದಾರೆ. ಅವರೇ ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್.

ಸುಪ್ರೀಂ ಕೋರ್ಟ್‌ನ 53ನೇ ಸಿಜೆಐ ಆಗಿರುವ ಸೂರ್ಯಕಾಂತ್ ಅವರು, ಹರಿಯಾಣದಿಂದ ಆ ಪದವಿಗೇರಿದ ಮೊದಲಿಗರು. ಅವರ ಕುಟುಂಬದಲ್ಲಿಯೂ ವಕೀಲ ವೃತ್ತಿ ಆಯ್ಕೆ ಮಾಡಿಕೊಂಡ ಮೊದಲಿಗರು. ಅವರ ತಂದೆ ಮದನ ಗೋಪಾಲ ಶಾಸ್ತ್ರಿ ಸರ್ಕಾರಿ ಶಾಲೆಯಲ್ಲಿ ಸಂಸ್ಕೃತ ಶಿಕ್ಷಕರು. ತಾಯಿ ಗೃಹಿಣಿ. ಆ ದಂಪತಿಯ ಐವರು ಮಕ್ಕಳಲ್ಲಿ ಸೂರ್ಯಕಾಂತ್ ಅವರೇ ಕಿರಿಯರು (ಜನನ: 1962 ಫೆ.10).

ಅಪ್ಪ ತೋರಿದ ಯಶಸ್ಸಿನ ಹಾದಿ

ಸೂರ್ಯಕಾಂತ್ ಅವರು ಮೊದಲು ವಕೀಲ ವೃತ್ತಿ ಆರಂಭಿಸಿದ್ದು ಹಿಸ್ಸಾರ್‌ನ ಜಿಲ್ಲಾ ನ್ಯಾಯಾಲಯದಲ್ಲಿ. ಅವರು ಅಪಾರ ಸಿದ್ಧತೆಯೊಂದಿಗೆ ನಿರರ್ಗಳವಾಗಿ ಇಂಗ್ಲಿಷ್‌ನಲ್ಲಿ ವಾದ ಮಂಡಿಸುತ್ತಿದ್ದರು. ಅದನ್ನು ಗಮನಿಸಿದ ಅವರ ತಂದೆಯು, 'ನೀನು ಇರಬೇಕಾದದ್ದು ಹೈಕೋರ್ಟ್‌ನಲ್ಲಿ' ಎಂದು ಮಗನಲ್ಲಿ ಮಹತ್ವಾಕಾಂಕ್ಷೆ ತುಂಬಿದರು. ಅಪ್ಪನ ಒತ್ತಾಯಕ್ಕೆ ಕಟ್ಟುಬಿದ್ದು ಒಂದೇ ವರ್ಷದಲ್ಲಿ ಪಂಜಾಬ್ ಹರಿಯಾಣ ಹೈಕೋರ್ಟ್‌ಗೆ ಬರುವ ಮೂಲಕ ಕಾರ್ಯಕ್ಷೇತ್ರ ಬದಲಿಸಿದರು. ಸೂರ್ಯಕಾಂತ್ ಅವರ ಪ್ರತಿಭೆಯ ವಿಕಾಸಕ್ಕೆ ಅಲ್ಲಿ ವಿಪುಲ ಅವಕಾಶಗಳು ಒದಗಿದವು. ಜತೆಯಲ್ಲೇ, ಹಲವು ಪದವಿಗಳೂ ಅವರನ್ನು ಅರಸಿಬಂದವು.

ತಂದೆ ಶಿಕ್ಷಕರಾಗಿದ್ದರೂ ಮಕ್ಕಳು ಬಿಡುವಿನ ವೇಳೆಯಲ್ಲಿ ಕುಟುಂಬದ 12 ಎಕರೆ ಜಮೀನಿನಲ್ಲಿ ಕೃಷಿ ಕೆಲಸಗಳನ್ನೂ ಮಾಡಬೇಕಿತ್ತು.


ಪೆಟ್ವಾರ್‌ನ ಸರ್ಕಾರಿ ಶಾಲೆಯಲ್ಲಿ ಪ್ರೌಢಶಾಲೆಯವರೆಗೂ ಓದಿದರು. ಬೇಸಿಗೆ ರಜೆಯಲ್ಲಿ ಕುಟುಂಬಸ್ಥರೊಂದಿಗೆ ಗೋಧಿ ಕೊಯ್ಲಿನಲ್ಲಿ ಪಾಲ್ಗೊಂಡಿದ್ದೇ ಅವರ ಬದುಕಿನಲ್ಲಿ ಮಹತ್ತರ ತಿರುವಿಗೆ ಕಾರಣವಾಯಿತು. ಏಪ್ರಿಲ್‌ನ ಸುಡುಬಿಸಿಲಿನಲ್ಲಿ ಹೊಲದಲ್ಲಿ ಮೈಮುರಿದು ಕೆಲಸ ಮಾಡುವಾಗ ಮನದಲ್ಲಿ ಒಂದು ಗಟ್ಟಿ ನಿರ್ಧಾರ ಕೈಗೊಂಡರು: ಚೆನ್ನಾಗಿ ಓದಬೇಕು, ಬದುಕು ಬದಲಿಸಿಕೊಳ್ಳಬೇಕು.

ಹಿಸ್ಸಾರ್‌ನ ಸರ್ಕಾರಿ ಕಾಲೇಜಿನಲ್ಲಿ ಪದವಿ ಪಡೆದ ಸೂರ್ಯಕಾಂತ್ ಅವರು, ರೋಹ್ತಕ್‌ನ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪೂರೈಸಿದರು (1984).

ಪಂಜಾಬ್–ಹರಿಯಾಣ ಹೈಕೋರ್ಟ್ ವಕೀಲರಾಗಿ ಹಲವು ಮಂಡಳಿ, ನಿಗಮ, ಬ್ಯಾಂಕ್‌ಗಳನ್ನು ಪ್ರತಿನಿಧಿಸಿದ್ದ ಅವರು, ಹೈಕೋರ್ಟ್ ಪರವಾಗಿಯೂ ವಕಾಲತ್ತು ವಹಿಸಿದ್ದರು. 2000 ಇಸವಿಯಲ್ಲಿ ಓಂಪ್ರಕಾಶ್ ಚೌಟಾಲಾ ಅವರ ಅವಧಿಯಲ್ಲಿ ಹರಿಯಾಣ ಸರ್ಕಾರದ ಅಡ್ವೊಕೇಟ್ ಜನರಲ್ ಆಗಿ ಆಯ್ಕೆಯಾದ ಅವರು, ಆ ಹುದ್ದೆಗೇರಿದ ಅತಿ ಕಿರಿಯರು ಎನ್ನಿಸಿಕೊಂಡರು. ಆಗ ಅವರ ವಯಸ್ಸು 38 ವರ್ಷ. 2004 ಅವರ ವೃತ್ತಿಜೀವನದಲ್ಲಿ ಮಹತ್ವದ ವರ್ಷ; ಪಂಜಾಬ್ ಹರಿಯಾಣ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಆಯ್ಕೆಯಾದರು. ಆ ಹೈಕೋರ್ಟ್‌ಗೆ ಆಯ್ಕೆಯಾದ ಕೆಲವೇ ಕೆಲವು ಕಿರಿಯ ನ್ಯಾಯಮೂರ್ತಿಗಳಲ್ಲಿ ಅವರೂ ಒಬ್ಬರಾಗಿದ್ದರು. 14 ವರ್ಷ ಅಲ್ಲಿ ಕೆಲಸ ಮಾಡಿದ ಬಳಿಕ 2018ರಲ್ಲಿ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾದರು.

ಹೈಕೋರ್ಟ್ ನ್ಯಾಯಮೂರ್ತಿಯಾಗಿ ದೀರ್ಘಾವಧಿ ಅನುಭವವಿದ್ದ ಸೂರ್ಯಕಾಂತ್ ಅವರು 2019ರಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದರು. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ (ಎನ್‌ಎಎಲ್‌ಎಸ್‌ಎ) ಕಾರ್ಯಕಾರಿ ಅಧ್ಯಕ್ಷ ಮತ್ತು ಸುಪ್ರೀಂ ಕೋರ್ಟ್ ಕಾನೂನು ಸೇವೆಗಳ ಸಮಿತಿ (ಎಸ್‌ಸಿಎಲ್‌ಎಸ್‌ಸಿ) ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಸೂರ್ಯಕಾಂತ್ ಅವರು, 2025ರ ನ.24ರಂದು ಭಾರತದ ಸಿಜೆಐ ಆಗಿ ಪ್ರಮಾಣ ಸ್ವೀಕರಿಸಿದರು.

2027ರ ಫೆ.9ರವರೆಗೆ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆ ನಿರ್ವಹಿಸಲಿದ್ದಾರೆ. ಬಾಕಿ ಇರುವ ಪ್ರಕರಣಗಳ ಬೃಹತ್ ಹೊರೆಯನ್ನು ಇಳಿಸುವುದೇ ತಮ್ಮ ಮುಂದಿನ ದೊಡ್ಡ ಸವಾಲು ಎಂದಿದ್ದಾರೆ.



ಪ್ರಮುಖ ತೀರ್ಪುಗಳು

ಸುಪ್ರೀಂ ಕೋರ್ಟ್‌ನ ಚಾರಿತ್ರಿಕವೂ ಮಹತ್ವಪೂರ್ಣವೂ ಆದ ಅನೇಕ ತೀರ್ಪುಗಳನ್ನು ನೀಡಿದ ಪೀಠಗಳಲ್ಲಿ ನ್ಯಾ. ಸೂರ್ಯಕಾಂತ್ ಅವರೂ ಒಬ್ಬರಾಗಿದ್ದಾರೆ. ಅವರ ಕೆಲವು ತೀರ್ಪುಗಳು ಇಂತಿವೆ:

- ಕೃತಿ ಮತ್ತು ಓರಿಯಂಟಲ್ ಇನ್ಶೂರೆನ್ಸ್ ಕಂ.ಲಿ ಪ್ರಕರಣ; ಕುಟುಂಬದ ಆದಾಯದಲ್ಲಿ ಗೃಹಿಣಿಯ ಪಾತ್ರವೂ ಮುಖ್ಯ ಎಂದು ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್ ಪೀಠವು, ವಾಹನ ಅಪಘಾತದ ಪರಿಹಾರ ಮೊತ್ತವನ್ನು ₹22 ಲಕ್ಷದಿಂದ ₹33.2 ಲಕ್ಷಕ್ಕೆ ಏರಿಸಿತ್ತು.
- ರಣವೀರ್ ಅಲಹಾಬಾದಿಯಾ ಅವರನ್ನು ಒಳಗೊಂಡಿದ್ದ 'ಇಂಡಿಯಾ'ಸ್ ಗಾಟ್ ಲೇಟೆಂಟ್' ವಿವಾದದ ಸಂಬಂಧ ತೀರ್ಪು ನೀಡಿದ್ದ ನ್ಯಾ.ಸೂರ್ಯಕಾಂತ್ ಅವರು, 'ವಾಕ್ ಸ್ವಾತಂತ್ರ್ಯವು ನಿರಂಕುಶವೇನಲ್ಲ. ಅದನ್ನು ಅತ್ಯಂತ ಜವಾಬ್ದಾರಿಯಿಂದ, ನಾಗರಿಕ ಕರ್ತವ್ಯ ಅರಿತು ಬಳಸಬೇಕು' ಎಂದು ಹೇಳಿದ್ದರು.
- ಸುಪ್ರೀಂ ಕೋರ್ಟ್ ಸೇರಿದಂತೆ ನ್ಯಾಯಾಲಯಗಳ ವಕೀಲರ ಸಂಘಗಳಲ್ಲಿ ಮೂರನೇ ಒಂದರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು ಎಂದು ಆದೇಶಿಸಿದ್ದಾರೆ. ನ್ಯಾಯಾಲಯಗಳಲ್ಲಿ ಲಿಂಗ ತಾರತಮ್ಯ ಹೋಗಲಾಡಿಸುವ ದೃಷ್ಟಿಯಿಂದ ಇದು ಮುಖ್ಯವಾದ ಕ್ರಮವಾಗಿದೆ
- ಬಿಹಾರದಲ್ಲಿ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯ (ಎಸ್‌ಐಆರ್) ವೇಳೆ ಕರಡು ಪಟ್ಟಿಯಿಂದ ಹೊರಗಿಡಲಾದ 65 ಲಕ್ಷ ಮತದಾರರ ವಿವರಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದ ಸುಪ್ರೀಂ ಕೋರ್ಟ್ ಪೀಠದ ಮುಖ್ಯಸ್ಥ
- ಸಂವಿಧಾನದ 370ನೇ ವಿಧಿ ಅನ್ವಯ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ಕ್ರಮ ಎತ್ತಿಹಿಡಿದಿದ್ದ ಸುಪ್ರೀಂ ಕೋರ್ಟ್ ಪೀಠದಲ್ಲಿ ಭಾಗಿ

ಅಂಧರ ವಿಶ್ವಕಪ್: ಬೆಂಕಿಯಲ್ಲಿ ಅರಳಿದ ಪ್ರತಿಭೆಗಳು

ಕಿತ್ತು ತಿನ್ನುವ ಬಡತನ. ಹೆಜ್ಜೆ ಹೆಜ್ಜೆಗೂ ಅವಹೇಳನ. ಮನೋಬಲ ಕುಸಿಯುವಂಥ ವಾತಾವರಣ. ಆದರೆ, ಅವರು ಪುಟಿದೆದ್ದರು. ತಮ್ಮ ಬದುಕಿನ ಸ್ಥಿತಿಯನ್ನು ಮೀರಲು ಅವರಿಗೆ ಸಿಕ್ಕ ಸಾಧನ ಕ್ರಿಕೆಟ್. ದೃಷ್ಟಿ ದೋಷವಿದ್ದರೂ ಅದನ್ನು ಮೀರಿದ ಛಲವಿತ್ತು ಅವರಲ್ಲಿ. ಒಡಲ ಸಂಕಟ, ಒಳಗಣ್ಣಿನ ನೋಟಕ್ಕೆ ಆಟ ಮಣಿಯಿತು. ಅಂಧ ಮಹಿಳೆಯರ ಚೊಚ್ಚಲ ಟಿ20 ವಿಶ್ವಕಪ್ ಅವರ ಕೈಸೇರಿತು. ಕಡುಕಷ್ಟದ ಬದುಕನ್ನು ಈಸಿ, ಟಿ20 ವಿಶ್ವಕಪ್ ಜಯಿಸಿ ಸಾಧನೆಗೆ ದೈಹಿಕ ಊನದ ಹಂಗಿಲ್ಲ ಎನ್ನುವುದನ್ನು ನಿರೂಪಿಸಿದ ಭಾರತ ತಂಡದಲ್ಲಿದ್ದ ಕರ್ನಾಟಕದ ಪ್ರತಿಭಾವಂತ ಆಟಗಾರ್ತಿಯರ ಬದುಕು, ವೇದನೆ, ಸಾಧನೆ ಇಲ್ಲಿದೆ

ಬಾಳಿಗೆ ಬೆಳಕಾದ ಚೆಂಡು

• ಗಿರೀಶ ದೊಡ್ಡಮನಿ/ಪ್ರದೀಶ್ ಎಚ್. ಮರೋಡಿ

ಪ್ರಜಾವಾಣಿ ಸಂದರ್ಶನ



- ಹೆಸರು: ದೀಪಿಕಾ ಟಿ.ಸಿ
- ವರ್ಷ: 26
- ಅಂಧತ್ವದ ವರ್ಗ: ಬಿ3
- ವಿಭಾಗ: ಬ್ಯಾಟರ್
- ಊರು: ಕರಿತಿಮ್ಮನಹಳ್ಳಿ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ

'ಕಿಣಿ ಕಿಣಿ ಸದ್ದು ಮಾಡುವ ಈ ಚೆಂಡು ನಮ್ಮ ಜೀವನವನ್ನೇ ಬದಲಿಸಿದೆ. ಅಂಧತ್ವ, ಬಡತನ ಮತ್ತು ಸಮಾಜದ ಅವಹೇಳನಗಳನ್ನು ಮೆಟ್ಟಿ ನಿಂತು ನನ್ನ ಕುಟುಂಬವನ್ನು ಸಲಹುವ ಶಕ್ತಿ ಕೊಟ್ಟಿದ್ದು ಇದೇ ಚೆಂಡಿನ ಸದ್ದು...'

ಈಚೆಗಷ್ಟೇ ಅಂಧ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿ, ಕರ್ನಾಟಕದ ದೀಪಿಕಾ ಟಿ.ಸಿ ಅವರ ಹೆಮ್ಮೆಯ ಮಾತುಗಳಿವು. ಸಂದರ್ಶನದುದ್ದಕ್ಕೂ ಗದ್ಗದಿತರಾಗಿಯೇ ತಮ್ಮ ಯಶೋಗಾಥೆಯನ್ನು 'ಪ್ರಜಾವಾಣಿ'ಯೊಂದಿಗೆ ಅವರು ಹಂಚಿಕೊಂಡಿದ್ದಾರೆ.

• ಚೊಚ್ಚಲ ಟಿ20 ವಿಶ್ವಕಪ್ ಜಯ ಸಾಧ್ಯವಾಗಿದ್ದು ಹೇಗೆ?

ನಾನೂ ಸೇರಿದಂತೆ ತಂಡದಲ್ಲಿರುವ ಎಲ್ಲ 16 ಆಟಗಾರ್ತಿಯರು ಬೇರೆ ಬೇರೆ ರಾಜ್ಯಗಳಿಗೆ ಸೇರಿದವರು. ಮನೆಯಲ್ಲಿ ಕಡುಬಡತನ. ಜೊತೆಗೆ ನೆರೆಹೊರೆಯವರ ತಾತ್ಸಾರದ ನುಡಿಗಳನ್ನು ಸಹಿಸಿಕೊಳ್ಳುವ ಯಾತನೆ ಅನುಭವಿಸಿದವರು. ಆದರೆ ನಮ್ಮ ತಂಡದ ಹುಡುಗಿಯರಿಗೆ ಆ ಎಲ್ಲ ಅವಮಾನಗಳಿಗೆ ಸಾಧನೆಯ ಮೂಲಕ ಉತ್ತರ ಕೊಡಬೇಕೆನ್ನುವ ಛಲ ಇತ್ತು. ಅದು ಗೆಲುವಿಗೆ ಕಾರಣವಾಯಿತು. ನಮ್ಮನ್ನು ಪೋಷಿಸಿ, ತರಬೇತಿ ನೀಡಿದ ಸಮರ್ಥನಂ ಟ್ರಸ್ಟ್, ಭಾರತ ಅಂಧರ ಕ್ರಿಕೆಟ್ ಸಂಸ್ಥೆ, ತರಬೇತುದಾರರಾದ ಚಂದೂ, ಶಿಖಾ ಶೆಟ್ಟಿ ಅವರೆಲ್ಲರೂ ಕಾರಣ.

• ಕ್ರಿಕೆಟ್ ಆಡಲು ಶುರು ಮಾಡಿದ್ದು ಹೇಗೆ? ಎದುರಿಸಿದ ಸವಾಲುಗಳೇನು?

ಅಪ್ಪ ಚಿಕ್ಕತಿಮ್ಮಪ್ಪ ಮತ್ತು ಅಮ್ಮ ಚಿತ್ತಮ್ಮ ಇಬ್ಬರೂ ಕೂಲಿ ಕೆಲಸ ಮಾಡುತ್ತಿದ್ದರು. ನನಗೆ ಇಬ್ಬರು ಸಹೋದರರಿದ್ದಾರೆ. ನಾನು ಐದು ತಿಂಗಳ ಮಗುವಾಗಿದ್ದಾಗ ಉಗುರಿನಿಂದ ಪರಚಿಕೊಂಡ ಕಾರಣ ಬಲಗಣ್ಣಿನ ದೃಷ್ಟಿ ಹೋಯಿತು. ವೈದ್ಯರಿಗೆ ತೋರಿಸಿದರೆ ಮಗುವಿಗೆ ಶಸ್ತ್ರಚಿಕಿತ್ಸೆ ಮಾಡುವುದು ಸೂಕ್ತವಾಗುವುದಿಲ್ಲ, 10 ವರ್ಷ ತುಂಬಿದ ಮೇಲೆ ಬನ್ನಿ ಎಂದು ಹೇಳಿದ್ದರಂತೆ. 12 ವರ್ಷ ವಯಸ್ಸಿನಲ್ಲಿ ಅಪ್ಪ ನನ್ನನ್ನು ವೈದ್ಯರ ಬಳಿ ಕರೆದೊಯ್ದರು. 'ಶಸ್ತ್ರಚಿಕಿತ್ಸೆ ಮಾಡಬಹುದು. ಆದರೆ ದೃಷ್ಟಿ ಮರಳುವುದು ಖಚಿತವಿಲ್ಲ' ಎಂದರು. ಆದರೂ ಅಪ್ಪ ಸಾಲ ಮಾಡಿ ಶಸ್ತ್ರಚಿಕಿತ್ಸೆ ಮಾಡಿಸಲು ಪ್ರಯತ್ನಿಸುತ್ತಿದ್ದರು. ಇದೆಲ್ಲ ನೋಡಿ ನಾನೇ 'ಇದಕ್ಕಾಗಿ ಸಾಲ ಮಾಡುವ ಅವಶ್ಯಕತೆ ಇಲ್ಲ. ದೃಷ್ಟಿ ಬರುವ ಖಚಿತತೆಯೂ ಇಲ್ಲ. ಇರುವ ಒಂದು ಕಣ್ಣಲ್ಲಿಯೇ ನಾನು ಜೀವನ ಮಾಡುತ್ತೇನೆ' ಎಂದು ಅಪ್ಪನಿಗೆ ಹೇಳಿದೆ. ದೊಡ್ಡಬಾಣಗೆರೆ, ಕುಣಿಗಲ್‌ನ ಅಂಧ ಮಕ್ಕಳ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಮೇಲೆ ಮೈಸೂರಿನ ರಂಗರಾವ್ ಪ್ರೌಢಶಾಲೆ ಸೇರಿದೆ. ಅಲ್ಲಿದ್ದ ಕೆಲವು ಅಂಧ ಮಕ್ಕಳು ಕ್ರಿಕೆಟ್ ಆಡುತ್ತಿದ್ದಾಗ ಚೆಂಡಿನ ಕಿಣಿ... ಕಿಣಿ... ಸದ್ದಿಗೆ ಮಾರುಹೋಗಿ ಆಡಲಾರಂಭಿಸಿದೆ. ದೈಹಿಕ ಶಿಕ್ಷಕ ಮೋಹನಕುಮಾರ್ ಮತ್ತು ಹರಿ ಎಂಬುವವರು ಪ್ರೋತ್ಸಾಹಿಸಿದರು.

• ಭಾರತ ಅಂಧ ಮಹಿಳೆಯರ ತಂಡಕ್ಕೆ ಆಯ್ಕೆಯಾಗಿದ್ದು ಹೇಗೆ?

ಹತ್ತನೇ ತರಗತಿಯಲ್ಲಿದ್ದಾಗ ಅಂತರ ಜಿಲ್ಲಾ ಪಂದ್ಯಗಳಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿತು. ಮೈಸೂರು ತಂಡದ ಪರವಾಗಿ ರಾಮನಗರ ಎದುರಿನ ಪಂದ್ಯದಲ್ಲಿ ಉತ್ತಮವಾಗಿ ಆಡಿದೆ. ಬರಗೂರಿನಲ್ಲಿ ಜ್ಞಾನಜ್ಯೋತಿ ಶಾಲೆಯಲ್ಲಿ ಪಿಯುಸಿ ಓದಿದೆ. 2019ರಲ್ಲಿ ಕರ್ನಾಟಕ ತಂಡದ ಆಯ್ಕೆ ಇತ್ತು. ಶಿಖಾ ಮೇಡಂ ಕರೆ ಮಾಡಿ ಬೆಂಗಳೂರಿಗೆ ಬರಲು ಹೇಳಿದರು. ಆದರೆ ಅಪ್ಪ, ಅಮ್ಮ ಹಿಂಜರಿದರು. ಒಬ್ಬಳನ್ನೇ ಕಳಿಸುವುದು ಹೇಗೆ ಎಂದು ಆತಂಕ ವ್ಯಕ್ತಪಡಿಸಿದರು. ದುಂಬಾಲು ಬಿದ್ದು ಅವರನ್ನು ಒಪ್ಪಿಸಿದೆ. ಆದರೆ ಕೈಯಲ್ಲಿ ಬೆಂಗಳೂರಿಗೆ ಹೋಗಲು 200 ರೂಪಾಯಿ ಕೂಡ ಇರಲಿಲ್ಲ. ಒಳ್ಳೆಯ ಬಟ್ಟೆ ಕೂಡ ಇರಲಿಲ್ಲ. ಕುಣಿಗಲ್ ಶಾಲೆಯಲ್ಲಿ ನನಗೆ ಅಣ್ಣನ ಸಮಾನನಾಗಿದ್ದ ಸೀನಿಯರ್ ಮೋಹನ್ ನೆರವು ನೀಡಿ ಬೆಂಗಳೂರಿಗೆ ಕಳಿಸಿದರು. ಆ ವರ್ಷ ಕರ್ನಾಟಕ ತಂಡದಲ್ಲಿ ಆಡಿದೆ. ರನ್ನರ್ಸ್ ಅಪ್ ಆದೆವು. ಕೆಲವು ತಿಂಗಳ ಹಿಂದೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದಿದ್ದ ಐಬಿಎಸ್‌ಸಿ ಟೂರ್ನಿಯಲ್ಲಿ ಭಾರತ ತಂಡವು ಚಿನ್ನ ಗೆದ್ದಿತ್ತು. ಅದರಲ್ಲಿ ಆಡಿದ್ದರಿಂದ ಮುಂಬೈನ ಆದಾಯ ತೆರಿಗೆ ಇಲಾಖೆಯಲ್ಲಿ ನೌಕರಿ ಲಭಿಸಿತು. ಕುಟುಂಬಕ್ಕೆ ಆಸರೆಯಾದೆ.

• ನಾಯಕಿಯಾಗಿ ನಿಮ್ಮ ಅನುಭವ ಹೇಗಿತ್ತು?

ನಾನು ಯಾವತ್ತೂ ನಾಯಕಿಯಾಗಬೇಕು ಎಂದುಕೊಂಡಿರಲಿಲ್ಲ. ಆದರೆ ಸಮರ್ಥನಂ ಟ್ರಸ್ಟ್ ಮುಖ್ಯಸ್ಥರಾದ ಮಹಾಂತೇಶ್ ಅವರು ನನಗೆ ನಾಯಕಿ ಸ್ಥಾನ ನೀಡಿದರು. ನಮ್ಮ ತಂಡದಲ್ಲಿ ಮೂರು ಬಗೆಯ ಅಂಧತ್ವ (ಬಿ1, ಬಿ2 ಮತ್ತು ಬಿ3) ಇರುವ ಆಟಗಾರ್ತಿಯರು ಇರುತ್ತಾರೆ. ಅವರೆಲ್ಲರ ಸಾಮರ್ಥ್ಯ ಮತ್ತು ಪ್ರತಿಭೆ ವಿಭಿನ್ನ. ಬೇರೆ ಬೇರೆ ರಾಜ್ಯ, ಭಾಷೆಗಳ ಹಿನ್ನೆಲೆಯಿಂದ ಬಂದವರು ಇದ್ದರು. ಅವರೆಲ್ಲರನ್ನೂ ಒಗ್ಗೂಡಿಸಿಕೊಂಡು ಆಡುವುದು ವಿಶಿಷ್ಟ ಅನುಭವ. ಮ್ಯಾನೇಜರ್ ಶಿಖಾ ಮೇಡಂ, ಕೋಚ್ ಚಂದೂ ಅವರ ಮಾರ್ಗದರ್ಶನದಿಂದ ನನ್ನ ಕೆಲಸ ಹಗುರವಾಯಿತು. ಆಸ್ಟ್ರೇಲಿಯಾ ಎದುರು 91 ರನ್ ಗಳಿಸಿದ್ದು ನನಗೆ ಅವಿಸ್ಮರಣೀಯ.

ಮೂರು ಬಗೆಯ ಅಂಧತ್ವ	
ಬಿ1	ಪೂರ್ಣ ಅಂಧತ್ವ ಇರುವ ಆಟಗಾರ್ತಿಯರು
ಬಿ2	ಸುಮಾರು 2 ಮೀಟರ್ ದೂರ ನೋಡಬಲ್ಲರು
ಬಿ3	6 ರಿಂದ 8 ಮೀಟರ್‌ಗಳವರೆಗೆ ದೃಷ್ಟಿ ಹಾಯಿಸಬಲ್ಲರು

ಸವಾಲು ಗೆದ್ದ ಮಲೆನಾಡಿನ ಛಲಗಾತಿ



- ಹೆಸರು : ಕಾವ್ಯಾ ವಿ.
- ವರ್ಷ : 26
- ಅಂಧತ್ವದ ವರ್ಗ: ಬಿ1
- ವಿಭಾಗ: ಆಲ್‌ರೌಂಡರ್
- ಊರು : ಬರುವೆ, ಹೊಸನಗರ ತಾಲ್ಲೂಕು, ಶಿವಮೊಗ್ಗ

ಹುಟ್ಟಿನಿಂದಲೇ ದೃಷ್ಟಿ ಕಳೆದುಕೊಂಡಿರುವ ಕಾವ್ಯಾ ವಿ. ಬಡ ಕುಟುಂಬದಲ್ಲಿ ಹುಟ್ಟಿ ಬೆಳೆದ ಛಲಗಾತಿ. ವೆಂಕಟೇಶ್ ಆಚಾರ್ ಮತ್ತು ಜಯಮ್ಮ ದಂಪತಿಯ ಐವರು ಹೆಣ್ಣುಮಕ್ಕಳಲ್ಲಿ ಈಕೆ ನಾಲ್ಕನೆಯವರು. ಸಹೋದರಿಯರಿಗೆ ದೃಷ್ಟಿ ಸಮಸ್ಯೆ ಇರಲಿಲ್ಲ. ಅಂಧತ್ವ ಈಕೆಯನ್ನು ಮಾತ್ರ ಕಾಡಿತ್ತು. ಈ ನ್ಯೂನತೆಯನ್ನೇ ಸಾಧನೆಯ ಮೆಟ್ಟಿಲಾಗಿ ಬಳಸಿಕೊಂಡು, ಈಗ ಮಲೆನಾಡಿನಲ್ಲಿ ಮನೆಮಾತಾಗಿದ್ದಾರೆ.

ಕಾವ್ಯಾ ಅವರು ಶಾಲಾ ದಿನಗಳಲ್ಲಿ ಓಟದ ಸ್ಪರ್ಧೆ, ಲಾಂಗ್‌ಜಂಪ್‌ನಲ್ಲಿ ತೊಡಗಿಸಿಕೊಂಡಿದ್ದರು. 2014ರ ರಾಜ್ಯಮಟ್ಟದ ಪ್ಯಾರಾ ಅಥ್ಲೆಟಿಕ್ಸ್ ಮತ್ತು 2016ರಲ್ಲಿ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್‌ನಲ್ಲೂ ಮಿಂಚು ಹರಿಸಿದ್ದ ಈ ತರುಣಿಯನ್ನು ಅಂಧರ ಕ್ರಿಕೆಟ್ ಆಕರ್ಷಿಸಿತು. ಈ ಹಾದಿಯಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸಿರುವ ಅವರು, ಬಿ1 ವರ್ಗದ ಆಟಗಾರ್ತಿಯಾಗಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಅಂಧರ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿದ್ದಾರೆ. ಭಾರತ ತಂಡದ ವಿಶ್ವಕಪ್ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದ್ದಾರೆ.

ಶಿವಮೊಗ್ಗದ ಶಾರದಾ ದೇವಿ ಅಂಧರ ವಿಕಾಸ ಶಾಲೆಯಲ್ಲಿ 10ನೇ ತರಗತಿ ಓದಿದ್ದ ಕಾವ್ಯಾ, ನಂತರ ಸಮರ್ಥನಂ ಟ್ರಸ್ಟ್ ನೆರವಿನೊಂದಿಗೆ ಉನ್ನತ ಶಿಕ್ಷಣ ಮುಂದುವರಿಸಿದರು. ಅವರ ಕ್ರೀಡಾ ಪ್ರತಿಭೆಗೂ ಅಲ್ಲಿ ಪ್ರೋತ್ಸಾಹ ದೊರೆಯಿತು. 2023ರಿಂದ ಅಂಧರ ಕ್ರಿಕೆಟ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಬಿ.ಎ ಪದವಿ ಮುಗಿಸಿರುವ ಅವರು ಪ್ರಸ್ತುತ 'ವಿಮೆನ್ ಸ್ಟಡೀಸ್'ನಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದಾರೆ.

'ನಮ್ಮ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ತತ್ವಾರ ಇತ್ತು. ಕೂಲಿ ಕೆಲಸ ಮಾಡುತ್ತಿದ್ದ ತಂದೆಯ ಆದಾಯದಲ್ಲೇ ನಮ್ಮ ಶಿಕ್ಷಣ, ಜೀವನ ಸಾಗಬೇಕಿತ್ತು. ಇಂತಹ ಕಷ್ಟದಲ್ಲೂ ನನ್ನ ನಾಲ್ವರು ಸಹೋದರಿಯರಿಗೆ ಅವರು ಮದುವೆ ಮಾಡಿಸಿದ್ದಾರೆ. ನನ್ನನ್ನು ಈ ಮಟ್ಟಕ್ಕೆ ಬೆಳೆಸಿದ್ದಾರೆ' ಎಂದು ಕಾವ್ಯಾ ಭಾವುಕರಾದರು.

ಬದಲಾಯಿತು ಬದುಕಿನ ದಿಕ್ಕು



- ಹೆಸರು: ಕಾವ್ಯಾ ಎನ್.ಆರ್.
- ವರ್ಷ: 25
- ಅಂಧತ್ವದ ವರ್ಗ: ಬಿ3
- ವಿಭಾಗ: ಆಲ್‌ರೌಂಡರ್
- ಊರು: ನಾಯಕನಪಾಳ್ಯ, ತುಮಕೂರು ತಾಲ್ಲೂಕು

ಬಾಲ್ಯದಲ್ಲಿ ಸಂಭವಿಸಿದ ಆಕಸ್ಮಿಕ ಘಟನೆಯಿಂದಾಗಿ ಒಂದು ಕಣ್ಣಿನ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡವರು ಕಾವ್ಯಾ ಎನ್.ಆರ್. ಆರನೇ ವಯಸ್ಸಿನಲ್ಲಿ ಸ್ನೇಹಿತರ ಜೊತೆ ಕ್ರಿಕೆಟ್ ಆಡುವಾಗ ಎಡಗಣ್ಣಿಗೆ ತೂರಿದ್ದ ಕಲ್ಲು ಆಕೆಯನ್ನು ಅಂಧಕಾರದಲ್ಲಿ ಮುಳುಗಿಸಿತ್ತು. ಆದರೆ, ಅವರ ಬಾಳಿಗೆ ಮತ್ತೆ ಬೆಳಕು ನೀಡಿದ್ದು 'ಅಂಧರ ಕ್ರಿಕೆಟ್'.

ಕೃಷಿಕರಾದ ರಮೇಶ್ ಮತ್ತು ನರಸಮ್ಮ ದಂಪತಿಯ ಪುತ್ರಿ ಕಾವ್ಯಾ ಬಾಲ್ಯದ ಕಹಿನೆನಪನ್ನು ಮರೆತು 2017ರಲ್ಲಿ ಸಮರ್ಥನಂ ಟ್ರಸ್ಟ್‌ನ ಪ್ರೋತ್ಸಾಹದೊಂದಿಗೆ ಕ್ರಿಕೆಟ್ ಅನ್ನು ಒಪ್ಪಿಕೊಂಡರು; ಅಪ್ಪಿಕೊಂಡರು. ಆರಂಭದಲ್ಲಿ ಚೆಂಡನ್ನು ನೋಡುವಲ್ಲಿ ಸಮಸ್ಯೆ ಅನುಭವಿಸಿದ ಅವರು, ನಿರಂತರ ಅಭ್ಯಾಸದ ಮೂಲಕ ಆಲ್‌ರೌಂಡರ್ ಆಗುವತ್ತ ಗಮನಹರಿಸಿದರು.

2019ರಲ್ಲಿ ರಾಷ್ಟ್ರೀಯ ಅಂಧರ ಕ್ರಿಕೆಟ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದ ಕರ್ನಾಟಕ ತಂಡದ ಭಾಗವಾಗಿದ್ದರು. 2023ರ ಅಂಧ ಮಕ್ಕಳ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿಯ ಮೂರನೇ ಆವೃತ್ತಿಯಲ್ಲೂ ರಾಜ್ಯವನ್ನು ಪ್ರತಿನಿಧಿಸಿದ್ದರು. ನಂತರ ರಾಷ್ಟ್ರೀಯ ತಂಡದ ಕದ ತಟ್ಟಿದ ಕಾವ್ಯಾ, 2023ರಲ್ಲಿ ಮುಂಬೈನಲ್ಲಿ ನಡೆದ ಭಾರತ-ನೇಪಾಳ ಅಂಧ ಮಹಿಳಾ ದ್ವಿಪಕ್ಷೀಯ ಕ್ರಿಕೆಟ್ ಸರಣಿಯಲ್ಲಿ ಆಡಿದ್ದರು. ಅದೇ ವರ್ಷ ಇಂಗ್ಲೆಂಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್‌ನ ವಿಶ್ವ ಕ್ರೀಡಾಕೂಟದ ಮಹಿಳಾ ಕ್ರಿಕೆಟ್‌ನಲ್ಲಿ ಚಿನ್ನ ಗೆದ್ದ ಭಾರತ ತಂಡದಲ್ಲೂ ಅವರಿದ್ದರು.

ಕ್ರಿಕೆಟ್ ಮಾತ್ರವಲ್ಲದೆ, ಪ್ಯಾರಾ-ಅಥ್ಲೆಟಿಕ್ಸ್, ವಾಲ್ ಕ್ಲೈಂಬಿಂಗ್, ರಾಕ್ ಕ್ಲೈಂಬಿಂಗ್ ಇವರ ಆಸಕ್ತಿಯ ಕ್ಷೇತ್ರಗಳು. ರಾಜ್ಯ ಪ್ಯಾರಾ ಅಥ್ಲೆಟಿಕ್ ಕೂಟದಲ್ಲಿ 200 ಮೀ. ಓಟದಲ್ಲಿ ಚಿನ್ನ ಗೆದ್ದಿರುವ ಅವರು, ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲೂ ಮಿಂಚು ಹರಿಸಿದ್ದಾರೆ. ಮಾತ್ರವಲ್ಲದೆ, ಮೈಸೂರಿನಿಂದ ಬೆಂಗಳೂರಿಗೆ (145 ಕಿಮೀ) ಅಲ್ಟ್ರಾ ಮ್ಯಾರಥಾನ್‌ನಲ್ಲಿ ಭಾಗವಹಿಸಿ, ಲಿಮ್ಕಾ ಬುಕ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದ್ದಾರೆ.

'ಅಂಧರ ಕ್ರಿಕೆಟ್ ನನ್ನ ಬದುಕನ್ನು ಬದಲಿಸಿತು. ದೇಶಕ್ಕಾಗಿ ವಿಶ್ವಕಪ್ ಗೆದ್ದಿರುವುದು ರೋಚಕ ಅನುಭವ. ಆ ಸಂತೋಷವನ್ನು ವಿವರಿಸಲು ನನ್ನಲ್ಲಿ ಪದಗಳಿಲ್ಲ' ಎಂದು ಸಮರ್ಥನಂ ಟ್ರಸ್ಟ್‌ನ ಡಿಜಿಟಲ್ ಗ್ರಂಥಾಲಯದಲ್ಲಿ ಉದ್ಯೋಗಿಯೂ ಆಗಿರುವ ಕಾವ್ಯಾ ಪ್ರತಿಕ್ರಿಯಿಸಿದ್ದಾರೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

29 ನವೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ನವಮಿ ಗಂ. 23-16 **ನಕ್ಷತ್ರ:** ಪೂರ್ವಾಭಾದ್ರ ಗಂ. 26-23 **ಯೋಗ:** ಹರ್ಷಣ ಗಂ. 9-27 **ಕರಣ:** ಬಾಲವ ಗಂ. 11-51 ವೃಶ್ಚಿಕ ಮಾಸದ 14 ನೇ ದಿನ. **ಮಳೆ ನಕ್ಷತ್ರ :** ಅನುರಾಧ 3 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 , **ಸೂರ್ಯೋದಯ :** 06-40 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 7 ಜುಮಾದುಸ್ಸಾನಿ , **ಅದೃಷ್ಟ ಸಂಖ್ಯೆ :** 10, 4

ಮೇಷ: ಸಮಾರಂಭ ಮುಗಿದ ಬಳಿಕ ಉಳಿದ ಕೆಲಸಗಳು ಮಾಡಿದಷ್ಟೂ ಇದ್ದಂತೆ ಭಾಸವಾಗುತ್ತದೆ. ಭೂಸಂಬಂಧಿತ ವ್ಯವಹಾರಗಳಿಂದ ಲಾಭವಿದ್ದರೂ ದಾಖಲೆಗಳಿಂದ ಮೋಸ ಹೋಗದಿರಿ. ಹಲ್ಲುನೋವು ಕಂಡುಬರುವುದು.

ವೃಷಭ: ಮುಕ್ತವಾಗಿ ಮಾತನಾಡಲಾಗದ ಸ್ವಭಾವವು ಸಭೆಯಲ್ಲಿ ನಿಮ್ಮನ್ನೇ ಉದ್ದೇಶಿಸಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದ ಸಂದರ್ಭವನ್ನು ತರುತ್ತದೆ. ಎಲ್ಲಾ ಕಾರ್ಯಗಳೂ ಅಂದುಕೊಂಡಂತಾಗದು.

ಮಿಥುನ: ಸೂಕ್ತ ರೂಪುರೇಷೆಯನ್ನು ಹಾಕಿಕೊಳ್ಳದೆ ಶುರು ಮಾಡಿದ ಕೆಲಸಗಳಲ್ಲಿ ಹಲವು ವಿಘ್ನಗಳಿವೆ. ಸಣ್ಣ ಮಕ್ಕಳೊಂದಿಗಿನ ಒಡನಾಟವು ಮನಸ್ಸನ್ನು ಮುದಗೊಳಿಸುತ್ತದೆ.

ಕರ್ಕಾಟಕ: ಮೇಲಧಿಕಾರಿಗಳು, ಹಿರಿಯರಿಂದ ಬಯಸಿದ ಉಪಕಾರವನ್ನು ಪಡೆಯಬಹುದು. ಹೊಸ ಕೆಲಸಗಳನ್ನು ಶುರುಮಾಡುವ ಮೊದಲೇ ಸಾಧ್ಯತೆ ಬಾಧ್ಯತೆಗಳ ಬಗ್ಗೆ ಯೋಚಿಸಿ. ಅಧಿಕ ಸುತ್ತಾಟದಿಂದ ಆಯಾಸ.

ಸಿಂಹ: ನಿಂತು ಹೋಗಿರುವ ಕೃಷಿಯಲ್ಲಿಯೇ ಹೆಚ್ಚು ಆದಾಯ ಎಂಬುದನ್ನು ಕಂಡುಕೊಳ್ಳುವಿರಿ. ಸಾಮ್ಯತೆಗಳನ್ನೇ ಹುಡುಕಿ ಗೆಳೆತನ ಮಾಡಿದರೂ ಗೆಳೆತನದಲ್ಲಿ ಭಿನ್ನಾಭಿಪ್ರಾಯಗಳೇ ಹೆಚ್ಚಾಗಿ ಕಾಣುವುದು.

ಕನ್ಯಾ: ವೃತ್ತಿ ವಿಷಯದಲ್ಲಿ ಏಳುಬೀಳುಗಳು ಸಹಜ ಎಂದು ನೀವು ಕಂಡುಕೊಂಡದ್ದನ್ನು ಕಿರಿಯರಿಗೂ ತಿಳಿಸುವ ಕೆಲಸ ಮಾಡುವಿರಿ. ನವವಿವಾಹಿತೆಗೆ ಮುಖ್ಯ ವ್ಯಕ್ತಿಗಳ ಮರೆವು ಬಹಳವಾಗಿ ಕಾಡಿಸುತ್ತದೆ.

ತುಲಾ: ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ಮಾರಾಟದಿಂದ ಹೇರಳ ಲಾಭ. ಪ್ರಾರಂಭಿಸಿದ ಕೆಲಸ ನಾಳೆಗೆ ಎನ್ನದೆ ವೃತ್ತಿಯಲ್ಲಿ ಪಾದರಸದಂತೆ ಇರಲು ಪ್ರಯತ್ನಿಸಿ. ಸ್ವಕಾರ್ಯ ಹಾಗೂ ಸ್ವಪ್ರತಿಭೆಯಿಂದ ಪ್ರಭಾವಿಗಳಾಗುವಿರಿ.

ವೃಶ್ಚಿಕ: ಅಪ್ರಿಯವಾದ ಸತ್ಯವನ್ನು ಸ್ವೀಕರಿಸಲು ಅಸಾಧ್ಯವಾಗುವಂಥ ಹಿರಿಯ ನಾಗರಿಕರ ಬಳಿ ಹೇಳದಿರುವುದು ಒಳ್ಳೆಯದೆಂದು ಯೋಚಿಸುವಿರಿ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ನಷ್ಟವಾಗುವ ಸಂಭವವಿದೆ.

ಧನು: ಸುಲಭವಾಗಿ ಕೆಲವೊಂದು ವಿಷಯಗಳನ್ನು ಎಲ್ಲರ ಬಳಿ ಹೇಳುವುದರಿಂದ ಕುಟುಂಬದವರಿಗೆ ತೊಂದರೆಯಾಗುತ್ತದೆ. ಸಣ್ಣ ವಿದ್ಯುತ್ ಉಪಕರಣಗಳ ಮಾರಾಟವು ಲಾಭದಾಯಕವಾಗಿರುತ್ತದೆ.

ಮಕರ: ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಎಚ್ಚರಿಕೆಯ ಮಾತುಗಳು ಹಿರಿಯರಿಂದ ಕೇಳಬೇಕಾಗಬಹುದು. ಅದೇ ರೀತಿಯಾಗಿ ನಡೆದುಕೊಳ್ಳಿ. ಪರಿಶ್ರಮಕ್ಕೆ ಫಲ ಪ್ರಾಪ್ತಿ.

ಕುಂಭ: ಧಾರ್ಮಿಕ ಕೆಲಸಗಳಿಗಾಗಿ ಖರ್ಚುಗಳಿದ್ದರೂ ದೈವಬಲದಿಂದ ಎಲ್ಲಾ ವ್ಯವಹಾರಗಳಲ್ಲಿ ಉತ್ತಮ ಧನಾದಾಯವನ್ನು ಹೊಂದುವಿರಿ. ಹಣದ ವಿಚಾರವಾಗಿ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವಿರಿ.

ಮೀನ: ಈವರೆಗೆ ತುಂಬ ಮೃದುವಾಗಿ ಬದುಕನ್ನು ಸಾಗಿಸಿದವರಿಗೆ ಇನ್ನು ನೀವು ಕಳೆಯಬೇಕಾದ ಬದುಕು ಸ್ವಲ್ಪ ಕಷ್ಟಕರವೆಂದು ತೋರಬಹುದು. ಧರ್ಮಾಚರಣೆಯಲ್ಲಿ ಕುಂದುಕೊರತೆಗಳನ್ನು ಮಾಡುವುದು ಶ್ರೇಯಸ್ಕರವಲ್ಲ.

ಪದಬಂಧ 6238

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕರದಲ್ಲಿಟ್ಟುಕೊಂಡಿರುವ ಸಲಕರಣೆ (4)
3. ವಂಚಕ ಇಲ್ಲಿದ್ದಾನೆ (4)
5. ಮುಂದುಗಡೆಯೇ ಪ್ರತ್ಯಕ್ಷ! (3)
7. ಗುರಾಣಿ ಹಿಡಿದಿರುವ ಅರಸಿ! (2)
8. ತಡಸಲು ಸೇರುವಾಗಿನ ನಿಧಾನ! (2)
10. ಗಂಡ ಅಥವಾ ಹೆಂಡತಿಯ ಸಹೋದರಿ (3)
11. ಮೂಗಿನಿಂದ ಸುರಿಯುವ ಶ್ಲೇಷ್ಮ (3)
13. ದಾಖಲೆಗಳಲ್ಲಿ ಗಮನಿಸಬೇಕೆಂದು ಸೇರಿಸುವ ವಿಶೇಷ ಅಂಶ (2)
15. ಬೀಜ ಬಿತ್ತಲು ಮಾಡಿರುವ ಮಡಿ (2)
16. ಕಾಠಿಣ್ಯವನ್ನು ಹೀಗೆನ್ನಿ (3)
18. ಉಗ್ರವಾಗಿ ಚಿಕಿತ್ಸೆ ಮಾಡುವವನು (4)
19. ಹೆಣ್ಣುದುಂಬಿ ಇಲ್ಲಿದೆ (4)

ಮೇಲಿಂದ ಕೆಳಕ್ಕೆ

1. ಈತ ಸೋಲಿಸಲ್ಪಟ್ಟವನು (4)
2. ರಭಸದಲ್ಲಿ ಹರಿದ ದ್ರವ (2)
3. ಮುಕ್ತಿಗೊಂದು ಪರ್ಯಾಯ ಪದ (2)
4. ಮಣಿ ಧರಿಸಿದ ಚಲುವೆ (3)
6. ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
7. ಮುಚ್ಚುಮರೆಯಿಲ್ಲದ ಬಹಿರಂಗ ವ್ಯವಹಾರ (4)
9. ಕಾಯಿಗಾಗಿ ನಡೆದ ದರೋಡೆ! (4)
12. ಬಡವನ ಮನೆ ಹತ್ತಿರ ಕಾಣಿಸಿದ ಕೆಸರು (3)
14. ಬೇರೊಂದು ದೇಶಕ್ಕೆ ಕಳಿಸುವ ರಾಜಪ್ರತಿನಿಧಿ (4)
15. ಈತ ತಿಳುವಳಿಕೆ ಇಲ್ಲದವನು (3)
16. ಪದ್ಯವಲ್ಲದ ಛಂದೋಬದ್ಧವಾದ ವಾಕ್ಯ (2)
17. ಪುಷ್ಪ ಇಲ್ಲಿ ಕಾಣುತ್ತಿದೆ (2)

1			2	■	3			4
	■	■	5	6		■	■	
	■	■	■		■	■	7	
8	9	■	10			■		■
■		■	■	■	■	■		■
■		■	11	12		■	13	14
15		■	■		■	■	■	
	■	■	16		17	■	■	
18				■	19			

6237ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭರತಖಂಡ 4.ಬ್ಬಿಅ 6.ಮಹಾರಾಜ 9.ದವಸ 11.ಅನನುಭವಿ 12.ಪ್ರವಾಸ 14.ಗಿರಿದುರ್ಗ 16.ಷ್ಮೆನಿ 18.ಜವಾಬುದಾರಿ

ಮೇಲಿಂದ ಕೆಳಕ್ಕೆ: 1.ಅರಮನೆ 2.ಭಸರಾ 3.ಡಬ್ಬಿ 5.ಅವಸರ 7.ಜನಾನುರಾಗಿ 8.ಪದವಿ 10.ಸ್ವಪ್ರತಿಷ್ಠೆ 11.ಅಸಲು 13.ವರ್ಗಮೂಲ 15.ರಿಪೇರಿ 17.ನಿಜ


ಸುಡೊಕು 6622

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4			3		8			2
		1		6		3	8	
9					2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3

6621 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,215
ಇಂದಿನ ಅಂತ್ಯ:	26,202
ದಿನದ ಕನಿಷ್ಠ:	26,172
	▼ 12

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181.50
ಆರ್‌ಎಸ್‌ಎಸ್-5	₹176.50
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹602-789
ದ್ವಿತಳಿ (ಬಿ.ವಿ)	₹535-933

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹28750
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1275 (1270)
ಸೂರ್ಯಕಾಂತಿ (ರಿಫೈನ್ಡ್)	₹1475 (1465)
ಪಾಮೋಲಿನ್	₹1245 (1245)

ಮುಂಬೈ ಧಾರಣೆ (ಶೇಂಗಾ)

28-11-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಪಾಮ್ ವಾರದ ಡೆಲಿವರಿ	1243 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1410 (1400)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,26,200 (1,25,600)
ಬೆಳ್ಳಿ ಕೆ.ಜಿಗೆ	1,64,400 (1,62,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಿತ್ತೀಯ ಕೊರತೆ ₹8.25 ಲಕ್ಷ ಕೋಟಿ

ಕೇಂದ್ರದಿಂದ ರಾಜ್ಯಗಳಿಗೆ ₹8.34 ಲಕ್ಷ ಕೋಟಿ ತೆರಿಗೆ ಪಾಲು ವರ್ಗಾವಣೆ: ಸಿಜಿಎ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅಂತ್ಯದವರೆಗೆ ಕೇಂದ್ರ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 52.6ರಷ್ಟಾಗಿದೆ.

ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ಇದು ₹8.25 ಲಕ್ಷ ಕೋಟಿಯಾಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರ (ಸಿಜಿಎ) ವರದಿ ಶುಕ್ರವಾರ ತಿಳಿಸಿದೆ. 2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ವಿತ್ತೀಯ ಕೊರತೆಯು ಶೇ 46.5 ರಷ್ಟಿತ್ತು.

2025–26ರಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4ಕ್ಕೆ (ಹಣಕಾಸಿನ ಮೌಲ್ಯದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ) ತಗ್ಗಿಸಲು ಸರ್ಕಾರ ಬಜೆಟ್‌ನಲ್ಲಿ ಗುರಿ ನಿಗದಿಪಡಿಸಲಾಗಿದೆ.

ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಸರ್ಕಾರವು ₹18 ಲಕ್ಷ ಕೋಟಿ (ಶೇ 51.5) ವರಮಾನ ಸ್ವೀಕರಿಸಿದೆ. ಕೇಂದ್ರ ಸರ್ಕಾರ ಸ್ವೀಕರಿಸಿದ ಈ ಮೊತ್ತದ ಪೈಕಿ ₹12.74 ಲಕ್ಷ ಕೋಟಿ ತೆರಿಗೆ ವರಮಾನದಿಂದ ಸಂಗ್ರಹಿಸಿದೆ. ₹4.89 ಲಕ್ಷ ಕೋಟಿ ತೆರಿಗೆಯೇತರ ವರಮಾನ ಮತ್ತು ಇತರೆ ಮೂಲಗಳಿಂದ ₹37,095 ಕೋಟಿ ಸಂಗ್ರಹಿಸಿದೆ.

ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಗಳಿಗೆ ₹8.34 ಲಕ್ಷ ಕೋಟಿಯನ್ನು ತೆರಿಗೆ ಪಾಲಾಗಿ ವರ್ಗಾಯಿಸಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ₹1.11 ಲಕ್ಷ ಕೋಟಿಯಷ್ಟು ಅಧಿಕವಾಗಿದೆ ಎಂದು ತಿಳಿಸಿದೆ.

ಇದೇ ಅವಧಿಯಲ್ಲಿ ಸರ್ಕಾರದ ಒಟ್ಟು ವೆಚ್ಚವು ₹26.25 ಲಕ್ಷ ಕೋಟಿಯಾಗಿದೆ. ಈ ಪೈಕಿ ಬಡ್ಡಿಗೆ ₹6.73 ಲಕ್ಷ ಕೋಟಿ ಪಾವತಿಸಲಾಗಿದ್ದು, ₹2.46 ಲಕ್ಷ ಕೋಟಿ ಸಬ್ಸಿಡಿಗಳಿಗೆ ನೀಡಲಾಗಿದೆ ಎಂದು ತಿಳಿಸಿದೆ.

'ರಾಜ್ಯಗಳ ಬಂಡವಾಳ ವೆಚ್ಚ ಹೆಚ್ಚಳ ನಿರೀಕ್ಷೆ'

ಕೋಲ್ಕತ್ತ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಗಳ ಬಂಡವಾಳ ವೆಚ್ಚವು ಶೇ 4ರಿಂದ ಶೇ 6ಕ್ಕೆ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದು ಕ್ರಿಸಿಲ್ ರೇಟಿಂಗ್ಸ್ ಹೇಳಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬಂಡವಾಳ ವೆಚ್ಚವು ಶೇ 7ರಷ್ಟಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿಯ ಬಂಡವಾಳ ವೆಚ್ಚ ಕಡಿಮೆ ಎಂದು ಹೇಳಿದೆ.

ವಸತಿ, ನಗರಾಭಿವೃದ್ಧಿ ಮತ್ತು ನೀರಾವರಿ ಸೇರಿದಂತೆ ನೀರು ಸರಬರಾಜು ಮತ್ತು ನೈರ್ಮಲ್ಯವು ಕೂಡ ಬಂಡವಾಳ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿವೆ. ರಾಜ್ಯಗಳ ಬಂಡವಾಳ ವೆಚ್ಚದ ಶೇ 94ರಷ್ಟು ಪಾಲನ್ನು ಅಗ್ರ 18 ರಾಜ್ಯಗಳು ಹೊಂದಿವೆ.

ಜಿಎಸ್‌ಟಿ ದರ ಪರಿಷ್ಕರಣೆಯ ಬಳಿಕ ವರಮಾನ ಸಂಗ್ರಹವು ಮಂದಗೊಂಡಿರುವುದರಿಂದ ರಾಜ್ಯಗಳ ವರಮಾನ ಕೊರತೆ ಹೆಚ್ಚುತ್ತಿದೆ. ಕೇಂದ್ರದಿಂದ ಅನುದಾನ ಹಂಚಿಕೆಯು ನಿಧಾನವಾಗಿದೆ. ಮತ್ತೊಂದೆಡೆ, ವಿವಿಧ ಯೋಜನೆಗಳಿಗೆ ಮೀಸಲಿಟ್ಟ ಮೊತ್ತ ಹಾಗೂ ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಹೆಚ್ಚಿದ ಅನುದಾನದ ಹಂಚಿಕೆಯಿಂದಾಗಿ ವೆಚ್ಚವು ಶೇ 7ರಿಂದ ಶೇ 9ಕ್ಕೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

'ಜಾಗತಿಕ ಚಿನ್ನದ ಬೆಲೆ ನಿರ್ಧಾರ ಭಾರತದ ಗುರಿ'

ನವದೆಹಲಿ (ಪಿಟಿಐ): ದೇಶದಲ್ಲಿ ಚಿನ್ನದ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ, ಜಾಗತಿಕ ಚಿನ್ನದ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ನಿರ್ಧರಿಸುವ ಸ್ಥಾನ ಹೊಂದುವ ಗುರಿಯನ್ನು ಭಾರತ ಹೊಂದಿದೆ ಎಂದು ಉದ್ಯಮದ ತಜ್ಞರು ಹೇಳಿದ್ದಾರೆ.

'ಪ್ರಸ್ತುತ ದೇಶದಲ್ಲಿ ಚಿನ್ನದ ಉತ್ಪಾದನೆ ಹೆಚ್ಚಿನ ಪ್ರಮಾಣದಲ್ಲಿಲ್ಲ. ಹೀಗಾಗಿ ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ನಿರ್ಧರಿಸಿದ ಬೆಲೆಗೆ ಚಿನ್ನ ಖರೀದಿ ಮಾಡುತ್ತಿದೆ. ಚಿನ್ನದ ಉತ್ಪಾದನೆ ಹೆಚ್ಚಳವಾದರೆ ಭಾರತವು ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ನಿರ್ಧರಿಸುವ ಮಟ್ಟವನ್ನು ತಲುಪಲಿದೆ' ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.

ಹರಳು ಮತ್ತು ಚಿನ್ನಾಭರಣ ಸಮಾವೇಶದಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ಗುರಿ ಸಾಧನೆಗೆ ಗಣಿಗಾರಿಕೆ ಪ್ರಮುಖವಾದ ಅಂಶವಾಗಿದೆ. ಮುಂದಿನ ದಶಕದಲ್ಲಿ ಭಾರತದ ಗಣಿಗಾರಿಕೆಯಿಂದ ಉತ್ಪಾದನೆಯಾದ ಚಿನ್ನದಿಂದ ಅಂದಾಜು ಶೇ 20ರಷ್ಟು ದೇಶದ ಚಿನ್ನದ ಬೇಡಿಕೆಯನ್ನು ಪೂರೈಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.



ಮುಂದಿನ ಎರಡರಿಂದ ಮೂರು ವರ್ಷದಲ್ಲಿ ಭಾರತವು, ಚಿನ್ನಾಭರಣಗಳ ಜಾಗತಿಕ ಹಬ್ ಆಗಿ ಹೊರಹೊಮ್ಮುವ ವಿಶ್ವಾಸವಿದೆ ಎಂದು ಹೇಳಿದ್ದಾರೆ.

ಡಿಜಿಟಲ್ ಬ್ಯಾಂಕಿಂಗ್ ಆರ್‌ಬಿಐ ನಿರ್ದೇಶನ

ಮುಂಬೈ (ಪಿಟಿಐ): ವಾಣಿಜ್ಯ ಬ್ಯಾಂಕುಗಳು ಮತ್ತು ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗಳು ಒದಗಿಸುವ ಡಿಜಿಟಲ್ ಬ್ಯಾಂಕಿಂಗ್ ಸೇವೆಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್ ಶುಕ್ರವಾರ ಏಳು ಹೊಸ ನಿರ್ದೇಶನಗಳನ್ನು ಹೊರಡಿಸಿದೆ.

ಹೊಸ ನಿರ್ದೇಶನಗಳು ಮುಖ್ಯವಾಗಿ ನೀತಿಗಳು ಮತ್ತು ಕಾರ್ಯ-ವಿಧಾನಗಳು, ವಿವಿಧ ಸೇವೆಗಳನ್ನು ಒದಗಿಸಲು ಬೇಕಾದ ಅರ್ಹತಾ ಮಾನದಂಡಗಳು ಹಾಗೂ ಡಿಜಿಟಲ್ ಬ್ಯಾಂಕಿಂಗ್‌ನ ತಾಂತ್ರಿಕ ಸಮಸ್ಯೆಗಳ ಕುರಿತ ಮಾರ್ಗಸೂಚಿಗಳಿಗೆ ಸಂಬಂಧಿಸಿದ್ದಾಗಿವೆ. ಈ ನಿರ್ದೇಶನಗಳು 2026ರ ಜನವರಿ 1ರಿಂದ ಅನ್ವಯವಾಗಲಿವೆ.

ಡಿಜಿಟಲ್ ಬ್ಯಾಂಕಿಂಗ್ ಸೇವೆಗಳು ಬ್ಯಾಂಕುಗಳ ವೆಬ್‌ಸೈಟ್ (ಇಂಟರ್ನೆಟ್ ಬ್ಯಾಂಕಿಂಗ್), ಮೊಬೈಲ್ ಫೋನ್ (ಮೊಬೈಲ್ ಬ್ಯಾಂಕಿಂಗ್) ಅಥವಾ ಗ್ರಾಹಕರ ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ಹಣಕಾಸು ಮತ್ತು ಇತರ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸುವುದನ್ನು ಒಳಗೊಂಡಿವೆ.

ಡಿಸೆಂಬರ್ 3ರಿಂದ ಮೀಶೊ ಐಪಿಒ



ನವದೆಹಲಿ (ಪಿಟಿಐ): ಇ-ಕಾಮರ್ಸ್ ವೇದಿಕೆ ಮೀಶೊ, ಸಾರ್ವಜನಿಕರಿಗೆ ಷೇರು ಮಾರಾಟ ಮಾಡುವ (ಐಪಿಒ) ಮೂಲಕ ₹5,421 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ.

ಪ್ರತಿ ಷೇರಿನ ಬೆಲೆಯನ್ನು ₹105ರಿಂದ ₹111ಕ್ಕೆ ನಿಗದಿಪಡಿಸಿದೆ. ಡಿಸೆಂಬರ್ 3ರಿಂದ 5ರವರೆಗೆ ಷೇರುಗಳಿಗೆ ಬಿಡ್ ಸಲ್ಲಿಕೆಗೆ ಅವಕಾಶ ಇರಲಿದೆ ಎಂದು ಕಂಪನಿ ಶುಕ್ರವಾರ ತಿಳಿಸಿದೆ. ಆರಂಭಿಕ ಹೂಡಿಕೆದಾರರು (ಆ್ಯಂಕರ್ ಇನ್‌ವೆಸ್ಟರ್ಸ್) ಡಿಸೆಂಬರ್ 2ರಂದು ಐಪಿಒಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದೆ. ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ 10.55 ಕೋಟಿ ಷೇರುಗಳನ್ನು ಮಾರಾಟ ಮಾಡಲಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಸಿದ್ದಾಪುರ	
ಚಾಲಿ	42279-48369	ಹೊಸತು	26000-41000	ಬಿಳಿಗೋಟು	27019-36809
ಚಿಪ್ಪು	23669-39279	ಬೆಟ್ಟೆ	57099-68416	ಚಾಲಿ	41509-48399
ಕೋಕ	13299-35001	ಗೊರಬಲು	19000-42730	ಕೋಕ	20669-33699
ಹಳೆಚಾಲಿ	45942-47500	ಹೊಸತು	45089-58701	ಕೆಂಪುಗೋಟು	26000-33600
ಹೊಸಚಾಲಿ	34010-36689	ರಾಶಿ	42869-59100	ರಾಶಿ	53409-58899
ಪುತ್ತೂರು		ಸರಕು	60009-92040	ತಟ್ಟಿಬೆಟ್ಟೆ	33000-48699
ಕೋಕ	20000-35000				

ಜಿಡಿಪಿ ಶೇ 7ರಷ್ಟು ನಿರೀಕ್ಷೆ: ಮೂಡೀಸ್

ನವದೆಹಲಿ (ಪಿಟಿಐ): 'ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಮತ್ತು 2026ರಲ್ಲಿ ಶೇ 6.4ರಷ್ಟು ಕಾಣುವ ನಿರೀಕ್ಷೆ ಇದೆ' ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಮೂಡೀಸ್ ಶುಕ್ರವಾರ ಹೇಳಿದೆ.

ಭಾರತವು, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಮತ್ತು ಏಷ್ಯಾ–ಪೆಸಿಫಿಕ್ ಪ್ರದೇಶದಾದ್ಯಂತ ಬೆಳವಣಿಗೆಯನ್ನು ಮುನ್ನಡೆಸಲಿದೆ ಎಂದು ಹೇಳಿದೆ.

ಜಾಗತಿಕ ಅನಿಶ್ಚಿತತೆಯ ನಡುವೆಯೂ ದೇಶೀಯ ಬೇಡಿಕೆ ಹೆಚ್ಚಳದಿಂದ ಆರ್ಥಿಕ ಚಟುವಟಿಕೆ ಉತ್ತಮವಾಗಿದೆ. 2024ರಲ್ಲಿ ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಜಿಡಿಪಿ ಬೆಳವಣಿಗೆ ಶೇ 3.3ರಷ್ಟು ದಾಖಲಾಗಿತ್ತು. ಇದು 2025ರಲ್ಲಿ ಶೇ 3.6 ಮತ್ತು 2026ರಲ್ಲಿ ಶೇ 3.4ರಷ್ಟಾಗುವ ನಿರೀಕ್ಷೆ ಇದೆ ಎಂದು ಅಂದಾಜಿಸಿದೆ.

> **ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ದೇಶದ ಆರ್ಥಿಕತೆ ₹357 ಲಕ್ಷ ಕೋಟಿ (4 ಟ್ರಿಲಿಯನ್ ಡಾಲರ್) ದಾಟುವ ನಿರೀಕ್ಷೆ ಇದೆ**
> **ವಿ. ಅನಂತ ನಾಗೇಶ್ವರನ್,** ಮುಖ್ಯ ಆರ್ಥಿಕ ಸಲಹೆಗಾರ

ಸೀಹಾಕ್ ಹೆಲಿಕಾಪ್ಟರ್: ಒಪ್ಪಂದಕ್ಕೆ ಸಹಿ

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಗೆ 24 ಸೀಹಾಕ್ ಹೆಲಿಕಾಪ್ಟರ್‌ಗಳನ್ನು ಐದು ವರ್ಷಗಳಲ್ಲಿ ಪೂರೈಸಲು ಈ ಹಿಂದೆ ಮಾಡಿಕೊಂಡಿದ್ದ ಒಪ್ಪಂದದ ಮೊತ್ತವನ್ನು ₹7,995 ಕೋಟಿಗೆ ನಿಗದಿಪಡಿಸಿ, ಭಾರತ ಹಾಗೂ ಅಮೆರಿಕ ಸಹಿ ಮಾಡಿವೆ.

ಆಗಸ್ಟ್ ಅಂತ್ಯದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತೀಯ ಸರಕುಗಳ ಮೇಲೆ ಶೇ 50ರಷ್ಟು ಸುಂಕ ವಿಧಿಸಿದ ನಂತರ ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಸ್ವಲ್ಪ ಒಡಕು ಮೂಡಿರುವುದರ ಮಧ್ಯೆಯೇ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಎನ್‌ಸಿಎಲ್‌ಎಟಿ ಆದೇಶ ಪ್ರಶ್ನಿಸಿದ್ದ ಮೇಲ್ಮನವಿ

ಬೈಜು ರವೀಂದ್ರನ್ ಅರ್ಜಿ ವಜಾ



ನವದೆಹಲಿ (ಪಿಟಿಐ): ಬೈಜುಸ್ ದಿವಾಳಿತನ ಪ್ರಕ್ರಿಯೆ ಹಿಂಪಡೆಯಲು ಬಿಸಿಸಿಐ ಸಾಲಗಾರರ ಸಮಿತಿಯ ಅನುಮತಿ ಪಡೆಯಬೇಕು ಎಂದು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯ-ಮಂಡಳಿ (ಎನ್‌ಸಿಎಲ್‌ಎಟಿ) ನೀಡಿದ್ದ ಆದೇಶವನ್ನು ಪ್ರಶ್ನಿಸಿ ಬೈಜು ರವೀಂದ್ರನ್ ಅವರು ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಅರ್ಜಿಯ ವಿಚಾರಣೆಗೆ ನಿರಾಕರಿಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಕೆ.ವಿ ವಿಶ್ವನಾಥನ್ ಅವರ ಪೀಠವು, ಮುಂದಿನ ಪ್ರಕ್ರಿಯೆಯನ್ನು ನಡೆಸುವಂತೆ ರವೀಂದ್ರನ್ ಪರ ವಕೀಲರಿಗೆ ಸೂಚಿಸಿತು.

ಏಪ್ರಿಲ್ 17ರಂದು ಎನ್‌ಸಿಎಲ್‌ಎಟಿನ ನೀಡಿದ್ದ ಆದೇಶದ ವಿರುದ್ಧ ಬೈಜುಸ್ ಸಹಸಂಸ್ಥಾಪಕ ರಿಜು ರವೀಂದ್ರನ್ ಮತ್ತು ಬಿಸಿಸಿಐ ಕೂಡ ಮೇಲ್ಮನವಿ ಸಲ್ಲಿಸಿದ್ದರು. ಇದನ್ನು ಸುಪ್ರೀಂ ಕೋರ್ಟ್ ಜುಲೈನಲ್ಲಿ ವಜಾಗೊಳಿಸಿತ್ತು.

ಬಿಸಿಸಿಐ ಪ್ರಾಯೋಜಕತ್ವಕ್ಕೆ ಸಂಬಂಧಿಸಿ ಹಣ ಬಾಕಿ ಉಳಿಸಿಕೊಂಡಿರುವ ಕಾರಣಕ್ಕೆ ಬೈಜುಸ್ ಮಾತೃ ಸಂಸ್ಥೆ ಥಿಂಕ್ ಆ್ಯಂಡ್ ಲರ್ನ್ ಪ್ರೈವೆಟ್ ಲಿಮಿಟೆಡ್ ವಿರುದ್ಧ ಬಿಸಿಸಿಐ ದಿವಾಳಿ ಪ್ರಕ್ರಿಯೆ ಆರಂಭಿಸಿತ್ತು. ಆದರೆ ಬಳಿಕ ಇತ್ಯರ್ಥ ಒಪ್ಪಂದ ಮಾಡಿಕೊಂಡು 2024 ಜುಲೈ 31ರಂದು ಬಿಸಿಸಿಐಗೆ ರಿಜು ರವೀಂದ್ರನ್ ಬಾಕಿ ಹಣ ಪಾವತಿಸಿದ್ದರು.

ಬಿಸಿಸಿಐ ಮನವಿಯಂತೆ ದಿವಾಳಿ ಪ್ರಕ್ರಿಯೆ ಹಿಂಪಡೆಯಲು ಎನ್‌ಸಿಎಲ್‌ಎಟಿ 2024 ಜುಲೈ 31ರಂದು ಅನುಮತಿ ನೀಡಿತ್ತು. ಆದರೆ ಈ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ಸಾಲಗಾರರ ಸಮಿತಿ ರಚನೆ ಬಳಿಕ ಇತ್ಯರ್ಥ ಒಪ್ಪಂದ ನಡೆದಿದೆ. ಹಾಗಾಗಿ ದಿವಾಳಿ ಪ್ರಕ್ರಿಯೆ ಹಿಂಪಡೆಯುವ ಒಪ್ಪಂದಕ್ಕೆ ಸಮಿತಿಯ ಅನುಮತಿ ಅಗತ್ಯ ಎಂದು ಎನ್‌ಸಿಎಲ್‌ಟಿ ನೀಡಿದ್ದ ಆದೇಶವನ್ನು ಎನ್‌ಸಿಎಲ್‌ಎಟಿ ಎತ್ತಿಹಿಡಿದಿತ್ತು.

ಜಿಂದಾಲ್ ತೆಕ್ಕೆಗೆ ಗೋದ್ನಾ ವಿದ್ಯುತ್ ಯೋಜನೆ?

1,600 ಮೆಗಾವಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆ • ಪಿಪಿಪಿ ಮಾದರಿಯಲ್ಲಿ ಅನುಷ್ಠಾನ

• ಎ.ಎಂ.ಸುರೇಶ

ಬೆಂಗಳೂರು: ಛತ್ತೀಸಗಢದ ಗೋದ್ನಾದಲ್ಲಿ ಕರ್ನಾಟಕ ಸರ್ಕಾರ ಆರಂಭಿಸುತ್ತಿರುವ 1,600 ಮೆಗಾವಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಯು ಜಿಂದಾಲ್ ಸೌತ್ ವೆಸ್ಟ್ (ಜೆಎಸ್‌ಡಬ್ಲ್ಯು) ಎನರ್ಜಿ ಕಂಪನಿಯ ಪಾಲಾಗುವ ಸಾಧ್ಯತೆ ಹೆಚ್ಚಿದೆ.

ಹಲವು ವರ್ಷಗಳಿಂದ ನನೆಗುದಿಯಲ್ಲಿದ್ದ ಈ ಯೋಜನೆಗೆ ಮರುಜೀವ ನೀಡಿರುವ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್), ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಜಾರಿಗೊಳಿಸಲು ಟೆಂಡರ್ ಕರೆದಿತ್ತು. ಇದರಲ್ಲಿ ಜೆಎಸ್‌ಡಬ್ಲ್ಯು ಎನರ್ಜಿ ಮತ್ತು ದೈನಿಕ್ ಭಾಸ್ಕರ್ ಗ್ರೂಪ್‌ನ ಡಿಬಿ ಪವರ್ ಲಿಮಿಟೆಡ್ ಭಾಗವಹಿಸಿದ್ದವು.

'ಟೆಂಡರ್ ಷರತ್ತುಗಳ ಪ್ರಕಾರ ಜೆಎಸ್‌ಡಬ್ಲ್ಯು ಎನರ್ಜಿ ಕಂಪನಿ ಎಲ್ಲ ಅರ್ಹತೆಗಳನ್ನು ಹೊಂದಿದೆ. ಡಿಸೆಂಬರ್ ತಿಂಗಳಲ್ಲಿ ನಡೆಯುವ ಕೆಪಿಸಿಎಲ್‌ನ ಆಡಳಿತ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿ ಟೆಂಡರ್ ಅನ್ನು ಅಂತಿಮಗೊಳಿಸಲಾಗುತ್ತದೆ' ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- 2008ರಲ್ಲಿ ಯೋಜನೆ ಜಾರಿ ಸಂಬಂಧ ಒಪ್ಪಂದ
- 2019ರಲ್ಲಿ ಕಲ್ಲಿದ್ದಲು ಹಂಚಿಕೆ
- 17 ವರ್ಷಗಳ ಬಳಿಕ ಯೋಜನೆಗೆ ಮರುಜೀವ

'ಜೆಎಸ್‌ಡಬ್ಲ್ಯು ಎನರ್ಜಿ ಕಂಪನಿಯು ಯೂನಿಟ್‌ಗೆ ₹4.05 ಹಾಗೂ ಡಿಬಿ ಪವರ್ ಲಿಮಿಟೆಡ್‌ನವರು ಒಂದು ಯೂನಿಟ್‌ಗೆ ₹4.20 ದರ ನಿಗದಿ ಮಾಡುವಂತೆ ಟೆಂಡರ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಯೋಜನೆ ಪೂರ್ಣಗೊಂಡ ನಂತರ ಅದಕ್ಕೆ ಒಟ್ಟಾರೆ ಎಷ್ಟು ವೆಚ್ಚವಾಗಿದೆ, ಕಲ್ಲಿದ್ದಲು ದರ ಎಷ್ಟಿದೆ ಎಂಬುದನ್ನು ಲೆಕ್ಕಾಚಾರ ಮಾಡಿ, ಅಂತಿಮವಾಗಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ದರ ನಿಗದಿ ಮಾಡಲಿದೆ' ಎಂದು ಅವರು ವಿವರಿಸಿದರು.

'ಸಾಮಾನ್ಯವಾಗಿ ಈ ರೀತಿಯ ದೊಡ್ಡ ಯೋಜನೆಗಳಲ್ಲಿ 25 ವರ್ಷಗಳ ಅವಧಿಗೆ ದರ ನಿಗದಿ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಯೋಜನೆಯ ವೆಚ್ಚ, ಕಲ್ಲಿದ್ದಲು ದರ, ಉತ್ಪಾದನಾ ವೆಚ್ಚ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟು-ಕೊಂಡು ವಿದ್ಯುತ್ ಖರೀದಿ ದರವನ್ನು ನಿಗದಿಪಡಿಸಲಾಗುತ್ತದೆ. ಟೆಂಡರ್‌ನಲ್ಲಿ ಪ್ರಸ್ತಾಪ ಮಾಡಿರುವುದಕ್ಕಿಂತ ಕಡಿಮೆ ಆಗಬಹುದು ಅಥವಾ ಜಾಸ್ತಿಯೂ ಆಗಬಹುದು' ಎಂದು ಹೇಳಿದರು.

ರಾಜ್ಯ ಸರ್ಕಾರ ಮೊದಲ ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆಗೆ ಸುಮಾರು ₹18 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಟೆಂಡರ್ ಪಡೆಯುವ ಖಾಸಗಿ ಕಂಪನಿ ಶೇ 74ರಷ್ಟು ಹಾಗೂ ಕೆಪಿಸಿಎಲ್ ಶೇ 26ರಷ್ಟು ಮೊತ್ತವನ್ನು ಭರಿಸಲಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಯೋಜನೆ ಪೂರ್ಣಗೊಳ್ಳಲು 45 ತಿಂಗಳು ಆಗಬಹುದು ಎಂದು ಅಂದಾಜಿಸಲಾಗಿದೆ.

ಗೋದ್ನಾದಲ್ಲಿ ಈ ಯೋಜನೆಯನ್ನು ಆರಂಭಿಸುವ ಸಂಬಂಧ 2008ರಲ್ಲಿ ಆಗಿನ ಬಿಜೆಪಿ ಸರ್ಕಾರವು ಅಲ್ಲಿನ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಯೋಜನೆಗಾಗಿ 1,016 ಎಕರೆ ಖಾಸಗಿ ಜಮೀನು ಹಾಗೂ 160 ಎಕರೆ ಸರ್ಕಾರಿ ಜಮೀನನ್ನು 2013ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದಕ್ಕಾಗಿ ಸುಮಾರು ₹220 ಕೋಟಿ ಖರ್ಚಾಗಿದೆ. ಈ ಯೋಜನೆಗೆ ಅಗತ್ಯವಿರುವ ನೀರನ್ನು ಮಹಾನದಿಯಿಂದ ನೀಡಲು ಛತ್ತೀಸಗಢ ಸರ್ಕಾರ ಸಮ್ಮತಿಸಿದೆ.

ಕಲ್ಲಿದ್ದಲು ಹಂಚಿಕೆ: ಗೋದ್ನಾ ಸಮೀಪದಲ್ಲೇ ಎರಡು ಕಲ್ಲಿದ್ದಲು ಗಣಿಗಳನ್ನು ಕೇಂದ್ರ ಸರ್ಕಾರವು 2019ರಲ್ಲಿ ಕೆಪಿಸಿಎಲ್‌ಗೆ ಹಂಚಿಕೆ ಮಾಡಿದೆ. 1,600 ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ವರ್ಷಕ್ಕೆ 70 ಲಕ್ಷ ಟನ್ ಕಲ್ಲಿದ್ದಲು ಬೇಕಾಗುತ್ತದೆ. 21 ಕೋಟಿ ಟನ್ ಕಲ್ಲಿದ್ದಲು ಅಲ್ಲಿ ಲಭ್ಯವಿದ್ದು, 30 ವರ್ಷಗಳವರೆಗೆ ಬಳಸಬಹುದಾಗಿದೆ.

ಯೂನಿಟ್‌ಗೆ ಒಂದು ರೂಪಾಯಿ ಉಳಿತಾಯ

ಛತ್ತೀಸಗಢದ ಗೋದ್ನಾದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ ಮಾಡುವುದರಿಂದ, ಸುಮಾರು 1,500 ಕಿ.ಮೀ. ದೂರದಿಂದ ರಾಜ್ಯಕ್ಕೆ ಕಲ್ಲಿದ್ದಲು ಸಾಗಿಸಲು ಮಾಡುತ್ತಿದ್ದ ವೆಚ್ಚ ಉಳಿಯಲಿದೆ.

ಒಂದು ಯೂನಿಟ್ ವಿದ್ಯುತ್ ಉತ್ಪಾದನೆಗೆ ತಗಲುವ ಒಟ್ಟು ವೆಚ್ಚದಲ್ಲಿ ಕಲ್ಲಿದ್ದಲು ಸಾಗಣೆಗೆ ₹1.50 ವ್ಯಯಿಸಬೇಕಾಗಿತ್ತು. ಈಗ ಆ ಹಣ ಉಳಿಯಲಿದೆ. ಅಲ್ಲಿಂದ ದಕ್ಷಿಣ ವಲಯದ ವಿದ್ಯುತ್ ಜಾಲದ ಮೂಲಕ ರಾಜ್ಯಕ್ಕೆ ವಿದ್ಯುತ್ ತರಲು ಒಂದು ಯೂನಿಟ್‌ಗೆ 50 ಪೈಸೆ ಪ್ರಸರಣ ವೆಚ್ಚವಾಗಲಿದೆ. ಈ ಎರಡೂ ವೆಚ್ಚಗಳಿಗೆ ಹೋಲಿಸಿದರೆ ಕಲ್ಲಿದ್ದಲು ಸಾಗಣೆಯಲ್ಲಿ ಯೂನಿಟ್‌ಗೆ ಒಂದು ರೂಪಾಯಿ ಉಳಿತಾಯವಾಗಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜೈಲು ಅಧಿಕಾರಿಗಳ ವಿರುದ್ಧ ಇಮ್ರಾನ್ ಸಹೋದರಿ ಅರ್ಜಿ

ಇಸ್ಲಾಮಾಬಾದ್ (ಪಿಟಿಐ): ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಭೇಟಿ ಮಾಡಲು ಅವಕಾಶ ನೀಡದ ಜೈಲು ಅಧಿಕಾರಿಗಳ ವಿರುದ್ಧ ಇಮ್ರಾನ್ ಸಹೋದರಿ ಶುಕ್ರವಾರ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ.


2023ರಿಂದ ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿರುವ ಇಮ್ರಾನ್ ಅವರ ಭೇಟಿಗೆ ವಾರದಲ್ಲಿ ಎರಡು ದಿನ ಅವಕಾಶ ನೀಡುವಂತೆ ಇಸ್ಲಾಮಾಬಾದ್ ಹೈಕೋರ್ಟ್ ಮಾರ್ಚ್ 24ರಂದು ಆದೇಶಿಸಿತ್ತು.

'ಖಾನ್ ಅವರನ್ನು ಭೇಟಿ ಮಾಡಲು ಅವಕಾಶ ನೀಡದೆ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವ ಜೈಲಿನ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ವಿಚಾರಣೆಯನ್ನು ಆರಂಭಿಸಬೇಕು' ಎಂದು ಅಲೀಮಾ ಖಾನ್ ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

ಖೈಬರ್ ಪಖ್ತುಂಖ್ವಾದ ಮುಖ್ಯಮಂತ್ರಿ ಸೋಹಾಲಿ ಅಫ್ರಿದಿ ಮತ್ತು ಪಿಟಿಐನ ಇತರ ನಾಯಕರ ಸಮ್ಮುಖದಲ್ಲಿ ಅಲೀಮಾ ಅರ್ಜಿ ಸಲ್ಲಿಸಿದರು.

ಸೊರೇನ್ ಸರ್ಕಾರಕ್ಕೆ ವರ್ಷ ನೇಮಕಾತಿ ಪತ್ರ ವಿತರಣೆ

ರಾಂಚಿ (ಪಿಟಿಐ): ಎರಡನೇ ಅವಧಿಗೆ ಜಾರ್ಖಂಡ್ ಮುಖ್ಯಮಂತ್ರಿಯಾಗಿ ಹೇಮಂತ್ ಸೊರೇನ್ ಅವರು ಶುಕ್ರವಾರ ಒಂದು ವರ್ಷ ಪೂರೈಸಿದ್ದಾರೆ.



ಹೇಮಂತ್ ಸೊರೇನ್

9,000 ಮಂದಿಗೆ ವಿವಿಧ ಇಲಾಖೆಗಳ ಉದ್ಯೋಗದ ನೇಮಕಾತಿ ಪತ್ರಗಳನ್ನು ವಿತರಿಸುವ ಮೂಲಕ ಅವರು ಸರ್ಕಾರದ ವರ್ಷಾಚರಣೆ ಸಂಭ್ರಮ ಆಚರಿಸಿಕೊಂಡರು.

ಇಲ್ಲಿನ ಮೊರಹಾಬಾದಿ ಮೈದಾನದಲ್ಲಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸೊರೇನ್, '9,000 ಮಂದಿಗೆ ನೇಮಕಾತಿ ಪತ್ರ ವಿತರಿಸಲಾಗಿದೆ. ಈ ಮೂಲಕ ಕಳೆದ ಒಂದು ವರ್ಷದಲ್ಲಿ ವಿವಿಧ ಇಲಾಖೆಗಳಲ್ಲಿ 16,000 ಸರ್ಕಾರಿ ಉದ್ಯೋಗಗಳನ್ನು ಕಲ್ಪಿಸಿದಂತಾಗಿದೆ. ಅಲ್ಲದೇ 8,000 ಮಂದಿಗೆ ಸರ್ಕಾರೇತರ ಉದ್ಯೋಗಗಳನ್ನು ಒದಗಿಸಿದ್ದೇವೆ' ಎಂದರು.

'ಜೆಎಂಎಂ ನೇತೃತ್ವದ ಮೊದಲ ಸರ್ಕಾರದ (2020–24) ಅವಧಿಯಲ್ಲಿ 25,000ಕ್ಕೂ ಅಧಿಕ ಮಂದಿಗೆ ಸರ್ಕಾರಿ ಉದ್ಯೋಗ ಲಭಿಸಿತ್ತು. 28,000 ಮಂದಿಗೆ ಖಾಸಗಿ ವಲಯದಲ್ಲಿ ಉದ್ಯೋಗ ಕಲ್ಪಿಸಲಾಗಿತ್ತು' ಎಂದರು.

'ವಿರೋಧ ಪಕ್ಷಗಳಿಗೆ ಸರ್ಕಾರದ ಸಾಧನೆ ಬಗ್ಗೆ ಪ್ರಶ್ನೆ ಮಾಡಲು ಆಗುತ್ತಿಲ್ಲ. ಬದಲಿಗೆ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಹೂಡಿ ಅಡ್ಡಿ ಉಂಟುಮಾಡುತ್ತಿವೆ' ಎಂದು ಅವರು ಆರೋಪಿಸಿದರು. 2024ರ ನವೆಂಬರ್ 28ರಂದು ಸೊರೇನ್ ಪ್ರಮಾಣವಚನ ಸ್ವೀಕರಿಸಿದ್ದರು. ಜೆಎಂಎಂ ನೇತೃತ್ವದ ಮೈತ್ರಿಕೂಟಕ್ಕೆ ವಿಧಾನಸಭೆಯ 81 ಸ್ಥಾನಗಳ ಪೈಕಿ 56 ಸ್ಥಾನಗಳು ಲಭಿಸಿದ್ದವು.



ಬೆಂಕಿ ಅವಘಡದ ಸಂತ್ರಸ್ತರು ತಾತ್ಕಾಲಿಕ ಶಿಬಿರದಲ್ಲಿ ಆಹಾರ ಹಾಗೂ ಅಗತ್ಯ ವಸ್ತುಗಳನ್ನು ಪಡೆದುಕೊಂಡರು—ಎಎಫ್‌ಪಿ ಚಿತ್ರ

ಹಾಂಗ್‌ಕಾಂಗ್: ಮೃತರ ಸಂಖ್ಯೆ 128ಕ್ಕೆ ಏರಿಕೆ

ಹಾಂಗ್‌ಕಾಂಗ್ (ಎಪಿ): ಹಾಂಗ್‌ಕಾಂಗ್‌ನ ಬಹುಮಹಡಿ ಕಟ್ಟಡಗಳಲ್ಲಿ ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 128ಕ್ಕೆ ಏರಿಕೆಯಾಗಿದ್ದು, ಅಗ್ನಿಶಾಮಕ ಸಿಬ್ಬಂದಿ ಶುಕ್ರವಾರವೂ ಶೋಧ ಕಾರ್ಯಾಚರಣೆ ನಡೆಸಿದರು.

ಸುಟ್ಟು ಕರಕಲಾದ ಕಟ್ಟಡಗಳಲ್ಲಿ ಮತ್ತಷ್ಟು ಮೃತದೇಹಗಳು ಪತ್ತೆಯಾಗಿದ್ದು, ಶೋಧಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಸಾವಿನ ಸಂಖ್ಯೆ ಏರಿಕೆಯಾಗುವ ಸಂಭವವಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬುಧವಾರ ಮಧ್ಯಾಹ್ನ ವಾಂಗ್ ಫುಕ್ ಕೋರ್ಟ್ ಎಂಬ ವಸತಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಳಿಕ ಅದು ಇತರ ಏಳು ಕಟ್ಟಡಗಳಿಗೂ ವ್ಯಾಪಿಸಿತ್ತು. 1000ಕ್ಕೂ ಹೆಚ್ಚು ಅಗ್ನಿಶಾಮಕ ಸಿಬ್ಬಂದಿ ಸತತ 24 ತಾಸು ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದ್ದಾರೆ. ರಕ್ಷಣೆ ಮತ್ತು ಶೋಧ ಕಾರ್ಯಾಚರಣೆಯು ಶುಕ್ರವಾರ ರಾತ್ರಿ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದರು.

ವಾಷಿಂಗ್ಟನ್ ಡಿ.ಸಿ ದಾಳಿ ಬಳಿಕ ಎಚ್ಚೆತ್ತ ಅಮೆರಿಕ ಸರ್ಕಾರದಿಂದ ಘೋಷಣೆ

ಮೂರನೇ ಜಗತ್ತಿನ ದೇಶಗಳ ವಲಸಿಗರಿಗೆ ನಿಷೇಧ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಶ್ವೇತ ಭವನದ ಸಮೀಪವೇ ಅಫ್ಗನ್ ಪ್ರಜೆ ನಡೆಸಿದ ಗುಂಡಿನ ದಾಳಿಗೆ ನ್ಯಾಷನಲ್ ಗಾರ್ಡ್‌ನ ಸೈನಿಕರೊಬ್ಬರು ಮೃತಪಟ್ಟ ಬೆನ್ನಲ್ಲೇ ಎಚ್ಚೆ-ತ್ತುಕೊಂಡಿರುವ ಡೊನಾಲ್ಡ್ ಟ್ರಂಪ್ ಸರ್ಕಾರ, ಮೂರನೇ ಜಗತ್ತಿನ ದೇಶಗಳ ವಲಸಿಗರಿಗೆ ಶಾಶ್ವತ ನಿಷೇಧ ಹೇರುವುದಾಗಿ ತಿಳಿಸಿದೆ.



ಡೊನಾಲ್ಡ್ ಟ್ರಂಪ್

'ವಲಸಿಗರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಗಿದ್ದು, ದೇಶದ ಭದ್ರತೆಗೆ ಅಪಾಯವೊಡ್ಡುವ ವಿದೇಶಿ ನಾಗರಿಕರನ್ನು ಶಾಶ್ವತವಾಗಿ ಗಡಿಪಾರು ಮಾಡಲಾಗುವುದು' ಎಂದು ಘೋಷಿಸಿದೆ.

'ಅತ್ಯಂತ ಅಪಾಯವೊಡ್ಡುವ ರಾಷ್ಟ್ರಗಳಿಂದ ವಲಸೆ ಬಂದವರಿಗೆ ನೀಡಲಾಗಿರುವ ಗ್ರೀನ್‌ಕಾರ್ಡ್‌ಗಳನ್ನು ಮತ್ತೆ ಕಠಿಣ ಮರು ಪರಿಶೀಲನೆಗೆ ಒಳಪಡಿಸಲಾಗುತ್ತದೆ' ಎಂದು ತಿಳಿಸಿದೆ.

ಅಫ್ಗನ್ ಪ್ರಜೆ ರಹಮಾನುಲ್ಲಾ ಲಖನ್‌ವಾಲ್(29) ನಡೆಸಿದ ಗುಂಡಿನ ದಾಳಿಗೆ ಅಮೆರಿಕದ ಸೈನಿಕ ಸಾರಾ ಬೆಕ್‌ಸ್ಟ್ರಾಮ್ (20) ಮೃತಪಟ್ಟಿದ್ದು, ವಾಯುಸೇನೆಯ ಸಿಬ್ಬಂದಿ ಸಾರ್ಜೆಂಟ್ ಆ್ಯಂಡ್ರ್ಯೂ ವೂಲ್ಫ್ ತೀವ್ರವಾಗಿ ಗಾಯಗೊಂಡಿದ್ದರು. ಅವರ ಸ್ಥಿತಿ ಈಗಲೂ ಗಂಭೀರವಾಗಿದೆ. ಇದರ ಬೆನ್ನಲ್ಲೇ ಎಚ್ಚೆತ್ತ ಅಮೆರಿಕ ಸರ್ಕಾರ ವಲಸೆ ನೀತಿ ಕುರಿತಂತೆ ಹಲವು ಕಠಿಣ ನಿಯಾಮವಳಿಗಳನ್ನು ಪ್ರಕಟಿಸಿದೆ.

'ನಾವು ತಾಂತ್ರಿಕವಾಗಿ ಮುಂದುವರಿದಿದ್ದರೂ 'ವಲಸೆ ನೀತಿ'ಯಿಂದಾಗಿ ಕೆಲವರು ಲಾಭ ಪಡೆದುಕೊಂಡು, ಅನೇಕರ ಜೀವನಗಳನ್ನು ನಾಶಪಡಿಸಿದ್ದಾರೆ. ಹೀಗಾಗಿ, ಅಮೆರಿಕದ ಪರಿಸ್ಥಿತಿ ಮತ್ತೆ ಸುಧಾರಿಸುವವರೆಗೂ ಮೂರನೇ ಜಗತ್ತಿನ ರಾಷ್ಟ್ರಗಳ ವಲಸೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುತ್ತೇನೆ. ಅಲ್ಲದೇ, ದೇಶಕ್ಕೆ ಆಸ್ತಿಯಾಗದವರು, ಅಸಮರ್ಥರು ಹಾಗೂ ದೇಶ ಪ್ರೀತಿಸದವರನ್ನೂ ಹೊರಹಾಕಲಾಗು-ತ್ತದೆ' ಎಂದು ಸಾಮಾಜಿಕ ಜಾಲತಾಣ 'ಟ್ರುಥ್'ನಲ್ಲಿ ಬರೆದಿದ್ದಾರೆ.

'ದೇಶದ ಪ್ರಜೆಯಲ್ಲದವರಿಗೆ ನೀಡಲಾಗುತ್ತಿದ್ದ ಎಲ್ಲ ಸಬ್ಸಿಡಿ ಹಾಗೂ ಸೌಲಭ್ಯಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸುತ್ತಿದ್ದೇವೆ. ದೇಶದ ನೆಮ್ಮದಿಗೆ ಭಂಗ ತರುತ್ತಿರುವ, ಭದ್ರತೆ ಧಕ್ಕೆ ಉಂಟು ಮಾಡುತ್ತಿರುವ ವಿದೇಶಿ ನಾಗರಿಕರನ್ನು ಗಡಿಪಾರು ಮಾಡಲಾಗುತ್ತದೆ' ಎಂದು ಹೇಳಿದ್ದಾರೆ.

'ಅಕ್ರಮ ವಲಸಿಗರು ದೇಶದಲ್ಲಿ ಗೊಂದಲಮಯ ವಾತಾವರಣ ಸೃಷ್ಟಿಸಿದ್ದನ್ನು ಕೊನೆಗಾಣಿಸುವ ಗುರಿ ತಲುಪುವ ನಿಟ್ಟಿನಲ್ಲಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ.

'ಹಿಮ್ಮುಖ ವಲಸೆ' ನೀತಿ ಮಾತ್ರ ಈಗಿನ ಸ್ಥಿತಿಯನ್ನು ಸಂಪೂರ್ಣವಾಗಿ ಸರಿಪಡಿಸಬಹುದಾಗಿದೆ. ದ್ವೇಷ, ಕೊಲೆ, ಅಮೆರಿಕದ ನಾಶಕ್ಕೆ ಮುಂದಾಗುವ ಯಾರೂ ದೀರ್ಘ ಕಾಲ ದೇಶದಲ್ಲಿ ಉಳಿಯಲು ಅವಕಾಶ ನೀಡುವುದಿಲ್ಲ' ಎಂದು ಎಚ್ಚರಿಕೆ ನೀಡಿದ್ದಾರೆ.

2021ರ ಆಗಸ್ಟ್‌ನಲ್ಲಿ ಅಫ್ಗನ್‌ನಲ್ಲಿ ತಾಲಿಬಾನ್ ಸರ್ಕಾರವು ಮರುಸ್ಥಾಪನೆಯಾದ ಬಳಿಕ ಬೈಡನ್ ಸರ್ಕಾರವು 'ಮಿತ್ರರಾಷ್ಟ್ರಗಳಿಗೆ ಸ್ವಾಗತ' ನೀತಿಯಡಿಯಲ್ಲಿ ವಲಸೆ ನೀತಿ ಪ್ರಕಟಿಸಿತ್ತು. ಇದರ ಅಡಿಯಲ್ಲೇ ಲಖನ್‌ವಾಲ್ ಅಮೆರಿಕಕ್ಕೆ ಪ್ರವೇಶಿಸಿದ್ದರು.

ಯಾವ ದೇಶದವರಿಗೆ ನಿರ್ಬಂಧ?

'ಟ್ರಂಪ್ ಸೂಚನೆಯಂತೆ ಗ್ರೀನ್‌ಕಾರ್ಡ್ ಹೊಂದಿದ ಪ್ರತಿಯೊಬ್ಬರ ಪರಿಶೀಲನೆ ನಡೆಸಲಾಗುತ್ತದೆ. 2025ರ ನವೆಂಬರ್ 27ರವರೆಗೆ ಬಾಕಿ ಉಳಿದಿರುವ ಹಾಗೂ ಅರ್ಜಿ ಹಾಕಿರುವವರ ಮೇಲೂ ಈ ನಿಯಮ ಜಾರಿಗೆ ಬರಲಿದೆ' ಎಂದು ಅಮೆರಿಕ ಪೌರತ್ವ ಹಾಗೂ ವಲಸೆ ಸೇವೆಗಳ ನಿರ್ದೇಶಕ (ಯುಎಸ್‌ಸಿಐಎಸ್) ಜೋಸೆಫ್ ಎಡ್ಲೊ ತಿಳಿಸಿದ್ದಾರೆ.

ಇದರ ಬೆನ್ನಲ್ಲೇ, ಸಂಸ್ಥೆಯು 19 ರಾಷ್ಟ್ರಗಳನ್ನು ಹೆಚ್ಚಿನ ಅಪಾಯ ದೇಶಗಳು ಎಂದು ಪಟ್ಟಿ ಮಾಡಿದೆ.

ಅಫ್ಗಾನಿಸ್ತಾನ, ಮ್ಯಾನ್ಮಾರ್, ಬುರುಂಡಿ, ಛಡ್, ರಿಪಬ್ಲಿಕ್ ಆಫ್ ದ ಕಾಂಗೊ, ಈಕ್ವಟೋರಿಯಲ್ ಗಿಯೆನ್ನಾ, ಇರಿಟ್ರಿಯಾ, ಹೈಟಿ, ಇರಾನ್, ಲಾವೊಸ್, ಲಿಬಿಯಾ, ಸಿಯೆರಾ ಲಿಯೋನ್, ಸೊಮಾಲಿಯಾ, ಸುಡಾನ್, ಟೊಗೊ, ತುರ್ಕಮೆನಿಸ್ತಾನ್, ವೆನಿಜುವೆಲಾ, ಯೆಮನ್.



ಅನ್‌ಲಕ್ಕಿ ‘ಲಕ್ಕಿ’ಯ ಆತ್ಮಕಥೆ

ಜಿಎಸ್‌ಟಿ–ಘೋಸ್ಟ್ಸ್ ಇನ್ ಟ್ರಬಲ್ (ಕನ್ನಡ)

- ನಿರ್ಮಾಣ: ಸಂದೇಶ್ ನಾಗರಾಜ್
- ನಿರ್ದೇಶನ: ಸೃಜನ್ ಲೋಕೇಶ್
- ತಾರಾಗಣ: ಸೃಜನ್ ಲೋಕೇಶ್, ರಜನಿ ಭಾರದ್ವಾಜ್, ಗಿರೀಶ್ ಶಿವಣ್ಣ, ಗಿರಿಜಾ ಲೋಕೇಶ್, ವಿನಯ ಪ್ರಸಾದ್, ಶೋಭರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್ ರಾವ್, ತಬಲ ನಾಣಿ, ರವಿಶಂಕರ್ ಗೌಡ ಮತ್ತಿತರರು



ಸೃಜನ್ ಲೋಕೇಶ್

ಕಿರುತೆರೆಯಲ್ಲಿ ಹಾಸ್ಯ ಪ್ರಧಾನ ಶೋ ಮೂಲಕ ಗುರುತಿಸಿಕೊಂಡಿರುವ ನಟ ಸೃಜನ್ ಲೋಕೇಶ್ ಈ ಸಿನಿಮಾ ಮೂಲಕ ನಿರ್ದೇಶನಕ್ಕೆ ಇಳಿದಿದ್ದಾರೆ. ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಬಳಿಕ ಬ್ಯಾಂಕ್ ದರೋಡೆ ಕಾನ್ಸೆಪ್ಟ್ ಇಟ್ಟುಕೊಂಡು ಈ ವಾರ ಬಂದಿರುವ ಎರಡನೇ ಸಿನಿಮಾ ಇದು.

‘ಲಕ್ಕಿ’ (ಸೃಜನ್ ಲೋಕೇಶ್) ಹುಟ್ಟಿದಾಗಿನಿಂದಲೇ ‘ಅನ್‌ಲಕ್ಕಿ’ ಎನ್ನುವ ಹಣೆಪಟ್ಟಿಯನ್ನು ಹೊತ್ತು ಬಂದಾತ. ಜನಿಸಿದ ದಿನವೇ ಆತನ ಅಪ್ಪನ ಫ್ಯಾಕ್ಟರಿಗೆ ಬೆಂಕಿ ಬೀಳುತ್ತದೆ, ಶಾಲೆಗೆ ಕಾಲಿಟ್ಟರೆ ಕಟ್ಟಡ ಕುಸಿದು ಬೀಳುತ್ತದೆ, ಅಂಗಡಿ ತೆರೆದರೆ ಲಾಕ್‌ಡೌನ್ ಆಗುತ್ತದೆ... ಹೀಗೆ ಸಾಲು ಸಾಲು ಕಾಕತಾಳೀಯ ಘಟನೆಗಳು ಆತ ಕಾಲಿಟ್ಟಲ್ಲೆಲ್ಲಾ ಹಿಂಬಾಲಿಸುತ್ತವೆ. ಇದರಿಂದ ಬೇಸತ್ತ ‘ಲಕ್ಕಿ’ ಸ್ಮಶಾನಕ್ಕೆ ಬಂದು ಆತ್ಮಹತ್ಯೆಗೆ ಯತ್ನಿಸುತ್ತಾನೆ. ಎಷ್ಟೇ ಪ್ರಯತ್ನಿಸಿದರೂ ಸಾವಿನ ಕದ ತೆರೆದುಕೊಳ್ಳುವುದಿಲ್ಲ. ಇಲ್ಲಿಂದ ಕಥೆ ಆರಂಭವಾಗುತ್ತದೆ, ಮುಕ್ತಿ ಸಿಗದ ಆತ್ಮಗಳು ‘ಲಕ್ಕಿ’ ಜೊತೆಯಾಗುತ್ತವೆ.

ನಿರ್ದೇಶಿಸುತ್ತಿರುವ ಮೊದಲ ಸಿನಿಮಾಗೆ ಹಾರರ್ ಜಾನರ್ ಆಯ್ಕೆ ಮಾಡಿಕೊಂಡಿದ್ದರೂ ಇಲ್ಲಿ ಹೆದರಿಸುವ ದೆವ್ವಗಳಿಲ್ಲ. ಮುಕ್ತಿ ಸಿಗದ ಆತ್ಮಗಳನ್ನಿಟ್ಟುಕೊಂಡು ಪ್ರೇಕ್ಷಕರನ್ನು ನಗಿಸುವ ಪ್ರಯತ್ನ ಮಾಡಿರುವ ಸೃಜನ್ ಅವರು ಸಿನಿಮಾ ಮೇಕಿಂಗ್ ಮೇಲೆ ಇನ್ನೊಂದಿಷ್ಟು ಗಮನಹರಿಸಬಹುದಿತ್ತು. ಸಿನಿಮಾದ ಮೊದಲಾರ್ಧದ ಕಥೆ ಆರಂಭದಲ್ಲೇ ಊಹೆಗೆ ಸಿಕ್ಕುತ್ತದೆ.

ಬರವಣಿಗೆಯು ಕಿರುತೆರೆಯ ಹಾಸ್ಯ ಪ್ರದರ್ಶನಕ್ಕೆ ಬರೆದಂತಿದೆ. ಮೊದಲಾರ್ಧದ ಕಥೆ ಹಾಗೂ ಹಾಸ್ಯ ದೃಶ್ಯಗಳಲ್ಲಿ ಜೀವಂತಿಕೆಯಿಲ್ಲ. ದ್ವಿತೀಯಾರ್ಧದಲ್ಲಿ ರವಿಶಂಕರ್ ಗೌಡ ಹಾಗೂ ಶೋಭರಾಜ್ ನಗಿಸುವ ಜವಾಬ್ದಾರಿ ಹೊತ್ತಿದ್ದಾರೆ. ತಮ್ಮ ಹಾವಭಾವದಿಂದಲೇ ಇವರಿಬ್ಬರೂ ಕೊಂಚ ನಗುವಿನೌತಣ ಬಡಿಸಿದ್ದಾರೆ. ತಬಲ ನಾಣಿ, ಗಿರೀಶ್ ಶಿವಣ್ಣ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಚಿತ್ರಕಥೆಯನ್ನು ಇನ್ನಷ್ಟು ಬಿಗಿಯಾಗಿಸುವ ಅವಕಾಶಗಳು ಇದ್ದವು. ನಿರೂಪಣೆಯಲ್ಲಿ ಹೊಸತನವಿಲ್ಲ. ನೆನಪಿನಲ್ಲಿ ಉಳಿಯುವಂಥ ಹಾಡುಗಳಿಲ್ಲ. ಗಿರಿಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಸೃಜನ್ ಪುತ್ರ ಸುಕೃತ್ ಒಂದೇ ಸಿನಿಮಾದಲ್ಲಿ ಜೊತೆಯಾಗಿ ನಟಿಸಿರುವುದು ವಿಶೇಷವಾಗಿದೆ.

-ಅಭಿಲಾಷ್ ಪಿ.ಎಸ್

ನಾವು ನೋಡಿದ ಸಿನಿಮಾ

ತಿರುವುಗಳೊಂದಿಗಿನ ಪ್ರೇಮಕಥೆ

ಫ್ಲರ್ಟ್ (ಕನ್ನಡ)

- ನಿರ್ಮಾಣ–ನಿರ್ದೇಶನ: ಚಂದನ್ ಕುಮಾರ್
- ತಾರಾಗಣ: ಚಂದನ್, ನಿಮಿಕಾ ರತ್ನಾಕರ, ಗಿರೀಶ್ ಶಿವಣ್ಣ, ಮತ್ತಿತರರು

ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದೊಂದು ‘ಫ್ಲರ್ಟ್’ ಮಾಡುವ ಹುಡುಗನ ಕಥೆ. ಕಥೆಯ ನಾಯಕ ಕೃಷ್ಣ ಹತ್ತಾರು ಹುಡುಗಿಯರನ್ನು ಫ್ಲರ್ಟ್ ಮಾಡಿಕೊಂಡು ಅಡ್ಡಾಡಿಯಂತೆ ಇರುತ್ತಾನೆ. ಚಿತ್ರ ಪ್ರಾರಂಭವಾಗಿ ಮೊದಲ ಹದಿನೈದು–ಇಪ್ಪತ್ತು ನಿಮಿಷ ಇದೊಂದು ಕಾಲಹರಣ ಮಾಡುವ ಸಿನಿಮಾದಂತೆ ಭಾಸವಾಗುತ್ತದೆ. ಆದರೆ ಬಳಿಕ ನಿಧಾನಕ್ಕೆ ತೆರೆದುಕೊಳ್ಳುವ ಕಥೆ ಚಿತ್ರ ಮುಗಿಯುವ ತನಕವೂ ಮಜಲುಗಳನ್ನು ಬದಲಿಸುತ್ತ, ತಿರುವುಗಳೊಂದಿಗೆ ತನ್ನೊಳಗೆ ಸೆಳೆದುಕೊಳ್ಳುತ್ತದೆ. ಕಿರುತೆರೆಯಿಂದ ಹಿರಿತೆರೆಗೆ ಬಂದ ಚಂದನ್ ಕುಮಾರ್ ಚೊಚ್ಚಲ ನಿರ್ದೇಶನದ ಚಿತ್ರವಿದು. ಆದರೆ ಎಲ್ಲಿಯೂ ನಿರ್ದೇಶಕನ ಮೊದಲ ಸಿನಿಮಾ ಎಂಬುದು ಗೊತ್ತಾಗದಷ್ಟು ಸೊಗಸಾಗಿ ಚಿತ್ರವನ್ನು ಕಟ್ಟಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಕಥಾನಾಯಕ ಕೃಷ್ಣ ಜಿಮ್ ಟ್ರೈನರ್. ಜಿಮ್‌ಗೆ ಬರುವ ಹುಡುಗಿಯರನ್ನೆಲ್ಲ ಬುಟ್ಟಿಗೆ ಹಾಕಿಕೊಂಡು ಸಂಬಂಧ ಬೆಳೆಸುತ್ತ ಇರುತ್ತಾನೆ. ಆತನ ದೃಷ್ಟಿಯಲ್ಲಿ ಶೇಕಡ 90ರಷ್ಟು ಹುಡುಗಿಯರು ಮೋಸಗಾರ್ತಿಯರು. ಅವರ ಪ್ರಿಯತಮನಿಗೆ ಮೋಸ ಮಾಡಿ ಇನ್ನೊಬ್ಬನ ಜತೆ ಸುತ್ತಾಡುವವರು. ಅಂಥ ಹುಡುಗಿಯರನ್ನು ಪತ್ತೆ ಮಾಡಿ ಅವರ ಪ್ರಿಯತಮನಿಗೆ ವಿಷಯ ತಿಳಿಸಿ, ಬ್ರೇಕ್ ಅಪ್ ಮಾಡಿಸುವುದು ಈತನ ಸೈಡ್ ಬಿಸಿನೆಸ್. ಅವರ ಪ್ರೀತಿ ನಿಜವಾಗಿದ್ದರೆ ತಾನೇ ಮುಂದೆ ನಿಂತು ಮದುವೆ ಮಾಡಿಸುತ್ತೇನೆ ಎಂಬ ಮನೋಭಾವದ ಹುಡುಗ ಈತ.

ಚಿತ್ರ ಶುರುವಾಗುವುದು ನ್ಯಾಯಾಲಯದಲ್ಲಿ ಕೃಷ್ಣ ಒಂದು ಹುಡುಗಿ ಮೇಲೆ ಅತ್ಯಾಚಾರ ಮಾಡಿದ್ದಾನೆ ಎಂಬ ಆರೋಪದ ವಿಚಾರಣೆಯಿಂದ. ವಿಚಾರಣೆಯ ಜತೆ ಜತೆಗೆ ಕಥೆ ತೆರೆದುಕೊಳ್ಳುತ್ತ ಹೋಗುತ್ತದೆ. ಸಿಕ್ಕ ಹತ್ತಾರು ಹುಡುಗಿಯರಿಗೆ ಮೋಸ ಮಾಡಿಕೊಂಡಿರುವ ಕೃಷ್ಣನಿಗೆ ಬಾಲ್ಯದ ಗೆಳೆಯ ಬಾಲು ಸಿಗುತ್ತಾನೆ. ಆತನೂ ಕೃಷ್ಣನ ಜತೆಯೇ ವಾಸಿಸಲು ಪ್ರಾರಂಭಿಸುತ್ತಾನೆ. ಅದಕ್ಕೆ ಏನು ಕಾರಣ ಎಂಬುದು ಕ್ಲೈಮ್ಯಾಕ್ಸ್‌ನಲ್ಲಿ ಗೊತ್ತಾಗುತ್ತದೆ. ಕೃಷ್ಣ ಮತ್ತು ಬಾಲು ನಡುವೆ ಬರುವವಳು ಸನಿಹ. ಈಕೆಯ ಆಗಮನದ ನಂತರ ಕಥೆಯ ದಿಕ್ಕು ಬದಲಾಗುತ್ತದೆ. ಈ ಕಥೆ ಪ್ರಾರಂಭದಲ್ಲಿ ಸ್ವಲ್ಪ ಗೊಂದಲ ಮೂಡಿಸಿದರೂ ದ್ವಿತೀಯಾರ್ಧದಲ್ಲಿ ಕೃಷ್ಣ ಮತ್ತು ಸನಿಹಳ ಕಥೆ ಇಡೀ ಚಿತ್ರವನ್ನು ನೋಡಿಸಿಕೊಂಡು ಹೋಗುವಂತೆ ಮಾಡುತ್ತದೆ.

ಇಡೀ ಚಿತ್ರದ ದೊಡ್ಡ ಶಕ್ತಿ ಪಾತ್ರವರ್ಗ. ಕೃಷ್ಣನಾಗಿ ಚಂದನ್ ಇಷ್ಟವಾಗುತ್ತಾರೆ. ಸನಿಹಳಾಗಿ ನಿಮಿಕಾ ರತ್ನಾಕರ ಕಣ್ಣುಗಳಿಂದಲೇ ನಟಿಸಿದ್ದಾರೆ. ಪ್ರೇಮಕಥೆಯಲ್ಲಿ ಈ ಜೋಡಿ ಮೋಡಿ ಮಾಡುತ್ತದೆ. ಬಾಲುವಾಗಿ ಗಿರೀಶ್ ಶಿವಣ್ಣ ಹಾವ-ಭಾವಗಳಿಂದಲೇ ನಗಿಸುತ್ತಾರೆ. ಸುದೀಪ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡು ಸ್ನೇಹದ ಹಾಡೊಂದನ್ನು ಹಾಡುತ್ತಾರೆ. ಈ ಹಾಡು ಕಥೆಗೆ ಪೂರಕವಾಗಿದೆ. ವಿನಯ್‌ಗೌಡ ಖಳನಾಯಕ ಎಂಬುದು ಗೊತ್ತಾಗಲು ಬಹಳ ಸಮಯ ಬೇಕಾಗುತ್ತದೆ. ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಶೇಡ್‌ಗಳನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ನಾಯಕನ ಅಣ್ಣನಾಗಿ ರಂಗಾಯಣ ರಘು ಇಷ್ಟವಾಗುತ್ತಾರೆ. ಆದರೆ ಕಿರಿಕಿರಿ ಮೂಡಿಸುವುದು ವಕೀಲನಾಗಿ ಬರುವ ಸಾಧು ಕೋಕಿಲ. ಬಹಳ ಗಂಭೀರವಾಗಿ ನಡೆಯಬೇಕಿದ್ದ ಕೋರ್ಟ್ ವಿಚಾರಣೆಯನ್ನು ಹಾಸ್ಯಮಯವಾಗಿಸಿರುವುದು, ಅಲ್ಲಿ ಬರುವ ಪಾತ್ರವರ್ಗಗಳು ಸ್ವಲ್ಪ ಕಿರಿಕಿರಿ ಮೂಡಿಸುತ್ತವೆ.

ನಕುಲ್ ಅಭ್ಯಂಕರ್ ಹಿನ್ನೆಲೆ ಸಂಗೀತ ಸೊಗಸಾಗಿದೆ. ಆದರೆ ಹಾಡುಗಳು ಕಾಡುವುದಿಲ್ಲ. ಎಚ್.ಸಿ. ವೇಣು ಛಾಯಾಚಿತ್ರಗ್ರಹಣ ಕಥೆಗೆ ನ್ಯಾಯ ಒದಗಿಸಿದೆ. ಯಾವ ಪ್ರಮುಖ ಪಾತ್ರವೂ ನಾವು ಊಹಿಸಿಕೊಂಡಂತೆ ಇರುವುದಿಲ್ಲ. ಚಿತ್ರಕಥೆಯಲ್ಲಿ ಭಿನ್ನತೆ ಕಾಣಿಸುತ್ತದೆ. ಚಿತ್ರದ ಮೊದಲಾರ್ಧದ ಕೆಲ ಸನ್ನಿವೇಶಗಳನ್ನು ಕತ್ತರಿಸಿ ಸ್ವಲ್ಪ ಬೇಗ ಮುಖ್ಯ ಕಥೆಗೆ ಬರುವ ಅವಕಾಶ ನಿರ್ದೇಶಕರಿಗಿತ್ತು. ಕೆಲವು ಕಡೆ ಅನವಶ್ಯ ಹಾಸ್ಯಕ್ಕೆ ಕಡಿವಾಣ ಹಾಕಿದ್ದರೆ ಚಿತ್ರ ಇನ್ನಷ್ಟು ಸೊಗಸಾಗುವ ಸಾಧ್ಯತೆ ಇತ್ತು.

ನೋಡಬಹುದಾದ ಚಿತ್ರ

-ವಿನಾಯಕ ಕೆ.ಎಸ್.

ಚಟಿಕೆ ಸುದ್ದಿ

ಡಿ. 4ಕ್ಕೆ ಪುಟಿನ್ ಭಾರತ ಭೇಟಿ



ವ್ಲಾಡಿಮಿರ್ ಪುಟಿನ್

ನವದೆಹಲಿ (ಪಿಟಿಐ): ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಡಿಸೆಂಬರ್‌ನಲ್ಲಿ ಎರಡು ದಿನ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಬಗ್ಗೆ ವಿದೇಶಾಂಗ ವ್ಯವಹಾರಗಳ ಇಲಾಖೆಯು ಶುಕ್ರವಾರ ಪ್ರಕಟಣೆ ಹೊರಡಿಸಿದೆ.

‘ಭಾರತ ಭೇಟಿ ವೇಳೆ ಪುಟಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಇದು ದ್ವಿಪಕ್ಷೀಯ ಸಂಬಂಧಗಳು ಮತ್ತು ಉಭಯ ದೇಶಗಳ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲಿದೆ. ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಳ್ಳಲು ಇದೊಂದು ಅವಕಾಶವಾಗಿದೆ’ ಎಂದು ಅದು ಹೇಳಿದೆ.

ಮಣಿಪುರ ಬಂಡುಕೋರರು ಸೇರಿ ಐವರ ಬಂಧನ

ಇಂಫಾಲ್ (ಪಿಟಿಐ): ನಿಷೇಧಿತ ಸಂಘಟನೆಗಳಿಗೆ ಸೇರಿದ ನಾಲ್ವರು ಬಂಡುಕೋರರು ಸೇರಿದಂತೆ ಐದು ಮಂದಿಯನ್ನು ಭದ್ರತಾ ಪಡೆಗಳು ಬಂಧಿಸಿವೆ.

ಕಾಂಗ್ಲೀಪಾಕ್ ಕಮ್ಯುನಿಸ್ಟ್ ಪಕ್ಷಕ್ಕೆ (ಪಿಡಬ್ಲ್ಯುಜಿ) ಸೇರಿದ ಮೂವರನ್ನು ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಬುಧವಾರ ಬಂಧಿಸಲಾಯಿತು. ಸಂಘಟನೆಯ ಇನ್ನೊಬ್ಬನನ್ನು ಪಶ್ಚಿಮ ಇಂಫಾಲ್‌ನಲ್ಲಿ ಗುರುವಾರ ಬಂಧಿಸಲಾಯಿತು. ಇವರು ಅನೇಕ ಸುಲಿಗೆ ಚಟುವಟಿಕೆಗಳಲ್ಲಿ ಹಾಗೂ ನಿಷೇಧಿತ ಸಂಘಟನೆಗಳಿಗೆ ಯುವಕರನ್ನು ನೇಮಿಸುವುದರಲ್ಲಿ ಭಾಗಿಯಾಗಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಇನ್ನೊಬ್ಬ ವ್ಯಕ್ತಿಯನ್ನು ಗುರುವಾರ ಬಂಧಿಸಿ, ಆತನ ಬಳಿ ಇದ್ದ ಎರಡು ಹ್ಯಾಂಡ್ ಗ್ರೆನೇಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಯಾಸಿನ್‌ಗೆ ಚಿಕಿತ್ಸೆ ಹೈಕೋರ್ಟ್ ನಿರ್ದೇಶನ

ನವದೆಹಲಿ (ಪಿಟಿಐ): ಭಯೋತ್ಪಾದನಾ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಪ್ರತ್ಯೇಕತಾವಾದಿ ನಾಯಕ ಯಾಸಿನ್ ಮಲಿಕ್‌ಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಒದಗಿಸುವಂತೆ ತಿಹಾರ್ ಜೈಲು ಅಧಿಕಾರಿಗಳಿಗೆ ದೆಹಲಿ ಹೈಕೋರ್ಟ್ ನಿರ್ದೇಶಿಸಿದೆ.

ಮೂತ್ರಪಿಂಡ ಹಾಗೂ ಹೃದಯಕ್ಕೆ ಸಂಬಂಧಿಸಿದ ಗಂಭೀರ ರೋಗಗಳಿಂದ ತಾನು ಬಳಲುತ್ತಿದ್ದು, ಚಿಕಿತ್ಸೆ ನೀಡಲು ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕೋರಿ ಯಾಸಿನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ‘ಅರ್ಜಿದಾರರು 2017ರ ವೈದ್ಯಕೀಯ ದಾಖಲೆಗಳನ್ನು ಲಗತ್ತಿಸಿದ್ದಾರೆ. ತಿಹಾರ್ ಜೈಲಿನ ವರದಿಯ ಪ್ರಕಾರ ಯಾಸಿನ್ ಯಾವುದೇ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವಂತೆ ಕಾಣುತ್ತಿಲ್ಲ. ಆತನಿಗೆ ನೀಡಬೇಕಾದ ವೈದ್ಯಕೀಯ ಚಿಕಿತ್ಸೆಯು ಜೈಲಿನಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಬೇಕು’ ಎಂದು ನ್ಯಾಯಧೀಶ ನೀನಾ ಬನ್ಸಾಲ್ ಕೃಷ್ಣ ಹೇಳಿದರು. ವೈದ್ಯಕೀಯ ಆರೈಕೆ ಕೋರಿ ಯಾಸಿನ್ ಸಲ್ಲಿಸಿದ್ದ ಅರ್ಜಿಯನ್ನು ಪೀಠವು ವಜಾಗೊಳಿಸಿತು.

ವಿವಿಧ ಅಪರಾಧಗಳಲ್ಲಿ ಯಾಸಿನ್‌ನನ್ನು ತಪ್ಪಿತಸ್ಥನೆಂದು ಪರಿಗಣಿಸಿ ದೆಹಲಿಯ ವಿಚಾರಣಾಧೀನ ನ್ಯಾಯಾಲಯವು 2022ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಿದೆ.

ಮನಃಸ್ಥಿತಿ ಪ್ರತಿಬಿಂಬಿಸುತ್ತದೆ: ‘ಸುಪ್ರೀಂ’

ಮುಟ್ಟು: ಫೋಟೊ ತೆಗೆದು ಪುರಾವೆ ಒದಗಿಸಲು ಒತ್ತಾಯಿಸಿದ ಪ್ರಕರಣ

ನವದೆಹಲಿ (ಪಿಟಿಐ): ಹರಿಯಾಣದ ಮಹರ್ಷಿ ದಯಾನಂದ ವಿಶ್ವವಿದ್ಯಾಲಯದ ಮಹಿಳಾ ಸ್ವಚ್ಛತಾ ಕಾರ್ಮಿಕರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣದ ತನಿಖೆಗೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಇತರರ ಪ್ರತಿಕ್ರಿಯೆ ಕೇಳಿ ನೋಟಿಸ್ ಜಾರಿ ಮಾಡಿದೆ.

ಮುಟ್ಟು ಆಗಿದೆ ಎಂಬುದನ್ನು ಸಾಬೀತುಪಡಿಸಲು ಖಾಸಗಿ ಅಂಗದ ಫೋಟೊ ತೋರಿಸಬೇಕು ಎಂದು ಮಹಿಳಾ ಸ್ವಚ್ಛತಾ ಕಾರ್ಮಿಕರನ್ನು ಒತ್ತಾಯಪಡಿಸಿದ ಆರೋಪ ಕೇಳಿಬಂದಿತ್ತು. ಈ ಬಗ್ಗೆ ತನಿಖೆ ನಡೆಸುವಂತೆ ಕೋರಿ ಸುಪ್ರೀಂ ಕೋರ್ಟ್ ವಕೀಲರ ಸಂಘ (ಎಸ್‌ಸಿಬಿಎ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಆರ್. ಮಹಾದೇವನ್ ಅವರ ಪೀಠ ನಡೆಸುತ್ತಿದೆ.

‘ಇದು ವ್ಯಕ್ತಿಗಳ ಮನಃಸ್ಥಿತಿಯನ್ನು ತೋರಿಸುತ್ತದೆ. ಕರ್ನಾಟಕದಲ್ಲಿ ಮುಟ್ಟಿನ ರಜೆ ನೀಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಪ್ರಕರಣ ಗಮನಕ್ಕೆ ಬಂದ ಬಳಿಕ, ಅವರು ರಜೆ ನೀಡಲು ಮುಟ್ಟು ಆಗಿರುವುದರ ಪುರಾವೆ ಕೇಳುತ್ತಾರೆಯೇ ಎಂಬ ಭಾವನೆ ನನ್ನ ಮನಸ್ಸಿಗೆ ಬಂತು’ ಎಂದು ಬಿ.ವಿ.ನಾಗರತ್ನ ಹೇಳಿದರು.

‘ಮುಟ್ಟು ಆಗಿರುವ ಕಾರಣ ಅವರಿಗೆ (ಮಹಿಳಾ ಸ್ವಚ್ಛತಾ ಕಾರ್ಮಿಕರಿಗೆ) ಆ ದಿನ ಕೆಲಸ ಮಾಡಲು ಸಾಧ್ಯವಾಗದಿದ್ದರೆ, ಬೇರೆ ಯಾರನ್ನಾದರೂ ನಿಯೋಜಿಸಬಹುದಿತ್ತು. ಈ ಅರ್ಜಿಯಿಂದ ಏನಾದರೂ ಒಳಿತು ಉಂಟಾಗಲಿದೆ ಎಂದು ನಾವು ಭಾವಿಸುತ್ತೇವೆ’ ಎಂದರು.


‘ಇದೊಂದು ಗಂಭೀರ ಕ್ರಿಮಿನಲ್ ಪ್ರಕರಣವಾಗಿದ್ದು, ಗಮನಹರಿಸಬೇಕಾದ ವಿಷಯವಾಗಿದೆ’ ಎಂದು ಎಸ್‌ಸಿಬಿಎ ಅಧ್ಯಕ್ಷ ಮತ್ತು ಹಿರಿಯ ವಕೀಲ ವಿಕಾಸ್ ಸಿಂಗ್ ವಾದಿಸಿದರು. ಈ ಅರ್ಜಿಯನ್ನು ಡಿ.15ರಂದು ವಿಚಾರಣೆಗೆ ಪಟ್ಟಿ ಮಾಡಲಾಗಿದೆ.

ಏನಿದು ಘಟನೆ: ಮಹರ್ಷಿ ದಯಾನಂದ ವಿಶ್ವವಿದ್ಯಾಲಯದ ಮಹಿಳಾ ಸ್ವಚ್ಛತಾ ಕಾರ್ಮಿಕರಿಗೆ, ಮೇಲ್ವಿಚಾರಕರು ಕಿರುಕುಳ ನೀಡಿದ ಘಟನೆ ಅಕ್ಟೋಬರ್ 26ರಂದು ನಡೆದಿತ್ತು. ‘ಮುಟ್ಟಿನ ಕಾರಣ ನಮಗೆ ವೇಗವಾಗಿ ಕೆಲಸ ಮಾಡಲು ಆಗುತ್ತಿಲ್ಲ ಎಂದು ಹೇಳಿದೆವು. ಮುಟ್ಟು ಆಗಿರುವುದನ್ನು ಸಾಬೀತುಪಡಿಸಲು ಖಾಸಗಿ ಅಂಗದ ಫೋಟೊ ತೆಗೆದು ತೋರಿಸುವಂತೆ ಒತ್ತಾಯಿಸಿದರು. ನಾವು ನಿರಾಕರಿಸಿದಾಗ ನಿಂದಿಸಿ, ಕೆಲಸದಿಂದ ವಜಾಗೊಳಿಸುವ ಬೆದರಿಕೆ ಹಾಕಿದರು’ ಎಂದು ಆರೋಪಿಸಿ ಮೂವರು ಮಹಿಳಾ ಕಾರ್ಮಿಕರು ವಿ.ವಿ ಆಡಳಿತಕ್ಕೆ ದೂರು ನೀಡಿದ್ದರು. ಘಟನೆಗೆ ಸಂಬಂಧಿಸಿದಂತೆ ಇಬ್ಬರು ಮೇಲ್ವಿಚಾರಕರನ್ನು ಕೆಲಸದಿಂದ ಅಮಾನತು ಮಾಡಲಾಗಿದೆ ಎಂದು ವಿ.ವಿ ಪ್ರಕಟಣೆಯಲ್ಲಿ ತಿಳಿಸಿತ್ತು.

ರಾಜಸ್ಥಾನಕ್ಕೆ ನೋಟಿಸ್

ರಾಜಸ್ಥಾನದ ಕಾನೂನುಬಾಹಿರ ಮತಾಂತರ ನಿಷೇಧ ಕಾಯ್ದೆಯ (2025) ನಿಬಂಧನೆಗಳ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗೆ ಪ್ರತಿಕ್ರಿಯಿಸುವಂತೆ ಸುಪ್ರೀಂ ಕೋರ್ಟ್ ರಾಜಸ್ಥಾನ ಸರ್ಕಾರಕ್ಕೆ ಶುಕ್ರವಾರ ಸೂಚಿಸಿದೆ.

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಮತ್ತು ಇತರರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್, ಸಂದೀಪ್ ಮೆಹ್ತಾ ಅವರ ಪೀಠವು ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿದೆ. ಇದೇ ರೀತಿಯ ಅರ್ಜಿಗಳು ಸುಪ್ರೀಂ ಕೋರ್ಟ್ ಮುಂದೆ ಬಾಕಿ ಉಳಿದಿವೆ ಮತ್ತು ಈ ಅರ್ಜಿಯನ್ನು ಅವುಗಳ ಜತೆಗೆ ಸೇರಿಸುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮನವಿ ಮಾಡಿದರು. ಅದನ್ನು ಪೀಠ ಮಾನ್ಯ ಮಾಡಿತು.



‘ತೀರ್ಪಿಗೆ ಬದ್ಧವಾಗಿರಬೇಕು’

ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವಂತೆ ಮಹಾರಾಷ್ಟ್ರ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ (ಎಸ್‌ಇಸಿ) ಸೂಚಿಸಿರುವ ಸುಪ್ರೀಂ ಕೋರ್ಟ್, ಶೇ 50ರಷ್ಟು ಮೀಸಲಾತಿ ಮಿತಿಯನ್ನು ಉಲ್ಲಂಘಿಸಿರುವ ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳು ತನ್ನ ತೀರ್ಪನ್ನು ಅವಲಂಬಿಸಿರುತ್ತದೆ ಎಂದು ಸ್ಪಷ್ಟಪಡಿಸಿದೆ. ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು, ಸ್ಥಳೀಯ ಸಂಸ್ಥೆಗಳಲ್ಲಿ ಒಬಿಸಿ ಮೀಸಲಾತಿ ಕುರಿತ 27 ಅರ್ಜಿಗಳನ್ನು 2026ರ ಜನವರಿ 21ರಂದು ಮೂವರು ನ್ಯಾಯಮೂರ್ತಿಗಳ ಪೀಠ ವಿಚಾರಣೆ ಕೈಗೆತ್ತಿಕೊಳ್ಳಲಿದೆ ಎಂದು ಹೇಳಿತು.

ದೀರ್ಘಕಾಲದಿಂದ ಬಾಕಿ ಇರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಾಲ್ಕು ತಿಂಗಳೊಳಗೆ ನಡೆಸುವಂತೆ ಪೀಠವು 2025ರ ಮೇ ತಿಂಗಳಿನಲ್ಲಿ ನಿರ್ದೇಶಿಸಿತ್ತು. ಎಸ್‌ಇಸಿ ಪರ ಹಾಜರಾದ ಹಿರಿಯ ವಕೀಲ ಬಲ್ಬೀರ್ ಸಿಂಗ್, ‘ಒಟ್ಟು 246 ಪುರಸಭೆಗಳು ಮತ್ತು 42 ನಗರ ಪಂಚಾಯತ್‌ಗಳಲ್ಲಿ ಚುನಾವಣಾ ಪ್ರಕ್ರಿಯೆ ಆರಂಭವಾಗಿದೆ. ಈ ಪೈಕಿ 40 ಪುರಸಭೆಗಳು ಮತ್ತು 17 ನಗರ ಪಂಚಾಯತ್‌ಗಳಲ್ಲಿ ಮಾತ್ರ ಮೀಸಲಾತಿ ಮಿತಿ ಶೇ 50 ಅನ್ನು ದಾಟಿದೆ’ ಎಂದು ಮಾಹಿತಿ ನೀಡಿದರು.

ಈ ಹೇಳಿಕೆಯನ್ನು ದಾಖಲಿಸಿದ ಪೀಠ, ‘ಎಸ್‌ಇಸಿ ಚುನಾವಣೆಯನ್ನು ಮುಂದುವರಿಸಬಹುದು. ಆದರೆ ಫಲಿತಾಂಶಗಳು ಈ ಪ್ರಕರಣದ ತೀರ್ಪನ್ನು ಅವಲಂಬಿಸಿರುತ್ತದೆ’ ಎಂದು ಹೇಳಿತು.



ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಆವರಿಸಿದ್ದ ದಟ್ಟ ಮಂಜಿನ ನಡುವೆ ವಿಮಾನವೊಂದು ಲ್ಯಾಂಡ್ ಆಯಿತು – ಪಿಟಿಐ ಚಿತ್ರ

‘ಮಕ್ಕಳು ಉಸಿರುಗಟ್ಟುತ್ತಿದ್ದರೂ ಮೋದಿ ಮೌನ: ರಾಹುಲ್

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿನ ವಾಯುಮಾಲಿನ್ಯದ ಕುರಿತು ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ವಿಸ್ತೃತ ಚರ್ಚೆಯಾಗಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಆಗ್ರಹಿಸಿದ್ದಾರೆ.

‘ಪ್ರಧಾನಿ ಮೋದಿ ಅವರೇ... ಮಕ್ಕಳು ನಮ್ಮ ಕಣ್ಮುಂದೆಯೇ ಉಸಿರುಗಟ್ಟುತ್ತಿದ್ದಾರೆ. ಇಂಥ ‘ಆರೋಗ್ಯ ತುರ್ತುಪರಿಸ್ಥಿತಿ’ ಎದುರಾಗಿದ್ದರೂ ಮೌನವಹಿಸಿರುವುದು ಏಕೆ? ಈ ವಿಚಾರದಲ್ಲಿ ಸರ್ಕಾರವು ಏಕೆ ಯಾವುದೇ ತುರ್ತು ಕ್ರಮ ಜರುಗಿಸುತ್ತಿಲ್ಲ, ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತಿಲ್ಲ’ ಎಂದು ಅವರು ‘ಎಕ್ಸ್’ನಲ್ಲಿ ಪ್ರಶ್ನಿಸಿದ್ದಾರೆ.

ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ಸರ್ಕಾರವು ಶೀಘ್ರವೇ ಕಠಿಣ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

‘ನಮ್ಮ ಮಕ್ಕಳಿಗೆ ಶುದ್ಧ ಗಾಳಿ ಬೇಕು; ಅವರಿಗೆ ನೆಪಗಳು ಬೇಡ’ ಎಂದು ಹೇಳಿದ್ದಾರೆ.

ತಮ್ಮ ನಿವಾಸದಲ್ಲಿ ಮಹಿಳೆಯರೊಂದಿಗೆ ವಾಯು ಮಾಲಿನ್ಯ ವಿಚಾರವಾಗಿ ಸಂವಾದ ನಡೆಸಿರುವ ಅವರು, ಅದರ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ವಾಯು ಮಾಲಿನ್ಯದಿಂದ ತಮ್ಮ ಮಕ್ಕಳ ಆರೋಗ್ಯ ಮೇಲಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಹಲವು ತಾಯಂದಿರು ವಿಡಿಯೊದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

‘ದಿತ್ವಾ’ ಆತಂಕ

ಪಿಟಿಐ ಚಿತ್ರ



‘ದಿತ್ವಾ’ ಚಂಡಮಾರುತ ಹಾಗೂ ಹವಾಮಾನ ವೈಪರೀತ್ಯದ ಪರಿಣಾಮದಿಂದಾಗಿ ಕೇರಳದ ತಿರುವನಂತಪುರ ಬಂದರಿನಲ್ಲಿ ಶುಕ್ರವಾರ ಮೀನುಗಾರಿಕೆ ಬೋಟುಗಳು ಲಂಗರು ಹಾಕಿದ್ದವು

ಬಿಕ್ಲು ಕೊಲೆ: ಜಾಮೀನು ಅರ್ಜಿ ತಿರಸ್ಕೃತ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ನಾಲ್ವರು ಆರೋಪಿಗಳು ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಹೈಕೋರ್ಟ್ ತಿರಸ್ಕರಿಸಿದೆ.

ಜಾಮೀನು ಕೋರಿ ಕಿರಣ್ (ಆರೋಪಿ-2), ವಿಮಲ್ ರಾಜ್ (ಎ-3), ಪ್ರದೀಪ್ (ಎ-6) ಮತ್ತು ಆರ್.ಮದನ್ (ಎ-7) ಸಲ್ಲಿಸಿದ್ದ ಪ್ರತ್ಯೇಕ ಕ್ರಿಮಿನಲ್ ಅರ್ಜಿಗಳ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದೆ.

ಭಾರತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರಿದ್ದ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ಈ ಸಂಬಂಧ ಭಾರತಿನಗರ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿ ಪೊಲೀಸರಿಗೆ ವಹಿಸಲಾಗಿದೆ. ಪ್ರಕರಣದಲ್ಲಿ ಕೆ.ಆರ್.ಪುರ ಶಾಸಕ ಬೈರತಿ ಬಸವರಾಜ್ ಐದನೇ ಆರೋಪಿಯಾಗಿದ್ದಾರೆ.

ತನಿಖೆ ನಡೆಸಿದ್ದ ಪೊಲೀಸರು ಅರ್ಜಿದಾರ ಆರೋಪಿಗಳನ್ನು ಬಂಧಿಸಿದ್ದರು. ‘ಪ್ರಕರಣ ದಾಖಲಾಗಿ 90 ದಿನ ಕಳೆದಿದ್ದರೂ ತನಿಖಾಧಿಕಾರಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿಲ್ಲ’ ಎಂಬ ಕಾರಣಕ್ಕೆ ಆರೋಪಿಗಳು ಡಿಫಾಲ್ಟ್ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನಗರದ 82ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ 2025ರ ಅಕ್ಟೋಬರ್ 17ರಂದು ವಜಾಗೊಳಿಸಿತ್ತು.

‘ಹೊಸ ಅಣೆಕಟ್ಟೆ ನಿರ್ಮಾಣ ಕಾರ್ಯಸಾಧ್ಯವಲ್ಲ’

ನವದೆಹಲಿ: ಹೆಚ್ಚಿನ ವೆಚ್ಚ, ಭೂಸ್ವಾಧೀನ ಅಡೆತಡೆಗಳು ಮತ್ತು ಕುಗ್ಗುತ್ತಿರುವ ನದಿ ಹರಿವಿನಿಂದಾಗಿ ಹೊಸ ಅಣೆಕಟ್ಟುಗಳ ನಿರ್ಮಾಣ ಇನ್ನು ಮುಂದೆ ಕಾರ್ಯಸಾಧ್ಯವಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅಭಿಪ್ರಾಯಪಟ್ಟರು.

ಶುಕ್ರವಾರ ಇಲ್ಲಿ ಜರುಗಿದ ಜಲಶಕ್ತಿ ಸಚಿವಾಲಯದ ಎರಡು ದಿನಗಳ ಶೃಂಗಸಭೆ ಉದ್ಘಾಟಿಸಿದ ಅವರು, ‘ಕೇಂದ್ರ ಮತ್ತು ರಾಜ್ಯಗಳು ದೊಡ್ಡ ಪ್ರಮಾಣದ ನೀರಿನ ಸಂರಕ್ಷಣೆ, ಸಮುದಾಯ ಭಾಗವಹಿಸುವಿಕೆ ಮತ್ತು ಅಂತರ್ಜಲ ಮರುಪೂರಣಕ್ಕೆ ಕೈಜೋಡಿಸಬೇಕು’ ಎಂದು ಸಲಹೆ ನೀಡಿದರು.

‘ದೇಶದಲ್ಲಿ 6,500ಕ್ಕೂ ಹೆಚ್ಚು ಅಣೆಕಟ್ಟುಗಳಿವೆ. ಆದರೆ, ನಾವು 750 ಬಿಸಿಎಂ ನೀರನ್ನು ಮಾತ್ರ ಸಂಗ್ರಹಿಸುತ್ತೇವೆ. ಅಣೆಕಟ್ಟು ನಿರ್ಮಿಸಲು 25 ವರ್ಷಗಳು ಬೇಕಾಗುತ್ತದೆ. ₹25,000 ಕೋಟಿ ವೆಚ್ಚವಾಗುತ್ತದೆ. ನಮಗೆ ಅಷ್ಟೊಂದು ಸಮಯವಿದೆಯೇ? ನಮ್ಮಲ್ಲಿ ಅಷ್ಟೊಂದು ಹಣವಿದೆಯೇ?’ ಎಂದು ಅವರು ಕೇಳಿದರು.

ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿ, ‘ಕರ್ನಾಟಕದ ನಾರಾಯಣಪುರ ಎಡದಂಡೆ ಕಾಲುವೆಯು ಏಷ್ಯಾದ ಮೊಟ್ಟಮೊದಲ ಸಂಪೂರ್ಣ ಸ್ವಯಂಚಾಲಿತ ನೀರಾವರಿ ಯೋಜನೆ. ಇಲ್ಲಿ ಸ್ಕಾಡಾ ತಂತ್ರಜ್ಞಾನ ಬಳಸಿ ನೀರಿನ ಮಿತವ್ಯಯ ಮಾಡಲಾಗಿದೆ ಹಾಗೂ ಕಟ್ಟಕಡೆಯ ಹಂತದ ವರೆಗೂ ನೀರಿನ ಯಶಸ್ವಿ ಹಂಚಿಕೆ ಮಾಡಲಾಗಿದೆ’ ಎಂದರು. ಕಲ್ಲಿನ ಪ್ರದೇಶದಲ್ಲೂ ತಂತ್ರಜ್ಞಾನ ಬಳಸಿ ನೀರಿನ ಸಂರಕ್ಷಣೆ ಮಾಡಬಹುದು ಎಂಬುದನ್ನು ಐಹೊಳೆ ದೇವಸ್ಥಾನದಲ್ಲಿ ಸಾಬೀತುಪಡಿಸಲಾಗಿದೆ ಎಂದರು.

‘ಸ್ವಚ್ಛ ಭಾರತ್ (ಗ್ರಾಮೀಣ) ಎರಡನೇ ಹಂತದಲ್ಲಿ ಬೂದು ನೀರಿನ ನಿರ್ವಹಣೆ ಯೋಜನೆಯಲ್ಲಿ ಶೇ 91ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದರು.

₹78 ಲಕ್ಷ ಸೈಬರ್ ವಂಚನೆ: 14 ಮಂದಿ ಬಂಧನ

ಭೀಮಾವರಂ (ಪಿಟಿಐ): ಕಾಂಬೋಡಿಯಾದಿಂದ ಕಾರ್ಯನಿರ್ವಹಿಸುತ್ತಿರುವ ಸೈಬರ್ ವಂಚನೆ ಜಾಲವೊಂದಕ್ಕೆ ಸಂಬಂಧಿಸಿದ 14 ಸದಸ್ಯರನ್ನು ಆಂಧ್ರ ಪ್ರದೇಶ ಪೊಲೀಸರು ಬುಧವಾರ ಬಂಧಿಸಿದ್ದಾರೆ. ಡಿಜಿಟಲ್ ಅರೆಸ್ಟ್ ಮೂಲಕ 75 ವರ್ಷದ ಭೀಮಾವರಂನ ನಿವೃತ್ತ ಪ್ರಾಧ್ಯಾಪಕನಿಗೆ ಇವರು ₹78 ಲಕ್ಷ ವಂಚಿಸಿದ್ದಾರೆ.

ಪಶ್ಚಿಮ ಗೋದಾವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅದ್ನಾನ್ ನಯೀಮ್ ಆಸ್ಮಿ ಅವರು ಗುರುವಾರ ಮಾಹಿತಿ ನೀಡಿ, ‘ವಾಟ್ಸ್‌ಆ್ಯಪ್ ಕರೆ ಮಾಡಿ, ತಮ್ಮನ್ನು ತಾವು ಬೆಂಗಳೂರು ಪೊಲೀಸರು ಎಂದು ಬಿಂಬಿಸಿಕೊಂಡ ವಂಚಕರು ಸುಪ್ರೀಂ ಕೋರ್ಟ್‌ನ ನಕಲು ದಾಖಲೆಗಳನ್ನು ತೋರಿಸಿ ಹಣ ವಂಚಿಸಿದ್ದಾರೆ’ ಎಂದರು.

‘ವಂಚಿಸಿದ್ದ ಹಣದಲ್ಲಿ ₹42 ಲಕ್ಷವನ್ನು ವಶಪಡಿಸಿಕೊಳ್ಳಲಾಗಿದೆ. ಜಾಲದ ಪ್ರಮುಖ ಆರೋಪಿ ಮುಂಬೈನ ರಹತೆ ಜೆ. ನಾರಾಯಣ್ ಎಂಬುವರು ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಬೌದ್ಧರಿಗೆ ಅನ್ವಯವಾಗುವ ಕಾನೂನು ಪರಿಶೀಲನೆಗೆ ಸೂಚನೆ

ನವದೆಹಲಿ (ಪಿಟಿಐ): ಕೆಲ ಹಿಂದೂ ವೈಯಕ್ತಿಕ ಕಾನೂನುಗಳು ಬೌದ್ಧ ಧರ್ಮದವರಿಗೂ ಅನ್ವಯವಾಗುತ್ತಿದ್ದು, ಅವುಗಳಿಂದ ಧಾರ್ಮಿಕ ಆಚರಣೆಯ ಸ್ವಾತಂತ್ರ್ಯ ಸೇರಿದಂತೆ ಮೂಲಭೂತ ಹಕ್ಕುಗಳಿಗೆ ಚ್ಯುತಿ ಉಂಟಾಗುತ್ತಿದೆ ಎಂದು ಬೌದ್ಧ ಧರ್ಮೀಯರ ವೈಯಕ್ತಿಕ ಕಾನೂನು ಕ್ರಿಯಾ ಸಮಿತಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಈ ಕುರಿತು ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠ, ಈ ಅರ್ಜಿಯನ್ನು ಬೌದ್ಧರ ಗುಂಪಿನ ಪ್ರಾತಿನಿಧ್ಯ ಎಂದು ಪರಿಗಣಿಸಿ, ಪರಿಶೀಲಿಸುವಂತೆ ಕಾನೂನು ಆಯೋಗಕ್ಕೆ ಶುಕ್ರವಾರ ತಿಳಿಸಿದೆ.

ಅಸ್ತಿತ್ವದಲ್ಲಿರುವ ಕೆಲ ಕಾನೂನು ನಿಬಂಧನೆಗಳು ಬೌದ್ಧ ಸಮುದಾಯದವರ ಮೂಲಭೂತ ಹಕ್ಕುಗಳು ಮತ್ತು ಸಾಂಸ್ಕೃತಿಕ ಆಚರಣೆಗಳಿಗೆ ವಿರುದ್ಧವಾಗಿವೆ ಎಂದು ಅರ್ಜಿಯಲ್ಲಿ ಪ್ರತಿಪಾದಿಸಲಾಗಿದೆ. ಇದು ಸಾಂವಿಧಾನಿಕ ಮತ್ತು ಶಾಸನಬದ್ಧ ಬದಲಾವಣೆಗಳನ್ನು ಕೋರಿದ್ದು, ಪರಿಶೀಲಿಸುವಂತೆ ಪೀಠ ಆಯೋಗಕ್ಕೆ ಸೂಚಿಸಿದೆ. ಹಿಂದೂ ವಿವಾಹ ಕಾಯ್ದೆ (1955), ಹಿಂದೂ ಉತ್ತರಾಧಿಕಾರ ಕಾಯ್ದೆ (1956), ಹಿಂದೂ ಅಪ್ರಾಪ್ತ ವಯಸ್ಕ ಮತ್ತು ಪಾಲನಾ ಕಾಯ್ದೆ (1956) ಮತ್ತು ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆಗಳು (1956) ಹಿಂದೂಗಳಂತೆಯೇ ಬೌದ್ಧರನ್ನು ನಿಯಂತ್ರಿಸುತ್ತಿವೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ. ಅಲ್ಲದೆ, ಸಂವಿಧಾನದ 25ನೇ ವಿಧಿಯ ‘ಹಿಂದೂ’ ವ್ಯಾಖ್ಯಾನದೊಳಗೆ ಬೌದ್ಧರು, ಜೈನರು ಮತ್ತು ಸಿಖ್ಖರನ್ನೂ ಸೇರಿಸಲಾಗಿದೆ ಎಂದು ತಿಳಿಸಲಾಗಿದೆ.

ವಿಚಾರಣೆಯ ಆರಂಭದಲ್ಲಿ ಈ ಅರ್ಜಿಯ ಸ್ವರೂಪವನ್ನು ಪ್ರಶ್ನಿಸಿದ ಸಿಜೆಐ, ‘ಸಂವಿಧಾನ ಮತ್ತು ವೈಯಕ್ತಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಆದೇಶವನ್ನು ನೀವು ನಿರೀಕ್ಷಿಸುತ್ತಿದ್ದೀರಾ? ಸಂವಿಧಾನದ ಮೂಲ ರಚನೆಯ ತಿದ್ದುಪಡಿಯನ್ನೂ ಬಯಸುತ್ತಿದ್ದೀರಾ? ಈ ಸಂಬಂಧ ನೀವು ಸರ್ಕಾರಿ ಪ್ರಾಧಿಕಾರವನ್ನು ಸಂಪರ್ಕಿಸಿದ್ದೀರಾ?’ ಎಂದು ಕೇಳಿತು.ಈ ಸಂಬಂಧ ಬೌದ್ಧ ಸಮುದಾಯದವರು ಹಲವು ಬಾರಿ ಮನವಿಗಳನ್ನು ಸಲ್ಲಿಸಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ಪೀಠದ ಗಮನಕ್ಕೆ ತಂದರು.

ಆಗ ಪ್ರತಿಕ್ರಿಯಿಸಿದ ಪೀಠ, ‘ಕಾನೂನು ಆಯೋಗವು ದೇಶದ ಏಕೈಕ ಕಾನೂನು ತಜ್ಞ ಸಂಸ್ಥೆ. ಅದು ಸಾಮಾನ್ಯವಾಗಿ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅಥವಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯ ನೇತೃತ್ವದಲ್ಲಿ ಇರುತ್ತದೆ. ಈ ರೀತಿಯ ಅರ್ಜಿಗಳನ್ನು ಪರಿಶೀಲಿಸಿ, ಅಗತ್ಯವಿದ್ದರೆ ಸಾಂವಿಧಾನಿಕ ತಿದ್ದುಪಡಿಗಳಿಗೆ ಶಿಫಾರಸು ಮಾಡುತ್ತದೆ’ ಎಂದು ಹೇಳಿತು.

ಕೇರಳ ಕಾಂಗ್ರೆಸ್ ಘಟಕಕ್ಕೆ ಸಂಕಷ್ಟ ತಂದಿತ್ತ ಅತ್ಯಾಚಾರ ಪ್ರಕರಣ

ಕಾಂಗ್ರೆಸ್ ಶಾಸಕನ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ



ರಾಹುಲ್

ತಿರುವನಂತಪುರ: ಕಾಂಗ್ರೆಸ್ ಪಕ್ಷದಿಂದ ಈಗಾಗಲೇ ಅಮಾನತುಗೊಂಡಿರುವ ಪಾಲಕ್ಕಾಡ್ ಕ್ಷೇತ್ರದ ಕಾಂಗ್ರೆಸ್ ಶಾಸಕ ರಾಹುಲ್ ಮಾಂಕೂಟತ್ತಿಲ್ ವಿರುದ್ಧ ಅತ್ಯಾಚಾರ ಹಾಗೂ ಬಲವಂತದ ಗರ್ಭಪಾತದ ಆರೋಪದ ಮೇಲೆ ಪೊಲೀಸ್ ಪ್ರಕರಣ ದಾಖಲಾಗಿದೆ.

ಇದರ ಬೆನ್ನಲ್ಲೇ, ರಾಹುಲ್ ತಲೆಮರೆಸಿಕೊಂಡಿದ್ದು, ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದಾರೆ. ಆರೋಪಿಯು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ.

ಇದೇ ಡಿಸೆಂಬರ್ 9 ಹಾಗೂ 11ರಂದು ರಾಜ್ಯ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ಆಡಳಿತಾರೂಢ ಎಲ್‌ಡಿಎಫ್ ಹಾಗೂ ಕಾಂಗ್ರೆಸ್ ನೇತೃತ್ವದ ಯುಡಿಎಫ್ ವಿರುದ್ಧ ಭಾರಿ ಹಣಾಹಣಿ ನಡೆಯುತ್ತಿದೆ. ಇದರ ಮಧ್ಯದಲ್ಲಿಯೇ, ರಾಹುಲ್ ವಿರುದ್ಧ ಆರೋಪ ಕೇಳಿಬಂದಿದೆ. ಶಾಸಕರ ವಿರುದ್ಧ ಹಿಂದೆ ಹಲವು ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಲೈಂಗಿಕ ಕಿರುಕುಳದ ದೂರು ನೀಡಿದ್ದರು. ಈ ಬೆಳವಣಿಗೆ ಬಳಿಕ ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಕಳೆದ ಆಗಸ್ಟ್‌ನಲ್ಲಿ ಪಕ್ಷದಿಂದಲೂ ಅಮಾನತುಗೊಳಿಸಲಾಗಿತ್ತು. ನಂತರ ಪೊಲೀಸರೇ ಸ್ವಯಂಪ್ರೇರಿತವಾಗಿ ಕಿರುಕುಳದ ಪ್ರಕರಣ ದಾಖಲಿಸಿದ್ದರು. ಆದರೆ, ಯಾವ ಮಹಿಳೆ ಕೂಡ ದೂರು ದಾಖಲಿಸಲು ಮುಂದೆ ಬಂದಿರಲಿಲ್ಲ. ಈ ಕಾರಣದಿಂದಲೇ, ಕಳೆದ ಗುರುವಾರದವರೆಗೂ ಶಾಸಕರು ಹಲವು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

ಸಂತ್ರಸ್ತೆಯಿಂದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭೇಟಿ

ರಾಹುಲ್ ನನ್ನ ಮೇಲೆ ಹಲವು ಲೈಂಗಿಕ ದೌರ್ಜನ್ಯವೆಸಗಿದ್ದು, ಬಲವಂತವಾಗಿ ಗರ್ಭಪಾತವೆಸಗಿದ್ದಾರೆ ಎಂದು ಆರೋಪಿಸಿ ಸಂತ್ರಸ್ತೆಯೊಬ್ಬರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭೇಟಿಯಾಗಿ ಗುರುವಾರ ದೂರು ನೀಡಿದ್ದರು. ಮದುವೆಯಾಗುವುದಾಗಿ ನಂಬಿಸಿ, ಹಲವು ಸಲ ಅತ್ಯಾಚಾರವೆಸಗಿದ್ದರು ಎಂದು ದೂರಿನಲ್ಲಿ ತಿಳಿಸಿದ್ದರು.

ಮಹಿಳೆಯ ದೂರು ಆಧರಿಸಿ, ಶಾಸಕ ವಿರುದ್ಧ ಬಿಎನ್‌ಎಸ್‌ನ ಅಡಿಯಲ್ಲಿ ಅತ್ಯಾಚಾರ, ಬಲವಂತದ ಗರ್ಭಪಾತದ ಪ್ರಕರಣ ದಾಖಲಿಸಲಾಗಿತ್ತು.ಇದರ ಬೆನ್ನಲ್ಲೇ, ಶಾಸಕ ರಾಹುಲ್ ತಿರುವನಂತಪುರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ಸಂತ್ರಸ್ತೆ ಜೊತೆ ಒಪ್ಪಿತ ದೈಹಿಕ ಸಂಬಂಧವಿತ್ತು. ಬಲವಂತದ ಗರ್ಭಪಾತಕ್ಕೆ ಒತ್ತಾಯಿಸಿರಲಿಲ್ಲ ಎಂದು ಆರೋಪವನ್ನು ನಿರಾಕರಿಸಿದ್ದಾರೆ. ದೂರಿನ ಕುರಿತು ಪ್ರತಿಕ್ರಿಯಿಸಿದ ಕಾಂಗ್ರೆಸ್ ಕೇರಳ ಘಟಕದ ಅಧ್ಯಕ್ಷ ಸನ್ನಿ ಜೋಸೆಫ್, ‘ರಾಹುಲ್ ಮಾಂಕೂಟತ್ತಿಲ್ ಅವರನ್ನು ಈಗಾಗಲೇ ಪಕ್ಷದಿಂದ ಅಮಾನತುಗೊಳಿಸಲಾಗಿದೆ. ಕಾನೂನು ತನ್ನದೇ ಆದ ಕ್ರಮ ಕೈಗೊಳ್ಳಲಿದೆ’ ಎಂದು ತಿಳಿಸಿದ್ದಾರೆ.

ಭಾರತಕ್ಕೆ ಸುಲಭ ತುತ್ತಾದ ಚಿಲಿ

ಜೂನಿಯರ್ ಪುರುಷರ ವಿಶ್ವಕಪ್ ಹಾಕಿ: ರೋಶನ್, ದಿಲ್‌ರಾಜ್ ಮಿಂಚು

ಚೆನ್ನೈ (ಪಿಟಿಐ): ರೋಶನ್ ಕುಜೂರ್ ಮತ್ತು ದಿಲ್‌ರಾಜ್ ಅವರ ಅಮೋಘ ಆಟದ ನೆರವಿನಿಂದ ಆತಿಥೇಯ ಭಾರತ ತಂಡವು ಶುಕ್ರವಾರ ಆರಂಭವಾದ ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಪಂದ್ಯದಲ್ಲಿ 7–0 ಗೋಲುಗಳಿಂದ ಚಿಲಿ ತಂಡವನ್ನು ಸುಲಭವಾಗಿ ಮಣಿಸಿ, ಶುಭಾರಂಭ ಮಾಡಿತು.



ಇಲ್ಲಿನ ಮೇಯರ್ ರಾಧಾಕೃಷ್ಣನ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಭಾರತ ಪರ ರೋಶನ್ (16ನೇ ಮತ್ತು 21ನೇ ನಿಮಿಷ), ದಿಲ್‌ರಾಜ್ (25ನೇ ಮತ್ತು 34ನೇ) ತಲಾ ಎರಡು ಗೋಲು ಗಳಿಸಿದರೆ, ಅಜಿತ್ ಯಾದವ್ (35ನೇ), ಅನ್ಮೋಲ್ ಎಕ್ಕಾ (48ನೇ) ಮತ್ತು ನಾಯಕ ರೋಹಿತ್ (60ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ತಲುಪಿಸಿದರು.

21 ವರ್ಷದೊಳಗಿನವರ ವಿಭಾಗದಲ್ಲಿ ಎರಡನೇ ಕ್ರಮಾಂಕದ ಭಾರತ ತಂಡವು ಆರಂಭದಿಂದಲೇ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ಮೊದಲ ಕ್ವಾರ್ಟರ್‌ನಲ್ಲಿ ಚೆಂಡಿನ ಮೇಲೆ ಬಹುಕಾಲ ಹಿಡಿತ ಸಾಧಿಸಿದರೂ ಎದುರಾಳಿ ತಂಡದ ರಕ್ಷಣಾವ್ಯೂಹವನ್ನು ಭೇದಿಸಲು ಸಾಧ್ಯವಾಗಲಿಲ್ಲ. 15ನೇ ನಿಮಿಷದಲ್ಲಿ ಭಾರತಕ್ಕೆ ಮೊದಲ ಪೆನಾಲ್ಟಿ ಕಾರ್ನರ್ ಸಿಕ್ಕರೂ ಅವರನ್ನು ಗೋಲಾಗಿ ಪರಿವರ್ತಿಸುವಲ್ಲಿ ರೋಹಿತ್ ಎಡವಿದರು.

ಎರಡನೇ ಕ್ವಾರ್ಟರ್‌ನಲ್ಲಿ ಭಾರತದ ಫಾರ್ವರ್ಡ್‌ಗಳು ಚುರುಕಿನ ಆಟ ಪ್ರದರ್ಶಿಸಿದ್ದರಿಂದ ಮೂರು ಗೋಲುಗಳು ದಾಖಲಾದವು. 16ನೇ ನಿಮಿಷದಲ್ಲಿ 'ಡೆಕ್‌ಲಾಕ್' ಅನ್ನು ಭೇದಿಸಿದ ರೋಶನ್ ಭಾರತದ ಪಾಳಯದಲ್ಲಿ ಸಂಭ್ರಮ ಮೂಡಿಸಿದರು. ಅದಾದ ಐದು ನಿಮಿಷಗಳ ಅಂತರದಲ್ಲಿ ಮತ್ತೊಂದು ಫೀಲ್ಡ್ ಗೋಲು ದಾಖಲಿಸಿದ ಅವರು ಮುನ್ನಡೆಯನ್ನು ದ್ವಿಗುಣಗೊಳಿಸಿದರು. ಅರ್ಷದೀಪ್ ಸಿಂಗ್ ನೀಡಿದ ಪಾಸ್ ಪಡೆದ ಅವರು ಚೆಂಡನ್ನು ಯಶಸ್ವಿಯಾಗಿ ಗುರಿ ತಲುಪಿಸಿದರು. ಅದರ ಬೆನ್ನಲ್ಲೇ ದಿಲ್‌ರಾಜ್ ಗೋಲು ದಾಖಲಿಸಿದ್ದರಿಂದ ಮೊದಲಾರ್ಧದ ವೇಳೆಗೆ ಭಾರತ ತಂಡವು ಸಂಪೂರ್ಣ ಹಿಡಿತ ಸಾಧಿಸಿತು.

ಮೂರನೇ ಕ್ವಾರ್ಟರ್ ಆರಂಭ ಗೊಂಡ ನಾಲ್ಕನೇ ನಿಮಿಷದಲ್ಲಿ ಅಂಕಿತ್ ಪಾಲ್ ಅವರಿಂದ ಪಾಸ್ ಪಡೆದ ದಿಲ್‌ರಾಜ್ ತಮ್ಮ ಎರಡನೇ ಗೋಲು ದಾಖಲಿಸಿದರು. ಇದಾದ ಒಂದೇ ನಿಮಿಷ ದಲ್ಲಿ ಅಜಿತ್ ಆಕರ್ಷಕ ರಿವರ್ಸ್ ಹಿಟ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದರು.

40ನೇ ನಿಮಿಷದಲ್ಲಿ ಚಿಲಿ ತಂಡಕ್ಕೆ ಮೊದಲ ಪೆನಾಲ್ಟಿ ಕಾರ್ನರ್ ಸಿಕ್ಕಿತಾದರೂ, ಅದನ್ನು ಗೋಲಾಗಿ ಪರಿವರ್ತಿಸಲು ಭಾರತದ ಡಿಫೆಂಡರ್‌ಗಳು ಅವಕಾಶ ನೀಡಲಿಲ್ಲ. 48ನೇ ನಿಮಿಷದಲ್ಲಿ ಅನ್ಮೋಲ್ ಮತ್ತು ಹೂಟರ್‌ಗೆ 49 ಸೆಕೆಂಡ್ ಬಾಕಿ ಇರುವಂತೆ ರೋಹಿತ್ ಗೋಲು ದಾಖಲಿಸಿ ಭಾರತದ ಗೆಲುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸಿದರು.

ಭಾರತ ತಂಡವು ತನ್ನ ಎರಡನೇ ಪಂದ್ಯದಲ್ಲಿ ಒಮಾನ್ ತಂಡವನ್ನು ಶನಿವಾರ ಎದುರಿಸಲಿದೆ.

ಅರ್ಜೆಂಟೀನಾ ತಂಡವು ಸಿ ಗುಂಪಿನ ಪಂದ್ಯದಲ್ಲಿ 4–1ರಿಂದ ಜಪಾನ್ ವಿರುದ್ಧ ಗೆಲುವು ಸಾಧಿಸಿತು. ಇದೇ ಗುಂಪಿನ ಮತ್ತೊಂದು ಹಣಾಹಣಿಯಲ್ಲಿ ನ್ಯೂಜಿಲೆಂಡ್ 5–3ರಿಂದ ಚೀನಾ ತಂಡವನ್ನು ಹಾಗೂ ಬಿ ಗುಂಪಿನ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡವು 4–0ರಿಂದ ಒಮಾನ್ ತಂಡವನ್ನು ಸೋಲಿಸಿತು.



ಗೋಲು ಗಳಿಸಿದ ದಿಲ್‌ರಾಜ್ ಸಿಂಗ್ (ಜೆರ್ಸಿ ಸಂಖ್ಯೆ 22) ಅವರನ್ನು ನಾಯಕ ರೋಹಿತ್ (ಎಡ) ಮತ್ತು ಸಹ ಆಟಗಾರರು ಅಭಿನಂದಿಸಿದರು ಪಿಟಿಐ ಚಿತ್ರ

ಜರ್ಮನಿ ಶುಭಾರಂಭ

ಮದುರೈ (ಪಿಟಿಐ): ಹಾಲಿ ಚಾಂಪಿಯನ್ ಜರ್ಮನಿ ತಂಡವು 4–0 ಗೋಲುಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿ, ತನ್ನ ಅಭಿಯಾನವನ್ನು ಆರಂಭಿಸಿತು.

ಎ ಗುಂಪಿನಲ್ಲಿರುವ ಏಳು ಬಾರಿಯ ಚಾಂಪಿಯನ್ ಜರ್ಮನಿ ಪರ ಜಸ್ಟಸ್ ವಾರ್ವೆಗ್ (19ನೇ ಮತ್ತು 56ನೇ ನಿಮಿಷ) ಎರಡು ಫೀಲ್ಡ್ ಗೋಲು ಗಳಿಸಿದರು. ಬೆನ್ ಹ್ಯಾಸ್ಬಾಚ್ (43ನೇ) ಮತ್ತು ಪಾಲ್ ಗ್ಲಾಂಡರ್ (44ನೇ) ಅವರು ತಲಾ ಒಂದೊಂದು ಪೆನಾಲ್ಟಿ ಕಾರ್ನರ್‌ಅನ್ನು ಗೋಲಾಗಿ ಪರಿವರ್ತಿಸಿದರು.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಐರ್ಲೆಂಡ್ ತಂಡವು 4–3 ಗೋಲುಗಳಿಂದ ಕೆನಡಾ ತಂಡದ ಮೇಲೆ ರೋಚಕ ಜಯಗಳಿಸಿತು. ಮೂರನೇ ಕ್ವಾರ್ಟರ್ ಅಂತ್ಯಕ್ಕೆ 4–1 ಹಿನ್ನಡೆಯಲ್ಲಿದ್ದ ಕೆನಡಾ ತಂಡವು, ಕೊನೆಯ ಕ್ವಾರ್ಟರ್‌ನಲ್ಲಿ ಎರಡು ಗೋಲು ಗಳಿಸಿ ತೀವ್ರ ಪ್ರತಿರೋಧ ತೋರಿತು.

ಸಮಬಲ ಸಾಧಿಸುವ ಕೆನಡಾ ಆಟಗಾರರ ಕೊನೆಗಳಿಗೆಯ ಪ್ರಯತ್ನಗಳು ಸಫಲವಾಗಲಿಲ್ಲ.


ಟಿ.ಟಿ ವಿಶ್ವಕಪ್: ಭಾರತ ತಂಡಕ್ಕೆ ಯಶಸ್ವಿನಿ



ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಆಟಗಾರ್ತಿ ಯಶಸ್ವಿನಿ ಘೋರ್ಪಡೆ ಅವರು ಚೀನಾದ ಚೆಂಗ್ಡು ನಗರದಲ್ಲಿ ನಡೆಯಲಿರುವ ಐಟಿಟಿಎಫ್ ಮಿಶ್ರ ತಂಡ ಟೇಬಲ್ ಟೆನಿಸ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮಹಿಳಾ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಈ ಟೂರ್ನಿಯು ನವೆಂಬರ್ 30ರಿಂದ ಡಿಸೆಂಬರ್ 7ರ ವರೆಗೆ ನಡೆಯಲಿದೆ. 20 ವರ್ಷ ವಯಸ್ಸಿನ ಯಶಸ್ವಿನಿ ಅವರು ದೆಹಲಿಯಲ್ಲಿ ಈಚೆಗೆ ನಡೆದ ರಾಷ್ಟ್ರೀಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕಂಚು ಜಯಿಸಿದ್ದರು.

ತಂಡ ಹೀಗಿದೆ: ಪುರುಷರು: ಮಾನವ್ ಠಕ್ಕರ್, ಮಾನುಷ್ ಶಾ, ಜ್ಞಾನಶೇಖರನ್ ಸತ್ಯನ್ ಹಾಗೂ ಪಾಯಸ್ ಜೈನ್. ಮಹಿಳೆಯರು: ಮನಿಕಾ ಬತ್ರಾ, ದಿಯಾ ಚಿತಳೆ, ಯಶಸ್ವಿನಿ ಘೋರ್ಪಡೆ ಹಾಗೂ ಸ್ವಸ್ತಿಕಾ ಘೋಷ್.



ಜನಪ್ರಿಯ ಹಿಟ್ ವೆಬ್ ಸರಣಿಯ ಮೂರನೇ ಸೀಸನ್ ಪ್ರಶಂಸೆಯ ವಿಮರ್ಶೆಗಳನ್ನು ಪಡೆದಿದೆ!

ಅನುಕೂಲ್ ಆಟಕ್ಕೆ ಒಲಿದ ಜಯ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ: ಕರ್ನಾಟಕಕ್ಕೆ ಸೋಲು

ಅಹಮದಾಬಾದ್ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಅನುಕೂಲ್ ರಾಯ್ (ಔಟಾಗದೇ 95; 58ಎ) ಅವರ ಏಕಾಂಗಿ ಹೋರಾಟದ ಬಲದಿಂದ ಜಾರ್ಖಂಡ್ ತಂಡವು ಶುಕ್ರವಾರ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಎರಡು ವಿಕೆಟ್‌ಗಳ ರೋಚಕ ಜಯ ಸಾಧಿಸಿತು.

ಕೊನೆಯ ಓವರ್‌ವರೆಗೆ ಪ್ರೇಕ್ಷಕರನ್ನು ತುದಿಗಾಲಿನಲ್ಲಿ ನಿಲ್ಲಿಸಿದ್ದ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಎರಡು ಎಸೆತಗಳು ಬಾಕಿ ಇರುವಂತೆ ಜಾರ್ಖಂಡ್ ಜಯಭೇರಿ ಬಾರಿಸಿತು. ಸತತ ಎರಡು ಪಂದ್ಯಗಳನ್ನು ಗೆದ್ದ ಜಾರ್ಖಂಡ್ (8 ಅಂಕ) ತಂಡವು ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಗೆಲುವಿಗೆ 158 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಜಾರ್ಖಂಡ್ ತಂಡವು ಒಂದು ಹಂತದಲ್ಲಿ 60 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಆದರೆ, ಅನುಕೂಲ್ ಅವರು ಛಲಬಿಡದೆ ಹೋರಾಟ ನಡೆಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.



ಅನುಕೂಲ್ ರಾಯ್

ಟಾಸ್ ಗೆದ್ದ ಜಾರ್ಖಂಡ್ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಕರ್ನಾಟಕ ತಂಡಕ್ಕೆ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 157 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತ್ತು. ನಾಯಕ ಮಯಂಕ್ ಅಗರವಾಲ್ (37;28ಎ) ಮತ್ತು ಸ್ಮರಣ್ ರವಿಚಂದ್ರನ್ (32;29ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಎದುರಾಳಿ ತಂಡದ ಸುಶಾಂತ್ ಮಿಶ್ರಾ ಮೂರು ವಿಕೆಟ್ ಪಡೆದರೆ, ಸೌರಭ್ ಶೇಖರ್ ಮತ್ತು ಅನುಕೂಲ್ ರಾಯ್ ತಲಾ ಎರಡು ವಿಕೆಟ್ ಪಡೆದರು.

ಜಾರ್ಖಂಡ್ ತಂಡಕ್ಕೆ ಆರಂಭದಲ್ಲೇ ವಿದ್ಯಾಧರ ಪಾಟೀಲ್ (45ಕ್ಕೆ 3) ಪೆಟ್ಟು ನೀಡಿದರು. 38 ರನ್ ಗಳಿಸುವಷ್ಟರಲ್ಲಿ ಆರಂಭದ ಮೂರು ಬ್ಯಾಟರ್‌ಗಳು ಪೆವಿಲಿಯನ್ ಸೇರಿಕೊಂಡಿದ್ದರು. ಆದರೆ, ಈ ಹಂತದಲ್ಲಿ ಕ್ರೀಸ್‌ಗೆ ಬಂದ ಅನುಕೂಲ್ ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಅವರ ಇನಿಂಗ್ಸ್‌ನಲ್ಲಿ ಐದು ಸಿಕ್ಸರ್, ಒಂಬತ್ತು ಬೌಂಡರಿಗಳಿದ್ದವು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 157 (ಮಯಂಕ್ ಅಗರವಾಲ್ 37, ಆರ್. ಸ್ಮರಣ್ 32; ಅನುಕೂಲ್ ರಾಯ್ 13ಕ್ಕೆ 2, ಸುಶಾಂತ್ ಮಿಶ್ರಾ 39ಕ್ಕೆ 3); ಜಾರ್ಖಂಡ್: 19.4 ಓವರ್‌ಗಳಲ್ಲಿ 8 ವಿಕೆಟ್‌ಗೆ 158 (ಅನುಕೂಲ್ ರಾಯ್ ಔಟಾಗದೇ 95; ವಿದ್ಯಾಧರ ಪಾಟೀಲ 45ಕ್ಕೆ 3). ಫಲಿತಾಂಶ: ಜಾರ್ಖಂಡ್‌ಗೆ 2 ವಿಕೆಟ್‌ಗಳ ಗೆಲುವು

ಮಹಿಳಾ ಬಾಕ್ಸಿಂಗ್ ತಂಡಕ್ಕೆ ಸ್ಯಾಂಟಿಯಾಗೊ ಮುಖ್ಯ ಕೋಚ್



ನವದೆಹಲಿ (ಪಿಟಿಐ): ಭಾರತ ಪುರುಷರ ಬಾಕ್ಸಿಂಗ್ ತಂಡದ ಮಾಜಿ 'ಹೈ ಪರ್ಫಾರ್ಮೆನ್ಸ್' ನಿರ್ದೇಶಕ ಸ್ಯಾಂಟಿಯಾಗೊ ನೀವಾ ಅವರು ಮಹಿಳಾ ತಂಡದ ಮುಖ್ಯ ಕೋಚ್ ಆಗಿ ಶುಕ್ರವಾರ ನೇಮಕಗೊಂಡಿದ್ದಾರೆ.

50 ವರ್ಷದ ಸ್ಯಾಂಟಿಯಾಗೊ ಅವರು 2017ರಿಂದ 2022ರವರೆಗೆ ಭಾರತ ಪುರುಷರ ಬಾಕ್ಸಿಂಗ್ ತಂಡದೊಂದಿಗೆ ಕೆಲಸ ಮಾಡಿದ್ದರು. ಅವರ ಮಾರ್ಗದರ್ಶನದಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದಿಂದ ಅತ್ಯಧಿಕ ಬಾಕ್ಸರ್‌ಗಳು ಕಣಕ್ಕಿಳಿದಿದ್ದರು; ಮಾತ್ರವಲ್ಲದೆ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಎರಡು ಗೆದ್ದು ಇತಿಹಾಸ ನಿರ್ಮಿಸಿತ್ತು.

ಸ್ಯಾಂಟಿಯಾಗೊ ಅವರು ಅಂತರರಾಷ್ಟ್ರೀಯ ಕೋಚಿಂಗ್‌ನಲ್ಲಿ ಎರಡು ದಶಕಗಳಿಗೂ ಹೆಚ್ಚು ಅನುಭವ ಹೊಂದಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಟೆನಿಸ್: ನಿಕಿ ಪೂಣಚ್ಚಗೆ ವೈಲ್ಡ್‌ಕಾರ್ಡ್ ಅರ್ಹತೆ



ನಿಕಿ ಪೂಣಚ್ಚ

ಚೆಂಗ್ಡು (ಚೀನಾ): ಭಾರತದ ನಿಕಿ ಕಲಿಯಂಡ ಪೂಣಚ್ಚ ಅವರು ಶುಕ್ರವಾರ ತಮ್ಮ ಟೆನಿಸ್ ಜೀವನದಲ್ಲಿ ಮಹತ್ವದ ಮೈಲಿಗಲ್ಲೊಂದನ್ನು ಸಾಧಿಸಿದರು. ಇಲ್ಲಿ ನಡೆಯುತ್ತಿರುವ ಏಷ್ಯಾ ಪೆಸಿಫಿಕ್ ವೈಲ್ಡ್ ಕಾರ್ಡ್ ಪ್ಲೇ ಆಫ್ ಟೂರ್ನಿಯ ಡಬಲ್ಸ್‌ನಲ್ಲಿ ಥಾಯ್ಲೆಂಡ್‌ನ ಪ್ರುಚ್ಯಾ ಇಸಾರೊ ಜೊತೆಗೂಡಿ ಪ್ರಶಸ್ತಿ ಗೆದ್ದುಕೊಂಡರು.

ತನ್ಮೂಲಕ ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಡಬಲ್ಸ್ ಮುಖ್ಯಸುತ್ತಿನಲ್ಲಿ ಆಡಲು ವೈಲ್ಡ್ ಕಾರ್ಡ್ ಸಂಪಾದಿಸಿದರು. ಈ ಟೂರ್ನಿಯಲ್ಲಿ ಸಿಂಗಲ್ಸ್, ಡಬಲ್ಸ್‌ಗಳಲ್ಲಿ ಪ್ರಶಸ್ತಿ ಗೆದ್ದವರು ಮುಂದಿನ ಜ.12ರಿಂದ ಮೆಲ್ಬರ್ನ್ ಪಾರ್ಕ್‌ನಲ್ಲಿ ನಡೆಯಲಿರುವ ಆಸ್ಟ್ರೇಲಿಯಾ ಓಪನ್ ಟೂರ್ನಿಗೆ ವೈಲ್ಡ್ ಕಾರ್ಡ್ ಪಡೆಯುತ್ತಾರೆ.

ಪೂಣಚ್ಚ ಮತ್ತು ಇಸಾರೊ ಟೂರ್ನಿ ಯುದ್ದಕ್ಕೂ ನೀಡಿದ ಉತ್ತಮ ಪ್ರದರ್ಶನವನ್ನು ಫೈನಲ್‌ನಲ್ಲೂ ಮುಂದುವರಿಸಿ 6-4, 6-3 ರಿಂದ ಜಪಾನ್‌ನ ಸಿಯಿತಾ ಕುಸುಹಾರ ಮತ್ತು ಕಟ್ಸುಕಿ ನಕಾಗಾವಾ ಜೋಡಿಯನ್ನು ಸೋಲಿಸಿದರು.

ಕೊಡಗು ಮೂಲದ 30 ವರ್ಷ ವಯಸ್ಸಿನ ಪೂಣಚ್ಚ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುವ ಅರ್ಹತೆ ಗಳಿಸಿದರು.

ಕಳೆದ ವರ್ಷ ಡಬಲ್ಸ್‌ನಲ್ಲಿ ಜೀವನಶ್ರೇಷ್ಠ 98ನೇ ಕ್ರಮಾಂಕಕ್ಕೆ ಏರಿದ್ದ ಅವರು ಆರು ಚಾಲೆಂಜರ್ ಡಬಲ್ಸ್ ಪ್ರಶಸ್ತಿಗಳನ್ನೂ ಜಯಿಸಿದ್ದಾರೆ. ಮೊದಲ ಬಾರಿ ಎಲೀಟ್ ಟೂರ್ನಿಗೆ ಅವಕಾಶ ಪಡೆದಿದ್ದಾರೆ.

ಮಹಿಳಾ ಕ್ರಿಕೆಟ್: ಡಿಸೆಂಬರ್ 21ರಿಂದ ಶ್ರೀಲಂಕಾ ವಿರುದ್ಧ ಟಿ20 ಸರಣಿ

ನವದೆಹಲಿ (ಪಿಟಿಐ): ಭಾರತ ಮಹಿಳಾ ತಂಡವು ಡಿಸೆಂಬರ್ 21ರಿಂದ 30ರ ವರೆಗೆ ಶ್ರೀಲಂಕಾ ವಿರುದ್ಧ ತವರಿನಲ್ಲಿ ಐದು ಪಂದ್ಯಗಳ ಟಿ20 ಸರಣಿಯನ್ನು ಆಡಲಿದೆ.

ಪಂದ್ಯಗಳು ವಿಶಾಖಪಟ್ಟಣ ಮತ್ತು ತಿರುವನಂತಪುರದಲ್ಲಿ ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಶುಕ್ರವಾರ ತಿಳಿಸಿದೆ. ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಗೆದ್ದ ನಂತರ ಭಾರತದ ವನಿತೆಯರಿಗೆ ಮೊದಲ ಸರಣಿ ಇದಾಗಿದೆ.

ಮೂಲ ವೇಳಾಪಟ್ಟಿ ಪ್ರಕಾರ ಇದೇ ಅವಧಿಯಲ್ಲಿ ಭಾರತ ತಂಡವು ತವರಿನ ಸರಣಿಯಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಬೇಕಿತ್ತು. ಆದರೆ, ಉಭಯ ದೇಶಗಳ ನಡುವಿನ ರಾಜಕೀಯ ಉದ್ವಿಗ್ನತೆ ಕಾರಣಕ್ಕಾಗಿ ಸರಣಿಯನ್ನು ಮುಂದೂಡಲಾಗಿದೆ.

2016ರ ನಂತರ ಶ್ರೀಲಂಕಾ ತಂಡವು ಮೊದಲ ಬಾರಿ ಭಾರತದಲ್ಲಿ ಟಿ20 ದ್ವಿಪಕ್ಷೀಯ ಸರಣಿಯನ್ನು ಆಡಲಿದೆ. ಭಾರತ ತಂಡವು ಕಳೆದ ಜುಲೈನಲ್ಲಿ ಕೊನೆಯ ಬಾರಿ ಟಿ20 ಸರಣಿಯನ್ನು ಆಡಿತ್ತು. ಇಂಗ್ಲೆಂಡ್‌ನಲ್ಲಿ ಆತಿಥೇಯರ ವಿರುದ್ಧ 3–2ರಿಂದ ಸರಣಿ ಗೆದ್ದು ಚಾರಿತ್ರಿಕ ಸಾಧನೆ ಮಾಡಿತ್ತು.

ಟಿ20 ಸರಣಿಯ ವೇಳಾಪಟ್ಟಿ

ಪಂದ್ಯ	ದಿನಾಂಕ	ತಾಣ
1ನೇ ಪಂದ್ಯ	ಡಿ.21	ವಿಶಾಖಪಟ್ಟಣ
2ನೇ ಪಂದ್ಯ	ಡಿ.23	ವಿಶಾಖಪಟ್ಟಣ
3ನೇ ಪಂದ್ಯ	ಡಿ.26	ತಿರುವನಂತಪುರ
4ನೇ ಪಂದ್ಯ	ಡಿ.28	ತಿರುವನಂತಪುರ
5ನೇ ಪಂದ್ಯ	ಡಿ.30	ತಿರುವನಂತಪುರ

ಟೆಸ್ಟ್ ಸರಣಿ ಹಿನ್ನಡೆಯಿಂದ ಏಕದಿನ ಸರಣಿಗೆ ಸಜ್ಜಾಗುತ್ತಿರುವ ಭಾರತ ತಂಡ

'ಮನೋಬಲ ಹೆಚ್ಚಿಸುವ ಸವಾಲು'

ರಾಂಚಿ (ಪಿಟಿಐ): ಟೆಸ್ಟ್ ಸರಣಿಯಲ್ಲಾದ ಮುಖಭಂಗದಿಂದ ಭಾರತ ತಂಡವು ಸಾವರಿಸಿಕೊಳ್ಳುವ ಮೊದಲೇ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿ ಶುರುವಾಗುತ್ತಿದೆ. 'ಆತ್ಮವಿಶ್ವಾಸದಲ್ಲಿರುವ ದಕ್ಷಿಣ ಆಫ್ರಿಕಾ ತಂಡಕ್ಕೆ ತಕ್ಕ ಉತ್ತರ ನೀಡಬೇಕಾದರೆ ಭಾರತ ತಂಡವು ಏಕದಿನ ಕ್ರಿಕೆಟ್‌ಗೆ ವೇಗವಾಗಿ ಹೊಂದಿಕೊಳ್ಳಬೇಕಾಗುತ್ತದೆ' ಎಂದು ಭಾರತ ತಂಡದ ಬೌಲಿಂಗ್ ಕೋಚ್ ಮಾರ್ನೆ ಮಾರ್ಕೆಲ್ ಹೇಳಿದ್ದಾರೆ.

ಕೋಲ್ಕತ್ತ ಮತ್ತು ಗುವಾಹಟಿಯಲ್ಲಿ ದಕ್ಷಿಣ ಆಫ್ರಿಕಾ ಕೈಲಿ 'ವೈಟ್ ವಾಷ್' ಅನುಭವಿಸಿದ ಬೆನ್ನಲ್ಲೇ, ಭಾರತ ತಂಡಕ್ಕೆ ಮೂರು ಪಂದ್ಯಗಳ ಏಕದಿನ ಸರಣಿ ಎದುರಾಗಿದೆ. ಸರಣಿಯ ಮೊದಲ ಪಂದ್ಯ ರಾಂಚಿಯಲ್ಲಿ ಭಾನುವಾರ (ನ.30ರಂದು) ನಡೆಯಲಿದೆ.

ಟೆಸ್ಟ್‌ನಿಂದ ಏಕದಿನ ಮಾದರಿಗೆ ತಕ್ಷಣಕ್ಕೆ ಹೊಂದಿಕೊಳ್ಳಲು ಗಟ್ಟಿ ಮನೋಬಲ ಬೇಕಾಗುತ್ತದೆ. ಆದರೆ ತಂಡವು ಈ ರೂಪಾಂತರಕ್ಕೆ ದೃಢಸಂಕಲ್ಪ ಹೊಂದಿದೆ ಎಂದು ಅವರು ಹೇಳಿದರು. ಇಲ್ಲಿನ ಜೆಎಸ್‌ಸಿಎ ಕ್ರೀಡಾಂಗಣದಲ್ಲಿ ಭಾರತ ತಂಡದ ಮೊದಲ ನೆಟ್ ಪ್ರಾಕ್ಟೀಸ್‌ಗೆ ಮೊದಲು ಮಾಧ್ಯಮಗೋಷ್ಠಿಯಲ್ಲಿ ಮಾರ್ಕೆಲ್ ಮಾತನಾಡಿದರು.

'ಎರಡು ವಾರಗಳು ನಮ್ಮ ಪಾಲಿಗೆ ನಿರಾಶಾದಾಯಕವಾಗಿದ್ದವು. ಆದರೆ ತಂಡದ ಆತ್ಮಾವಲೋಕನಕ್ಕೆ ಕೆಲದಿನಗಳ ಅವಧಿ ದೊರೆಯಿತು' ಎಂದು ಹೇಳಿದರು.

ಚೇತರಿಕೆಯತ್ತ ಗಿಲ್: ಗಾಯಾಳಾಗಿದ್ದ ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಇಬ್ಬರೂ ಚೇತರಿಸಿಕೊಳ್ಳುತ್ತಿದ್ದಾರೆ. 'ಎರಡು ದಿನಗಳ ಹಿಂದೆ ಶುಭಮನ್ ಜೊತೆ ಮಾತನಾಡಿದ್ದೆ. ಅವರ ಚೇತರಿಕೆ ಉತ್ತಮವಾಗಿದೆ' ಎಂದರು.



ರಾಂಚಿಯಲ್ಲಿ ನಡೆಯಲಿರುವ ಮೊದಲ ಏಕದಿನ ಪಂದಕ್ಕೆ ಮುನ್ನ ಶುಕ್ರವಾರ ಭಾರತ ತಂಡ ತಾಲೀಮು ವೇಳೆ ಜಾಗಿಂಗ್ ನಡೆಸಿದ ಕೆ.ಎಲ್‌.ರಾಹುಲ್ ಮತ್ತು ವಿರಾಟ್ ಕೊಹ್ಲಿ ಪಿಟಿಐ ಚಿತ್ರ

ಶ್ರೇಯಸ್ ಅಯ್ಯರ್ ಕೂಡ ಪುನಶ್ಚೇತನ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇಬ್ಬರನ್ನೂ ಮರಳಿ ಸ್ವಾಗತಿಸಲು ಕಾಯುತ್ತಿದ್ದೇವೆ. ಅವರು ಆರೋಗ್ಯವಾಗಿದ್ದು, ಪುನರಾಗಮನಕ್ಕೆ ಸಿದ್ಧತೆ ನಡೆಸುತ್ತಿರುವುದು ಉತ್ತಮ ಬೆಳವಣಿಗೆ' ಎಂದು ಹೇಳಿದರು.

ಉತ್ತಮ ಅವಕಾಶ: ತಂಡದಲ್ಲಿ ಸೀನಿಯರ್ ಬೌಲರ್‌ಗಳಿಗೆ ವಿಶ್ರಾಂತಿ ನೀಡಿರುವುದರಿಂದ, ಅವಕಾಶದ ನಿರೀಕ್ಷೆಯಲ್ಲಿರುವ ಎರಡನೇ ಹಂತದ ಬೌಲರ್‌ಗಳಿಗೆ ತಮ್ಮ ಸಾಮರ್ಥ್ಯ ತೋರಿಸಲು ಏಕದಿನ ಸರಣಿಯು ಅವಕಾಶ ಒದಗಿಸಿದೆ ಎಂದು ಅವರು ಹೇಳಿದರು.

'ಅರ್ಷದೀಪ್, ಹರ್ಷಿತ್ ರಾಣಾ ಮತ್ತು ಪ್ರಸಿದ್ಧ ಕೃಷ್ಣ ಅವರಿಗೆ ಇದು ಸುವರ್ಣ ಅವಕಾಶ. ಅವರು ಗುಣಮಟ್ಟದ ಬ್ಯಾಟಿಂಗ್ ಸರದಿಯ ಎದುರು ಬೌಲಿಂಗ್ ಮಾಡಬೇಕಾಗಿದೆ. ಅವರ ಒತ್ತಡವನ್ನು ಹೇಗೆ ನಿಭಾಯಿಸುತ್ತಾರೆ ಎಂಬುದರ ಪರೀಕ್ಷೆಯಾಗಲಿದೆ' ಎಂದು ಮಾರ್ಕೆಲ್ ಹೇಳಿದರು.

2027ರ ಏಕದಿನ ವಿಶ್ವಕಪ್‌ನಲ್ಲಿ ಹಿರಿಯ ಆಟಗಾರರಾದ ಕೊಹ್ಲಿ ಮತ್ತು ರೋಹಿತ್ ಆಡುವ ಸಂಭವದ ಬಗ್ಗೆ ಕೇಳಿದಾಗ, 'ಅನುಭವ ಎಂದಿಗೂ ಅಮೂಲ್ಯವಾದುದು. ನನಗೆ ಅನುಭವದ ಮೇಲೆ ನಂಬಿಕೆಯಿದೆ. ಇದಕ್ಕೆ ಪರ್ಯಾಯ ವಿಲ್ಲ. ಈ ಆಟಗಾರರು ನಮಗೆ ಟ್ರೋಫಿಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ದೊಡ್ಡ ಟೂರ್ನಿಗಳಲ್ಲಿ ಹೇಗೆ ಆಡಬೇಕೆಂಬುದು ಅವರಿಗೆ ತಿಳಿದಿದೆ. ಮಾನಸಿಕವಾಗಿ ಮತ್ತು ದೈಹಿಕವಾಗಿ ಆಡಲು ಸಿದ್ಧರಿದ್ದೇವೆ ಎಂದು ಅನಿಸಿದರೆ, ಅವರು ಆಡಬಹುದು' ಎಂದರು.

'ಉತ್ತಮ ಆರಂಭ ಅಗತ್ಯ'

'ಟೆಸ್ಟ್ ಸರಣಿಯ ಗೆಲುವಿನಿಂದ ಉಲ್ಲಸಿತವಾಗಿರುವ ದಕ್ಷಿಣ ಆಫ್ರಿಕಾ ವಿಶ್ವಾಸದಲ್ಲಿದೆ. ಇಂಥ ತಂಡ ಅಪಾಯಕಾರಿಯಾಗೇ ಕಾಣುತ್ತದೆ. ಹಿಂದಿನದನ್ನೆಲ್ಲಾ ಮರೆತು ಮುಂದಿನ ವಾರ ಉತ್ತಮ ಆರಂಭ ಪಡೆಯುವುದು ನಮ್ಮ ತಂಡದ ಪಾಲಿಗೆ ಮುಖ್ಯವಾಗಲಿದೆ' ಎಂದು ಮಾರ್ನೆ ಮಾರ್ಕೆಲ್ ಅಭಿಪ್ರಾಯಪಟ್ಟರು.



ಆಡುವ 11ರಲ್ಲಿ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಇಬ್ಬರೂ ಇರುತ್ತಾರೆಯೇ ಎಂಬ ಬಗ್ಗೆ ಕೇಳಿದ ಪ್ರಶ್ನೆಗೆ, 'ಆ ವಿಷಯ ತಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದರು. 'ನನ್ನದು ಬೌಲಿಂಗ್ ವಿಭಾಗ. ತಂಡದ ಆಯ್ಕೆಯಲ್ಲಿ ನಾನು ಒಳಗೊಳ್ಳುವುದಿಲ್ಲ. ಇದನ್ನು ಆಯ್ಕೆಗಾರರು ಮತ್ತು ನಾಯಕ ನೋಡಿಕೊಳ್ಳುತ್ತಾರೆ' ಎಂದರು.

ಬ್ಯಾಡ್ಮಿಂಟನ್: ತನ್ವಿ, ಉನ್ನತಿ ಸೆಮಿಫೈನಲ್‌ಗೆ

ಲಖನೌ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ್ತಿಯರಾದ ತನ್ವಿ ಶರ್ಮಾ ಮತ್ತು ಉನ್ನತಿ ಹೂಡಾ ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಕರ್ನಾಟಕದ ಮಿಥುನ್ ಮಂಜುನಾಥ್ ಮತ್ತು ಕಿದಂಬಿ ಶ್ರೀಕಾಂತ್ ನಾಲ್ಕರ ಘಟ್ಟದ ಮುಖಾಮುಖಿಗೆ ವೇದಿಕೆಯನ್ನು ಸಜ್ಜುಗೊಳಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯೂ ಸೆಮಿಫೈನಲ್‌ಗೆ ಮುನ್ನಡೆಯಿತು.

ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತೆ ತನ್ವಿ ಕಾರ್ಟರ್ ಫೈನಲ್ ಹಣಾಹಣಿಯಲ್ಲಿ 21-13, 21-19ರಿಂದ ಹಾಂಗ್‌ಕಾಂಗ್‌ನ ಲೋ ಸಿನ್ ಯಾನ್ ಅವರನ್ನು ಹಿಮ್ಮೆಟ್ಟಿಸಿದರು.



ಭಾರತದ ಉನ್ನತಿ ಹೂಡಾ ಪಿಟಿಐ ಚಿತ್ರ

16 ವರ್ಷ ವಯಸ್ಸಿನ ತನ್ವಿ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕದ ಹಿನಾ ಅಕೆಚಿ ಅವರನ್ನು ಎದುರಿಸಲಿದ್ದಾರೆ.

18 ವರ್ಷ ವಯಸ್ಸಿನ ಉನ್ನತಿ 21-15, 13-21, 21-16ರ ಮೂರು ಗೇಮ್‌ಗಳ ರೋಚಕ ಹಣಾಹಣಿಯಲ್ಲಿ ಸ್ವದೇಶದ ರಕ್ಷಿತಾಶ್ರೀ ರಾಮರಾಜ್ ಅವರನ್ನು ಸೋಲಿಸಿದರು. ಭಾರತದ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ನಾಲ್ಕನೇ ಶ್ರೇಯಾಂಕದ ನೆಸ್ಲಿಹಾನ್ ಅರಿನ್ ಅವರನ್ನು ಎದುರಿಸುವರು. ಟರ್ಕಿಯ ಅರಿನ್ 21-19, 13-21, 21-15ರಿಂದ ಆತಿಥೇಯ ದೇಶದ ಇಶಾರಾನಿ ಬರುವಾ ಅವರನ್ನು ಮಣಿಸಿದರು.

ಅನುಭವಿ ಶ್ರೀಕಾಂತ್ 21-14, 11-4ರಿಂದ ಪ್ರಿಯಾಂಶು ರಾಜಾವತ್ ವಿರುದ್ಧ ನಿರಾಯಾಸ ಗೆಲುವು ಸಾಧಿಸಿದರೆ, ಮಿಥುನ್ 21-18, 21-13ರಿಂದ ಸ್ವದೇಶದ ಮನ್‌ರಾಜ್ ಸಿಂಗ್ ವಿರುದ್ಧ ಜಯ ಗಳಿಸಿದರು.

ಅಗ್ರ ಶ್ರೇಯಾಂಕದ ಗಾಯತ್ರಿ–ಟ್ರೀಸಾ ಜೋಡಿಯು ಕ್ವಾರ್ಟರ್ ಫೈನಲ್‌ನಲ್ಲಿ 21-15, 21-16ರಿಂದ ಐದನೇ ಶ್ರೇಯಾಂಕದ ಬೆಂಗಿಸು ಎರ್ಸೆಟಿನ್–ನಾಜ್ಲಿಕನ್ ಇಂಸಿ ಜೋಡಿಯನ್ನು ಸುಲಭವಾಗಿ ಸೋಲಿಸಿತು.

ಯುವ ಏಷ್ಯಾಕಪ್ ಭಾರತ ತಂಡಕ್ಕೆ ಆಯುಷ್ ನಾಯಕ

ನವದೆಹಲಿ (ಪಿಟಿಐ): ಭರವಸೆಯ ಬ್ಯಾಟರ್ ಆಯುಷ್ ಮ್ಹಾತ್ರೆ ಅವರನ್ನು, 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಸ್ಫೋಟಕ ಬ್ಯಾಟಿಂಗ್‌ನಿಂದ ಹೆಸರಾಗಿರುವ ವೈಭವ್ ಸೂರ್ಯವಂಶಿ ನಿರ್ವಹಣೆಯ ಮೇಲೆಯೂ ಕುತೂಹಲವಿದೆ.

ದುಬೈನಲ್ಲಿ ಡಿಸೆಂಬರ್ 12 ರಿಂದ 21ರವರೆಗೆ ಈ ಟೂರ್ನಿ ನಡೆಯಲಿದ್ದು, 15 ಆಟಗಾರರ ತಂಡವನ್ನು ಶುಕ್ರವಾರ ಪ್ರಕಟಿಸಲಾಯಿತು.

ಡಿಸೆಂಬರ್ 14ರಂದು ಪಾಕಿಸ್ತಾನ ವಿರುದ್ಧ ಪಂದ್ಯ ಒಳಗೊಂಡಂತೆ ಗುಂಪು ಹಂತದಲ್ಲಿ ಭಾರತ ಮೂರು ಪಂದ್ಯಗಳನ್ನು ಆಡಲಿದೆ. 19ರಂದು ಸೆಮಿಫೈನಲ್ ಪಂದ್ಯಗಳು ನಡೆಯಲಿವೆ. 21ರಂದು ಫೈನಲ್ ನಡೆಯಲಿದೆ.

ತಂಡ ಇಂತಿದೆ: ಆಯುಷ್ ಮ್ಹಾತ್ರೆ (ನಾಯಕ), ವೈಭವ್ ಸೂರ್ಯವಂಶಿ, ವಿಹಾನ್ ಮಲ್ಹೋತ್ರಾ (ಉಪ ನಾಯಕ), ವೇದಾಂತ್ ತ್ರಿವೇದಿ, ಅಭಿಗ್ಯಾನ್ ಕುಂಡು (ವಿಕೆಟ್ ಕೀಪರ್), ಹರವಂಶ ಸಿಂಗ್ (ವಿಕೆಟ್ ಕೀಪರ್), ಯುವರಾಜ್ ಗೋಹಿಲ್, ಕನಿಷ್ಕ್ ಚೌಹಾನ್, ಖಿಲಾನ್ ಎ. ಪಟೇಲ್, ನಮನ್ ಪುಷ್ಪಕ್, ಡಿ.ದೀಪೇಶ್, ಹೆನಿಲ್ ಪಟೇಲ್, ಕಶಿನ್ ಕುಮಾರ್ ಸಿಂಗ್, ಉಧವ್ ಮೋಹನ್. ಆರನ್ ಜಾರ್ಜ್. ಸ್ಟ್ಯಾಂಡ್‌ಬೈ: ರಾಹುಲ್ ಕುಮಾರ್, ಹೇಮಚೂಡೇನ್ ಜೆ., ಬಿ.ಕೆ.ಕಿಶೋರ್, ಆದಿತ್ಯ ರಾವತ್.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಯಂಗ್ ಓರಿಯನ್ಸ್

ಬೆಂಗಳೂರು: ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್ ಲೀಗ್ ಪಂದ್ಯಗಳು ಶನಿವಾರ ನಡೆಯಲಿದ್ದು, ಪುರುಷರ ವಿಭಾಗದಲ್ಲಿ ಯಂಗ್ ಓರಿಯನ್ಸ್ ಬಿ.ಸಿ ಹಾಗೂ ಡಿವೈಇಎಸ್ ಬೆಂಗಳೂರು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಕಂಠೀರವ ಒಳಾಂಗಣ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಪಂದ್ಯಗಳು ನಡೆಯಲಿವೆ. ಮಹಿಳೆಯರ ವಿಭಾಗದಲ್ಲಿ ನೈಋತ್ಯ ರೈಲ್ವೆ ಮತ್ತು ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ಪೈಪೋಟಿ ನಡೆಸಲಿವೆ.

ಶುಕ್ರವಾರ ನಡೆದ ಪುರುಷರ ವಿಭಾಗದ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಡಿವೈಇಎಸ್ ಬೆಂಗಳೂರು ತಂಡವು 82–81ರಿಂದ ಬ್ಯಾಂಕ್ ಆಫ್ ಬರೋಡಾ ವಿರುದ್ಧ; ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 72–53ರಿಂದ ಸದರ್ನ್ ಬ್ಲೂಸ್ ವಿರುದ್ಧ; ಯಂಗ್ ಓರಿಯನ್ಸ್ ತಂಡವು 88–86ರಿಂದ ಬ್ಯಾಂಕ್ ಆಫ್ ಬರೋಡಾ ವಿರುದ್ಧ; ಸದರ್ನ್ ಬ್ಲೂಸ್ ತಂಡವು 68–60ರಿಂದ ಡಿವೈಇಎಸ್ ಬೆಂಗಳೂರು ವಿರುದ್ಧ ಜಯ ಸಾಧಿಸಿದವು.

ಮಹಿಳೆಯರ ವಿಭಾಗದ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಬೀಗಲ್ಸ್ ಬಿ.ಸಿ ತಂಡವು 59–42ರಿಂದ ರಾಜಮಹಲ್ ಬಿ.ಸಿ. ವಿರುದ್ಧ; ನೈಋತ್ಯ ರೈಲ್ವೆ ತಂಡವು 62–30ರಿಂದ ಮೌಂಟ್ಸ್ ಕ್ಲಬ್ ವಿರುದ್ಧ ಹಾಗೂ ಮೌಂಟ್ಸ್ ಕ್ಲಬ್ ತಂಡವು 68–61ರಿಂದ ರಾಜಮಹಲ್ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

AASTHA Properties — A traditional name of trust

RERA APPROVED NO.PRM/KA/RERA/1254/464/PR/191107/002991

AASTHA APPLE NEST Phase 7

North Bengaluru

Site for Sale

Great Opportunity!

Invest Small Profit Bigger

GOOD APPRECIATION OVER THE NEXT 3 YEARS



DTCP APPROVED

RERA APPROVED

ದೇವನಹಳ್ಳಿ

ಅಂತರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಿಂದ 30 ನಿಮಿಷಗಳ ಪ್ರಯಾಣ

DTCP & RERA APPROVED

E-KHATA PLOTS

ಸೈಟುಗಳು ತಕ್ಷಣ ನೋಂದಣಿಗೆ ಸಿದ್ಧವಿದೆ	100% Legal Documents	Best Amenities	PRICE ₹ 899/- SQFT ONWARDS

- Walking Path & Park
- Multipurpose Ground
- Yoga & Meditation Center
- 30% Open Space

Call: 93411 18999

www.aasthaproperties.com

RAJESHWARI AASHIRVAD — your dream! our goal...

Develop | Build | Sale

AASHIRVAD APRAMEYA

PREMIUM RESIDENTIAL LAYOUT

RERA No.PRM/KA/RERA/1270/302/PR/290125/007448



BMRDA & RERA APPROVED A-KHATA

ನಿವೇಶನಗಳು



ಬಿಡದಿ

ಮೈಸೂರು ರಸ್ತೆ

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇಗೆ ಹೊಂದಿಕೊಂಡಿದೆ

ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ 10 ನಿಮಿಷಗಳ ಪ್ರಯಾಣ

OFFER PRICE ₹4699/- PER SQFT

SPOT BOOKING OFFER Rs.2 Lakh DISCOUNT

- ಪ್ರಮುಖ ಸ್ಥಳದಲ್ಲಿರುವ ಪ್ರೀಮಿಯಂ ಪ್ರಾಪರ್ಟಿ
- ನೋಂದಣಿಗೆ ಸಿದ್ಧವಾಗಿದೆ
- ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
- ಲೇಔಟ್ ಅಭಿವೃದ್ಧಿಯಾಗಿದೆ
- ಎಲ್ಲಾ ಕಾನೂನಾತ್ಮಕ ದಾಖಲೆಗಳನ್ನು ಹೊಂದಿದೆ
- ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

ಸೈಟ್ ಭೇಟಿಗಾಗಿ ಕರೆ ಮಾಡಿ:

6399889911

SITE DIMENSIONS: 30X40, 30X50, 40X60, ODD DIMENSIONS

www.aashirvad.net

ಶರಣ್ಯ ಫಾರ್ಮ್ಸ್ — Sharanya Farms — Create your own Sunshine

Sharanya Hillview Farms

Trust in nature... Trust in Yourself

MS REALTIES — A TRADITION OF TRUST

ಹಸಿರಿನಲ್ಲಿ ಹೊಸ ಭವಿಷ್ಯ

ಬೆಂಗಳೂರು-ಮೈಸೂರು ರಸ್ತೆ



- 51 Acre Gated Community
- 5 Acre Luxury Resort
- World-Class Amenities
- Excellent ROI Potential

70 26 26 22 33

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

40X60 BDA-SITES For Sale Anjanapura 8th Block West Facing 40feet Road Excellent Location Call:9845665618

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES, BRINDAVAN ASSOCIATES- 9980863245/ 9945333993

BANASHANKARI 3RD-STAGE Sale 40x60 Prime Residential Site Livable Duplex-House Near Water Tank Rs.30K Per Sft Negotiable SHIVU: 9880004149.

AVAILABLE 30X40 North Facing Site Sale, 10th Block, 100 Feet Road Near, Contact: DEVARAJ 9993959099, 9799099699.

AVAILABLE 40X60 West Facing Site Sale, 10th Block, 40 Feet Road, Contact: DEVARAJ 9993959099, 9799099699.

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

BDA SITE 40x60 E/F BDA 40ft Road Rs 8500/- Negotiable Nada Prabhu kempegowda Layout Near Metro Station 6366711598

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTTE SITES. 9845268611"

BTM Layout

SITE FOR sale 30×40,40×60 East and North Facing For sale BTM 2nd Stage Contact:9945377119 /9844099557

Nelamangala

SITE FOR SALE 70x40 measuring East facing corner site at M.S.Ramaiah Green City at Nelamangala, Near Railway Station. Contact: 9611946333

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS CONTACT: 6363250343

Yelahanka

SITE FOR SALE 30X40 East Facing Site for Sale at BDA approved layout BDA 'A' Khatha at Yelahanka. Price 13,500 per sft, negotiable. Genuine buyers can contact 9611946333

Doddaballapur Road

PRESTIGE NORTH-WEST County 125X80 Prestige Marigold 50X80, Century Eden 40X50, Adarsh Savana 50X80, Supreme-Estates 9632974714

Vishweshwariah Layout

DIRECT OWNER 30x40, 40x60 Site/ House Near Metro Station. Vishweshwaraiah Layout, Kempegowda Layout: 9620696913/ 9880781399

BDA SITE SALE VISHWESHWARAIAH LAYOUT 2ND BLOCK 40X60 NORTH FACE NEAR 100FT ROAD GOOD LOCATION CONTACT: 8892901567

BDA SITE SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

BDA SITE Sale 30x40 South Facing Rs 2Cr Negotiable Vishweshwaraiah Layout 8th Block Contact: 9611577666

BDA SITE for Sale 30×40 East facing Builder Location Vishweshwaraiah Layout Near BDA Complex & 100 ft Ring Road Rs.13,500/- negotiable Contact: 8970306030

30X40 E/F BDA Site Sale 40ft Road 6th Block Vishweshwaraiah Layout direct Owner meeting KLE Law College opp 100ft Road Back Side Contact Balaji: 8310003509

BDA 40X60 Site E/F Vishweshwaraiah Layout 40ft Road Near KLE Law College Brokers Excuse: 9980409820

House

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

600 SQFT G+3 floors (1 BHK 5 Houses, 2BHK 1 House) SVG Nagara, Moodalapalya, Nagarabhavi, @99Lakhs Owner 9740073482

HOUSE FOR sale 30X45 at RHCS Layout Nagarbhavi Rate 1.95 CR Contact: 9108133156/ 9845896099

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30, Built area 2700 Sqft: 1,75,00,000/- 9880450523.

Flat

Banashankari

READY to OCCUPY



RERA No : PRM/KA/RERA/ 1251/310/PR/220722/005096

MARS PLANET 2, 2.5, 3 BHK Flats Located @ BSK 3rd Stage, opp to Tata Promont, 8792155802, 9972399993 & 9880625336

Jigani

PREMIUM CATEGORY Senior Citizen Fully Serviced Facility in Jigani.Furnished Ready to Move in. Prices Starting from Rs. 45 Lakhs. Most Affordable in Bangalore. Call: 9742258578, 7353316201

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331





